TIGHT BINDING BOOK

UNIVERSAL LIBRARY
OU_200124
UNIVERSAL LIBRARY

# ಮುಡಿಪು

ನಾನು

ಈ ಕಾದಂಬರಿಯನ್ನು ಬರೆದ ಹಾಗೆಲ್ಲ

ಮುಗಿದ ಪ್ರಕರಣಗಳನ್ನು ಓದಿ

“ ಮುಂದೇನು ಬರೆಯುತ್ತಿ ? ಮುಂದೇನು ಬರೆಯುತ್ತಿ ? ”

ಎಂದು ದಿನಂಪ್ರತಿ ಕೇಳಿ

ಕೊನೆಯ ಮೂರನ್ನೂ ಬರೆದೊಡನೆ

ನೋಡಿ

ತಿಳಿದು

ಕಂಬನಿ ಮಿಡಿದ

ತಂಗಿ

ಅನುಸೂಯೆಗೆ !

— ವಿನಾಯಕ

# ಪರಿವಿಡಿ


| | | ಪುಟ |
|---|---|---|
| | ಮುನ್ನುಡಿ | |
| | ಮೊದಲನೆಯ ಪ್ರಸಂಗ | ೧ |
| ೧ | ಮೊಗ್ಗಾವಿ | ೯ |
| ೨ | ಒಡ್ಡಿ–ಹೈಗ್ರೀವ ಮಡ್ಡಿ | ೧೮ |
| ೩ | ಗೋವಿಂದರಾಯರ ಮನೆ | ೨೯ |
| ೪ | ಕುಸುಮಾ | ೪೩ |
| ೫ | ಒಂದು ಪತ್ರ | ೪೯ |
| ೬ | ಮಧ್ಯಸ್ತಿಕೆ | ೫೮ |
| ೭ | ವಧೂಪರೀಕ್ಷೆ | ೬೬ |
| ೮ | ಇನ್ನೊಂದು ಪತ್ರ | ೭೨ |
| ೯ | ಮೈನೆರೆದಳು | ೭೯ |
| ೧೦ | ಸುಬ್ಬಣಾಚಾರ್ಯರ ಪ್ರಯಾಣ | ೮೭ |
| ೧೧ | ಗಿಡಮಂಗ | ೯೧ |
| ೧೨ | ಹೈಗ್ರೀವಾಚಾರ್ಯರ ಸೌಖ್ಯ | ೯೭ |
| ೧೩ | ದೇವರು ಯಾಕ, ಹೊಲ್ಯಾ? | ೧೦೧ |
| ೧೪ | ದೆವ್ವಗಳ ಕುಣಿತ | ೧೦೫ |
| ೧೫ | ತೋಟದಲ್ಲಿಯ ಊಟ | ೧೧೭ |

# ಮುನ್ನುಡಿ

ನಾನು ಈ ಕಾದಂಬರಿಯನ್ನು ಬರೆಯಲು ಪ್ರಾರಂಭಿಸಿದ್ದು ಮೇ ೧೯೩೮ರಲ್ಲಿ. ಮೊದಲಿನ ಹತ್ತು ಪ್ರಕರಣಗಳಲ್ಲಿ "ಮೊಗ್ಗಾವಿ" ಯೊಂದನ್ನು ಬಿಟ್ಟು ಉಳಿದ ಎಲ್ಲವುಗಳು ಆಗ ಬರೆದು ಮುಗಿದವೆನ್ನಬಹುದು. ಸಾಮಾಜಿಕ ಪುನರ್ಘಟನೆಯನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಆಗ ನನ್ನ ಕಲಾರೀತಿಯನ್ನು ಹರಿಬಿಟ್ಟೆನೆಂದು ತೋರುತ್ತದೆ. ಇದೇ ಮಾದರಿಯ ಮುಂದಿನ ಕೆಲವು ಪ್ರಕರಣಗಳನ್ನು ೧೯೩೯ನೆಯ ಇಸ್ವಿಯ ದೀಪಾವಳಿ ಸೂಟಿಯಲ್ಲಿ ಬರೆದು ಮುಗಿಸಿದೆನು. ಇನ್ನು ಇದನ್ನು ಮುಗಿಸಿ ಬಿಡಬೇಕೆಂದು ಗೆ. ಜಿ. ಬಿ. ಜೋಶಿಯವರು ನನ್ನನ್ನು ಮನವೊಲಿಸಿದರು. ಈ ವರ್ಷ ನನ್ನ ಕಾದಂಬರಿಯು ಮುಗಿದು ಪ್ರಸಿದ್ಧವಾದ ಶ್ರೇಯವು ಹೆಚ್ಚಾಗಿ ಅವರಿಗೆ ಸಲ್ಲುವದು. ಈ ತಿಂಗಳು ಇದನ್ನು ಬರೆಯಲು ಸುರುವು ಮಾಡಿದಾಗ ಅದೇ ಆಚ್ಚಾಗಿ ಹೊರಬಿದ್ದ ಜಿ. ಬಿ. ಜೋಶಿಯವರ 'ಧರ್ಮಸೆರೆ'ಯು ಕಣ್ಣಿಗೆ ಬಿದ್ದಿತು. ಅವರಲ್ಲ ಮಾಗುತ್ತ ನಡೆದ ಕಾವ್ಯಜೀವನಕ್ಕೆ ಪದ್ಯಕಾವ್ಯದಲ್ಲಿ ಅರ್ಥವ್ಯಕ್ತಿಯು ದೊರಕಲಿಲ್ಲ. ಅದನ್ನು ಅವರು ಈಗ ತಮ್ಮ ಕಾದಂಬರಿಯಲ್ಲಿ ತುಂಬಿಬಿಟ್ಟಿದ್ದರು. 'ಧರ್ಮಸೆರೆ'ಯನ್ನು ನೋಡಿ, ನನ್ನ ಪದ್ಯಕಾವ್ಯದ ತಿರುಳನ್ನು ಕಾದಂಬರಿಯಲ್ಲಿಯೂ ತುಂಬಬಹುದೆನಿಸಿತು. ಇನ್ನು ಮೇಲೆ ಕಾದಂಬರಿಗಳನ್ನು ಬರೆದರೆ ಅವುಗಳಲ್ಲಿ ಎದೆಯ ಕೆಚ್ಚನ್ನಷ್ಟೆ ಇಡಬೇಕೆಂದಿದ್ದೇನೆ.

ಈ ಕಾದಂಬರಿಯ ಸಾಧನೆಗಳಲ್ಲಿ ಎರಡು ಮುಖ್ಯವಾಗಿವೆಯೆಂದು ನನಗೆನಿಸುತ್ತಿದೆ. ಪಾತ್ರಸೃಷ್ಟಿನಿರ್ಮಾಣವು ಅವುಗಳಲ್ಲಿ ಒಂದಾಗಿದೆ. ಇಲ್ಲಿಯ ವಸ್ತುವು ಅಷ್ಟೊಂದು ಮಹತ್ವದ್ದಲ್ಲ. "ಸುಬ್ಬಣಾಚಾರ್ಯರು ಏನು ಮಾಡುತ್ತಾರೆ" ಎಂಬ ಪ್ರಶ್ನೆಗಿಂತ "ಸುಬ್ಬಣಾಚಾರ್ಯರು ಹೇಗಿದ್ದಾರೆ?" ಎಂಬುದೇ ನನ್ನನ್ನು ಹೆಚ್ಚಾಗಿ ಆಕರ್ಷಿಸಿದ ಪ್ರಶ್ನೆಯಾಗಿದೆ. ಈ ಮಾತು ಎಲ್ಲ ಮುಖ್ಯ ಪಾತ್ರಗಳಿಗೂ ಅನ್ವಯಿಸುವದು.

ಇನ್ನೊಂದು ಸಾಧನವೆಂದರೆ ಕಾದಂಬರಿಯ ವಾತಾವರಣವೇ ಸರಿ. ಸುಮಾರು ೨೫-೩೦ ವರ್ಷಗಳ ಹಿಂದೆ ಉತ್ತರಕರ್ನಾಟಕದ ಸ್ಥಿತಿಯು ಹೇಗಿದ್ದಿತು? ನೈಸರ್ಗಿಕವಾಗಲಿ, ಸಾಮಾಜಿಕವಾಗಲಿ, ಅಲ್ಲಿಯ ಜನರು ಎಂತಹ ವಾತಾವರಣದಲ್ಲಿ ಬೆಳೆದರು? ಈ ಪ್ರಶ್ನೆಗಳಿಗೆ ಒಂದು ಮೊಂಡವಾದ

ಉತ್ತರವನ್ನು ಕೊಟ್ಟಿಲ್ಲ. ಕಥೆಗೆ ಬಣ್ಣ ಬರುವಂತೆ ಅದನ್ನು ಉಪಯೋಗಿಸಲು ಯತ್ನಿಸಿದೆ. ಸಂಭಾಷಣೆ, ವರ್ಣನೆ, ಸ್ವಭಾವವಿಭಜನೆ ಮೊದಲಾದ ಸಾಧನೆಗಳಿಗೂ ಹಾಸ್ಯ, ವಿಡಂಬನೆ ಮುಂತಾದ ಲಹರಿಗಳಿಗೂ ಇಲ್ಲಿ ಎಡೆಯಿದೆ.

ಈ ಸಾಧನೆಗಳನ್ನು ಉಪಯೋಗಿಸಿ ಮೂರ್ತಿಮಂತವಾಗಿ ಮಾಡಲು ಬಯಸಿದ ಕಲ್ಪನೆಯು ಇಂಥದೇ ಎಂದು ಹೇಳಲು ಬರುವಂತಿಲ್ಲ. ಇಂಥ ನಿರ್ಧಾರವು ಗೀತೆ–ಸಣ್ಣಕತೆ– ದೃಶ್ಯ ಮುಂತಾದವುಗಳ ವಿಷಯದಲ್ಲಿ ಮಾತ್ರ ಸಾಧ್ಯವಾಗಬಹುದು. ಆದರೂ ಇಜ್ಜೋಡು–ಜೀವನದಲ್ಲಿ ವಿಷಸಮಾನವಾಗಿರುವ ವಿಷಮತೆಯು –ಇಲ್ಲಿರುವ ಪ್ರಧಾನ ಕಲ್ಪನೆಯಾಗಿದೆ. ಪದ್ಮಾವತಿ, ನರಹರಿ ಮೊದಲಾದವರ ಜೀವನವಿಕಾಸದ ಭಾಗ್ಯ–ದುರ್ಭಾಗ್ಯವು ಇನ್ನೊಂದು.

ಈ ಕಾದಂಬರಿಯೇನೊ (೧,೨ ಭಾಗ ಕೂಡಿ) ತನಗೆ ತಾನೆ ಪೂರ್ಣವಾಗಿದೆಯೆಂದು ನಾನು ತಿಳಿದಿದ್ದೇನೆ. ಆದರೂ ಇನ್ನೊಂದು ದೃಷ್ಟಿಯಿಂದ ಇದು ಅಪೂರ್ಣವೆನಿಸುವದು ಸಹಜವಿದೆ. ಏಕಂದರೆ ಮುಂದಿನ ಎರಡು ಭಾಗಗಳು ಸ್ವತಃ ನನ್ನ ತಲೆಯಲ್ಲಿಯೇ ಸುಳಿದಾಡುತ್ತಿವೆ. ಇಲ್ಲಿಯ ಪಾತ್ರಗಳ ಜೀವನವಿಕಾಸದ ದೃಷ್ಟಿಯಿಂದ ಅವು ಹೆಚ್ಚು ಮಹತ್ವವುಳ್ಳವಾಗಬಹುದು. ಸಾಧ್ಯವಾದರೆ ಪದ್ಯಕಾವ್ಯವು ನನಗೆ ರಜೆಕೊಟ್ಟಾಗ ಈ ಭಾಗಗಳನ್ನು ಬರೆದು ಮುಗಿಸಬೇಕೆಂಬ ಲವಲವಿಕೆಯಿದೆ.

ಕೂಲಂಕಷವಾಗಿ ಓದಿದವರಿಗೆ ಈ ಕಾದಂಬರಿಯ ರಚನಾಕ್ರಮದಲ್ಲಿಯೂ ಒಂದು ಪದ್ಧತಿಯಿರುವದು ಕಂಡುಬರುವದು. ಇಲ್ಲಿಯ ಸಂಭಾಷಣೆಗಳ ಶೈಲಿಯು ಬಹುತೇಕವಾಗಿ ಬಳಕೆಮಾತಿನದು; ಹಲವೆಡೆಗೆ ಸುಸಂಸ್ಕೃತವಾದುದು. ಬುದ್ಧಿಮಂತಿಕೆ–ಒಳತಿರುಳುಗಳ ಮಿಶ್ರಣವು ಕೃತಿಯಲ್ಲಿರುವದರಿಂದ ಶೈಲಿಯಲ್ಲಿಯೂ ಇಂಥ ಸಂಗಮಕ್ಕೆ ಆಸ್ಪದ ದೊರೆತಿದೆ. ಇಲ್ಲಿಯ ಸಂಗಮವು ಯಮುನಾ–ಗಂಗಾಸಂಗಮದಂತಿರುವದೇನೆಂಬುದನ್ನು ಓದುಗರೇ ನಿರ್ಣಯಿಸಬೇಕು. ತಿರುಳು–ಕಾದಂಬರಿಗಳಲ್ಲಿ ಬಳಕೆಮಾತಿನ ಬಳಕೆಯು ವಿಶೇಷವಾಗಿ ಆಗದೆ ಅದರ ಬಣ್ಣವು ಮಾತ್ರ ಸಾಕೆಂದು ತೋರುತ್ತದೆ.

೨೧ ಮೇ. ೧೯೩೪
ಪುಣೆ

ವಿ. ಕೃ. ಗೋಕಾಕ.

# ಇಜ್ಜೋಡು

## ಭಾಗ ೧

[illegible]

[illegible]

ಮೂರನೆಯ ವರುಷದ ಎರಡನೆಯ ಕುಸುಮ

ಮನೋಹರ ಗ್ರಂಥಮಾಲೆಯ ೧೪ನೆಯ ಕುಸುಮ

# ಇಜ್ಜೋಡು (ಭಾಗ ೧)

## (ಸಾಮಾಜಿಕ ಕಾದಂಬರಿ)

[illegible]

**ಪ್ರೊ. ವಿ. ಕೃ. ಗೋಕಾಕ. ಎಂ. ಎ.**

# ಮೊದಲನೆಯ ಪ್ರಸಂಗ

ಲೇಖಕರು ಈ ಕಾದಂಬರಿಯನ್ನು ಬರೆದು ಮುಗಿಸಿದ ಮೇಲೆ ಒಂದು ಕಠಿಣ ಪ್ರಸಂಗದಿಂದ ಪಾರಾದೆನೆಂದು ತಿಳಿದಿದ್ದರು. ಆದರೆ ವಸ್ತುಸ್ಥಿತಿಯು ಅದಕ್ಕೆ ತೀರ ವಿರುದ್ಧವಾಯಿತು. ಕಾದಂಬರಿಯನ್ನು ಬರೆದ ಮೇಲೆ ಮಾತ್ರ ನಿಜವಾದ ಕಠಿಣ ಪ್ರಸಂಗವು ಬಂತು. ಲೇಖಕರಿಗೆ ಆತ್ಮವಿಶ್ವಾಸವಿರಲಿಲ್ಲ. ತಮ್ಮ ಕೃತಿಯು ಕನಿಷ್ಠ ಪಕ್ಷಕ್ಕೆ ಮುದ್ರಿಸಲು ಯೋಗ್ಯವಾಗಿದೆಯೆಂದು ಯಾರಾದರೂ ಅವರ ಬೆನ್ನು ತಟ್ಟಬೇಕಾಗಿತ್ತು. ಇಲ್ಲದಿದ್ದರೆ ಮುದ್ರಾರಾಕ್ಷಸವು ಅವರನ್ನು ಬೆನ್ನಟ್ಟಿ ಮಾನಹಾನಿ,ದ್ರವ್ಯಹಾನಿಯನ್ನು ಸಹಿಸಲು ಹಚ್ಚಬಹುದಾಗಿತ್ತು. ಲೇಖಕರು ನಾಲ್ಕೆಂಟು ಕಡೆಗೆ ಹಾಯ್ದಾಡಿ ನೋಡಿದರು. ಯಾರಿಂದಲೂ ಇಂಥ ಪ್ರೋತ್ಸಾಹನವು ದೊರಕುವ ಹಾಗೆ ಕಾಣಲಿಲ್ಲ. ಮುದ್ರಿತವಾದ ಪುಸ್ತಕಗಳನ್ನೇ ಅನೇಕರು ಓದುವದಿಲ್ಲ. ಇನ್ನು ಮೂಲ ಪ್ರತಿಯನ್ನು ಓದಿ ಇದು ಮುದ್ರಣಾರ್ಹವಾಗಬಹುದೇನೆಂದು ಪರೀಕ್ಷಿಸುವ "ಕಾರಭಾರ"ವನ್ನು ಯಾರು ಮಾಡುತ್ತಾರೆ? ಸಾಹಿತಿಗಳು ತಮ್ಮ ಕೆಲಸದಲ್ಲಿದ್ದರು. ವಿಮರ್ಶಾಶಾಸ್ತ್ರಜ್ಞರಿಗೆ 'ಫೀ' ಕೊಡುವ ಯೋಗ್ಯತೆಯು ಲೇಖಕರಿಗಿರಲಿಲ್ಲ. ಏನು ಮಾಡಬೇಕೆಂದು ವಿಚಾರಿಸಿ ಕೊನೆಗೆ ಒಬ್ಬ ರಿಟಾಯರ್ಡ್ ಇನ್ಸ್ಪೆಕ್ಟರರನ್ನು ಅವರು ಶರಣುಹೋಗಬೇಕೆಂದು ನಿರ್ಧರಿಸಿದರು.

ರಿಟಾಯರ್ಡ್ ಇನ್ಸ್ಪೆಕ್ಟರರಾದ ಭುಜಂಗರಾಯರೇನು ಸಾಮಾನ್ಯ ಮನುಷ್ಯರಿದ್ದಿಲ್ಲ. ಅವರು ವಿದ್ಯಾಖಾತೆಯಿಂದ ನಿವೃತ್ತಿ ಹೊಂದಿ 'ಪಿಂಚಣಿ' ತೆಗೆದುಕೊಂಡು ಮೂರು-ನಾಲ್ಕು ವರ್ಷಗಳಾಗಿದ್ದವು. ಅವರು ಒಂದಕ್ಷರವನ್ನೂ ಬರೆದವರಲ್ಲ. ಆದರೆ ವಿಮರ್ಶೆಯಲ್ಲಿ ಅವರಿಗಿದ್ದ ಪ್ರಗತಿಯನ್ನು ಕಂಡು ಎಂಥೆಂಥ ಸಾಹಿತಿಗಳೂ ತಲೆದೂಗಿದ್ದರು. ಅವರೇನು ಕಣ್ಣಿಗೆ ಅಂಜನ ಹಚ್ಚಿ ಓದುತ್ತಿದ್ದರೋ ತಿಳಿಯದು. ಯಾರಿಗೂ ಕಾಣದ ಗುಣ-ದೋಷಗಳನ್ನು ಅವರು ಸಹಜವಾಗಿ ಎತ್ತಿ ತೋರಿಸುತ್ತಿದ್ದರು. ಒಟ್ಟಾರೆ ಹೇಳುವದೆಂದರೆ, ಭುಜಂಗರಾಯರು ಸಾಹಿತ್ಯದ ಒರೆಗಲ್ಲೇ ಸರಿ. ಅಂತೇ

ಅವರು ತರುಣ ಲೇಖಕರಿಗೆ ಸೂಚಿಗಲ್ಲಾಗಿದ್ದರು. ಇಂದಿನ ಪ್ರಮುಖ ಸಾಹಿತಿಗಳೆಲ್ಲ ಅವರ ದುರ್ಬೀನಿನ ಕೆಳಗೆ ಹೊರಳಿ, ಅವರ ಸೂರ್ಯಕಾಂತ ಶಿಲೆಯ ಬುಡದಲ್ಲಿ ಸಿಕ್ಕು ಸುಟ್ಟು, ಕಡೆಗೆ ಅವರ ಕೃಪಾದೃಷ್ಟಿಯನ್ನು ಪಡೆ ದರೆಂಬ ಮಾತಿನಲ್ಲಿ ತಥ್ಯವಿರಬೇಕು.

ಆದರೆ ರಾಯರನ್ನು ಕಾಣುವದೇ ದುಸ್ತರವಿತ್ತು. ಹೊಸ ಗ್ರಂಥ ಗಳನ್ನು ಅವರೆಂದಿಗೂ ಓದುತ್ತಿರಲಿಲ್ಲ. ಹಳೆಯದೆಲ್ಲ ಪೂರ್ಣೆಂದು ಅವರು ತಿಳಿದಿದ್ದರೆಂತಲ್ಲ. ಇನ್ನೂ ಕಾಲಪರೀಕ್ಷೆಗೆ ಸಿಕ್ಕು ಪಾಸಾಗದ ಗ್ರಂಥಗಳನ್ನು ಏಕೆಂದು ಓದಬೇಕೆಂದು ಅವರ ಅಭಿಪ್ರಾಯ. ಎಷ್ಟೋ ತರುಣ ಲೇಖಕರು ಅವರ ಮನೆತನಕ ಹೋಗಿ ತಮ್ಮ ಕೃತಿಗಳ ಪ್ರತಿಗಳನ್ನು ಅವರಿಗೆ ಕಾಣಿಕೆ ಯಾಗಿ ಕೊಟ್ಟು ಕೈಮುಗಿದು ಬಂದಿದ್ದರು. ರಾಯರು ಅವನ್ನೆಲ್ಲ ಕೂಡಿಸಿ ದಿನಾಲು ತಮ್ಮ ಮನೆಯ 'ಬಂಬಿ'ಗೆ ಉಪಯೋಗಿಸುತ್ತಿದ್ದರು! ಆಧುನಿಕ ಸಾಹಿತ್ಯವನದಹನದಿಂದ ಈ ರೀತಿಯಾಗಿ ರಾಯರ ಮನೆಯವರಿಗೆಲ್ಲ ಪ್ರತಿ ನಿತ್ಯ ಬಿಸಿ ನೀರಿನ ಸ್ನಾನವಾಗುತ್ತಿತ್ತು!

ಲೇಖಕರಿಗೆ ದಿಗಿಲು ಬಿದ್ದಿತು. ಮೂಲವನ್ನು ರಾಯರ ಕಣ್ಣಿಗೆ ಹಾಕ ಬೇಕು; ಅದು 'ಬಂಬಿ'ನಲ್ಲಾದರೂ ಬಿದ್ದಿರಬಾರದು! ಈ ಪ್ರಶ್ನೆಯನ್ನು ಹೇಗೆ ಬಿಡಿಸಬೇಕೆಂದು ಲೇಖಕರು ಬಹಳ ಹೊತ್ತು ಯೋಚಿಸಿದರು. ಕೊನೆಗೆ ಅವರಿಗೊಂದು ಯುಕ್ತಿಯು ಹೊಳೆಯಿತು. ಲಟಕ್ಕನೆ 'ಜಟ್ಕಿ' ಹೊಡೆದು ರಾಯರ ಮನೆಗೆ ತೆರಳಿದರು.

ಲೇಖಕರು ಹೋದಾಗ ರಾಯರು ತಮ್ಮ ಕೋಣೆಯಲ್ಲಿ ಹೋಮರ ಕವಿಯ ಇಲಿಯಡ್ ಕಾವ್ಯವನ್ನು ಓದುತ್ತ ಕುಳಿತಿದ್ದರು. ಒಳಗೆ ಯಾರನ್ನೂ ಬಿಡಬಾರದೆಂದು ಬಾಗಿಲಲ್ಲಿ ನಿಂತ ಆಳುಮಗನಿಗೆ ಕಟ್ಟಪ್ಪಣೆಯಾಗಿತ್ತು. ಅದರಂತೆ ಆಳುಮಗನು 'ಜಬರುದಸ್ತ್' ಮಾಡಿದನು. ಅವನಿಗೆ ಯೋಗ್ಯ ರೀತಿಯಿಂದ ಸಂಭಾವನೆ ಮಾಡಿ ತಮ್ಮ ದರ್ಶನಪತ್ರ (visiting card)ವನ್ನು ಅವನ ಕೈಯಲ್ಲಿ ಕೊಟ್ಟು ರಾಯರೆಡೆಗೆ ಕಳಿಸಬೇಕಾದರೆ ಲೇಖಕರ ಪುಣ್ಯ ವೆಲ್ಲ ಖರ್ಚಾಯಿತು.

ಆಳುಮಗನು ಮರಳಿ ಬಂದು ಪ್ರವೇಶಿಸಬಹುದೆಂದು ಲೇಖಕರಿಗೆ ಬಿನ್ನವಿಸಿದನು. ಆಗ ಅವರಿಗೆ ಅರ್ಧ ಜೀವ ಬಂದಿತು. ರಾಯರು ಅದೇ

ಒಂದು 'ಕ್ಯಾಂಟೋ' ಮುಗಿಸಿ ಇನ್ನೊಂದನ್ನು ಪ್ರಾರಂಭಿಸುವವರಿದ್ದರು ಸನಾತನಿಗಳು ಒಂದು ಅಧ್ಯಾಯವು ಮುಗಿದೊಡನೆ ಮಂಗಳಾರತಿಯನ್ನು ಮಾಡುತ್ತಾರೆ. ರಾಯರು ಒಂದು ಸಿಗರೇಟು ಹೊತ್ತಿಸಿದ್ದರು. ಹೊತ್ತಿಸಿ ಹೊಗೆ ಬಿಡುತ್ತ ತಮ್ಮ ಹೆಸರನ್ನು ಧೂಮ್ರಾಕ್ಷರಗಳಿಂದ ಬರೆಯುತ್ತ ಗುಂಗಿನಲ್ಲಿ ಕುಳಿತಿದ್ದರು. ಲೇಖಕರು ಅಂಜುತ್ತಂಜುತ್ತ ಒಳಗೆ ಬಂದಾಗ ಅವರಿಗ ಒಂದು ಸ್ಟೂಲಿನ ಮೇಲೆ ಕುಳ್ಳಿರಲು ಸನ್ನೆ ಮಾಡಿದರು. ಆ ಸ್ಟೂಲೇ ಅಪರಾಧಿಗಳ ವಧಃಸ್ಥಾನವೆಂದು ಪ್ರಸಿದ್ಧವಾಗಿತ್ತು. ರಾಯರಿಂದ ಪದಚ್ಯುತರಾದ ಅನೇಕ ಕವಿಗಳು ತಮ್ಮ ಕವಿತೆಗಳಲ್ಲಿ ಆ ಸ್ಟೂಲಿನ ಮೇಲೆ ಬೆಂಕಿ ಕಾರಿದ್ದರು. ಹತ್ತೆಂಟು ನಾಟಕಕಾರರು ತಮ್ಮ ವಿಡಂಬನಾಜ್ವಾಲೆಯಿಂದ ಅದನ್ನು ಸುಟ್ಟು ಬಿಡಲು ಹವಣಿಸಿದ್ದರು. ಆದರೆ ಆ ಸ್ಟೂಲು ಇನ್ನೂ ಅಲ್ಲಿಯೇ ಗಟ್ಟಿಯಾಗಿತ್ತು. ಲೇಖಕರು ಹೋಗಿ ಅದರ ಮೇಲೆ ಕುಳಿತರು.

ಇನ್ನೂ 'ಇಲಿಯಡ್ಡಿ'ನ ಗುಂಗಿನಲ್ಲಿದ್ದ ರಾಯರು "ಏನು ಕಾರಣ ಬಂದಿದ್ದು?" ಎಂದು ಕೈಸನ್ನೆಯಿಂದ ಕೇಳಿದರು. ದೈವಪರೀಕ್ಷೆಯ ಸಮಯವು ಸಮೀಪಿಸಿತೆಂದು ಕಂಪಿಸುವ ಲೇಖಕರು "ನಾನು....ಒಂದು ....ಕಾದಂಬರಿ" ಎಂದು ಉಗ್ಗಿ ಕಡೆಗೆ ತಟಸ್ಥರಾಗಿ ಕುಳಿತರು. ಅವರ ಬಾಯಿಂದ ಮಾತೇ ಹೊರಡಲಿಲ್ಲ.

"ಏನು ನೀವು....ಕಾ....ದಂಬರಿ? ಏ! ಬಸ್ಯಾ! ಬಾರೋ! ಇವರನ್ನ ಚಂಡಿಗೆ ಕೈ...."

"ನೀವು ದೊಡ್ಡವರು, ರಾಯರ! ಹಾಗೆ ಮಾತನಾಡಬಾರದು." ಲೇಖಕರು ಧೈರ್ಯ ತಂದುಕೊಂಡು ಹೇಳಿದರು. ಕಡೆಗೆ ಹೊರದೂಡಿಸಿಕೊಳ್ಳುವದಂತೂ ಇದ್ದೇ ಇತ್ತು. ಇದೊಂದು ಪ್ರಯತ್ನ ಮಾಡಿ ನೋಡಬಾರದೇಕೆಂದು ಮನಸ್ಸಿನಲ್ಲಿಯೇ ಅಂದುಕೊಂಡರು.

"ಹೂಂ! ಕೆತ್ತರಿ ಇಲ್ಲಿಂದ! " ರಾಯರು ಬಾಗಿಲೆಡೆಗೆ ಬೊಟ್ಟು ಮಾಡಿ ತೋರಿಸಿದರು. "ಹಾಗಲ್ಲ, ರಾಯರ! ಕಾದಂಬರಿಯೆಂದರೆ ಆಧುನಿಕ ಮಹಾಕಾವ್ಯವೇ ಸರಿ." ರಾಯರ ಕೈಯ್ಯಲ್ಲಿದ್ದ 'ಇಲಿಯಡ್ಡ'ನ್ನು ನೋಡಿದ ಲೇಖಕರು ಜಾಣತನದಿಂದ ಉತ್ತರಕೊಟ್ಟರು.

"ಓಹೋ!" ರಾಯರು ಕುರ್ಚಿಯ ಮೇಲೆ ಸರಿದು ಕುಳಿತು

ಸಿಗರೇಟನ್ನು ಕೊಸೆಯು ಸಾರಿ ಜೋರಿನಿಂದ ಸೇದಿ ಬಂತಿಯೆಡೆಗೆ ಹೊಗೆ ಬಿಟ್ಟು ನುಡಿದರು: "ನಿಮಗೆ ಗೊತ್ತಿದೆಯೇನು ಈ ಮಾತು ?"

"ಹೌದು ? ರಾಯರೆ ! ಮಹಾಕಾವ್ಯದ ಜಾತಿಯು ಯಾವಾಗಲೂ ಒಂದೇ. ಹಿಂದಿನವರು ಮಹಾಕಾವ್ಯಗಳನ್ನು ಬರೆದರು. ಅವು ಪ್ರಾಚೀನ ಮಹಾಕಾವ್ಯಗಳಾದವು. ಅದೇ ಯೋಗ್ಯತೆಯ ಸ್ವತಂತ್ರ ಕೃತಿಗಳನ್ನು ಇಂದಿನವರು ಬರೆದರೆ ಅವು ಅರ್ವಾಚೀನ ಮಹಾಕಾವ್ಯಗಳಾಗುವವು ದುರ್ದೈವದಿಂದ ಅಂಥ ಕೃತಿಗಳನ್ನು ಇಂದಿನವರು ಇನ್ನೂ ಬರೆದಿಲ್ಲ ಕಾರಣ ಕಾದಂಬರಿಗಳನ್ನೇ ಆಧುನಿಕ ಮಹಾಕಾವ್ಯವೆಂದು ಕರೆಯುವ ಹೊತ್ತು ಬಂದಿದೆ." ಲೇಖಕರು ವೈಚಳಿ ಬಿಟ್ಟು ಹೇಳಿದರು.

"ಅಂತೂ ನೀವು ಒಂದು ಆಧುನಿಕ ಮಹಾಕಾವ್ಯವನ್ನು ಬರೆದಿರು ವಿರೆನ್ನಿರಿ." ರಾಯರು ಮುಗುಳು ನಗೆ ನಕ್ಕು ವ್ಯಂಗೋಕ್ತಿಯಲ್ಲಿ ನುಡಿದರು.

"ಒಂದು ರೀತಿಯಿಂದ ಹೌದು. ಇನ್ನೊಂದು ರೀತಿಯಿಂದ ಅಲ್ಲ. ಹೌದು-ಅಲ್ಲ-ಅಲ್ಲ- ಹೌದು—" ಲೇಖಕರು ಢಳಮಳಿಸಿದರು.

"ಕನಿಷ್ಠ ಪಕ್ಷಕ್ಕೆ ಒಂದು ಕಾದಂಬರಿಯನ್ನಾದರೂ ಬರೆದಿದ್ದೀರಿ" ರಾಯರು ಸುಧಾರಿಸಿದರು. "ಅದು ಮಾತ್ರ ನಿಜ." ಲೇಖಕರು ಧೈರ್ಯ ತಂದುಕೊಂಡು ಹೇಳಿದರು.

"ಯಾವ ಮಾದರಿಯ ಕಾದಂಬರಿ ನಿಮ್ಮದು ? ಪೀತಾಂಬರಿಯೋ ? ನೀಲಾಂಬರಿಯೊ ? ಶ್ವೇತಾಂಬರಿಯೋ ?" ರಾಯರು ಕೇಳಿದರು.

ಲೇಖಕರ ಎದೆಯು ಹಾರಿತು. ತಮ್ಮ ನಾಡಿಯನ್ನು ಹಿಡಿದು ನೋಡಿದರು. ಅದೂ 'ಡವ ಡವ' ಎಂದು ಹಾರುತ್ತಿತ್ತು. ಅವಸರದಲ್ಲಿ "ಇವು ಮೂರು ಮಾದರಿಗಳೂ ನನ್ನ ಕಾದಂಬರಿಯಲ್ಲಿವೆ, ರಾಯರೆ !" ಎಂದು ಮುಂಗಾಲು ಪುಟಿಗೆಯ ಮಾತಾಡಿದರು.

"ಅದು ಹೇಗೆ ?" ರಾಯರು ಆಶ್ಚರ್ಯಚಕಿತರಾದರು.

"ಕಾದಂಬರಿಯು ಪ್ರಾರಂಭವಾಗುವದು ವಿವಾಹಮಂಟಪದಲ್ಲಿ. ಗಾಳಿ ಪಟದಂತೆ ಅದು ಮುಗಿಲಿನಲ್ಲಿ ಕೆಲವು ಹೊತ್ತು ಹೊಯ್ದಾಡುವದು. ಕೊನೆಗೆ ಮರಣಶಯ್ಯೆಯಲ್ಲಿ ಮುಗಿದು ಹೋಗುವದು."

" ಓಹೋ ! ಹೀಗಿದೆಯೊ ? " ರಾಯರೆಂದರು. ತಮ್ಮ ಶಬ್ದಗಳಿಗೆ ಲೇಖಕರು ಕಲ್ಪಿಸಿದ ನೂತನಾರ್ಥವು ಅವರನ್ನು ವಿಚಾರದಲ್ಲಿ ಕೆಡವಿತು. ಬಳಿಕ: " ನಿಮ್ಮ ಕಾದಂಬರಿಗೆ ಹೆಸರೇನಿಟ್ಟಿದ್ದೀರಿ ? " ಎಂದು ಕೇಳಿದರು.

" ಇಜ್ಜೋಡು. " ಲೇಖಕರು ಬೆದರುತ್ತ ಹೇಳಿದರು.

ರಾಯರು ತುಸು ಹೊತ್ತು ತಲೆ ತುರಿಸಿದರು: " ಏನರಿ ? ಆ ಬೇಂದ್ರೆ, ಬೇಂದ್ರೆ ಅಂತಾರಲ್ಲ, ಅವನೇನೊ ಇದೇ ಹೆಸರು ಹೇಳತಿದ್ದ. ಏನು ಅವನ ಕಾದಂಬರಿ ತಂದು ನಿಮ್ಮದೆಂದು ಹೇಳತೀರೋ, ಏನು ಮತ್ತ ? "

" ಹಾಗಲ್ಲ, ರಾಯರ ! ಬೇಂದ್ರೇನ ಹೆಸರೇನೋ ನಿಜ. ಅವರೇನು ಕಾದಂಬರಿ ಬರೀತಿದ್ದರೋ ಅವರಿಗೇ ಗೊತ್ತು. ಆ ಹೆಸರು ಮೋಜು ಕಂಡಿತು. ಅದನ್ನ ನನ್ನ ಕಾದಂಬರಿಗೆ ಇಟ್ಟುಬಿಟ್ಟೆ. " ಲೇಖಕರು ವಿನಯ ಪೂರ್ವಕವಾಗಿ ಬಿನ್ನವಿಸಿದರು.

" ಹೀಗೊ ? ನಾಮಚೌರ್ಯವೇನು ಶೌರ್ಯದ ಭಾಗನೇ ಅದ. ಇರಲಿ. ಎಷ್ಟುದ್ದವಿರಬಹುದು ನಿಮ್ಮ ಕಾದಂಬರಿ? " ರಾಯರು ಇನ್ನೊಂದು 'ಡಾವಪೇಚು' ಹಾಕಿದರು.

ಈಗ ಮಾತ್ರ ಲೇಖಕರು ನಿರುತ್ತರರಾದರು. ಸ್ಫೂರ್ತಿಯು ಅವರನ್ನು ಅಗಲುವ ಹೊತ್ತು ಬಂದಿತ್ತು. " ಕ್ಷಮಿಸಬೇಕು, ರಾಯರ ! ನಾ ಹೇಳೋ ಮಾತು ಕೇಳಿ ನನ್ನ ಕಾದಂಬರಿ ಓದೋದು ಬಿಡಬಾರದು. ಒಂದು ಭಾಗ ಮಾತ್ರ ಪೂರ್ಣ ಆಗೇದ " ಲೇಖಕರು ಕೈಜೋಡಿಸಿ ಕಣ್ಣೀರು ತಂದು ಹೇಳಿದರು.

" ವಾಹವರೆ ! ವಾಹವಾ ! ಈಗ ಹೊರಬಿತ್ತು ನಿಮ್ಮ ಗುಟ್ಟು ! ಈ ಭಾಗ–ಗೀಗ ಓದಸೋ ರೋಗ ಅಂಟಿಸಬೇಕಂತ ಮಾಡೀರೇನು ನನಗ ? " ರಾಯರು ವಿಲಕ್ಷಣವಾಗಿ ನಕ್ಕು ಕೇಳಿದರು.

ಲೇಖಕರಿಗೆ ಮೂರ್ಛೆ ಬರುವ ಹಾಗಾಯಿತು. ಅವರ ಮೈಮೇಲೆ ಎಚ್ಚರವೇ ಉಳಿಯಲಿಲ್ಲ. " ಇಲ್ಲ, ರಾಯರ ! ಅದು ಪೂರ್ಣ ಅದ ! " ಎಂದು ಗಾಬರಿಯಾಗಿ ತಮ್ಮ ಮಾತನ್ನು ಸರಿಪಡಿಸಿದರು.

" ಪೂರ್ಣ ಅದ ? "

ಇಲ್ಲ, ರಾಯರ ! ಇದು ಮೊದಲನೆ ಭಾಗ. ! "

" ಮೊದಲನೆ ಭಾಗ ? "

" ಅದು ಯಾಕಾದೀತು, ರಾಯರ ! ಪೂರ್ಣ ಅದ. "

" ಏ ! ಬಸ್ಸ್ಯಾ ! " ಎಂದು ರಾಯರು ಸಿಟ್ಟಿನಿಂದ ಒದರಿಕೊಂಡರು. ಇವರನ್ನ ಚಂಡಿಗೆ ಕೈ........"

" ನೀವು ದೊಡ್ಡವರು, ರಾಯರ ! ಹಾಗೆ ಮಾತನಾಡಬಾರದು ! " ಲೇಖಕರು ಅಂಗಲಾಚಿ ಬೇಡಿಕೊಂಡರು.

" ಮತ್ತ ನೀವು........"

" ಇಲ್ಲ, ಹೇಳತೇನಿ, ರಾಯರ ! "

" ಹೇಳರಿ ನೋಡೋಣು ! "

" ಓದಬೇಕಾದರ ಅಪೂರ್ಣ ಅನಿಸಿದರ ಇದು ಮೊದಲನೆ ಭಾಗಂತ ತಿಳೀಬೇಕು ತಾವು. ಪೂರ್ಣ ಅನಿಸಿದರ ಇಡೀದಂತೂ ಹೇಳಬಹುದು. ನಿಮ್ಮಿಮ್ಮ ಇಚ್ಛಾ ! " ಲೇಖಕರು ದೀನರಾಗಿ ನುಡಿದರು.

" ಹೀಗೊ ? ಗತ್ತು ಹಿಡದು ಬರದೀರೇನು ನೀವು ? " ರಾಯರು ಉತ್ಸುಕರಾಗಿ ಕೇಳಿದರು.

" ಹೌದು, ರಾಯರ ! ಗತ್ತು ಹಿಡದು ಬರದೇನಿ ! " ಲೇಖಕರು ಸಂತುಷ್ಟರಾಗಿ ಉತ್ತರವಿತ್ತರು.

" ಒಳ್ಳೇದು. ಇದರಾಗ ನೀವು ಹೇಳಬೇಕಂತ ಮಾಡಿದ್ದಾರ ಏನು ? "

" ಹೇಳೋದಿಲ್ಲ ಕೇಳೋದಿಲ್ಲ, ರಾಯರ ! ಮನಸ್ಸಿಗೆ ಸುಖಾ ಅನಸಿದರ ಓದಬೇಕು. ತಲೆಶೂಲಿ ಎದ್ದರ ಬಿಟ್ಟು ಬಿಡಬೇಕು. ಇತ್ತೀಚೆಗೆ ಬಹಳ ಜನರಿಗೆ ಏಳಲಿಕ್ಕೆ ಹತ್ತೇದ ತಲೆಶೂಲಿ. ಓದಿ ಏಳತದೊ ಓದದನ ಏಳತದೊ ಗೊತ್ತಿಲ್ಲ ನನಗ. "

" ಅಂಥಾ ಜನರು ಏನು ಬಿಡ್ರಿ ! ಇದ್ದೇ ಇರತಾರ ! ಕಣ್ಣಿದ್ದೂ ಕಾಣೂದುಲ್ಲಂತ ಹೇಳೋವರು, ಕಿವಿಯಿದ್ದೂ ಕೇಳೂದುಲ್ಲಂತ ಹೇಳೋವರು, ಬುದ್ಧಿಯಿದ್ದೂ ತಿಳಿಯೂದುಲ್ಲಂತ ಹೇಳೋವರು,–ಆಸ್ಪತ್ರಿಗೆ ಒಯ್ದು ಒಪರೇಶನ್ ಮಾಡಿಸಬೇಕು ಇವರಿಗೆ ! ಅಂದರ ಹೋಗತದ ಪರಿ ! "

ರಾಯರು ಹೇಳಿದರು. ತುಸು ಹೊತ್ತು ತಡೆದು '' ಈಗ ನಾ ಏನು ಮಾಡ ಬೇಕಂತೀರಿ ನೀವು ? '' ಎಂದು ಪ್ರಶ್ನೆ ಮಾಡಿದರು.

'' ಏನಿಲ್ಲ, ರಾಯರ! ಇದನ್ನ ಓದಿ ನೋಡರಿ! ಮುದ್ರಣಕ್ಕೆ ಯೋಗ್ಯ ಆದನೋ ಇಲ್ಲೋ ಓದಿ ನೋಡಿ ಹೇಳಿದರ ಉಪಕಾರ ಆತು ನನ್ನ ಮ್ಯಾಲ! '' ಲೇಖಕರು ಬೇಡಿಕೊಂಡರು.

'' ಒಳ್ಳೇದು. ಓದತೇನಿ ಹೋಗರಿ. '' ಎಂದು ರಾಯರು ಲೇಖಕರ ಕೈಯ್ಯಲ್ಲಿದ್ದ ಪ್ರತಿಯನ್ನು ಇಸಿದುಕೊಂಡರು. ಲೇಖಕರಿಗೆ ಪರಮಾನಂದ ವಾಯಿತು. ಅವರು ರಾಯರನ್ನು ವಿನಯಪೂರ್ವಕ ನಮಸ್ಕರಿಸಿ ಅವರ ಅನು ಮತಿ ಪಡೆದು ಹೊರಡಲನುವಾದರು. ರಾಯರು '' ಇಲ್ಲಿ ನೋಡರಿ! ಇದೊಂದು ಸಿಗರೇಟು ಸೇದಿ ಹೋಗರಿ! '' ಎಂದು ಲೇಖಕರನ್ನು ಕರೆದು ತಮ್ಮ ಹತ್ತಿರಿದ್ದ ಕುರ್ಚೆಯ ಮೇಲೆ ಕುಳ್ಳಿರಿಸಿ ಒಂದು ಸಿಗರೇಟು ಕೊಟ್ಟರು. ಲೇಖಕರಿಗೆ ಆನಂದವಾಯಿತು. ಇಷ್ಟು ಮನ್ನಣೆಯು ರಾಯರ ಕೋಣೆಯಲ್ಲಿ ಇನ್ಯಾವ ಸಾಹಿತಿಗಳಿಗೂ ಇಷ್ಟು ಬೇಗ ದೊರಕಿದ್ದಿಲ್ಲ. ತಮ್ಮ ಸುದೈವವೆಂದು ಲೇಖಕರು ತಮ್ಮ ಬೆನ್ನು ಚಪ್ಪರಿಸಿಕೊಂಡರು. ಆದರೆ ಸಿಗರೇಟು ಸೇದುವ ಬಗೆ ಹೇಗೆ ? ಜನ್ಮದಲ್ಲಿ ಅವರು ಒಮ್ಮೆಯಾದರೂ ಧೂಮ್ರಪಾನ ಮಾಡಿದ್ದಿಲ್ಲ. ಸೇದುವದನ್ನು ಬಿಟ್ಟರೆ ರಾಯರು ತಮ್ಮ.... ಕಾದಂಬರಿಯನ್ನು........ ಛೀ ! ಅದಾಗದ ಮಾತು! ಎಷ್ಟು ಶ್ರಮವಾದರೂ ಸೇದಿ ಹೋಗಬೇಕೆಂದು ಲೇಖಕರು ನಿರ್ಧರಿಸಿದರು. ತುಟಿಗಳ ನಡುವೆ ಸಿಗರೇಟಿನ ತುದಿಯನ್ನು ಹಿಡಿದು ತಮ್ಮನ್ನೇ ಮಿಕಿ ಮಿಕಿ ನೋಡುತ್ತ ಕುಳಿತ ಲೇಖಕರನ್ನು ನೋಡಿ ರಾಯರಿಗೆ ನಗುವು ಬಂದಿತು.

'' ಇಲ್ಲಿದೆ ನೋಡರಿ ಬೆಂಕಿಪೆಟ್ಟಿಗೆ ! ಕಡ್ಡಿ ಕೊರೆಯೋದು ಗೊತ್ತಿ ಲ್ಲೇನು ನಿಮಗ ? ಎಂದು ಕಡ್ಡಿ ಕೊರೆದು ಲೇಖಕರ ಮೋರೆಗೆ ಹಿಡಿದರು. ಇದ್ದ ಮೀಸೆಗಳಷ್ಟು ಸುಟ್ಟು ಹೋಗಬಹುದೆಂದು ಲೇಖಕರಿಗೆ ಭಯ ವಾಯಿತು. ರಾಯರ ಕೈಯ್ಯಿಂದ ಕಡ್ಡಿಯನ್ನಿಸಿದುಕೊಂಡು ಮೆಲ್ಲನೆ ಸಿಗ ರೇಟು ಹೊತ್ತಿಸಿದರು. ಆದರ ಹೊಗೆಯು ಗಂಟಲದಲ್ಲಿ ಸೇರಲು ಲೇಖಕ ರಿಗೆ ಪ್ರಾಣಸಂಕಟವಾಯಿತು. ಬಾಯನ್ನು ಅಗಲವಾಗಿ ತೆರೆದು ಮೂಗನ್ನು

ಹಿಗ್ಗಿಸಿ ಅತಿಶಯವಾಗಿ ಕೆಮ್ಮುತ್ತ ಹೊಗೆಯನ್ನು ಹೊರಗೆ ಬಿಟ್ಟರು. ಹತ್ತಿರ ಕುಳಿತ ರಾಯರ ಮೊಗವನ್ನು ಆ ಹೊಗೆಮೋಡವು ಮುಚ್ಚಿ ಬಿಟ್ಟಿತು.

ಚಟಪಟ ಝಾಡಿಸಿಕೊಂಡು ರಾಯರು ಆವೇಶದಲ್ಲಿ ಕುರ್ಚಿಯ ಮೇಲೆ ಎದ್ದು ನಿಂತು: "ಹೂಂ! ನಡಿರಿ! ಅಲ್ಲಿ ಹೋಗರಿ! ಒಂದು ಸಿಗರೇಟು ಸೇದಲಿಕ್ಕೆ ಬರೂದುಲ್ಲ ನಿಮಗ! ಕಾದಂಬರಿ ಏನು ಬರೀತಿರಿ ನಿಮ್ಮ ತಲಿ!" ಎಂದು ಸ್ಟೂಲಿನ ಕಡೆಗೆ ಬೊಟ್ಟು ಮಾಡಿದರು.

"ಇಲ್ಲ, ರಾಯರ! ಬರತದ!" ಲೇಖಕರು ಗಾಬರಿಯಾಗಿ ಎದ್ದು ನಿಂತು ಹೇಳಿದರು.

"ಆಂ? ಬರತದ?"

"ಇಲ್ಲ,....ರಾಯರ! ಬರೂದುಲ್ಲ?"

"ಬರೂದುಲ್ಲ?"

"ಇಲ್ಲ, ಬರತದ ರಾಯರ! ಸೇದತೇನಿ!"

"ಏ! ಬಸ್ಯಾ!........"

"ಅದು ಮಾತ್ರ ಬ್ಯಾಡರಿ, ರಾಯರ! ನನಗ ಅಷ್ಟು ನೆಟ್ಟಗ ಬರದೇ ಇದ್ದರು ಮುಂದಿ ಸೇದೋದು ನೋಡೇನಿ!" ಲೇಖಕರು ದೈನಾಸಬಟ್ಟು ಹೇಳಿದರು.

"ಹಾಂ! ಹೀಗಿದ್ದರ ಅಡ್ಡಿ ಇಲ್ಲಾ. ಇನ್ನು ಹೋಗರಿ. ನಾ ಓದತೇನಿ. ನಾಳೆ ಮುಂಜಾನೆ ಬರ್ರಿ." ಎಂದು ರಾಯರು ನುಡಿದರು.

ಲೇಖಕರು ಮತ್ತೆ ನಮಸ್ಕಾರ ಮಾಡಿ ಅವರ ಅಪ್ಪಣೆ ತೆಗೆದುಕೊಂಡರು. ಇತ್ತ ರಾಯರು 'ಇಲಿಯಡ್ಡ'ನ್ನು ಶೆಲ್ಫಿನ ಮೇಲಿರಿಸಿ ಕಾದಂಬರಿಯನ್ನು ಓದತೊಡಗಿದರು.

# ಇಜ್ಜೋಡು

## ಪ್ರಕರಣ ೧

### ಮೊಗ್ಗಾವಿ

ಮೊಗ್ಗಾವಿಯು ಉತ್ತರ ಕರ್ನಾಟಕದಲ್ಲಿಯ ಒಂದು ಊರು. ತಿರುಕಾಚಾರ್ಯರು ಬರೆದ 'ತಾಲ್ಲೂಕರಾಜಾಸ್ತೋತ್ರ'ದಲ್ಲಿ ಇದರ ಉಲ್ಲೇಖವಿದೆ. ಹುಬ್ಬಳ್ಳಿ-ಧಾರವಾಡದಂತೆ ದೊಡ್ಡ ಪಟ್ಟಣವಲ್ಲ; ಹಳ್ಳಿಯೂ ಅಲ್ಲ. ಕಳೆದ ಖಾನೇಸುಮಾರಿಯಲ್ಲಿ ಅದರ ಜನಸಂಖ್ಯೆ ಸುಮಾರು ಹದಿನೈದು ಸಾವಿರವಿತ್ತೆನ್ನಬಹುದು. ಇಲ್ಲಿ ಒಕ್ಕಲಿಗರೂ ಉಂಟು. ಅಕ್ಕರಿಗರೂ ಉಂಟು. ಎರಡು ಪಾಲು ಒಕ್ಕಲತನವಿದ್ದರೆ ಊರಿನಲ್ಲಿ ಒಂದು ಪಾಲು ವ್ಯಾಪಾರ, ಇನ್ನೊಂದು ಪಾಲು ವಿದ್ಯಾರ್ಜನೆ. ಕರಣಿಕರು, ಒಕ್ಕಲಿಗರು, ವ್ಯಾಪಾರಸ್ಥರು, ಶಿಕ್ಷಕರು,– ಇವರೆಲ್ಲ ಅಲ್ಲಿಯ ಪ್ರಮುಖ ನಾಗರಿಕರು. ಆದರೆ ಸಂಸಾರಕ್ಕೆ ಊರು ಬಳ್ಳೆ ಸುಖಕರವಾಗಿತ್ತು. ಊರಿನಿಂದ ಎಂಟು ಮೈಲು ದಾಟಿದರೆ ತೀರಿತು; ಸಿಲ್ಕಾನೆಯು ಅಲ್ಲಿಯ ಜನರನ್ನು ನಾಗರಿಕತೆಯ ಉಚ್ಚಸ್ಥಿತಿಯ ನೆನಪಿನಿಂದ ಹುರಿದುಂಬಿಸುತಿತ್ತು. ಪ್ರತಿ ಸೋಮವಾರ ಊರಲ್ಲಿ ಸಂತೆ. ಆಗ ಸುತ್ತಲಿರುವ ಎಲ್ಲ ಹಳ್ಳಿಗಳಿಂದ ಬೆಣ್ಣೆ, ಪಲ್ಲೆಕಾಯಿ ಮೊದಲಾದ ಆರೋಗಣೆಯ ಸಾಮುಗ್ರಿಗಳು ಬಲು ಸುಲಭವಾದ ಕ್ರಯಕ್ಕೆ ಸಿಕ್ಕುತ್ತಿದ್ದವು. ಅಲ್ಲದೆ ತೋಟ-ಪಟ್ಟಿ ಬೇರೆ. ಈಸಲಿಕ್ಕೆ ಪ್ರಶಸ್ತವಾದ ಬಾವಿಗಳು– ರಾಮತೀರ್ಥ, ಅಗಸ್ತ್ಯತೀರ್ಥಗಳು. ಜಾಗೃತಸ್ಥಾನವೆಂದು ಹೆಸರುಗೊಂಡ ಕೇಶವದೇವರ ಗುಡಿಯೊಂದು. ಧನಿಕರು ಇಲ್ಲಿ ತಮ್ಮ ವ್ಯವಹಾರವನ್ನೂ ಸುಲಭವಾಗಿ ಸಾಗಿಸಬಹುದು; ತೋಟಿಗರೂ ಒಕ್ಕಲಿಗರೂ ಇಂಥ ವ್ಯವಹಾರವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಕಾರಣ ಅನೇಕ ದೇಸಾಯಿಮನೆತನಗಳು ಇಲ್ಲಿ ಬಂದು ನೆಲೆಗೊಂಡು ನಿಂತಿದ್ದವು.

ದೇಸಾಯರ ಬರವಿನಿಂದ ಮೊಗ್ಗಾವಿಯಲ್ಲಿ ಸುಪ್ತವಾಗಿದ್ದ ರಸಿಕತೆಗೂ ಕಳೆ ಯೇರಿತು. ನಾಚು, ಸಂಗೀತ, ವಾದ್ಯ,- ಒಂದಿಲ್ಲ ಒಂದೆಡೆಗೆ ಇವು ಆ ಊರಿನ ದಿನಚರ್ಯೆಯಲ್ಲಿ ಬಂದು ಸೇರಿದ್ದವು. ಜನರಲ್ಲಿ 'ರಸರಸಿ' ಹುಟ್ಟಿ ಪಷ್ಟು ಇವರ ರಸಿಕತೆಯೇರಿತೆಂದು ಜನರು ಒಮ್ಮೊಮ್ಮೆ ಆಡಿಕೊಳ್ಳುತ್ತಿ ದ್ದರು. ಒಕ್ಕಲಿಗರೂ ಶಿಕ್ಷಕರೂ ಬರಬರುತ್ತ ಇಂಥ ವೈಭವಗಳಿಗೆ ಮನ ಸೋತದ್ದರಿಂದ ದೇಸಗತ್ತಿಯವರ ದರ್ಶವು ಊರಲ್ಲಿ ದಿನದಿನಕ್ಕೆ ಹೆಚ್ಚ ತೊಡಗಿತು.

ಇಷ್ಟರಲ್ಲಿ ಮೊಗ್ಗಾವಿಯು ತಾಲೂಕುಸ್ಥಳವಾಯಿತೆಂದು ಸುದ್ದಿ ಬಂತು. ಹತ್ತಿರದ ಒಂದು ಊರಿನಿಂದ ಸರಕಾರದವರು ತಮ್ಮ ವ್ಯವಸ್ಥೆ ಯನ್ನು ಮೊಗ್ಗಾವಿಗೆ ತರುವವರಿದ್ದರು. ಕೋರ್ಟು, ಮಾಮಲೇದಾ ರರು, ಮುನಸೀಫರು, ಕಾರಕೂನರು, ಸಿಪಾಯಿಗಳು,- ಮೊಗ್ಗಾವಿಯಲ್ಲಿ ಇಷ್ಟೆಲ್ಲ ಹೊಸತನದ ಪ್ರವೇಶವಾಯಿತು. ಊರು ಸಲಕ್ಷಣವಾಯಿತೆಂದು ಕೆಲವರಾಡಿಕೊಂಡರು. ಅವಲಕ್ಷಣವೆಂದು ಇನ್ನುಳಿದವರು ದೂರಿದರು. ಅಂತೂ ಬೇರೆ ಕೆಲವು ಉದ್ಯೋಗಗಳು ಬಂದು ಮೊಗ್ಗಾವಿಯ ಸಮಾಜ- ರಚನೆಯಲ್ಲಿ ಸೇರಿಕೊಂಡವು ಮೊದಲಿಗೆ ಬಂದ ಮಾಮಲೇದಾರರು ಅಂಥಿಂಥ ವರಲ್ಲ. ಅಚ್ಚ ವೈಷ್ಣವರು, ಧಾರ್ಮಿಕರು. ಅವರು ಬಂದೊಡನೆ ಜೂಜು ಗಾರರು ಮೊಗ್ಗಾವಿಯನ್ನು ಬಿಟ್ಟು ಹಳ್ಳಿಗಳನ್ನು ಸೇರಿದರು. ಆ ಊರ ವೈಷ್ಣವರಿಗೆ ಪ್ರಮುಖರಾದ ತಿರುಕಾಚಾರ್ಯರು ಬರೆದ "ತಾಲ್ಲೂಕರಾಜಾ ಸ್ತೋತ್ರ"ವೆಂಬ ಕಾವ್ಯದಲ್ಲಿ ಆಚಾರ್ಯರು ಮಾಮಲೇದಾರರನ್ನು ಸೂರ್ಯನಿಗೂ, ಜೂಜುಗಾರರನ್ನು ಗೂಗೆಗಳಿಗೂ ಹೋಲಿಸಿದ್ದಾರೆ. ಇದೇ ಕಾವ್ಯದಲ್ಲಿ 'ಸಾನೀಷು ಸನ್ನಿಪಾತಃ' ಎಂಬ ಇನ್ನೊಂದು ಅಧ್ಯಾಯವಿದೆ. ಮಾಮಲೇದಾರರು ಬಂದಂದಿನಿಂದ ಮೊಗ್ಗಾವಿಯಲ್ಲಿಯ ಸಾನಿಯರಿಗೆಲ್ಲ ಸಿಡುಗು ಬಂದಂತಾಗಿತ್ತು. ಕೆಲವು ಜನ ವಿಲಾಸೀ ಪುರುಷರಿಗೆ ಕತ್ತೆಯ ಮೇಲೆ ಕುಳಿತು ಮೆರೆಯುವ ಪ್ರಸಂಗ ಬಂದಿತ್ತು. ದೊಡ್ಡ ಜನರೆಂದು ಹೆಸರುಗೊಂಡ ಅನೇಕರು ಈ ಉತ್ಸವಗಳ ನಾಯಕರಾದರು. ಕೊನೆಗೆ ಕಲೆಕ್ಟರರಿಂದ ವಿರುದ್ಧ ಹುಕುಮು ಬಂದಿತೆಂದು ಜನರಾಡಿಕೊಂಡಿದ್ದು ನಿಜವೋ ಏನೊ ! ಕೆಲವು ದಿವಸಗಳ ಮೇಲೆ ಇಂಥ ಮೆರೆವಣಿಗೆಗಳು ತಮಗೆ

ತಾವೇ ನಿಂತು ಹೋದವು. ಊರೊಳಗಿನ ದೇಸಗತ್ತಿಯವರೆಲ್ಲ ಕೂಡಿ ಕಲೆಕ್ಟರರಿಗೆ ಅರ್ಜಿ ಮಾಡಿರಬಹುದೆ? ಇಲ್ಲವೆ ತಿರುಕಾಚಾರ್ಯರ 'ತಾಲ್ಲೂಕರಾಜಾಸ್ತೋತ್ರ'ದಲ್ಲಿಯ ವರ್ಣನೆಯು ಈ ಮಾತಿನ ಮೇಲೆ ತುಸು ಬೆಳಕು ಕೆಡವುವಂತಿವೆ. ಈ ವೈಷ್ಣವ 'ರಾಜರ' ಆಳಿಕೆಯಲ್ಲಿ ಊರಲ್ಲಿದ್ದ ವಸಂತಸೇನೆಯರೆಲ್ಲ 'ಹಂಸಃ' ಎಂದು ದಾತಗಳನ್ನು ತೆಗೆದರಂತೆ! ಅಲ್ಲಿಯ ಚಾರುದತ್ತ-ಚಾರುಗಾತ್ರರೆಲ್ಲ ಲಂಬಕರ್ಣರಾದರಂತೆ! ಅಂತೂ ಈ ತಾಲೂಕೆಂದರೆ ರಾಮರಾಜ್ಯನೆಂದು ವರ್ಣಿಸಿ, ರಾವಣರ ಸಮೂಲ ನಾಶವಾಯಿತೆಂದು ಆಚಾರ್ಯರು ಬರೆಯುತ್ತಾರೆ.

ಮೊಗ್ಗಾವಿತಾಲೂಕು ರಾಮರಾಜ್ಯವೆಂದು ಸಿದ್ಧಪಡಿಸುವಾಗ ತಿರುಕಾಚಾರ್ಯರು ಇನ್ನೊಂದು ಆಧಾರವನ್ನು ಕೊಟ್ಟಿದ್ದಾರೆ. "ಯತ್ರ ನಾರ್ಯಸ್ತು ಪೂಜ್ಯಂತೆ, ರಮಂತೆ ತತ್ರ ದೇವತಾಃ" ಮಾಮಲೇದಾರರು ಬಂದಾಗಿನಿಂದ ಮೊಗ್ಗಾವಿಯಲ್ಲಿ ನಾರಿಯರ 'ಪೂಜೆ'ಗೆ ಆರಂಭವಾಗಿತ್ತು. ಅಂದರೆ ಮೊದಲು ಹೆಣ್ಣುಮಕ್ಕಳ ಸಲುವಾಗಿ ಕನ್ನಡ ನಾಲ್ಕು ಇಯತ್ತೆಯ ವರೆಗೆ ಸಾಲೆಯು ಇರುವಂತೆ ಇದ್ದುದಲ್ಲದೆ ಈಗೊಂದು 'ಏ. ವ್ಹಿ. ಗರ್ಲ ಸ್ಕೂಲು' ಪ್ರಾರಂಭವಾಗಿತ್ತು. ಅಲ್ಲಿ ಹುಡಿಗೆಯರಿಗೆ ಇಂಗ್ಲಿಷು ಶನೆಯ ಇಯತ್ತೆಯ ವರೆಗೆ ಕಲಿಸುತ್ತಿದ್ದರು. ತಿರುಕಾಚಾರ್ಯರ ಪಂಗಡವೊಂದನ್ನುಳಿದು ಊರೊಳಗಿನ ಅನೇಕ ಧಾರ್ಮಿಕರಿಗೆ ಇದು ಮನಸ್ಸಿಗೆ ಬರಲಿಲ್ಲ. ರಾಯರು ಬರಬರುತ್ತ ಸುಧಾರಕರಾಗಹತ್ತಿದರೆಂದು ಅವರು ಆಡಿಕೊಂಡರು. ತಿರುಕಾಚಾರ್ಯರಿಗೂ ಇದು ಮನಸ್ಸಿಗೆ ಬಂದಿತ್ತೆಂದಲ್ಲ. ಆದರೆ ಇದು ರಾಮರಾಜ್ಯವೆಂಬ ತಮ್ಮ ಪ್ರಮೇಯವನ್ನು ಸಿದ್ಧಗೊಳಿಸಲಿಕ್ಕೆ ಬೇಕಾದ ಆಧಾರಗಳನ್ನೆಲ್ಲ ಅವರು ಆಯ್ದುಕೊಂಡಿದ್ದರು.

'ತಾಲ್ಲೂಕರಾಜಾಸ್ತೋತ್ರ'ವನ್ನು ಓದುತ್ತ ಹೋದ ಹಾಗೆ, ಉತ್ತರಕರ್ನಾಟಕದಲ್ಲಿ ಈಗ ೩೦-೩೫ ವರ್ಷಗಳ ಹಿಂದಿನ ಜನಜೀವನವು ಕಣ್ಣುಕಟ್ಟುವದು. ಆದರಲ್ಲಿಯೂ ಮೊಗ್ಗಾವಿತಾಲೂಕಿನ ವೈಭವವು ಮನದಟ್ಟಾಗುವದು. ಗಂಡುಮಕ್ಕಳ 'ಏ. ವ್ಹಿ. ಸ್ಕೂಲು' ರಾಯರ ಕಾಲದಲ್ಲಿ ಹಾಯಸ್ಕೂಲಾಯಿತು. ಅಲ್ಲಿಂದ ಮೊದಲನೆ ವರುಷ 'ಮೇಟ್ರಿಕ್' ಪರೀಕ್ಷೆಗೆ ಕೂತವನೆಂದರೆ ರಾಯರ ಮಗನೊಬ್ಬನೆ! ಪಾಸಾಗಿ ಬಂದ.

ಕೇಳುವದೇನು ?ಮೊಗ್ಗಾವಿ ಸಾಲೆಯ ಮೇಟ್ರಿಕ್ ಪರೀಕ್ಷೆಯ ಪರಿಣಾಮವು ನೂರಕ್ಕೆ ನೂರರಷ್ಟೆಂದು ಊರೆಲ್ಲ ಡಂಗುರ ಹೊಡಿಯಿತು! ಇದಲ್ಲದೆ ರಾಯರ ಕಾಲದಲ್ಲಿ ತಾಲೂಕಿನ ಪ್ರತಿಯೊಂದು ಹಳ್ಳಿಗೆ ಒಂದು ಮಂಗಳೂರು-ಹಂಚಿನ ಧರ್ಮಶಾಲೆ, ಅದರೆದುರು ಒಂದು ಗಡೆ ಹಚ್ಚಿದ ಭಾವಿ, ಆ ಭಾವಿಯ ದಂಡೆಗೆ ವಿಚಾರ ಮಾಡುತ್ತ 'ಫುಲ್' ಡ್ರೆಸ್ಸಿನಲ್ಲಿ ಕುಳಿತ ಒಬ್ಬ ಸಿಪಾಯಿ,-ಇಷ್ಟೆಲ್ಲ ಸುಧಾರಣೆಗಳಾದವು. 'ಅಹಲ್ಯೋದ್ಧಾರ' ಪ್ರಕರಣದಲ್ಲಿ ಆಚಾರ್ಯರು ಇದನ್ನು ಸಂಪೂರ್ಣವಾಗಿ ವರ್ಣಿಸುತ್ತಾರೆ. ತಾಲೂಕಿನ ಗ್ರಾಮಗಳೆಲ್ಲ ಮೊದಲು ಕಲ್ಲಾಗಿ ಬಿದ್ದುಕೊಂಡಿದ್ದವು; ರಾಯರೇ ಬಂದು ಅವುಗಳನ್ನು ತಮ್ಮ ಪಾದಧೂಳಿಸ್ಪರ್ಶದಿಂದ ಚೇತನಗೊಳಿಸಿ ಗೌತಮರಿಗೆ (ಗೌಡರಿಗೆ) ಒಪ್ಪಿಸಿಕೊಟ್ಟರೆಂದು !

'ಮೊಗ್ಗಾವಿ'ಯೆಂಬ ಹೆಸರು ಹೇಗೆ ಬಂದಿತೊ ಇನ್ನೂ ನಮಗೆ ಹೊಳೆದಿಲ್ಲ. ತಿರುಕಾಚಾರ್ಯರೇನೊ ಅದನ್ನು 'ಕೋರಕ ಕೂರ್ಮಪುರಿ'ಯೆಂದು ತಮ್ಮ ಕಾವ್ಯದಲ್ಲಿ ಬರೆದಿದ್ದಾರೆ. ಅವರ ಶಿಷ್ಯರಾದ ಅನೇಕ ವೈಷ್ಣವರು ಈ ಸಂಸ್ಕೃತ ಹೆಸರಿನಿಂದಲೇ 'ಮೊಗ್ಗಾವಿ'ಯು ಬಂದಿತೆಂದು ಇಂದಿಗೂ ಸಾಧಿಸುತ್ತಾರೆ. ಆದರೆ ವ್ಯುತ್ಪತ್ತಿಶಾಸ್ತ್ರವು ಈ ಮಾತನ್ನು ಎತ್ತಿ ಹಿಡಿಯಲಾರದು. ಐತಿಹಾಸಿಕ ಕಾಲದಲ್ಲಿ ಪ್ರಸಿದ್ಧವಾದ ಯಾವ ಊರಿನ ಹೆಸರೂ 'ಕೋ....ಕು...ರಿ' ಯಷ್ಟು ಭಯಾನಕವಿರಲಾರದೆಂದು ನಮಗೆ ತೋರುತ್ತದೆ. ಒಬ್ಬ ವ್ಯುತ್ಪತ್ತಿಶಾಸ್ತ್ರಜ್ಞರಿಗೆ ಈ ಪ್ರಶ್ನೆಯನ್ನು ಕೇಳಿದಾಗ ಅದು ಮೊದಲು 'ಮಾಗಾಯಿ' ಯಾಗಿರಬೇಕೆಂದು ಅವರು ಹೇಳಿದರು. ಒಬ್ಬ ಅರಸನು ತನ್ನ ರಾಣಿಯೊಡನೆ ಪಯಣ ಬೆಳೆಸುತ್ತಿರಬೇಕು. ರಾಣಿಯು ತನ್ನ ಮಗುವನ್ನು ಆಡಿಸುವಾಗ ಆ ಮಗುವಿನ ಮಾಗಾಯಿಯು ಕಳೆದು ಹೋಗಿರಬೇಕು.ಅರಸನಿಗೆ ಈ ಸುದ್ದಿಯು ತಿಳಿದ ಕೂಡಲೆ ಕಳೆದ ಮಾಗಾಯಿಯನ್ನು ಹುಡುಕಿ ಕೊಟ್ಟವರಿಗೆ ಹಳ್ಳಿಯನ್ನು ಇನಾಮು ಹಾಕಿಕೊಡುವೆನೆಂದು ಅವನು ಡಂಗುರ ಹೊಯ್ಸಿರಬೇಕು. ಆಗ ಹತ್ತಿರದಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದ ಕಲ್ಲುಕುಟಿಗರಲೊಬ್ಬನು ಬಂದು ಅದನ್ನು ಹುಡುಕಿ ಕೊಟ್ಟಿರಲೇಬೇಕಲ್ಲವೆ ? ಅರಸನು ಅವನನ್ನು ಆ ಹಳ್ಳಿಯ ಗೌಡನನ್ನಾಗಿ ಮಾಡಿ ಗುಡಿಸಲುಗಳನ್ನೆಲ್ಲ ಕಲ್ಲುಮನೆಗಳನ್ನಾಗಿಮಾಡಲು ದುಡ್ಡು

ಕೊಟ್ಟ ಊರನ್ನು 'ಮಾಗಾಯಿ' ಯೆಂಬುದಾಗಿ ಕರೆಯಿರೆಂದು ಹೇಳಿದ ಬೇಕು. 'ಮಾಗಾಯಿ' ಹೋಗಿ 'ಮಾಗಾವಿ'ಯಾಯಿತು. ಮಾಗಾವಿಯೇ ಇಂದಿನ ಮೊಗ್ಗಾವಿ. ಇದನ್ನೆಲ್ಲ ಕೇಳಿದಾಗ 'ಇದ್ದೀತು' ಎಂದಲ್ಲದೆ ಮತ್ತೇನು ಹೇಳಬಹುದು ?

ಈ ಕಥೆಯನ್ನು ಹೇಳಿದಾಗ ಒಬ್ಬರು ಹೀಗೆ ಪಡಿನುಡಿದರು: "ಈ ಅರಸನ ಕಥೆಯೇಕೆ ಹಾಳಾಗಲಿಕ್ಕೆ ? ಮಾಗಾಯಿ,-ಮಾವಿನಕಾಯಿ ಬೆಳೆಯುವ ಸ್ಥಳವೆಂದು ಹೇಳಿದರಾಯಿತಲ್ಲವೆ ? ಮೊಗ್ಗಾವಿಯ ಸುತ್ತು ಮಾವಿನ ಮರದ ಗುಂಪಿರುವದು ಜಗತ್ತಿಗೇ ಗೊತ್ತಿದೆ." ಈ ಆಪೇಕ್ಷದ ಉತ್ತರದಲ್ಲಿ ಹೆಚ್ಚು ಸಂಭವನೀಯತೆಯು ಇರುವ ಹಾಗೆ ಕಾಣುತ್ತದೆ.

ಮಾವಿನಕಾಯಿಯ ಸಂದರ್ಭವು ಬಂದಿದ್ದರಿಂದ ಇಲ್ಲಿ ಹೇಳಬೇಕಾಯಿತು: ಮೊಗ್ಗಾವಿಯು ನೋಡಲಿಕ್ಕೆ ಬಲು ಸೊಗಸಾದ ಊರು- ಅಂದರೆ ಊರೇ ಸೊಗಸಾದುದೆಂತಲ್ಲ,-ಊರ ಹೊರಗಿನ ರಮಣೀಯದೃಶ್ಯಗಳು, ಅಲ್ಲಿಯ ಪ್ರಕೃತಿ ಸೌಂದರ್ಯ. ಸುತ್ತಲೂ ಕಿರಿ ಬೆಟ್ಟಗಳ ಸಾಲು; ನೀಳವಾಗಿ ಬೆಳೆದ ಮರಗಳ ಗುಂಪುಗಳೊಳಗಿಂದ ಹಾಯ್ದು ಹೋಗುತ್ತಿರುವ ರಾಜಮಾರ್ಗಗಳು; ಯಾವಾಗಲೂ ಸಮುದ್ರದಂತೆ ತುಂಬಿ ತುಳುಕುತ್ತಿರುವ ಕೆರೆಗಳು, ಅಲ್ಲಿಂದ ಹರಿಯುವ ಕಾಲುವೆಗಳು,- ಇವೆಲ್ಲವುಗಳಿಂದ ಊರಿಗೇ ಒಂದು ಶೋಭೆ ಬಂದಿತ್ತು. ಸುತ್ತೆಲ್ಲ ಹಸಿರು ತೋಟಪಟ್ಟಿ. ತೋಟಗಳಲ್ಲ ಹೊಕ್ಕೊಡನೆ ದಿಕ್ಕೇ ತಪ್ಪಿದಂತಾಗುವದು. ತೆಂಗು, ಕೌಂಗು, ಹಲಸು, ಮಾವು, ಬಾಳೆ, ಮಲ್ಲಿಗೆ, ಗುಲಾಬಿ ಮುಂತಾದ ಹಣ್ಣು-ಹೂ-ಕಾಯಿಗಳೆಲ್ಲ ಇಲ್ಲಿಯ ತೋಟಿಗರಿಗೆ ದಿನದ ಸ್ನೇಹಿತರು. ಪ್ರತಿಯೊಂದು ತೋಟದಲ್ಲಿ ನಿತ್ಯವೂ ತೋಟಿಗರ ಉತ್ಸಾಹಯುಕ್ತವಾದ ಧ್ವನಿ, ಹಕ್ಕಿಗಳ ಕಲರವ, ಹರಿಯುವ ನೀರಿನ ಮಂಜುಳ ಸ್ವರ, - ಇವೇ ಮುಂತಾಗಿ ಕೇಳಿ ಬರುವವು. ತಿರುಕಾಚಾರ್ಯರಿಗೂ ಈ ನಿಸರ್ಗರಮಣೀಯತೆಯಲ್ಲಿ ಆನಂದವಿತ್ತೆಂದು ಹೇಳಬೇಕಿಲ್ಲ. ತಮ್ಮ ಮಹಾಕಾವ್ಯದ 'ಅರಣ್ಯಕಾಂಡ' ದಲ್ಲಿ ಅವರು ಇದನ್ನು ಬಹು ಪ್ರೀತಿಯಿಂದ ಬಣ್ಣಿಸಿದ್ದಾರೆ. ರಾಯರು ಸುಗ್ರೀವ-ಜಾಂಬುವಂತರಂತಿದ್ದ ಕಾರಕೂನರೊಡನೆ ತೋಟದಿಂದ ತೋಟಕ್ಕೆ ಹೋಗಿದ್ದು; ಸ್ವತಃ ನಿಂತು ಎಂಥ ಉದ್ದವಾದ ಹೊಲವನ್ನೂ ಮಾರುತಿಯಂತೆ ಪಟ್ಟಿಯಿಂದ ಅಳೆಯಬಲ್ಲ

ಬಾಂದಿನವರಿಂದ ಅಳೆಯಿಸಿ ತೆರಿಗೆಯನ್ನು ಕಟ್ಟಿಸ್ತು; ಸರಕಾರದ ಕನಕ ಲಕ್ಷ್ಮಿಯನ್ನು ಈ ಪ್ರಕಾರ ಸೆರೆಯಿಂದ ಬಿಡಿಸಿ ತಂದದ್ದು,- ಆಚಾರ್ಯರು ಯಾವುದನ್ನೂ ಬಿಟ್ಟಿಲ್ಲ; ಸಿಂಹ-ವ್ಯಾಘ್ರಾದಿ ಕಾಡು ಪಶುಗಳಿಂದ ಈ ವನವು ತುಂಬಿತ್ತೆಂದೂ ಅವರು ಬರೆಯುತ್ತಾರೆ. ಇನ್ನೂ ಇದರ ಶೋಧನೆಯಾಗಬೇಕು. ಮೊಗ್ಗಾವಿಗೆ ಹೋಗಿ ಈ ವಿಷಯವನ್ನು ವಿಚಾರಿಸಿದಾಗ, ಆಚಾರ್ಯರು ತಮ್ಮ ಬಡ್ತಿಯನ್ನು ಕೊಡಲು ತಪ್ಪಿದ ತೋಟಿಗರನ್ನು 'ವ್ಯಾಘ್ರ' 'ಪಶು' ಎಂದು ಕರೆಯುತ್ತಿದ್ದರೆಂಬುದು ತಿಳಿದುಬರುತ್ತದೆ.

ಅಲ್ಲದೆ ಮೊಗ್ಗಾವಿಯು ಇತಿಹಾಸ ಪ್ರಸಿದ್ಧವಾದ ಸ್ಥಳ. ಅದರ ಸುತ್ತಲಿದ್ದ ಹಾಳುಕೋಟೆಯ ಗೋಡೆಗಳು ಇನ್ನೂ ಈ ಸಂಗತಿಯನ್ನು ಜನರ ನಿದರ್ಶನಕ್ಕೆ ತರುತ್ತವೆ. ಆಳವಾದ ಕಂದಕಗಳಲ್ಲಿ ಅಲ್ಲಲ್ಲಿಗೆ ಕೊಳೆತ ನೀರು ನಿಂತಿರುತ್ತದೆ. ಅಗಸೆಯ ಬಾಗಿಲೊಳಗಿಂದ ಈಗ ಅಗಸನು ಗುಡ್ಡದಂಥ ಮೊಟ್ಟೆಯನ್ನು ಸುರಕ್ಷಿತವಾಗಿ ಹೊತ್ತುಕೊಂಡು ಹೋಗಬಹುದು; ಮೇಲಿನ ಕಟ್ಟಡವೇ ಇಲ್ಲ. ಮೊನ್ನೆ ಮೊನ್ನೆಯ ವರೆಗೆ ಈ ಬಾಗಿಲವಿತ್ತು. ಅದರ ವಿಷಯಕ್ಕೆ ಒಂದು ಕಥೆಯನ್ನೂ ಜನರು ಹೇಳುತ್ತಾರೆ. ಹಳ್ಳಿಗಳಿಂದ ಮೊಗ್ಗಾವಿಯ ಸಂತೆಗೆ ಬರುವವರೆಲ್ಲ ಈ ಬಾಗಿಲೊಳಗಿಂದ ಹಾಯ್ದು ಬರಬೇಕಾಗುತ್ತಿತ್ತು. ಒಂದು ಹಳ್ಳಿಯ ಕರಣಿಕರಿಗೆ ಮಾತ್ರ ಇದು ಮರಣದಂಥ ಕುತ್ತಾಗಿ ಪರಿಣಮಿಸಿತ್ತು. ದಾಟುವಷ್ಟರಲ್ಲಿಯೇ ಮೇಲಿನ ಬಂಡೆಗಳು ತಮ್ಮ ಮೇಲೆ ಕಳಚಿಬೀಳಬಹುದೆಂಬ ಹೆದರಿಕೆಯಿಂದ ಅವರೆದೆಯು ಡವಡವಿಸುತ್ತಿತ್ತು. ಹೆಬ್ಬಾಗಿಲಕ್ಕೆ ಬಂದೊಡನೆ ಅವರು ಒಮ್ಮನಸ್ಸಿನಿಂದ ದೇವರನ್ನು ನೆನೆಸುತ್ತ ಒಮ್ಮೆಯಾದರೂ ಹಿಂತಿರುಗಿ ನೋಡದೆ ದಿಕ್ಕೆಟ್ಟು ಓಡಿ ಸುಮಾರು ಅರ್ಧ ಮೈಲಿನಾಚೆ ತೇಕುತ್ತ ನಿಲ್ಲುತ್ತಿದ್ದರು! ಪ್ರತಿಸಲದಂತೆ ಒಂದು ಸೋಮವಾರ ಬಂದು ನೋಡುತ್ತಾರೆ, ಬಾಗಿಲವು ಬಿದ್ದು ಹೋಗಿತ್ತು! ನೆಟ್ಟಗೆ ಸಂತೆಗೆ ಹೋದವರೇ– ಕರಣಿಕರು ಜೋಡು ಟೆಂಗಿನಕಾಯಿಯನ್ನು ಕೊಂಡು ಕೇಶವದೇವರ ಪೂಜಾರಿಯಿಂದ ಒಡೆಸಿ ತಂದು ಗುರುತಿನವರಿಗೆಲ್ಲ ಹಂಚಿದರು! ಕರಣಿಕರಿಗೆ ಲಗ್ನವಾಗಿ ಬಹಳ ವರ್ಷಗಳಾದ ಮೇಲೆ ಒಂದು ಗಂಡು ಮಗುವು ಹುಟ್ಟಿದ್ದರಿಂದ ಅವರಿಂದ ಈ ಪ್ರಸಾದವು ದೊರೆಯಿತೆಂದು

ಬಲ್ಲವರು ಹೇಳುವರು. ಆದರೆ ಅಗಸೆಬಾಗಿಲಿನ ನಿವಾರಣೆಯೂ ಅದರಲ್ಲಿ ಸಮಾವೇಶವಾಗಿರಬೇಕು !

ಪುಣೆಯ ಪೇಶ್ವೆಯರ ಹಾಗು ಮೈಸೂರೊಡೆಯರ ನಡುವೆ ಯುದ್ಧಗಳು ಮೇಲಿಂದಮೇಲೆ ಜರಗುತ್ತಿದ್ದಾಗ, ಈಗಿನ ಬೆಳಗಾವಿ-ಧಾರವಾಡ ಪ್ರಾಂತದ ಸ್ಥಿತಿಯು ಶೋಚನೀಯವಾಗಿತ್ತು. ಎರಡೂ ಕಡೆಯಿಂದ ಗುರಿಯಿಟ್ಟು ಬಾಣಗಳನ್ನು ಬಿಟ್ಟರೆ,- ಅವು ತಗಲುವದು ಇಲ್ಲಿಯ ಜನರಿಗೆ ! ಈ ಪ್ರಾಂತವು ಆಗ ಸವಣೂರ ನವಾಬರ ಆಧಿಪತ್ಯದಲ್ಲಿತ್ತು. ಅಡಕತ್ತಿನ 'ಲಿಪ್ಪರಿ'ನಂತಿದ್ದ ಸ್ಕ್ರೂ ಮೊಳೆಯಾಗಬೇಕೆಂದೇನೋ ನವಾಬರ ಮನಸ್ಸಿನಲ್ಲಿತ್ತು. ಆದರೆ ವಸ್ತುತಃ ಅವರು ಅದರ ಎರಡೂ ಕೈಗಳ ನಡುವೆ ಸಿಕ್ಕ ಅಡಕೆಬೆಟ್ಟದಂತಾಗಿದ್ದರು. ಪೇಶ್ವೆಯರೇ ಬಲವಂತರಿದ್ದುದರಿಂದ ಅವರು ನವಾಬರ ಗೆಳೆತನವನ್ನು ಸಂಪಾದಿಸಿದ್ದರು. ಇದರಿಂದ ಟಿಪ್ಪುಸುಲ್ತಾನನ ಕಾಲದಲ್ಲಿ ನವಾಬರ ಪ್ರಾಂತಕ್ಕೆ ಸುಖವಿರಲಿಲ್ಲ. ಟಿಪ್ಪುವು ಪುನಃ ಪುನಃ ದಾಳಿಯಿಡುತ್ತಿದ್ದನು. ಮೊಗ್ಗಾವಿಯ ಕೋಟೆಯು ಟಿಪ್ಪುಸುಲ್ತಾನನು ದಾಳಿಯಿಟ್ಟಾಗಲೇ ನಾಶವಾಯಿತೆಂದು ಹೇಳುತ್ತಾರೆ. ಟಿಪ್ಪುವು ಒಂದು ಗುಪ್ತಮಾರ್ಗದಿಂದೇರಿ ಕೋಟೆಯನ್ನು ಕೈವಶಮಾಡಿಕೊಂಡನಂತೆ. ಅಲ್ಲಿ ಕೆಲವು ಬಂಡೆಗಳ ಮೇಲೆ ಅವನ ಪಾದದ ಗುರುತುಗಳು ಮೂಡಿರುವದನ್ನು ಜನರು ಇನ್ನೂ ತೋರಿಸುತ್ತಾರೆ. ಎರಡು-ಮೂರಡಿಯಷ್ಟು ಉದ್ದವಿದ್ದ ಈ ಚಿನ್ಹಗಳು ಮನುಷ್ಯರ ಹೆಜ್ಜೆಗಳೇನೆಂಬುದೇ ಪ್ರಶ್ನಾಸ್ಪದವಾಗಿದೆ.

ಪೇಶ್ವೆಯವರು ಪುಣೆಯಿಂದ ಮೈಸೂರೆಡೆಗೆ ದಂಡಯಾತ್ರೆಗಾಗಿ ನಡೆದಾಗ ಮೊದಲನೆಯ ಮಾಧವರಾಯನು ಮೊಗ್ಗಾವಿಯಲ್ಲಿಯೇ ಹುಟ್ಟಿದನೆಂದು ಜನರು ಹೇಳುತ್ತಾರೆ ! ಮುಂದೆ ನವಾಬರು ಸವಣೂರಿಗೆ ರಾಜಕುಟುಂಬವನ್ನೂ ಪರಿವಾರವನ್ನೂ ಆಮಂತ್ರಿಸಿ, ಕರೆದುಕೊಂಡು ಹೋಗಿ ಮನ್ನಿಸಿದರೆಂದು ಆ ಸಂಸ್ಥಾನದ ಬಖರುಗಳಲ್ಲಿ ಬರೆದಿದೆ.

ಅಂತೂ ಮೊಗ್ಗಾವಿಯು ಸುಪ್ರಸಿದ್ಧವಾದ ಊರು. ಊರಿನ ರಚನೆಯ ಮಾಟವೂ ಸಹ ಅದರ ಹಿಂದಿನ ವೈಭವವನ್ನು ನೆನಪಿಗೆ ತರುತ್ತದೆ. ಕೋಟೆಯ ಗೋಡೆಗಳು ವರ್ತುಲಾಕಾರವಾಗಿ ಊರನ್ನು ಸುತ್ತಿಕೊಂಡಿವೆ. ಊರ ನಟ್ಟನಡುವೆ ಮಾಮಲೇದಾರರ ಕಚೇರಿಯಿದೆ. ಅದರ ಎಡಬಲದಲ್ಲಿ

ಬಾಂದಿನವರಿಂದ ತಳೆಯಿಸಿ ತೆರಿಗೆಯನ್ನು ಕಟ್ಟಿದ್ದು; ಸರಕಾರದ ಕನಕಲಕ್ಷ್ಮಿಯನ್ನು ಈ ಪ್ರಕಾರ ಸೆರೆಯಿಂದ ಬಿಡಿಸಿ ತಂದದ್ದು,- ಆಚಾರ್ಯರು ಯಾವುದನ್ನೂ ಬಿಟ್ಟಿಲ್ಲ; ಸಿಂಹ-ವ್ಯಾಘ್ರಾದಿ ಕಾಡು ಪಶುಗಳಿಂದ ಈ ವನವು ತುಂಬಿತ್ತೆಂದೂ ಅವರು ಬರೆಯುತ್ತಾರೆ. ಇನ್ನೂ ಇದರ ಶೋಧನೆಯಾಗಬೇಕು ಮೊಗ್ಗಾವಿಗೆ ಹೋಗಿ ಈ ವಿಷಯವನ್ನು ವಿಚಾರಿಸಿದಾಗ, ಆಚಾರ್ಯರು ತಮ್ಮ ಬಡ್ತಿಯನ್ನು ಕೊಡಲು ತಪ್ಪಿದ ತೋಟಿಗರನ್ನು 'ವ್ಯಾಘ್ರ' 'ಪಶು' ಎಂದು ಕರೆಯುತ್ತಿದ್ದರೆಂಬುದು ತಿಳಿದುಬರುತ್ತದೆ.

ಅಲ್ಲದೆ ಮೊಗ್ಗಾವಿಯು ಇತಿಹಾಸ ಪ್ರಸಿದ್ಧವಾದ ಸ್ಥಳ. ಅದರ ಸುತ್ತಲಿದ್ದ ಹಾಳುಕೋಟೆಯ ಗೋಡೆಗಳು ಇನ್ನೂ ಈ ಸಂಗತಿಯನ್ನು ಜನರ ನಿದರ್ಶನಕ್ಕೆ ತರುತ್ತವೆ. ಆಳವಾದ ಕಂದಕಗಳಲ್ಲಿ ಅಲ್ಲಲ್ಲಿಗೆ ಕೊಳೆತ ನೀರು ನಿಂತಿರುತ್ತದೆ. ಅಗಸೆಯ ಬಾಗಿಲೊಳಗಿಂದ ಈಗ ಅಗಸನು ಗುಡ್ಡದಂಥ ಮೊಟ್ಟೆಯನ್ನು ಸುರಕ್ಷಿತವಾಗಿ ಹೊತ್ತುಕೊಂಡು ಹೋಗಬಹುದು; ಮೇಲಿನ ಕಟ್ಟಡವೇ ಇಲ್ಲ. ಮೊನ್ನೆ ಮೊನ್ನೆಯ ವರೆಗೆ ಈ ಬಾಗಿಲವಿತ್ತು. ಅದರ ವಿಷಯಕ್ಕೆ ಒಂದು ಕಥೆಯನ್ನೂ ಜನರು ಹೇಳುತ್ತಾರೆ. ಹಳ್ಳಿಗಳಿಂದ ಮೊಗ್ಗಾವಿಯ ಸಂತೆಗೆ ಬರುವವರೆಲ್ಲ ಈ ಬಾಗಿಲೊಳಗಿಂದ ಹಾಯ್ದು ಬರಬೇಕಾಗುತ್ತಿತ್ತು. ಒಂದು ಹಳ್ಳಿಯ ಕರಣಿಕರಿಗೆ ಮಾತ್ರ ಇದು ಮರಣದಂಥ ಕುತ್ತಾಗಿ ಪರಿಣಮಿಸಿತ್ತು. ದಾಟುವಷ್ಟರಲ್ಲಿಯೇ ಮೇಲಿನ ಬಂಡೆಗಳು ತಮ್ಮ ಮೇಲೆ ಕಳಚಿಬೀಳಬಹುದೆಂಬ ಹೆದರಿಕೆಯಿಂದ ಅವರೆದೆಯು ಡವಡವಿಸುತ್ತಿತ್ತು. ಹೆಬ್ಬಾಗಿಲಕ್ಕೆ ಬಂದೊಡನೆ ಅವರು ಒಮ್ಮನಸ್ಸಿನಿಂದ ದೇವರನ್ನು ನೆನೆಸುತ್ತ ಒಮ್ಮೆಯಾದರೂ ಹಿಂತಿರುಗಿ ನೋಡದೆ ದಿಕ್ಕಟ್ಟು ಓಡಿ ಸುಮಾರು ಅರ್ಧ ಮೈಲಿನಾಚೆ ತೇಕುತ್ತ ನಿಲ್ಲುತ್ತಿದ್ದರು! ಪ್ರತಿಸಲದಂತೆ ಒಂದು ಸೋಮವಾರ ಬಂದು ನೋಡುತ್ತಾರೆ, ಬಾಗಿಲವು ಬಿದ್ದು ಹೋಗಿತ್ತು! ನೆಟ್ಟಗೆ ಸಂತೆಗೆ ಹೋದವರೇ- ಕರಣಿಕರು ಜೋಡು ಟೆಂಗಿನಕಾಯಿಯನ್ನು ಕೊಂಡು ಕೇಶವದೇವರ ಪೂಜಾರಿಯಿಂದ ಒಡೆಸಿ ತಂದು ಗುರುತಿನವರಿಗೆಲ್ಲ ಹಂಚಿದರು! ಕರಣಿಕರಿಗೆ ಲಗ್ನವಾಗಿ ಬಹಳ ವರ್ಷಗಳಾದ ಮೇಲೆ ಒಂದು ಗಂಡು ಮಗುವು ಹುಟ್ಟಿದ್ದರಿಂದ ಅವರಿಂದ ಈ ಪ್ರಸಾದವು ದೊರೆಯಿತೆಂದು

ಒಪ್ಪಿಸರು ಹೇಳಿದರು. ಆದರೆ ಅಗಸೆಬಾಗಿಲಿನ ನಿವಾರಣೆಯೂ ಅದರಲ್ಲಿ ಸಮಾವೇಶವಾಗಿರಬೇಕು !

ಪುಣೆಯ ಪೇಶ್ವೆಯರ ಹಾಗು ಮೈಸೂರೊಡೆಯರ ನಡುವೆ ಯುದ್ಧಗಳು ಮೇಲಿಂದಮೇಲೆ ಜರಗುತ್ತಿದ್ದಾಗ, ಈಗಿನ ಬೆಳಗಾವಿ–ಧಾರವಾಡ ಪ್ರಾಂತದ ಸ್ಥಿತಿಯು ಶೋಚನೀಯವಾಗಿತ್ತು. ಎರಡೂ ಕಡೆಯಿಂದ ಗುರಿಯಿಟ್ಟು ಬಾಣಗಳನ್ನು ಬಿಟ್ಟರೆ,– ಅವು ತಗಲುವದು ಇಲ್ಲಿಯ ಜನರಿಗೆ ! ಈ ಪ್ರಾಂತವು ಆಗ ಸವಣೂರ ನವಾಬರ ಆಧಿಪತ್ಯದಲ್ಲಿತ್ತು. ಅಡಕತ್ತಿನ 'ಲೆಪ್ಪರಿ'ನಂತಿದ್ದ ಸ್ಥಿತಿ ಕೊನೆಯಾಗಬೇಕೆಂದೇನೋ ನವಾಬರ ಮನಸ್ಸಿನಲ್ಲಿತ್ತು. ಆದರೆ ವಸ್ತುತಃ ಅವರು ಅದರ ಎರಡೂ ಕೈಗಳ ನಡುವೆ ಸಿಕ್ಕ ಅಡಕೆಬೆಟ್ಟದಂತಾಗಿದ್ದರು. ಪೇಶ್ವೆಯರೇ ಬಲವಂತರಿದ್ದುದರಿಂದ ಅವರು ನವಾಬರ ಗೆಳೆತನವನ್ನು ಸಂಪಾದಿಸಿದ್ದರು. ಇದರಿಂದ ಟಿಪ್ಪುಸುಲ್ತಾನನ ಕಾಲದಲ್ಲಿ ನವಾಬರ ಪ್ರಾಂತಕ್ಕೆ ಸುಖವಿರಲಿಲ್ಲ. ಟಿಪ್ಪುವು ಪುನಃ ಪುನಃ ದಾಳಿಯಿಡುತ್ತಿದ್ದನು. ಮೊಗ್ಗಾವಿಯ ಕೋಟೆಯು ಟಿಪ್ಪುಸುಲ್ತಾನನು ದಾಳಿಯಿಟ್ಟಾಗಲೇ ನಾಶವಾಯಿತೆಂದು ಹೇಳುತ್ತಾರೆ. ಟಿಪ್ಪುವು ಒಂದು ಗುಪ್ತಮಾರ್ಗದಿಂದೇರಿ ಕೋಟೆಯನ್ನು ಕೈವಶಮಾಡಿಕೊಂಡನಂತೆ. ಅಲ್ಲಿ ಕೆಲವು ಬಂಡೆಗಳ ಮೇಲೆ ಅವನ ಪಾದದ ಗುರುತುಗಳು ಮೂಡಿರುವದನ್ನು ಜನರು ಇನ್ನೂ ತೋರಿಸುತ್ತಾರೆ. ಎರಡು–ಮೂರಡಿಯಷ್ಟು ಉದ್ದವಿದ್ದ ಈ ಚಿನ್ಹಗಳು ಮನುಷ್ಯರ ಹೆಜ್ಜೆಗಳೇನೆಂಬುದೇ ಪ್ರಶ್ನಾಸ್ಪದವಾಗಿದೆ.

ಪೇಶ್ವೆಯವರು ಪುಣೆಯಿಂದ ಮೈಸೂರೆಡೆಗೆ ದಂಡಯಾತ್ರೆಗಾಗಿ ನಡೆದಾಗ ಮೊದಲನೆಯ ಮಾಧವರಾಯನು ಮೊಗ್ಗಾವಿಯಲ್ಲಿಯೇ ಹುಟ್ಟಿದನೆಂದು ಜನರು ಹೇಳುತ್ತಾರೆ ! ಮುಂದೆ ನವಾಬರು ಸವಣೂರಿಗೆ ರಾಜಕುಟುಂಬವನ್ನೂ ಪರಿವಾರವನ್ನೂ ಆಮಂತ್ರಿಸಿ, ಕರೆದುಕೊಂಡು ಹೋಗಿ ಮನ್ನಿಸಿದರೆಂದು ಆ ಸಂಸ್ಥಾನದ ಬಖರುಗಳಲ್ಲಿ ಬರೆದಿದೆ.

ಅಂತೂ ಮೊಗ್ಗಾವಿಯು ಸುಪ್ರಸಿದ್ಧವಾದ ಊರು. ಊರಿನ ರಚನೆಯ ಮಾಟವೂ ಸಹ ಅದರ ಹಿಂದಿನ ವೈಭವವನ್ನು ನೆನಪಿಗೆ ತರುತ್ತದೆ. ಕೋಟೆಯ ಗೋಡೆಗಳು ವರ್ತುಲಾಕಾರವಾಗಿ ಊರನ್ನು ಸುತ್ತಿಕೊಂಡಿವೆ. ಊರ ನಟ್ಟನಡುವೆ ಮಾಮಲೇದಾರರ ಕಚೇರಿಯಿದೆ. ಅದರ ಎಡಬಲದಲ್ಲಿ

ಸಾಲೆ, ಪೇಟೆ, ಉಳಿದ ಕಚೇರಿಗಳು. ಊರಲ್ಲಿ ಉತ್ತರಕ್ಕೆ- ಒಂದು ಮಗ್ಗುಲಲ್ಲಿ ಕೇಶವದೇವರ ಗುಡಿಯಿದೆ. ಆ ಗುಡಿಯ ಸುತ್ತಲೂ ಬ್ರಾಹ್ಮಣರ ಮನೆಸಾಲುಗಳು ಹೆಣೆದುಕೊಂಡಿವೆ. ದಕ್ಷಿಣಕ್ಕೆ-ಕೆರೆಯ ಮಗ್ಗುಲಿಗೆ-ತೋಟಿಗರ ಓಣಿ. ಉಳಿದ ಎಲ್ಲ ಭಾಗಗಳಲ್ಲಿ ಇನ್ನುಳಿದವರ ಮನೆಗಳು. ಹಳೆಯದನ್ನೂ ಹೊಸತನ್ನೂ ಬೆರೆಸಿಕೊಂಡು ಬೇರೆಯೊಂದು ಅದೃಷ್ಟಕ್ಕಾಗಿ ಹಾತೊರೆಯುವಂತೆ ಮೊಗ್ಗಾವಿಯು ತೋರುತ್ತಿದೆ.

ಊರಿನ ಜನರೂ ಹಾಗೆಯೆ. ಸುತ್ತಲಿನ ರಮಣೀಯ ಪ್ರಕೃತಿಯಂತೆ ಅವರು ಸಾಧಾರಣವಾಗಿ ಚೆಲುವರಿರುತ್ತಾರೆ. ಅಲ್ಲಿಯ ಗಂಡುಮಕ್ಕಳ ಬೆಳುವಣಿಗೆಯೆಲ್ಲ ಬಹುತರವಾಗಿ ಹಲಸಿನ ಮರದಂತೆ ಎತ್ತರವಾಗಿ, ಗಡುಸಾಗಿರುವದು. ಅಲ್ಲಿಯ ಹೆಣ್ಣುಮಕ್ಕಳ ಹೆರಳು ಬಾಳೆಗೊನೆಯಂತೆ. ಅವರು ಸಕ್ಕರೆ ಒಂದು ಮುಕ್ಕು ಮಲ್ಲಿಗೆ ಹೂ ಚೆಲ್ಲಿದಂತೆ. ಹಕ್ಕಿಗಳ "ಕಿಲಿಪಿಲಿಯಂತೆ ಅವರ ಮಾತು; ಎರಳೆಗಂಗಳಂತೆ ಸರಳವಾದ ನೋಟ; ಕುಂದಣದ ಚಂದವನ್ನು ಹಿಡಿದ ಮೈ. ಆದರೆ ಊರಲ್ಲಿ ಹಳತು ಹೊಸತು ಕೂಡಿ ಬೆರೆತಿರುವಂತೆ ಅವರ ಮನಸ್ಸಿನಲ್ಲಿ ಮಾಲಿನ್ಯವೂ, ಸಾವಿನ್ಯವೂ ಸಂಗಮಿಸಿರುವವು. ಅವರ ವಿಚಾರಗಳೆಲ್ಲ ಹಾಳು ಕೋಟೆಯಂತೆ ಹುಗಿದುಕೊಂಡಿವೆ. ತರುಣರ ವಿಚಾರಪಥದಲ್ಲಿ ಒಂದು ಸ್ವಾತಂತ್ರ್ಯವು ಇದೀಗ ಸುಳಿದಾಡುತ್ತಿದೆ. ಪ್ರಾಚೀನವಿದ್ದುದೂ ಅರ್ವಾಚೀನವಿದ್ದುದೂ ಕೂಡಿ ಒಂದಾಗುವ ವರೆಗೆ ನಡೆವ ಅಂತಃಕಲಹಕ್ಕೆ ಈ ಕಥೆಯೇ ಸಾಕ್ಷಿ.

ಕೇಶವದೇವರ ಗುಡಿಯ ಸಮೀಪದಲ್ಲಿಯೇ ಎದುರು ಬದಿರಾಗಿ ಎರಡು ದೊಡ್ಡ ಮನೆಗಳಿವೆ. ಒಂದು ಹೈಗ್ರೀವಾಚಾರ್ಯರದು. ಇನ್ನೊಂದು ದೇಸಾಯಿ ಗೋವಿಂದರಾಯರದು. 'ತಾಲೂಕರಾಜಾಸ್ತೋತ್ರ'ದಲ್ಲಿ ಈ ಎರಡೂ ಮನೆಗಳ ಉಲ್ಲೇಖವಿದೆ. ದೇಸಾಯರು ಒಂದು ಹಳ್ಳಿಯಿಂದ ಬಂದು ಮೊಗ್ಗಾವಿಯಲ್ಲಿ ನೆಲೆಸಿದವರು. ಭೋಗ-ವಿಲಾಸಗಳಲ್ಲಿ ಪಿತ್ರಾರ್ಜಿತವನ್ನೆಲ್ಲ ಕಳೆದುಕೊಳ್ಳುತ್ತ ನಡೆದವರು. ಅವರ ಭಾಗ್ಯರವಿಯು ತೇಜೋಹೀನನಾಗುತ್ತ ನಡೆದಿದ್ದನು. ಮೊದಲನೆಯ ಮಾಮಲೇದಾರರು ಮೊಗ್ಗಾವಿಗೆ ಬಂದಾಗ ಗೋವಿಂದರಾಯರು ತೀರ ತರುಣರು. ಅವರ ತಂದೆ

ರಾಯರು ಅದೇ ಹೊಸ ಸಂಸಾರವನ್ನು ಹೂಡಿದ್ದರು. ಮಾಮಲೇದಾರರು ಕೊಟ್ಟ ಬುದ್ಧಿವಾದವು ಅವರಿಗೆ ರುಚಿಸಿದ್ದಿಲ್ಲ. ಅವರ ವಿರುದ್ಧ ಕಲೆಕ್ಟರರಿಗೆ ಅರ್ಜಿ ಮಾಡಿದವರಲ್ಲಿ ರಾಯರೊಬ್ಬರೆಂದು ಜನರು ಆಡಿಕೊಳ್ಳುತ್ತಿದ್ದರು. ಹೀಗಿದ್ದಾಗ "ತಾಲ್ಲೂಕರಾಜಾಸ್ತೋತ್ರ"ದಲ್ಲಿ ರಾಯರಿಗೆ ಮಂಗಳಾರತಿಯಾಗಿದ್ದು ಏನಾಶ್ಚರ್ಯ?

ಅದೇ ಕಾವ್ಯದಲ್ಲಿ, ಶುಕ್ರನು ಅಸ್ತಂಗತನಾಗುತ್ತಿರುವಾಗ ಉದಿತೋದಿತನಾಗುವ ಬಾಲಶಶಿಯಂತೆ ಹೈಗ್ರೀವಾಚಾರ್ಯರ ಮನೆತನವು ಬೆಳಗುತ್ತಿತ್ತೆಂದು ತಿರುಕಾಚಾರ್ಯರು ಬರೆಯುತ್ತಾರೆ. ಹೈಗ್ರೀವಾಚಾರ್ಯರಾದರೂ ಮೊದಲನೆಯ ಮಾಮಲೇದಾರರ ಕಾಲದಲ್ಲಿ ಮುಂದೆ ಬಂದ ವೈದಿಕರಲ್ಲಿ ಒಬ್ಬರು. ತೀರ ಬಡತನದಲ್ಲಿ ಅವರು ಸಂಸಾರವನ್ನು ಪ್ರಾರಂಭಿಸಿದರು. ಆದರೆ ಮಾಮಲೇದಾರರ ಆಳಿಕೆಯಲ್ಲಿ ತಾಲೂಕಿನಲ್ಲೆಲ್ಲ ಜರುಗಿದ ಧಾರ್ಮಿಕ ಪ್ರಸಂಗಗಳಲ್ಲಿ ದೊರೆತ ಸಂಭಾವನೆಯ ಹಣವು ಅವರಲ್ಲಿ ಕೂಡಿ ಬಿತ್ತು. ಅದನ್ನು ಬಡ್ಡಿಗೆ ಹಚ್ಚಿದರು. ಅವರ ಬಲದ ಮೇಲೆ ಒಕ್ಕಲಿಗರೊಡನೆ ಹಾಗು ತೋಟಿಗರೊಡನೆ ವ್ಯವಹಾರ ಬೆಳೆಸಿದರು. ಕೆಲವು ವರ್ಷಗಳಲ್ಲಿ, ಅವರ ಮನೆಯಲ್ಲಿ ಪ್ರತಿವರ್ಷ ನಡೆಯುವ ಲಕ್ಷ್ಮೀಪೂಜೆಯು ಊರಲ್ಲಿಯೇ ಪ್ರತಿಷ್ಠೆಯನ್ನು ಹೊಂದಿತು. ಆಚಾರ್ಯರು ನಾಲ್ಕೆಂಟು ಹೊಲಗಳನ್ನು ಕೊಂಡರು; ಕೆಲವನ್ನು ಒತ್ತಿ ಹಿಡಿದರು; ಒಂದೆರಡು ತೋಟಗಳೂ ಬಡ್ಡಿಯ ಬದಲಾಗಿ ಅವರ ಪದರಿನಲ್ಲಿ ಬಿದ್ದವು. ಆಚಾರ್ಯರ ಘನತೆಯು ಮಿಗಿಲಾಯಿತು. ಅಂದಮೇಲೆ "ತಾಲ್ಲೂಕರಾಜಾಸ್ತೋತ್ರ"ದಲ್ಲಿ ಅತಿಶಯೋಕ್ತಿಯಿದೆಯೆಂದು ಹೇಗೆ ಹೇಳುವದು?

ಆದರೆ ಈ ಎರಡು ಮನೆತನಗಳ ದೈವವನ್ನೂ ಮುಂದಿನ ಇತಿಹಾಸವನ್ನೂ ಬಣ್ಣಿಸಲು ತಿರುಕಾಚಾರ್ಯರು ಜೀವಂತವಿರಲಿಲ್ಲ. ಅದು ನಮ್ಮೆಲ್ಲರ ದುರ್ದೈವವೇ ಸರಿ. ಈ ಕಥೆಯು ಸುರುವಾಗುವದಕ್ಕಿಂತ ಕೆಲವು ವರ್ಷ ಮುಂಚಿತವಾಗಿ ಮೊದಲನೆಯ ಮಾಮಲೇದಾರರಿಗೆ ಸ್ವರ್ಗವಾಯಿತು. ಮುಂದೆ ಕೆಲವು ತಿಂಗಳಲ್ಲಿಯೇ ತಿರುಕಾಚಾರ್ಯರಿಗೆ ಸ್ವರ್ಗವಾಯಿತು. ಅಂತೇ ಈ ಕಥೆಯನ್ನು ಇನ್ನೊಬ್ಬರು ಬರೆಯಲಿಕ್ಕೆ ಮಾರ್ಗವಾಯಿತು.

## ೨ ಬಡ್ಡಿ--ಹೈಗ್ರೀವ ಮುಡ್ಡಿ.

ಹೈಗ್ರೀವಾಚಾರ್ಯರಿಗೆ ರಮಾಬಾಯಿಯು ನಾಲ್ಕನೆಯ ಹೆಂಡತಿಯು. ತಮಗೆ ಅರ್ಧಶತಮಾನದಷ್ಟು ವರ್ಷಗಳಾಗುವದರಲ್ಲಿ ಆಚಾರ್ಯರು ಮೂವರು ಹೆಂಡಂದಿರನ್ನು ಗತಿಗಾಣಿಸಿದ್ದರು. ತಮ್ಮಮನೆಯಲ್ಲಿ ಕೋಮಲ ಲತೆಗಳಂತೆ ಬೆಳೆದ ಆ ಹೆಂಗಳೆಯರು ಈ ಪ್ರಚಂಡ ಭಾಸ್ಕರನ ಪ್ರಖರ ಕಿರಣಗಳನ್ನು ತಡೆಯಲಾರದೆ ಬಾಡಿ ಹೋದರು. ಜೀನತನವೂ ಆಚಾರ್ಯರಲ್ಲಿ ಮನೆಮಾಡಿಕೊಂಡಿತ್ತು. 'ಭಾರ್ಯಾ ರೂಪವತೀ ಶತ್ರುಃ' ಎಂಬ ಮಾತು ಕಾಮಾಂಧವಾದ ಸಮಾಜಕ್ಕೆ ಮಾತ್ರ ಅನುಮೋದಿಸುವದು. ಸ್ತ್ರೀಯು ಕಾಮೋಪಭೋಗ ವಸ್ತುಮಾತ್ರವೆಂದು ತಿಳಿದಿದ್ದ ಜನತೆಗೆ ಚೆಲುವಿನ ಬೇಟೆಯು ಮೊಲಗಳ ಬೇಟೆಯಂತೆ ಸುಖಕರವಾಗಿ ಪರಿಣಮಿಸುವದು. ಆದರೆ ಸ್ತ್ರೀಯು ಪುರುಷನಿಗೆ ಸರಿಸಮಾನಳಾದ ಒರ್ವ ವ್ಯಕ್ತಿಯೆಂಬ ವಿಶ್ವಾಸವು ದೃಢವಾಗಿ ನೆಲೆಗೊಂಡ ದೇಶದಲ್ಲಿ ಸೌಂದರ್ಯವು ಎಂದಿಗೂ ಅಪಾಯಕರವಾಗಲಾರದು. ಅಂತಹ ಸಮಾಜದಲ್ಲಿ ಸುಂದರ ಗೃಹಿಣಿಯರು ಇಳೆಗಿಳಿದು ಬಂದ ದೇವಿಯರಂತೆ ಕಂಗೊಳಿಸುತ್ತಾರೆ. ಸಂಪತ್ತಿನ ಸ್ಥಿತಿಯೂ ಹೀಗೆಯೇ ಅದರಿಂದಾಗಬಹುದಾದ ಅಮೌಲ್ಯ ಸುಧಾರಣೆಗಳನ್ನು ಕಂಡವರು ಧನವನ್ನು ಒಳ್ಳೆಯ ರೀತಿಯಿಂದ ವಿನಿಯೋಗಿಸಿ ಕೀರ್ತಿಪ್ರಾಪ್ಯರಾಗುತ್ತಾರೆ. ಸೌಂದರ್ಯದಂತೆ ಐಶ್ವರ್ಯವೂ ಒಂದು ದೈವಿಕ ಶಕ್ತಿಯಾಗಿದೆ. ಆದರೆ ನಮ್ಮ ಆಚಾರ್ಯರಿಗೆ ಇದು ಗೊತ್ತಿರಬಹುದೆ ? ರೂಪವತಿಯಾದ ಪತ್ನಿಯನ್ನು ಒರ್ವ ಪತಿಯು **ಆಳಲು** ಬಯಸಿದಂತೆ ಅವರು ತಮ್ಮ ಸಂಪತ್ತನ್ನು ಆಳಲು ಪ್ರಯತ್ನಿಸಿದರು. ಜನರು ಆಚಾರ್ಯರ ಈ ಉದ್ದೇಶವನ್ನು ತಿಳಿದೊ ತಿಳಿಯದೆಯೊ ಅವರಿಗೆ ಜೀನರೆಂದು ಹೆಸರಿಟ್ಟರು.

ಅದು ಏನೇ ಇರಲಿ; ನಾಲ್ಕನೆಯ ಹೆಂಡತಿಯು ಮನೆಗೆ ಬಂದ ಮೇಲೆ ಆಚಾರ್ಯರ ದರ್ಪವು ಲಯವಾಯಿತು. ಹುಲಿಯಂತೆ ಗರ್ಜಿಸುತ್ತ ಮನೆಯನ್ನು ಪ್ರವೇಶಿಸುತ್ತಿದ್ದ ಅವರು ಈಗ ಹೊಸ್ತಿಲದೊಳಗೆ ಕಾಲಿಟ್ಟ

ಕೂಡಲೆ ಧೋತರವನ್ನು ಸಾವರಿಸಿಕೊಂಡು, ಭಕ್ತಿ–ಆದರಗಳು ಒಡೆದು ಕಾಣುವ ಭಯಚಕಿತ ಮುದ್ರೆಯನ್ನು ತಾಳಿ, ಅತ್ತ ಇತ್ತ ಇಣಿಕಿ ನೋಡುತ್ತ, ಬೆಕ್ಕಿನ ಹಾಗೆ ಕುಂಯ್ಗುಡುತ್ತ ಬರುತ್ತಿದ್ದರು. ಆ ಮೇಲೆ ನಗೆ ಹೋಗಲಿ, ಒಂದು ಶಬ್ದವು ಪ್ರತ್ಯುತ್ತರವಾಗಿ ದೊರೆತರೆ ಸಾಕು ತಾವು, ಧನ್ಯರೆಂದು ಭಾವಿಸಿಕೊಳ್ಳುತ್ತಿದ್ದರು.ಬಗಲಕಸಿಯಂಗಿಯನ್ನು ತೊಟ್ಟು ತಲೆಗೆ ಭಾರವಾದ ಒಂದು ರುಮಾಲವನ್ನು ವಾಡಿಕೆಯಾಗಿ ಸುತ್ತುವ ಆಚಾರ್ಯರು ಮಿಾಸೆಯನ್ನು ಬೋಳಿಸಿದ್ದರೂ, ಹೆಂಡತಿಯ ಹೇಳಿಕೆಗಾಗಿ ಹಾಗೆ ಮಾಡಿದ ರೆಂಬ ಅಪವಾದಕ್ಕೆ ಗುರಿಯಾಗುವ ಸಂಭವವು ಎಂದೂ ಇದ್ದಿಲ್ಲ. ಏಕಂದರೆ ಅದಕ್ಕೆ ವೈದಿಕ ಮತದ ರೂಢಿಯು ಬೆಂಬಲವಿತ್ತು. ಇನ್ನು ತಲೆಯ ಮೇಲೆ 'ಗೋಪಾದ'ವಿರಬೇಕೋ 'ಜಾಂಬುವಂತಪಾದ' ವಿರಬೇಕೋ ಎಂಬ ಪ್ರಶ್ನೆಯೂ ಅವರನ್ನು ಬಾಧಿಸಿದ್ದಿಲ್ಲ, 'ಖಲ್ವಾಟೋ ದಿವಸೇಶ್ವರಸ್ಯ' ಎಂಬ ಮಾಲಿಕೆಯಲ್ಲಿ ಅವರ ಗಣನೆಯಾಗಿತ್ತು. ಹೋತಿನ ಗಡ್ಡದಂತೆ ನಾಲ್ಕಾರು ಕೂದಲು ತಲೆಯ ಮೇಲೆ ಹಾರಾಡಿ ಚಂಡಿಕೆಯೆಂದು ಹೇಳಿ ಕೊಳ್ಳುತ್ತಿದ್ದವು. ಅಗಸರ ತಿಮ್ಮಪ್ಪನಿಗೆ ಇವರು ಸಾಹುಕಾರರು ಬೇರೆ. ಅವನು ತಪ್ಪದೆ ನಾಲ್ಕು ದಿನಗಳಿಗೊಮ್ಮೆ ಗಂಜಿಯ ಅರಿವೆಗಳನ್ನು ತಂದು ಕೊಡುತ್ತಿದ್ದನು ಯೌವ್ವನವು ಹೋಗಿ ಮುಪ್ಪು ಬಂದರೆ ಆ ಮಾತು ಬೇರೆ.ಯೌವ್ವನವೇ ಮುಪ್ಪಾದರೆ ಅದು ಯೌವ್ವನವಲ್ಲವೇನು ? ಆಚಾರ್ಯ ರಲ್ಲಿ ಯೌವನವೇ ಮುಪ್ಪಾಗಿತ್ತು. ಆ ಪಚ್ಚುಬಡೆದ ಗಲ್ಲ, ಸಪ್ಪಗಾದ ಮೊಗ,—ಸಾಕು, ಸಾಕು ! ರಮಾಬಾಯರೇ ಆ ರೂಪವನ್ನು ವರ್ಣಿಸ ಬೇಕು !

ಒಂದು ದಿವಸ ವಿಚಿತ್ರವಾದ ಪ್ರಸಂಗವೊಂದು ನಡೆಯಿತು. ಆಚಾ ರ್ಯರೆಡೆಗೆ ಅಡವಿಟ್ಟ ನಾಗಮುರಿಗೆಯ ಜೋಡನ್ನು ಒರ್ವ ಗೃಹಸ್ಥರು ಬಂದು ಬಿಡಿಸಿಕೊಂಡು ಹೋದರು. ನಾಲ್ಕೈದು ತಿಂಗಳ ವರೆಗೆ ಅವು ಆಚಾರ್ಯರ ಬಳಿಯಲ್ಲಿದ್ದವು: ಅಂದರೆ, ಅವನ್ನು ನಿತ್ಯವೂ ರಮಾಬಾಯಿ ಯವರು ಇಟ್ಟುಕೊಂಡು ಗುಡಿಗೆ ಹೋಗಿ ಬರುತ್ತಿದ್ದರು. ಆದರೆ ನಾಗ- ಮುರಿಗೆ ಹೋದ ಮೇಲೆ ಅವರು ಗುಡಿಗೆ ಹೋಗುವದು ಹೇಗೆ? ಆ ದಿನ ಆಚಾರ್ಯರ ಮೇಲೆ ಅವರ ಭುವನೇಶ್ವರಿಯ ಸುವರ್ಣವೃಷ್ಟಿಯಾಯಿತು.

ಮಾತಿನ ಮಳೆಯ ಭರದಲ್ಲಿ ರಮಾಬಾಯಿಯವರು ಗಂಡನಿಗೆ ಊಟಕ್ಕೆ ಹಾಕು ವದನ್ನೇ ಮರೆತರು; ಆಚಾರ್ಯರಿಗೂ ಕೇಳುವ ಧೈರ್ಯವಾಗಲಿಲ್ಲ. ಅನಾ ಯಾಸವಾಗಿ ಅಂದು ಏಕಾದಶಿಯಿದ್ದುದರಿಂದ ಆಚಾರ್ಯರು: "ವಿಷ್ಣು, ನಿನ್ನ ಸೇವಕನಪಾ" ಎನ್ನುತ್ತ ರಾತ್ರಿಯನ್ನು ಕಳೆದರು, ಬೆಳಗಾಗುವದರೊ ದೇವಿಯು ಪ್ರಸನ್ನಳಾಗಬಹುದೆಂಬ ಅವರ ಎಣಿಕೆಯು ತಪ್ಪಾಗಿ ಹೋಯಿತು ರಮಾಬಾಯಿಯವರು ಆಚಾರ್ಯರನ್ನು ಹಳಿಯುತ್ತ ತಮ್ಮ ದುರದೃಷ್ಟ ವನ್ನು ಹಾಡಿಕೊಂಡು ಅಳಹತ್ತಿದರು. ದೇಸಾಯಿ ಗೋವಿಂದರಾಯರ ಪತ್ನಿ ಜಾನಕೀಬಾಯಿಯರು "ಏನು ಆಚಾರ! ಊಟ ಆತs?" ಎಂದು ತಮ್ಮ ಮನೆಯ ಕಟ್ಟೆಯಮೇಲೆ ನಿಂತು ಕೈತೊಳೆದುಕೊಳ್ಳುತ್ತ ಕೇಳಿದರು. ಒಳ ಹೊರಗೆ ತಿರುಗಾಡಿ ವಿಚಾರ ಮಾಡುತ್ತಿದ್ದ ಆಚಾರ್ಯರಿಗೆ ಇದು ಅಪಮಾ ನದ ಪರಮಾವಧಿಯೆನಿಸಿರಬೇಕು. ಗಡಬಡಿಯಿಂದೆದ್ದು ಸ್ನಾನಾರ್ಚನೆಗಳನ್ನು ತೀರಿಸಿ ನಾಮಗಳನ್ನು ಲೇಪಿಸಿಕೊಂಡು ಅವರು ಪೇಟೆಗೆ ನಡೆದರು. ಲಗು ಬಗೆಯಿಂದ ಬಂದವರೆ ತಾವು ತಂದಿದ್ದ ತೆಳ್ಳನ್ನ ಕಾಗದದ ಪುಡಿಕೆಯನ್ನು ಅಡಿಗೆ ಮನೆಯಲ್ಲಿ ಕುಳಿತಿದ್ದ ಪತ್ನಿಯ ಮುಂದಿಟ್ಟು ಕೈಮುಗಿದು: "ಇಕೋ! ಮಹಾತಾಯಿ! ಇನ್ನು ಅಳಬೇಡ. ಸಾಷ್ಟಾಂಗ ಹಾಕಲೇನು? ಶಾಂತ ಳಾಗು" ಎಂದು ನರಸಿಂಹನ ರೂಪವನ್ನು ಕಂಡ ಪ್ರಲ್ಹಾದನಂತೆ ಭಯಭ ಕ್ತಿಯಿಂದ ಹೇಳಿದರು. ಆಗ ರಮಾಬಾಯಿಯವರ ಬಿಕ್ಕು ನಿಂತಿತು. ನಿಮಿ ಷೆರಡು ನಿಮಿಷ ಸುಮ್ಮನಿದ್ದು ಅವರು "ಇದು ಈಗ ತಾನೆ? ಇಷ್ಟು ಮೊದಲೇ ಆಗಿದ್ದರೆ?" ಎಂದು ಆಚಾರ್ಯರನ್ನು ಕುಪಿತರಾಗಿ ನೋಡಿ ಅವರ ಮೋರೆಗೆ ಕೈತಿವಿದು ಅಡಿಗೆಯ ಒಲೆಯನ್ನು ಸರಿಪಡಿಸಲಾರಂಭಿ ಸಿದರು. ಆಗ ಆಚಾರ್ಯರ ಜೀವದಲ್ಲಿ ಜೀವ ಬಂದಿತು.

ಒಟ್ಟಿನ ಮೇಲೆ, ಸುಖಬಡಬೇಕೆಂದು ಹಾತೊರೆದರೂ ಆಚಾರ್ಯರಿಗೆ ಪ್ರಪಂಚದಲ್ಲಿ ಸುಖವಿರಲಿಲ್ಲ. ಅವರ ಸಾಮರ್ಥ್ಯವು ಕುಂದುವದರಲ್ಲಿತ್ತು. ಇದ್ದ ಕೂದಲು ಬೆಳ್ಳಗಾಗಿದ್ದವು. ರಮಾಬಾಯಿಯವರ ಪೂರ್ಣಾಧಿಪತ್ಯಕ್ಕೆ ಒಳಪಟ್ಟು ಅವರಲ್ಲಿ ಒಂದು ತರಹದ ಉದಾಸೀನತೆಯು ನೆಲೆಸಿ ಹೋಗಿತ್ತು. ಮೊದಲಿನಿಂದ ಕೈಬಿಗಿಹಿಡಿದು ಸಂಸಾರವನ್ನು ಸಾಗಿಸಿದ ಆಚಾರ್ಯರಿಗೆ ಸಮೀಪದ ಆಪ್ತರಾಗಲಿ, ಹಿತಚಿಂತಕರಾಗಲಿ ಇರಲಿಲ್ಲ. ತಮ್ಮ ಚತುರ್ಥ

ಪತ್ನಿಯಾದರೂ ಅನಾಥ ಹುಡಿಗೆ; ದಿಕ್ಕಿಲ್ಲದ ಒರ್ವ ಕನ್ಯೆಯನ್ನು ವಿಕ್ರಯಕ್ಕೆ ತಂದು ಆಚಾರ್ಯರು ಮದುವೆ ಮಾಡಿಕೊಂಡಿದ್ದರು. ಅಂತೇ ಜೀಗರ ಮನೆ ಯವರಾರೂ ಇರಲಿಲ್ಲ. ನಾನಾವಿಧ ವಿಚಾರಗಳು ಒಮ್ಮೊಮ್ಮೆ ಅವರ ಸವಿಚಾ ರದಲ್ಲಿ ಸುಳಿಯುತ್ತಿದ್ದವು. ತಾವು ತೀರಿಕೊಂಡ ಮೇಲೆ ಹೇಗೆ? ನರಹರಿಯು (ಅವರಿಗೆ ಮೂರನೆಯ ಹೆಂಡತಿಯಿಂದಾದ ಮಗು) ರವಾಜಾಯಿಯವ ರನ್ನು ಯೋಗ್ಯ ರೀತಿಯಿಂದ ಸಂರಕ್ಷಿಸುವನೆ? ಪದ್ಮಾವತಿಯೂ (ಅವರಿಗೆ ಮೂರನೆಯ ಹೆಂಡತಿಯಿಂದಾದ ಹೆಣ್ಣು ಮಗಳು) ಬೆಳಿಗೆಯಲ್ಲಿದ್ದಳು. ನಾಳೆ ಬೆಳಗಾದರೆ ಅವಳ ಲಗ್ನವಾಗಬೇಕಲ್ಲವೆ? ಹೀಗೆ ಚಿಂತಾಕ್ರಾಂತರಾಗಿ ಕುಳಿತಾಗ ಆಚಾರ್ಯರಿಗೆ ತಮ್ಮ ಮನೆಯ ಪುರೋಹಿತರಾದ ಸುಬ್ಬಣ್ಣಾ ಚಾರ್ಯರ ನೆನಪಾಗುತ್ತಿತ್ತು. ಸುಬ್ಬನ ಮೇಲೆ ಆಚಾರ್ಯರ ವಿಶ್ವಾಸ ಬಹಳ. ನನ್ನ ತರುವಾಯ ನನ್ನ ಮನೆತನದ ಸ್ಥಿತಿಗತಿಯನ್ನು ನೋಡಿಕೊ ಳ್ಳಲು ಅವರಿಗೆ ಹೇಳಲಿಯಾ? ಛೀ! ಅದು ಅಲೌಕಿಕವೆಂದು ಇನ್ನೊಮ್ಮೆ ಹೊಳೆಯುತ್ತಿತ್ತು. ಹೀಗೆ ವಿಚಾರಗಳ ಸಳಿತಕ್ಕೆ ಸಿಕ್ಕು ಮುಂದುಗಾಣ ದಂತಾಗಿ ಆಚಾರ್ಯರು ನಿದ್ದೆ ಹೋಗಿ ಬಿಡುತ್ತಿದ್ದರು.

ನರಹರಿ–ಪದ್ಮಾವತಿಯರ ಬಾಳುವೆಯಾದರೂ ಅತಿ ಕಷ್ಟಕರವಾಗಿ ತ್ತೆಂದು ಬೇರೆ ಹೇಳಬೇಕಿಲ್ಲ. ಎಲ್ಲರಿಗೂ ಮುದ್ದು ಬರುವ ಹಾಗೆ ಪದ್ಮಾ ವತಿಯ ಸ್ವಭಾವವಿದ್ದಿತು. ಉಲ್ಲಾಸಕ್ಕಿಂತ ಗಾಂಭೀರ್ಯವು ಹೆಚ್ಚು. ಬುದ್ಧಿ ತೀಕ್ಷ್ಣವಾಗಿದ್ದರೂ ಅವಳ ಕೋಮಲ ಹೃದಯವು ಹೆಚ್ಚಿಗೆ ಮೋಹಕ ವಾಗಿತ್ತು. ಮೋರೆಯ ಮೇಲೆ ಎಳೆಯ ಕಳೆಯು ಬೆಳಗುತ್ತಿದ್ದರೂ ತುಂಟು ಲಕ್ಷಣಗಳು ಎಳ್ಳಷ್ಟಾದರೂ ಇರಲಿಲ್ಲ. ಆಟನೋಟಗಳಲ್ಲಿ ಅವಳಿಗ ಅಭಿಲಾಷೆ ಯಿಲ್ಲ; ತನ್ನ ಗೆಳತಿಯರ ಸುಖದುಃಖಗಳಲ್ಲಿ ಭಾಗ ವಹಿಸಲು ಮಾತ್ರ ನಿತ್ಯ ಹಾತೊರೆಯುತ್ತಿದ್ದಳು. ಅವರ ಕಣ್ಣುಗಳಲ್ಲಿ ನೀರು ಬಂದರೆ ಪದ್ಮಾವ ತಿಯ ಶೋಕವೂ ಒತ್ತರಿಸುವದು. ಅವರು ನಗುತ್ತ ಕೆಲೆಯುತ್ತಿದ್ದರೆ ಅವಳ ಸಂತೋಷಕ್ಕೆ ಪಾರವೇ ಇಲ್ಲ. ಓಣಿಯಲ್ಲೆಲ್ಲ ಪದ್ಮಾವತಿಯು ಮುದ್ದಾಗಿದ್ದಳು. ಆದರೆ ಅವಳ ಪ್ರೇಮವು ತಮ್ಮನಾದ ನರಹರಿಯಲ್ಲಿ ಒಟ್ಟುಗೂಡಿಸಿದಂತಾಗಿತ್ತು.

ನರಹರಿಯು ಮಾತ್ರ ಚಿಕ್ಕಂದಿನಲ್ಲಿ ತುಸು ತುಂಟನಾಗಿದ್ದ. ಹೆರವರ

ಪದ್ಮಾವತಿಯು ಸನಿಯಕ್ಕೆ ಸುಳಿದರೆ ತೀರಿತು, ಅವನಿಗೆ ಅಳುವು ತುಂಬಿ ಬರುವದು. ಅಕ್ಕನನ್ನುಳಿದು ಇನ್ನಾರ ಸಮೀಪಕ್ಕೂ ಅವನು ಹೋಗು ತ್ತಿರಲಿಲ್ಲ. ಅಕ್ಕನೇ ಉಣಿಸಬೇಕು; ಊಟವಾದ ಮೇಲೆ ಕೈತೊಳೆಸಿ ಅಕ್ಕನೇ ತನ್ನ ಹತ್ತಿರ ಮಲಗಿಸಿಕೊಳ್ಳಬೇಕು. ತಂದೆಯ ಹತ್ತಿರ ಕ್ವಚಿ ತ್ತಾಗಿ ಹೋಗುವನು; ಆದರೆ ರಮಾಬಾಯಿಯವರನ್ನು ಕಂಡರೆ ಮೋರೆ ಯನ್ನು ಗಂಟಿಕ್ಕಿ ಅಕ್ಕನೆಡೆಗೆ ಓಡುವನು.

ರಮಾಬಾಯಿಯವರ ಕೋಪವು ಇವರಿಬ್ಬರ ಮೇಲೂ ಹರಿದು ಹೋಗುತ್ತಿತ್ತು. ಪದ್ಮಾವತಿಗೆ ಅನೇಕ ಮನೆಗೆಲಸಗಳನ್ನು ಅವರು ಒಪ್ಪಿ ಸಿದ್ದರು. ತಪ್ಪಿದರೆ ಬಡತವು ತಪ್ಪುತ್ತಿರಲಿಲ್ಲ. ಅಕ್ಕನು ಅತ್ತಿತ್ತ ಸುಳಿ ದಾಡುವಾಗ ಕಿರಿಕಿರಿ ಮಾಡುವ ನರಹರಿಗೆ ವಾರದಲ್ಲಿ ಅನೇಕ ಸಲ ಬಂದೀ ವಾಸವಾಗುತ್ತಿತ್ತು. ಅವನನ್ನು ಮಲಗುವ ಕೋಣೆಯಲ್ಲಿ ಎಳೆದೊಯ್ದು ರಮಾಬಾಯಿಯವರು ಬಾಗಿಲಕ್ಕೆ ಬೀಗವನ್ನು ಒತ್ತಿ ಬಿಡುತ್ತಿದ್ದರು; ಪದ್ಮಾವತಿಯ ಕಣ್ಣಲ್ಲಿ ನೀರು ತುಂಬಿ ಬಂದರೆ ಆಕೆಗೂ ಪುಷ್ಪವೃಷ್ಟಿಯಾಗು ತ್ತಿತ್ತು. ಒಮ್ಮೆ ನರಹರಿಗೆ ಬಹು ದೀರ್ಘಕಾಲವನ್ನು ಸೆರೆಮನೆಯಲ್ಲಿ ಕಳೆ ಯುವ ಪ್ರಸಂಗವು ಬಂದಿತು. ಬೆಳಗಿನಿಂದ ಒಳಗಿದ್ದವನಿಗೆ ಮಧ್ಯಾಹ್ನ ವಾದರೂ ವಿಮೋಚನೆಯಾಗಲಿಲ್ಲ. ಆಚಾರ್ಯರು ಅರ್ಚನೆಯಾದ ಮೇಲೆ "ಬಿಟ್ಟು ಬಿಡೇ! ತುಂಟ ಸೂಳೇಮಗ ಊಟಾ ಮಾಡತಾನೆ" ಎಂದು ಅಂಗಲಾಚಿ ಬೇಡಿಕೊಂಡರು. ಆಗ ಅರ್ಧಕ್ಕೆ ನಿಂತಿದ್ದ ರಮಾಬಾಯಿಯವರ ಸಿಟ್ಟು ಆಚಾರ್ಯರ ಮೇಲೆಯೇ ಹರಿದು ಅವರನ್ನು ಮೈಲಿಗೆ ಮಾಡಿ ಬಿಟ್ಟಿತು. ಇತ್ತ ನರಹರಿಯು ಒಂದು ತಾಸು ಅತ್ತನು. ಬಾಗಿಲು ಮೊದ ಲಿನಂತೆ ಭದ್ರವಾಗಿರಲು, ಇನ್ನು ಅತ್ತೇನು ಫಲವೆಂದು ಕೋಣೆಯನ್ನು ಪರೀಕ್ಷಿಸತೊಡಗಿದನು. ಹಸಿದ ಹುಡುಗನಿಗೆ ಅಮೃತ ಸಿಕ್ಕಂತಾಯಿತು. ಆಚಾರ್ಯರ ಪಲ್ಲಂಗದ ಬುಡದಲ್ಲಿ ಕಿತ್ತಳೆ-ದ್ರಾಕ್ಷೆಗಳು ಹಾಗೆಯೇ ತಾಟಿ ನಲ್ಲಿ ಉಳಿದುಕೊಂಡಿದ್ದವು ನರಹರಿಯು ಅವನ್ನೆಲ್ಲ ತಿಂದು ಯಾವ ವಿಚಾ ರವೂ ಇಲ್ಲದೆ ಒಂದು ಮೂಲೆಯಲ್ಲಿ ನಿದ್ದೆಹೋದನು. ದೀಪ ಹಚ್ಚುವ ಹೊತ್ತಿಗೆ ಬಾಗಿಲು ತೆರೆದಾಗ ಮೆಲ್ಲನೆ ಹೋಗಿ ಅಕ್ಕನನ್ನು ಕೂಡಿಕೊಂಡನು.

ಮುಂದಿನದು ಗೊತ್ತೇ ಇದೆ. ತೀರದ ಕಿತ್ತಳೆ ಹಣ್ಣು ಎರಡನೆಯ ದಿವಸದ ಬಂದೀವಾಸಕ್ಕೆ ಕಾರಣವಾದವು !

ಮುಂದೆ ಕ್ರಮೇಣ ನರಹರಿಯು ಪ್ರಾಥಮಿಕ ಶಾಲೆಗೆ ಹೋಗಹತ್ತಿದನು. ಆಗ ವಕೀಲರ ಶೀನೂನೊಡನೆ ನಿಕಟವಾಗಿ ಅವನ ಸ್ನೇಹವು ಬೆಳೆಯಿತು. ಒಂದು ದಿವಸ ಶೀನೂನೊಡನೆ ತಿರುಗಾಡಲು ಹೋದನರಹರಿಯು ರಾತ್ರಿಯಾದರೂ ಮನೆಗೆ ಬರಲಿಲ್ಲ. ರಮಾಬಾಯಿಯವರು ಸಂತಪ್ತರಾದರು. ಎಲ್ಲವನ್ನೂ ಮುಗಿಸಿ ಉಡುಸಾರಣೆ ಮಾಡಿ ಮಲಗಿಬಿಟ್ಟರು. ಪದ್ಮಾವತಿಯು ಅಡಿಗೆ ಮಾಡಿಹಾಕಬೇಕೆಂದರೆ ಸಾವಮಾನುಗಳೆಲ್ಲ ಬೀಗದಲ್ಲಿ. ನರಹರಿಯು ಬಂದು ನಡುಮನೆಯಿಂದ ಅಡಿಗೆಮನೆಗೆ ಒಂದೆರಡು ಸಲ ತಿರುಗಿದನು. ಹೆಂಡತಿಯು ರೇಗಿದ್ದನ್ನು ನೋಡಿ ಆಚಾರ್ಯರಿಗೆ ಸ್ವಾಸ್ಥ್ಯವಿರಲಿಲ್ಲ. ಅವರೂ ನರಹರಿಗೆ ನಾಲ್ಕಾರು ಬಿರುಸು ಮಾತುಗಳನ್ನಾಡಿದರು. ಶೀರಿತು. ಅವನಿಗೆ ಅಂದು ರಾತ್ರಿ ಮನೆಯಲ್ಲಿ ನಿಲ್ಲುವ ಹಾಗಾಗಲಿಲ್ಲ. ಹೊರಗೆ ಬಿದ್ದು ಎಲ್ಲಿಯೋ ಹೊರಟು ಹೋದನು. ಆಚಾರ್ಯರು ತಮ್ಮ ಆಳಿನೊಡನೆ ಕಂದೀಲು ಹಿಡಿಸಿಕೊಂಡು ಹೋಗಿ ಊರ ಹೊರಗೆ ಹೊಲದಲ್ಲಿ ಕುಳಿತಿರುವ ನರಹರಿಯನ್ನು ತಿರುಗಿ ಕರೆತರಬೇಕಾದರೆ ಮಧ್ಯರಾತ್ರಿಯಾಗಿ ಹೋಯಿತು.

ಪದ್ಮಾವತಿಗಾದರೂ ಕಲಿಯುವ ಲವಲವಿಕೆ ಹೆಚ್ಚು. ಆದರೇನು? ನರಹರಿಯಂತೆ ಅವಳು ಗಂಡುಮಗುವಾಗಿ ಹುಟ್ಟಿರಲಿಲ್ಲ. ಕಾಂಚನವೆಂದರೆ ರೋಮಾಂಚನವೇಳುವ ಜನತೆಗೆ ಸ್ತ್ರೀಯೆಂದರೆ ಒಂದು ಲಾಂಛನಾಸ್ಪದ ವಸ್ತುವೆಂದು ದಿಗ್ಭ್ರಮೆಯಾಗುವದು. ಎಳೆತನದಲ್ಲಿ ತಾಯಿಯನ್ನು ಕಳೆದುಕೊಂಡ ಪದ್ಮಾವತಿಗೆ ಸುಖವೆಂದರೇನೆಂಬುದು ಗೊತ್ತಿರಲಿಲ್ಲ. ಹೇಗಾದರೂ ಮಾಡಿ ಕನ್ನಡ ಎರಡನೆ ಇಯತ್ತೆಯ ವರೆಗೆ ಅವಳಿಗೆ ಹೆಣ್ಣುಮಕ್ಕಳ ಸಾಲೆಗೆ ಹೋಗುವದು ಸಾಧ್ಯವಾಯಿತು. ಮುಂದೆ ರಮಾಬಾಯಿಯವರಿಗೆ ಒಳಗೆಲಸಕ್ಕೆ ಒಂದು ಆಳು ಬೇಕಲ್ಲ? ಸರಿ. ಪದ್ಮಾವತಿಯ ಶಿಕ್ಷಣವು ಮನೆಗೆಲಸಕ್ಕೆ ಆಹುತಿಯಾಯಿತು. ಆದರೂ ಅವಳು ಓದುವದನ್ನು ಬಿಟ್ಟಿರಲಿಲ್ಲ. ವಕೀಲರ ಶೀನೂನ ಮನೆಯಿಂದ ನರಹರಿಯು 'ಕರ್ನಾಟಕ ಭಾಷಾಸೇವಕ' 'ಕಾದಂಬರಿ', 'ವೇಣೀಸಂಹಾರ ನಾಟಕ' ಮೊದಲಾದ ಮಾಸಿಕ-ಪುಸ್ತಕಗಳನ್ನು ಇಸಿದುಕೊಂಡು ಬರುತ್ತಿದ್ದನು. ಅಲ್ಲದೆ ಪದ್ಮಾವತಿಯು ತನ್ನ

ಗೆಳತಿಯರ ತಾಯಂದಿರಿಂದ ದಾಸರ ಪದಗಳನ್ನು ಬರೆಯಿಸಿಕೊಂಡು ಅವು ಗಳನ್ನು ಕಂಠೋಕ್ತವಾಗಿ ಹೇಳುತ್ತಿದ್ದಳು. ಆದೇ ಕಾಸದಲ್ಲಿ ಶಬ್ದಗಳನ್ನು ಕೂಡಿಸಿ ಕೆಲವು ಪದ್ಯಗಳನ್ನು ರಚಿಸುವ ಪರಿಪಾಠವೂ ಅವಳಲ್ಲಿ ಬೆಳೆದು ಬಂದಿತು. ಮುಂದೆ ನರಹರಿಯು ಇಂಗ್ಲಿಷ ಶಾಲೆಗೆ ಹೋಗುತ್ತಿದ್ದಾಗ ಪ್ರಯಾಸಪಟ್ಟು ಪದ್ಮಾವತಿಯು ಅವನಿಂದ ಕೆಲವು ಇಂಗ್ಲಿಷು ಪಾಠಗಳನ್ನು ಕಲಿತುಕೊಂಡಳು.

ನರಹರಿಯು ಇಂಗ್ಲಿಷು ನಾಲ್ಕನೆ ಇಯತ್ತೆಯಲ್ಲಿದ್ದಾಗ ಇನ್ನೊಂದು ಪ್ರಸಂಗವು ಸಂಭವಿಸಿತು. ಸುಬ್ಬಣಾಚಾರ್ಯರು ಅಗ್ರಹಾರದಿಂದ ತಮ್ಮ ಮಗ ತಿಪ್ಪನನ್ನು ಕರೆದುಕೊಂಡು ಬಂದು ಹೈಗ್ರೀವಾಚಾರ್ಯರ ಮನೆ ಯಲ್ಲಿ ಅವನ ಪ್ರತಿಷ್ಠಾಪನೆ ಮಾಡಿದರು. ಇನ್ನು ತಿಪ್ಪನು ಇಂಗ್ಲಿಷು ಕಲಿ ಯಬೇಕು ! ಕನಿಷ್ಠಪಕ್ಷಕ್ಕೆ ತಮ್ಮ ಮಗನಾದರೂ ದೊಡ್ಡ ಸುಭೇದಾರನಾ ಗಬೇಕೆಂದು ಅವರ ಮಹತ್ವಾಕಾಂಕ್ಷೆಯಾಗಿತ್ತು. ಒಂದು 'ಫಾಯನಲ್' ಪರೀಕ್ಷೆಯಾದರೆ ಸಾಕೆಂದು ಅವರ ಅಭಿಪ್ರಾಯ. ಅದಕ್ಕಾಗಿ ಏಳು ವರ್ಷ ತಿಪ್ಪನು ಮೊಗ್ಗಾವಿಯಲ್ಲಿ ಆಚಾರ್ಯರ ಮನೆಯಲ್ಲಿರಬೇಕು. ಇದಕ್ಕೆ ರಮಾಬಾಯರ ವಿರೋಧವೇನೂ ಇರಲಿಲ್ಲ. ಮೇಲಾಗಿ ತಿಪ್ಪನು ಮನೆಯಲ್ಲಿ ಊಟ ಮಾಡುವದು ವರ್ಷದಲ್ಲಿ ಎಷ್ಟು ಸಲ? ಹೊರಗಿನ ಔತಣಗಳೇ ಬಹಳ. ಆಚಾರ್ಯರು ಆತಂಕವಿಲ್ಲದೆ ಒಪ್ಪಿಕೊಂಡರು. ತಿಪ್ಪನು ಯಥಾಪ್ರಕಾರವಾಗಿ 'ನಾಗರಿಕ'ನಾದನು.

ಆದರೆ ತಿಪ್ಪನಲ್ಲಿ ವೈದಿಕವೃತ್ತಿಯ ಹುಡುಗರ ಮಂಗತನವೆಲ್ಲ ತುಂಬಿ ಕೊಂಡಿತ್ತು. ಅಗ್ರಹಾರದಲ್ಲಿ ಸಾಲೆಗೆ ಹೋಗಹತ್ತಿ ಆರು ವರ್ಷಗಳಲ್ಲಿ ಕನ್ನಡ ನಾಲ್ಕು ಇಯತ್ತೆಗಳನ್ನು ಅಂತೂ ಇಂತೂ ಮುಗಿಸಿದ್ದನು. ಅವನು ಮೊಗ್ಗಾವಿಗೆ ಬರಲು ಸಮ್ಮತಿಯಿತ್ತುದು ಕಲಿಯಲಿಕ್ಕೆಂದಲ್ಲ; ದೊಡ್ಡ ಊರಿನಲ್ಲಿ ಇರಲು ಸಿಗುವದೆಂದು. ತಾತ್ಪೂರ್ತಿಕ ಮಂತ್ರ-ತಂತ್ರಗಳಲ್ಲಿ ಅವ ನಿಗೆ ಗತಿಯಿತ್ತು. ಆಚಾರ್ಯರ ಮನೆಯಲ್ಲಿಯ ದೇವರ ಪೂಜೆಯನ್ನು ತಡೆಯಿಲ್ಲದೆ ಸಾಗಿಸುತ್ತಿದ್ದನು. ಖಣಖಣಲ್ಲೆಂದು ಅವನು ಮಂತ್ರಗಳನ್ನು ಹೇಳುವಾಗ ರಮಾಬಾಯರಿಗೆ ಹಿಡಿಸಲಾರದಷ್ಟು ಆನಂದವಾಗುತ್ತಿತ್ತು. ನರಹರಿಯ ಮಂಡತನವನ್ನು ತೆಗಳಿ ಅವರು ತಿಪ್ಪನ ಧಾರ್ಮಿಕತೆಯನ್ನು

ಮನಸಾರೆ ಹೊಗಳುತ್ತಿದ್ದರು. ಇದಕ್ಕಾಗಿ ತಿಪ್ಪನೆಂದರೆ ನರಹರಿಗೆ ಪಿತ್ತ ನೇರುತ್ತಿತ್ತು. ಅವನನ್ನು ಅನೇಕ ಸಲ ಥಳಿಸಿ ನರಹರಿಯು ಮೆತ್ತಗೆ ಮಾಡಿದ್ದನು. ಹೀಗಿದ್ದರೂ ಮನೆಗೆ ಬಂದ ಮೇಲೆ ತಿಪ್ಪನ ಕೈ ಮೇಲು. ರಮಾಬಾಯಿಯರೆದುರಿಗೆ ಅವನು ತನ್ನ ಫಿರ್ಯಾದನ್ನು ದಾಖಲು ಮಾಡಿದಾಗ ಶಿಕ್ಷೆಯು ತಪ್ಪದೆ ನರಹರಿಯ ಪಾಲಿಗೆ ಬರುತ್ತಿತ್ತು!

ಇದೇ ಸುಮಾರಿನಲ್ಲಿ ರಮಾಬಾಯಿಯರು ಗರ್ಭಿಣಿಯಿದ್ದುದರಿಂದ ಬಾಣಂತಿತನಕ್ಕೆ ಯಾರ ಸಹಾಯವನ್ನು ದೊರಕಿಸಬೇಕೆಂದು ಹೈಗ್ರೀವಾಚಾರ್ಯರು ಚಿಂತಿಸುತ್ತಿದ್ದರು. ಶ್ರಾವಣಮಾಸಕ್ಕೆಂದು ಸುಬ್ಬಣ್ಣಾಚಾರ್ಯರು ಬಂದಾಗ ಅವರೆದುರಿಗೆ ಈ ವಿಚಾರವನ್ನು ಆಚಾರ್ಯರು ಮಂಡಿಸಿದರು.

ಸುಬ್ಬಣ್ಣಾಚಾರ್ಯರು ಧಿಗಿಲ್ಲನೆ ಎದ್ದು ನಿಂತರು.

“ಏನು ಆಚಾರ? ಇದಕ್ಕ ಇಷ್ಟು ಚಿಂತಿ ಮಾಡಬೇಕ? ಏನು ನಮ್ಮ ಮನಿ ಬಾಣಂತೆನ ಮತ್ತ ನಿಮ್ಮ ಮನೀದು ಬ್ಯಾರೇನ? ನಿಮ್ಮ ಅಡಚಣಿ ನಮ್ಮ ಅಡಚಣಿ ಅಲ್ಲ? ನನ್ನ ಹೇಣ್ತಿ ಇದ್ದರ, ವರ್ಷಾನುಗಟ್ಟಲೆ ಇಲ್ಲೇ ತಂದು ಇಡತಿದ್ದೆ ಆಕಿನ್ನ! ಮನಿ ಕೆಲಸಾ ಎಲ್ಲಾ ನೋಡಕೋತಿದ್ದಳು. ಆದರ ಏನು ಮಾಡೋದು ಆಚಾರ! ನಾ ಪಾಪಿ! ನನ್ನ ನಡುನೀರಾಗ ಬಿಟ್ಟು ಹೋದಳು.......” ಸುಬ್ಬಣ್ಣಾಚಾರ್ಯರು ಬಿಕ್ಕಿಸಿ ಬಿಕ್ಕಿಸಿ ಅಳಹತ್ತಿದರು. ಹೈಗ್ರೀವಾಚಾರ್ಯರ ಅಂತಃಕರಣವು ಕಲಮಲವಾಯಿತು.

“ಹೌದಪಾ, ಸುಬ್ಬು. ಏನು ಮಾಡೋದು? ದೇವರ ಚಿತ್ತ.”

ತಡವರಿಸುತ್ತ ಆಚಾರ್ಯರು ನುಡಿದರು. ಕಣ್ಣೊರಿಸುತ್ತ ಸುಬ್ಬಣ್ಣಾಚಾರ್ಯರು ಮುಂದೆ ಸಾಗಿದರು. ‘ಆಚಾರ, ಯಾರೇನು ಮಾಡೋದು? ಆಕಿ ದೈವದಾಗ ಇಲ್ಲ ರಮಾಬಾಯಿಯರಂಥ ಸಜ್ಜನರಿಗೆ ಸಹಾಯಾಗೋದು. ನಾಕ ವರ್ಷ ನಾನs ಕೈಬಾಯಿ ಸುಟಗೊಂಡೆ. ತಿಪ್ಪಗ ಅನ್ನಾ ಮಾಡಿ ಹಾಕಿದೆ. ಬಹಳ ಅನನುಕೂಲಾತು. ನಮ್ಮ ಅತ್ತಿಗಿ ಇದ್ದಾರಲ್ಲಾ ವೆಂಕಮ್ಮನವರು, ಹರಿಯಣ್ಣ ಸತ್ತಾಗಿನಿಂದ ತವರುಮನಿ ಸೇರಿಕೊಂಡಾರ, ಹೋಗಿ ಅವರ ಕೈಕಾಲು ಕಟಿಗೊಂಡು ಮನಿಗೆ ಕರಕೊಂಡು ಬಂದೆ. ಈಗ ನನ್ನ ಕಷ್ಟ ಹಿಂಗೇದ. ನಾಳೆ ಅಗ್ರಹಾರಕ್ಕ ಹೋಗಿ ಅವರನ್ನ ಕರಕೊಂಡು

ಬರತೇನಿ ಇಲ್ಲೆ, ಆಚಾರ. ನಿಮ್ಮ ಕೂಸು ಆರು ತಿಂಗಳದ್ದು ಆಗೋತನಕ ಇಲ್ಲೇ ಬಿಡತೇನಿ. ಮತ್ತೇನು ?"

ಹೈಗ್ರೀವಾಚಾರ್ಯರು ಸಂತುಷ್ಟರಾದರು. ಆಗಬಹುದೆಂದು ತಲೆಯಲ್ಲಾಡಿಸಿದರು. ಮರುದಿವಸ ಸುಬ್ಬಣಾಚಾರ್ಯರು ರೈಲಿನಿಂದ ಹೊರಟು ಅಗ್ರಹಾರವನ್ನು ತಲುಪಿದರು. ಅಲ್ಲಿ ಏಳೆಂಟು ದಿವಸವಿದ್ದು ಎಲ್ಲವನ್ನೂ ಸಜ್ಜುಗೊಳಿಸಿ ವೆಂಕಮ್ಮನವರ ಬಾಯಲ್ಲಿ ನೀರು ಒರುವಂತೆ ಮೊಗ್ಗಾವಿಯ ಕೇಶವದೇವರ ಗುಡಿಯಲ್ಲಿ ನಡೆಯುವ ಪುರಾಣ–ಪುಣ್ಯಕಥೆಗಳನ್ನು ಬಣ್ಣಿಸಿ ಹೈಗ್ರೀವಾಚಾರ್ಯರೆಂದರೆ ಸಾಕ್ಷಾತ್ ನಾರದರೆಂದು ಸ್ಪಷ್ಟಪಡಿಸಿ, ಅವರನ್ನು ಕರೆದುಕೊಂಡು ಬಂದು ಮುಟ್ಟಿದರು.

ಅವರು ಬಂದಾಗ ಹೈಗ್ರೀವಾಚಾರ್ಯರು ಮನೆಯಲ್ಲಿರಲಿಲ್ಲ. ರಮಾಬಾಯಿಯರೇ ಅವರಿಬ್ಬರನ್ನೂ ಬರಮಾಡಿಕೊಂಡರು. ಸವಾರನು ತಾನು ಬೆಲೆಗೆ ಕೊಳ್ಳುವ ಕುದುರೆಯನ್ನು ಕೂಲಂಕಷವಾಗಿ ಪರೀಕ್ಷಿಸುವಂತೆ ರಮಾಬಾಯಿಯರು ವೆಂಕಮ್ಮನವರನ್ನು ಸಖಿಶಿಖಾಂತವಾಗಿ ದಿಟ್ಟಿಸಿ ನೋಡಿ "ಬರ್ರಿ!" ಎಂದು ಉಪಚರಿಸಿದರು. ಸುಬ್ಬಣಾಚಾರ್ಯರ ಉತ್ಸಾಹಕ್ಕೆ ಮೇರೆಯೇ ಇರಲಿಲ್ಲ. ಹೈಗ್ರೀವಾಚಾರ್ಯರು ಬಂದಕೂಡಲೆ ಅವರು "ಇಕಾ! ಬಂದರು ಹಿರೇರು. ಸುಬ್ಬ ನಮಸ್ಕಾರ ಮಾಡತಾನ, ನಿಮಗ, ಆಚಾರ. ಆಶೀರ್ವಾದ ಮಾಡಬೇಕು ತಾವು!" ಎಂದು ಸಾಷ್ಟಾಂಗ ಹಾಕಿದರು.

"ಹೋದ ಕೆಲಸ ಗಂಡಾತೊ ಹೆಣ್ಣಾತೊ?" ಎಂದು ಆಚಾರ್ಯರು ಅತ್ತಿತ್ತ ನೋಡುತ್ತ ನಕ್ಕು ಕೇಳಿದರು.

"ಗಂಡು, ಆಚಾರ! ಅಲ್ಲ, ಹೆಣ್ಣು! ಹೆಣ್ಣು!" ಎಂದು ಸುಬ್ಬನು ಅಡಿಗೆಯ ಮನೆಯ ಕಡೆಗೆ ಬೊಟ್ಟುಮಾಡಿ ತೋರಿಸುತ್ತ ಉತ್ತರ ಕೊಟ್ಟನು.

"ಸುಖವಾಗಿರಪಾ, ಸುಬ್ಬ! ನಾ ನಿನಗ ಏನಂತ ಆಶೀರ್ವಾದ ಮಾಡಲಿ? ನಿನ್ನ ಹೆಂಡತಿ ಆರ ಇದ್ದರ ಇನ್ನೊಂದು ಗಂಡುಮಗ ಆಗಲಿ ಅಂತ ಹರಸತಿದ್ದೆ. ಉಪಾಯ ಇಲ್ಲ. ನನ್ನ ಸ್ಥಿತೀನ ನೋಡಲಾ, ನಮ್ಮಾಕಿ ನಾಕನೇಯಕಿ"

ಸುಬ್ಬಣಾಚಾರ್ಯರು ಮೋರೆಯನ್ನು ತುಸು ತಗ್ಗಿಸಿದರು. "ನಿಮ್ಮ

ಹಂಗ ನನ್ನ ಸ್ಥಿತಿ ಅಲ್ಲ, ಆಚಾರ. ನೀವು ನಾಕು ದುಡ್ಡಿದ್ದವರು. ನಾಕು ಬಿಟ್ಟು ಎಂಟು ಲಗ್ನ ಮಾಡಿಕೊಂಬೋ ಸಾಮರ್ಥ್ಯ ಕೊಟ್ಟಾನ ದೇವರು ನಿಮಗ. ನಾನು ಬಡ ಸೋಳೀ...."

"ಸಾಕು ಬಿಡೋ, ಸುಬ್ಬಾ. ಬಾಯಿ ಮುಚ್ಚೋ! ಅಳಲಿಕ್ಕೆ ಏನಾ ಗೇದೋ ಲೌ........ಮಗನ! ನಾ ಹೇಳಿಲ್ಲೇನು ನಿನಗ, ಹೆಣ್ಣು ತಗದು ಲಗ್ನಮಾಡತೇನಿ ಅಂತ" ಎಂದು ಆಚಾರ್ಯರು ಅಂಗಿಯ ಕಸಿಗಳನ್ನು ಬಿಚ್ಚಿದರು.

"ಬ್ಯಾಡ, ಮಹರಾಯ! ಇನ್ನ ಯಾರಿಗೆ ಬೇಕು ಲಗ್ನ? ರಾಮ ರಾಮಾ ಅಂತ ಸ್ವಸ್ಥಚಿತ್ತದಿಂದ ಇರತೇನಿ. ನೀವು ತಿಳದವರು, ಆಚಾರ! ಮತ್ತ ಯಾಕ ಪ್ರಪಂಚದಾಗ ಹಾಕತೀರಿ ನನ್ನ?" ಎಂದು ಸುಬ್ಬನು ವಿರಕ್ತಿಪೂರ್ಣವಾಗಿ ಪ್ರಶ್ನೆಮಾಡಿದನು.

"ಎಲಾ ಇವನ! ಇದೂ ಒಂದು ಹೆದರಕೀನ ಏನು? ಮಾಡತೇನೀ ಅಂದ್ರ ಮಾಡೇ ಬಿಟ್ಟೇನೀ ಅಂತ ತಿಳದ್ಯೋ ಏನು?"

ಎಂದು ಆಚಾರ್ಯರು ಬಾಯಿ ಹಾಕಿದರು.

"ಹೂಂ! ಏಳಿರಿನ್ನ! ಪೂಜಿ ಮಾಡಿರಿ! ಮಾತಿಗೆ ಸಿಕ್ಕರ ನೀವು ಊಟಾನ ಮರೀತೀರಿ." ರಮಾಬಾಯರು ಸಿಟ್ಟಿನಿಂದ ಹೇಳಿದರು. ನಡು ಮನೆಯ ಬಾಗಿಲಲ್ಲಿ ನಿಂತು ಈ ಮಾತುಗಳನ್ನೆಲ್ಲ ಕೇಳಿ ಅವರ ತಲೆಗೆ ಪಿತ್ತ ವೇರಿತ್ತು.

ಆಚಾರ್ಯರು ಗಡಬಡಿಸಿಕೊಂಡು ಎದ್ದರು. ಇನ್ನು ಸ್ನಾನಕ್ಕೆಂದು ಹೋಗುವವರು. ಅಷ್ಟರಲ್ಲಿ ಸುಬ್ಬನ ನೆನಪಾಯಿತು. "ನಿನ್ನ ಪೂಜೀನ ಆಗಲಪಾ ಇವತ್ತ, ಸುಬ್ಬಾ! ಅನಾಯಸಾ ಪುರೋಹಿತ ಬಂದೀದಿ ಊರಿಂದ."

ಒಳಗೆ ಹೋಗುತ್ತಿದ್ದ ರಮಾಬಾಯರು ಮತ್ತೆ ನಿಂತು ಮೋರೆಯನ್ನು ಗಂಟಿಕ್ಕಿ "ಹೂಂ! ಸುಬ್ಬಣಾಚಾರು ಬಂದಾರಲ್ಲಾ. ಅದೊಂದು ಕೆಲಸ ತಪ್ಪಿತು ನಿಮಗ" ಎಂದರು.

ಆಚಾರ್ಯರು ತುಸು ಹೊತ್ತು ಸುಮ್ಮನಿದ್ದರು. ತಟಕ್ಕನೆ ಅವರಿಗೆ

ವೆಂಕಮ್ಮನವರು ಬಂದುದು ನೆನಪಾಯಿತು. "ಪುತ್ರ ನಿನಗಾದರು ಏನು ಇವತ್ತಿನಿಂದ ಕೆಲಸ........!" ಎಂದು ಗಟ್ಟಿಯಾಗಿ ನಕ್ಕುಬಿಟ್ಟರು.

ಮುಂದೆ ಕೆಲವು ದಿವಸಗಳ ಮೇಲೆ ಸುಬ್ಬಣಾಚಾರ್ಯರು ಹೇಳಿದಂತೆ ರಮಾಬಾಯಿಯರು 'ಸುಮುಹೂರ್ತದಲ್ಲಿ ಸುಸೂತ್ರವಾಗಿ' ಒಂದು ಗಂಡು ಮಗುವನ್ನು ಹೆತ್ತರು. ಹೈಗ್ರೀವಾಚಾರ್ಯರಿಗೆ ಒಂದು ಬಗೆಯಿಂದ ಸಂತೋಷವಾಗಿದ್ದೇನೋ ನಿಜ. ಆದರೆ ಹೊಣೆಯು ಹೆಚ್ಚಿತೆಂದು ಅವರ ಚಿಂತೆಯೂ ಹೆಚ್ಚಿತು. ಸಕಾಲದಲ್ಲಿ ಮಗುವಿಗೆ ಕೃಷ್ಣನೆಂದು ನಾಮಕರಣ ವಾಯಿತು. ವೆಂಕಮ್ಮನವರು ಎಲ್ಲ ಮನೆಗೆಲಸಗಳನ್ನು ಸುಸೂತ್ರವಾಗಿ ಸಾಗಿಸಿಕೊಂಡು ನಡೆದರು. ಆಚಾರ್ಯರ ಸಹಾಯಕ್ಕೆಂದು ಸುಬ್ಬಣಾಚಾರ್ಯರೂ ಎರಡು-ಮೂರು ತಿಂಗಳು ಅಲ್ಲಿಯೇ ನಿಂತುಕೊಂಡರು.

ಒಂದು ದಿವಸ ಸುಬ್ಬಣಾಚಾರ್ಯರಿಗೆ ಪೇಟೆಯಲ್ಲಿ ದೇಸಾಯಿ ಗೋವಿಂದರಾಯರ ಭೆಟ್ಟಿಯಾಯಿತು. ಅವರನ್ನು ತಪ್ಪಿಸಿ ಸಾಗಿ ಹೋಗ ಬೇಕೆಂದು ಆಚಾರ್ಯರು ಪ್ರಯತ್ನಿಸಿದರು. ಎರಡೂ ಮನೆತನಗಳ ನಡುವೆ ಅಷ್ಟೊಂದು ಸುಖಮಯ ಸಂಬಂಧವಿದ್ದಿಲ್ಲವೆಂಬುದು ಅವರಿಗೆ ಗೊತ್ತಿತ್ತು. ಆದರೆ ದೇಸಾಯರೇ ಮೊದಲು ಮಾತನಾಡಿದರು.

"ಏನು ಆಚಾರ ಸ್ವಾಮಿ! ನೀವು ಇಲ್ಲೇ ತಳ ಊರಿದ ಹಾಂಗ ಕಾಣ ತದ!"

"ಇಲ್ಲ ಮಹರಾಯಾ! ಹಿರೇರ ಅಡಚಣಿ ನಾವಲ್ಲದ ಇನ್ನಾರು ನೋಡಬೇಕು?" ಎಂದು ಹೇಳಿ ಆಚಾರ್ಯರು ಅವಸರದಿಂದ ಮುಂದೆ ಸಾಗಿದರು. ಮುಗುಳುನಗೆ ನಕ್ಕು ಗೋವಿಂದರಾಯರು ಮನೆಯ ಕಡೆಗೆ ನಡೆದರು.

## ಪ್ರಕರಣ ೩

# ಗೋವಿಂದರಾಯರ ಮನೆ

ದೇಸಾಯಿ ಗೋವಿಂದರಾಯರ ಮನೆಯಲ್ಲಿಯೂ ಅನೇಕ ಮಾರ್ಪಾಟುಗಳು ಸಂಭವಿಸುತ್ತ ನಡೆದಿದ್ದವು. ದೇಸಾಯರ ಸ್ವಭಾವವು ಸರಳವಾಗಿರುವದೇನೋ ನಿಜ. ಆದರೆ ಜಾನಕಿಬಾಯಿಯವರಂತಹ ಗೃಹಿಣಿಯ ಕೈಯಲ್ಲಿ ಸಿಕ್ಕು ಅವರ ಜೀವವು ಜರ್ಜರವಾಗಿತ್ತು. ಅವರ ಆಕಾಂಕ್ಷೆಗಳೆಲ್ಲ ಮಣ್ಣುಗೂಡಿ ಹೋಗಿದ್ದವು. ಅದಕ್ಕಾಗಿಯೇ ಅವರು ಈ ರೀತಿಯಾಗಿ ಮನೆಯ ಹೊರಕ್ಕೆ ಸುಖವನ್ನರಸುತ್ತ ಅಂಡಲೆಯುತ್ತಿದ್ದರು.

ಗೋವಿಂದರಾಯರಿಗೆ ತಮ್ಮ ಲಗ್ನದ ಕಾಲವು ಇನ್ನೂ ಅಚ್ಚಳಿಯದೆ ನೆನಪಿತ್ತು. ಅವರು ಹದಿನೆಂಟು ವರುಷದವರಿದ್ದರು. ಅದೇ ಪ್ರಾಯದ ಕಳೆಯು ಸುರಿಯುತ್ತಿತ್ತು. ಆಗ ಅವರ ತಂದೆಯ ಮನಸ್ಸಿನಲ್ಲಿ ಇವರ ಲಗ್ನ ಮಾಡಬೇಕೆಂದು ಬಂದಿತು. ಇಂಚಲಾಪುರದ ದೇಸಾಯರ ಮಗಳನ್ನು ತೆಗೆದುಕೊಳ್ಳಬೇಕೆಂಬ ನಿಶ್ಚಯವಾಯಿತು. ಗೋವಿಂದರಾಯರಿಗೆ ಲಗ್ನವಾಗುವದಕ್ಕಿಂತ ಪೂರ್ವದಲ್ಲಿ ತಮ್ಮ ಪಾಲುಗಾರ್ತಿಯನ್ನು ನೋಡುವ ಭಾಗ್ಯವೇ ಒದಗಿ ಬಂದಿದ್ದಿಲ್ಲ. ಲಗ್ನವಾದ ಮೇಲೆ ಅವರು ಗೃಹಿಣಿಯ ಬದಲು ಸಿಂಹಿಣಿಯನ್ನು ಕಂಡರು. ಅಂದಿನಿಂದ ಅವರ ಸುಖಮಯ ಸ್ವಪ್ನವು ಬಯಲಾಯಿತು. ಆಗ ಅವರು ಪ್ರಪಂಚದ ವಿಷಯವಾಗಿ ತಾಳಿದ ವೈರಾಗ್ಯವೇ ಮನೆತನದ ಎಲ್ಲ ವಿಪತ್ತುಗಳಿಗೆ ಕಾರಣವಾಯಿತು. ರಾಯರ ತಾರುಣ್ಯವು ತುಸು ಕಂದಿದ ಮೇಲೆ ಮತ್ತೆ ಮನೆಯ ಕಡೆಗೆ ಅವರ ದೃಷ್ಟಿಯು ಹರಿಯಿತು. ಕೇಶವ-ಕುಸುಮೆಯರೇ ಈ ತಡೆದ ಬಯಕೆಯ ಫಲವಾಗಿದ್ದರು.

ರಾಯರಿಗೆ ಜೀವನದಲ್ಲಿ ಸುಖವಿದ್ದರೆ ಅವರು ತಮ್ಮ ಮಕ್ಕಳನ್ನು ಉತ್ತಮರೀತಿಯಿಂದ ಬೆಳೆಸುತ್ತಿದ್ದರು. ಎಷ್ಟಂದರೂ ರಾಯರಿಗೆ ಪಾಶ್ಚಾತ್ಯ ಸಂಸ್ಕೃತಿಯ ಸಂಸ್ಕಾರವಿತ್ತು. 'ಫಾಯಿನಲ್' ಪರೀಕ್ಷೆಯನ್ನು ಪಾಸಾಗದಿದ್ದರೂ ಅದಕ್ಕಾಗಿ ಅವರು ಓದಿಕೊಂಡಿದ್ದರು. ಅಲ್ಲದೆ ಮೆಕಾಲೆ,

ಹರ್ಬರ್ಟ್ ಸ್ಪೆನ್ಸರ್, ಹಕ್ಸ್ಲೀ ಮೊದಲಾದವರ ಗ್ರಂಥಗಳನ್ನು ಪ್ರೀತಿಯಿಂದ ಪರಿಶೀಲಿಸಿದ್ದರು. ಮಕ್ಕಳಿಗೆ ಕಲಿಸುವ ಹಂಬಲವೂ ಅವರಿಗಿತ್ತು. ಆದರೆ ಪತ್ನಿಯಿದ್ದಾಗ ಮನೆಯಲ್ಲಿ ನಿಲ್ಲಲು ಕೂಡ ಒಮ್ಮೊಮ್ಮೆ ಅವರಿಗೆ ಮನಸಾಗುತ್ತಿದ್ದಿಲ್ಲ. ಹೀಗಾಗಿ ಕೇಶವನ ವಿದ್ಯಾಭ್ಯಾಸದ ಕಡೆಗೆ ಅವರ ಲಕ್ಷ್ಯವೇ ಹರಿಯಲಿಲ್ಲ. ಕೇಶವನು ಬರಬರುತ್ತ ದೇಸಗತ್ತಿಯ ಎಲ್ಲ ಧುರಂಧರತೆಗೆ ಬಾಧ್ಯನಾದುದಕ್ಕೆ ಇದೇ ಕಾರಣವಾಗಿರಬಹುದು. ಕುಸುಮೆಯ ಅಸಾಧಾರಣ ಬುದ್ಧಿಚಾತುರ್ಯವನ್ನು ನೋಡಿ ಮಾತ್ರ ರಾಯರು ಅವಳನ್ನು ಸಾಲೆಗೆ ಹಾಕಿಸಿದ್ದರು. ಇಲ್ಲದಿದ್ದರೆ ಕುಸುಮೆಯು ಕಲಿಯುವ ಸಂಭವವೇ ಇರುತ್ತಿರಲಿಲ್ಲ. ಮನೆಗೆ ಬಂದರೆ ಊಟವಾಗುವ ತನಕ ನಿಂತು ಕುಸುಮೆಯನ್ನು ಮಾತನಾಡಿಸಿ ರಾಯರು ಮತ್ತೆ ಹೊರಟು ಹೋಗುತ್ತಿದ್ದರು.

ಹೈಗ್ರೀವಾಚಾರ್ಯರಿಗೂ ದೇಸಾಯರಿಗೂ ಅಷ್ಟೊಂದು ಸೆಟ್ಟಗಿರಲಿಲ್ಲ. ಸ್ವಭಾವವೈಚಿತ್ರ್ಯವೇ ಇದಕ್ಕೆ ಕಾರಣವಾಗಿತ್ತೆನ್ನಬಹುದು. ದೇಸಾಯರದು ಉದಾರ ಹೃದಯ; ಆಚಾರ್ಯರದು ಸಂಕುಚಿತವಾದ ಮನಸ್ಸು. ಈಗ ಸಾಂಪತ್ತಿಕ ಸ್ಥಿತಿಯು ಚೆನ್ನಾಗಿರದಿದ್ದರೂ ದೇಸಾಯರು ಗರ್ಭಶ್ರೀಮಂತರು; ಆಚಾರ್ಯರು ಅನೇಕ ಬಡವರ ಗೋಣು ಮುರಿದು ಪೈಗೆ ಪೈಯಂತೆ ದುಡ್ಡು ಕೂಡಿಸಿ ಹಾಕಿದವರು. ಆಚಾರ್ಯರು ಧರ್ಮದ ಹೆಸರಿನಿಂದ ಅನ್ಯಾಯಪರಂಪರೆಯನ್ನು ಎಸಗಿದವರು; ರಾಯರು ಸಮಾಜದ ದೃಷ್ಟಿಯಿಂದ ನೀತಿಬಾಹಿರರಾದರೂ ಸ್ವಂತದ ದೃಷ್ಟಿಯಿಂದ ಅಭಿಮಾನವುಳ್ಳವರು. ಆಚಾರ್ಯರ ಡಾಂಭಿಕವೃತ್ತಿಯನ್ನು ನೋಡಿ ರಾಯರಿಗೆ ವಿಪರೀತವಾದ ಸಂತಾಪವಾಗುತ್ತಿತ್ತು. "ಆ ಆಚಾರಿಯ ಮಾತು ಬ್ಯಾಡ. ಈ ಗಂಟೆ ಹೊಡೆಯೋ ಬ್ರಾಹ್ಮಣ ಈಗ ನಮ್ಮ ಮನೆ ಎದುರಿಗೆ ಮನೆ ಹಾಕಿಸಿ ಮೆರಿತಾನ!" ಎಂದು ಅವರು ಒಮ್ಮೊಮ್ಮೆ ಉದ್ಗಾರವನ್ನು ತೆಗೆಯುತ್ತಿದ್ದರು.

ಜಾನಕಿಬಾಯಿಯವರಿಗೂ ರಾಯರಿಗೂ ಸಾಮಾನ್ಯವಾದ ಗುಣವೆಂದರೆ ಇದೇ ಒಂದು. ಅವರಿಗೂ ಆಚಾರ್ಯರ ಮನೆಯವರನ್ನು ಕಂಡರೆ ಸರಿಬರುತ್ತಿರಲಿಲ್ಲ. ಆದರೆ ಅವರ ಕಾರಣಗಳು ಬೇರೆ. ದಿನ ಬೆಳಗಾದರೆ ಒಹತಿಯರು ಬದಲಾಗುವ ಧರ್ಮಶಾಲೆಯೆಂದರೆ ಆಚಾರ್ಯರ

ಮನೆಯೆಂದು ಅವರು ಹೀಯಾಳಿಸುತ್ತಿದ್ದರು. ಮೊದಲು ಲಕ್ಷ್ಮೀಬಾಯಿ, ಆ ಮೇಲೆ ಇಂದಿರಾಬಾಯಿ, ಆಮೇಲೆ ಸೀತಾಬಾಯಿ, ಸದ್ಯಕ್ಕೆ ರಮಾ-ಬಾಯಿ! ಮುಂದಿನ ಪಾಳಿ ಯಾರದೋ ಯಾರು ಕಂಡಿರುವರು! ಈ ಭಾರ್ಯಾಚತುಷ್ಟಯದಲ್ಲಿ ಸೀತಾಬಾಯಿಯವರಿದ್ದಾಗ ಜಾನಕಿಬಾಯಿಯ ವರಿಗೆ ಸಂತೋಷವಿತ್ತು. ಸೀತಾಬಾಯಿಯವರು ಒಳ್ಳೆಯ ಸ್ವಭಾವದ ವರು, ನಿರ್ಮಲಾಂತಃಕರಣವುಳ್ಳವರು. ಯಾರಿಗೂ ಕೆಡಕು ಬಯಸುವವರಲ್ಲ. ಜಾನಕಿಬಾಯಿಯವರು ಏನೆಂದರೂ ಅದಕ್ಕೆ ಪ್ರತಿಯಾಗಿ ಅವರು ಪ್ರೀತಿ ಯನ್ನೇ ತೋರಿಸುತ್ತಿದ್ದರು. ಆದರಿಂದ ಜಾನಕಿಬಾಯಿಯವರು ಸಂತುಷ್ಟ ರಾಗುತ್ತಿದ್ದರು. ಆದರೆ ರಮಾಬಾಯಿಯವರು ಸೀತಾಬಾಯಿಯವರ ಸ್ಥಾನವನ್ನು ಆಕ್ರಮಿಸಿದ ಮೇಲೆ ಜಾನಕಿಬಾಯಿಯವರ ಮನಃಸ್ಥಿತಿಯು ಬಹಳವಾಗಿ ಬದಲಿಸಿತ್ತು; ರಮಾಬಾಯಿಯವರ ಒಯ್ಯಾರವನ್ನೂ ಸ್ವತಂತ್ರ ವೃತ್ತಿಯನ್ನೂ ಕಂಡರೆ ಅವರಿಗೆ ಸರಿಬರುತ್ತಿರಲಿಲ್ಲ. "ನೆತ್ತಿಮೇಲಿನ ಮಾಂಸ ಹಾರಿಲ್ಲ, ಈಗಾಗಲೆ ಎಷ್ಟು ಜಂಭ, ಎಷ್ಟು ಡೌಲು!" ನರಹರಿ-ಪದ್ಮಾವತಿಯರ ಪಕ್ಷವನ್ನು ಹಿಡಿದು ರಮಾಬಾಯಿಯವರನ್ನು ಅವರು ಆಡಿಕೊಳ್ಳುವದರಿಂದ, ಅವರ ಮನೆಗೆ ಯಾರೂ ಹೋಗಬಾರದೆಂದು ರಮಾ ಬಾಯಿಯವರು ಕಟ್ಟಪ್ಪಣೆಯನ್ನು ಮಾಡಿಬಿಟ್ಟರು!

ಸಾಧಾರಣವಾಗಿ ಜಾನಕಿಬಾಯಿಯವರ ಸ್ವಭಾವವು ಓರ್ವ ಕತೆ ಗಾರನು ಅಭ್ಯಸಿಸುವ ಹಾಗಿತ್ತು. ಹಳ್ಳಿಯ ಹವೆಯಲ್ಲಿ ಉಸುರಾಡಿಸಿದ ಅವರಿಗೆ ಜಗತ್ತಿನ ಕಲ್ಪನೆಯೇ ಇರಲಿಲ್ಲ. ತಾವಿರುವ ಮನೆ ಹಾಗು ಇಂಚಲಾ ಪುರದಲ್ಲಿ ತಂದೆಯ ಮನೆ,– ಇವೆರಡನ್ನು ಮಾತ್ರ ಅವರು ಚೆನ್ನಾಗಿ ಬಲ್ಲರು. ಅಲ್ಲಿಯೂ ಹಿತ್ತಲವೆಂದರೆ ಅಷ್ಟು ಪರಿಚಯವಿಲ್ಲ, ಅಡಿಗೆಯ ಮನೆಯಲ್ಲಿ ಮಾತ್ರ ಪ್ರತಿಯೊಂದು ಮೂಲೆಯನ್ನೂ ಗುರುತಿಸುತ್ತಿದ್ದರು. ಇನ್ನೂ ಸಣ್ಣ ವರಿರುವಾಗ ಅವರ ತಾಯಿಯು ಸತ್ತು ಕಳೆದಿತ್ತು. "ಅವ್ವಾ! ಅಡಕಲದ ಸಂದಿಯ ಗಡಿಗೆ ಹಿಂದೆ ಜೋಳದ ಚೀಲದ ಮಣಿ ಹತ್ತರ ಬಿದ್ದದ! ನೋಡು!" ಎಂದು ಒದರಿ ಹೇಳಿದ್ದರು. ಅವರಿಗೆ ಉಳಿದ ಜಗತ್ತೆಲ್ಲ ಬಯಲು. ಸ್ವಾತಂತ್ರ್ಯ, ಸಂಸ್ಕೃತಿ, ನಾಗರಿಕತೆ, ಸಹಾನುಭೂತಿ, ಪ್ರೇಮ,– ಈ ಶಬ್ದಗಳು ಮನುಷ್ಯಕೋಟಿಗೆ ಅನ್ವಯಿಸುತ್ತವೆಂದು

ಹೇಳಿದ್ದರೆ ಅವರಿಗೆ ಆಶ್ಚರ್ಯವಾಗುತ್ತಿತ್ತು. ಹೀಗಾಗಿ ಸಣ್ಣವರಿರುವಾಗ ಹಳ್ಳಿಯ ಹವೆಯಲ್ಲಿ, ಸಾಂಪ್ರದಾಯಿಕರ ಕುಟುಂಬದಲ್ಲಿ, ಕರ್ಮಠರ ಸಾನ್ನಿಧ್ಯದಲ್ಲಿ ಅವರು ಬೆಳೆಯುತ್ತಿದ್ದರು. ಮಡಿಯೆಂದರೆ ಅವರಿಗೆ ಧರ್ಮ, ಮೈಲಿಗೆಯೆಂದರೆ ಅಧಃಪತನ. ಅಗ್ನಿಯ ಕುಂಡವನ್ನು ಸುತ್ತುವ ಚೇಳಿನಂತೆ ಅವರು ಈ ಕರ್ಮಕಾಂಡವನ್ನು ಸುತ್ತುತ್ತಿದ್ದರು.

ಇನ್ನು ಸಮಾಜದ ವಿಷಯಕ್ಕಿರುವ ಅವರ ಕಲ್ಪನೆಯೂ ಅಸಾಮಾನ್ಯವಾದುದು. ಆಳುವ ಹವ್ಯಾಸವು ಅವರಿಗೆ ಬಲವಾಗಿದ್ದಿತು. ಗಂಡಸನ್ನು ಆಳುತ್ತಿದ್ದರು, ಮಗನನ್ನು ಆಳುತ್ತಿದ್ದರು, ಮಗಳನ್ನು ಆಳುತ್ತಿದ್ದರು.ಅವರಿಗೆ ಅಂಕಿತದಲ್ಲಿ ಜನರು ಹೆಚ್ಚಾಗಿ ಬಂದಂತೆ ಸಂತೋಷವು ಅಧಿಕವಾಗುತ್ತಿದ್ದಿತು. ಕೇಶವನ ವಿಷಯದಲ್ಲಿ ಮಾತ್ರ ಬಲುಮೆಗಿಂತ ಮೋಹವು ತುಸು ಹೆಚ್ಚಾಗಿತ್ತು. ಹೀಗೆ ತಮ್ಮ ಪ್ರಪಂಚಕ್ಕೆಲ್ಲ ಸೂತ್ರಧಾರಿಯಾಗಿ, ಮಕ್ಕಳನ್ನು ವಿಧೇಯರನ್ನಾಗಿ ಮಾಡಿಕೊಂಡು ನಾಲ್ಕು ಜನರ ಕಡೆಯಿಂದ ಧರ್ಮನಿಷ್ಠರೆಂದೆನಿಸಿಕೊಳ್ಳುವದೇ ಅವರಿಗೆ ಸ್ವರ್ಗಸುಖವಾಗಿತ್ತೆನ್ನಬಹುದು. ಆದರೆ ಗೋವಿಂದರಾಯರ ವರ್ತನೆಯು ಇದಕ್ಕೆ ಮೇಲಿಂದ ಮೇಲೆ ಭಂಗ ತರುತ್ತಿತ್ತು.

ಕೇಶವನು ಜನ್ಮತಃ ಸೋಮಾರಿ. ಉದಾಸೀನನಾದ ತಂದೆಯಿಂದ, ಅತಿಯಾಗಿ ಹುಚ್ಚುಚ್ಚಾಗಿ ಪ್ರೀತಿಸುವ ತಾಯಿಯಿಂದ ಆತನು ಇದೇ ಒಂದು ಪಾಠವನ್ನು ಕಲಿತುಕೊಂಡಿದ್ದನು. ತನ್ನ ಸರಿಜೋಡಿಯ ಹುಡುಗರೆಲ್ಲ ಇಂಗ್ಲಿಷು ಸಾಲೆಯನ್ನು ಸೇರುವಾಗ ಅವನು ಇನ್ನೂ ಕನ್ನಡ ಎರಡನೆ ಇಯತ್ತೆಯಲ್ಲಿ ಕೊಳೆಯುತ್ತಿದ್ದನು. ಒಮ್ಮೆ ಜಾನಕಿಬಾಯರು ಕುಸುಮೆಯನ್ನು ಕರೆದುಕೊಂಡು ತವರೂರಿಗೆ ಹೋಗಿದ್ದರು. ಕೇಶವ–ಗೋವಿಂದರಾಯರು ಮಾತ್ರ ಇದ್ದರು. ಗೋವಿಂದರಾಯರು ಈ ನಾಲ್ಕು ದಿವಸದ ಮಟ್ಟಿಗೆ ಮನೆಯಲ್ಲಿಯೇ ಹೊತ್ತುಗಳೆಯುತ್ತಿದ್ದರು. ಒಂದು ದಿವಸ ಬೆಳ್ಳಬೆಳಗಾಗಿತ್ತು. ಇನ್ನೂ ಕೇಶವನು ಎದ್ದಿದ್ದಿಲ್ಲ.

"ಏ! ಕೇಶವಾ! ನಡೆ ಸಾಲೆಗೆ!" ಗೋವಿಂದರಾಯರು ತಮ್ಮ ಹೊರಗಿನ ಕೋಣೆಯಿಂದ ಒದರಿಕೊಂಡರು.

"ಅಪ್ಪಾ! ಒಲ್ಲೆ ಹೋಗೊ!" ಎಂದು ಮತ್ತೆ ಮುಸುಕು ಹಾಕಿದ ಕೇಶವ.

"ಸಾಲಿಗೆ ಹೋಗಲಿಕ್ಕೆ ಬ್ಯಾಡ ಹೌದs ನಿನಗ" ಎಂದು ರಾಯರು ಕೇಶವನ ಹತ್ತಿರ ಬಂದರು. ಈಗ ಕೇಶವನು ಆಕಳಿಸುತ್ತ ಎದ್ದು ಕುಳಿತನು. ಕಣ್ಣು ತಿಕ್ಕಿ ಇನ್ನು ಅನಿವಾರ್ಯಪಕ್ಷವೆಂದು ಏಳುವದರಲ್ಲಿದ್ದನು. ಆಗ ರಾಯರಿಗೆ ದರ್ಪವು ಹೆಚ್ಚಾಯಿತು. "ಹೂಂ! ಏಳು ಪ್ಯಾಲಕ!" ಎಂದು ಮತ್ತೆ ಗಟ್ಟಿಯಾಗಿ ನುಡಿದರು. ಎದ್ದು ಕುಳಿತಿದ್ದ ಕೇಶವನು ಆಗ ಮತ್ತೆ ಮುಸುಕುಹಾಕಿದನು. "ಅಪ್ಪಾ! ನಾ ಒಲ್ಲೆ ಹೋಗೋ ಸಾಲೆಗೆ! ಮಾಸ್ತರು ಹೊಡಿತಾರ! ದಿನಾ ಬೆಳಗಾದರ ಇದs ತ್ರಾಸಾನ ತ್ರಾಸ. ಅವ್ವ ಇದ್ದರ ಕಳಸತಿದ್ದಳs ನನ್ನ!" ಎಂದು ಮುಸುಕಿನಲ್ಲಿಯೇ ದೊಡ್ಡ ದನಿ ತೆಗೆದು ಅಳಹತ್ತಿದನು.

ರಾಯರಿಗೆ ಇನ್ನು ಸಿಟ್ಟುಮಾಡುವದು ವ್ಯರ್ಥವೆನಿಸಿತು. ಇದು ಒಂದು ದಿವಸದ ರೂಢಿಯಲ್ಲ, ಅನೇಕ ವರ್ಷಗಳದು ಅದು ಅವರ ಮನೆ-ತನದ ದೈವವೇ ಸರಿ. ಇವತ್ತು ಇಷ್ಟೆಲ್ಲ ಜುಲುಮೆ ಮಾಡಿ ಆಗುವದಾದರೂ ಏನು? ರಾಯರು ಸಡಿಲುಬಿಟ್ಟರು. "ನಿನ್ನಂಥ ಮಗ, ಆಕಿ ಅಂಥ ಹೇಣ್ತಿ! ಉಣಬೇಕ, ನೋಡು ಪ್ರಪಂಚದ ಸುಖ! ಮದುವಿ ಆದ ಹದಿ-ನೈದು ವರ್ಷದ ಮ್ಯಾಲ ಹುಟ್ಟಿದಿ ಅಂತ ಅಚ್ಛಾಚ್ಛಾ ಮಾಡಿದರ ತಲೆ ಮ್ಯಾಲ ಏರ ಕೂತ್ಯಲ್ಲೋ ನನ ಮಗನ!" ಎಂದು ಕಳಕಳಿಯಿಂದ ಉದ್ಗಾರ ತೆಗೆದರು.

ಕೇಶವನ ಬುದ್ಧಿಯು ತುಸು ಚುರುಕಾಯಿತು. "ಹಾಂಗಲ್ಲಪಾ ನಾ ಹೇಳೋದು! ನಾ ಸಾಲೀ ಕಲಿತರ ದೇಸಾಯರ ಕುಲಕ್ಕ ಕಲಂಕ ಹೌದೋ ಅಲ್ಲೋ! ನಮ್ಮಜ್ಜ ಕಲಿತಿಲ್ಲ, ನಮ್ಮಪ್ಪಿಲ್ಲ, ನಾ ಮಗನಾರ ಯಾಕ ಕಲೀಬೇಕು? ದೇಸಾಯ್ರಂದರೇನು? ಕೆಳಗ ಹೊಲ ಮ್ಯಾಲ ಸಾಲ, ನಡುವ ದೇಸಾಯ್ರು ಮಜಾ ಮಾಡಕೋತ ಮಾನದಿಂದ ಇರಬೇಕು. ನಿನ್ನೆ ಅವರ ಮನಿಗೆ ಹೋದಾಗ ಹೇಳತಿದ್ದಿಲ್ಲೇನು ರಂಗಾಸಾನಿ?"

"ಭಲೆ! ಮಗನ! ಸಂಗೀತ ಕೇಳಲಿಕ್ಕೆ ಅಂತ ನಿನ್ನ ಅಲ್ಲಿ ಕರಕೊಂಡು ಹೋದರ ನೀತಿ ಪಾಠಾನs ಕಲಕೊಂಡು ಬಂದೀಯೇನು? ಇನ್ನೊಮ್ಮೆ

ಬಂದಾರ ಬಾ ನನ್ನ ಸಂಗತಿಲೆ!'' ಎಂದು ದೇಸಾಯರು ಹೆದರಿಸಿದರು. ಆದರೆ ಆ ಹೆದರಿಕೆಯಲ್ಲಿ ಜೀವವಿರಲಿಲ್ಲ.

ಇಷ್ಟರಲ್ಲಿ ರಂಗಾಸಾನಿಯ ಸಣ್ಣ ಮಗುವು ದೇಸಾಯರನ್ನು ಕರೆಯ ಬಂದಿತು. ರಂಗಾಸಾನಿಯ ತಂಗಿಯು ದೂರ ದೇಶದಿಂದ ಬಂದಿದ್ದಳಂತೆ. ಇಂದು ಅವಳ ಗಾಯನವಾಗುವದಂತೆ. ಆದರೆ ಅದಕ್ಕಿಂತ ಮೊದಲು ದೇಸಾಯರು ಅಗತ್ಯವಾಗಿ ಅವಳನ್ನು ಕಾಣಬೇಕು. ಅದಕ್ಕಾಗಿ ಈಗ ಕರೆಯ ಬಂದಿರುವದು

ನಿಂತ ಕಾಲಮೇಲೆ ದೇಸಾಯರು ಹೊರಡಲನುವಾದರು. ಮನೆಯಲ್ಲಿ ಕೇಶವ ಬೇರೆ. '' ಏ ಕೇಶವ! ಸಾಲಿಗೆ ಹೋಗದಿದ್ದರ ಬಿಡು. ಹೋಗಿದ್ದರ ಮನಿ ಕೀಲಿ ಹಾಕಿ ನಿರುಂಬಳಾಗತಿದ್ದೆ. ಅಡಿಗಿಮನ್ಯಾಗಿನ ಕಪ್ಪು, ಬಸಿ ಒಯ್ದು ಹಿತ್ತಲದಾಗ ಇಡು. ಭರಮಪ್ಪ ಬಂದು ತೊಳಿತಾನ. '' ಎಂದು ದೇಸಾಯರು ಹೊಸ್ತಿಲದ ಹೊರಗೆ ಕಾಲುಹಾಕಿದರು.

' ಕಪ್ಪು ಬಸಿ ಹೊಲ್ಯಾಗ್? ನಮ್ಮಪ್ಪನ ದುಡ್ಡು ನಾ ಏನು ತಿಂದದ್ದು. ಬೇಕಾದರ ಒಂದು ಕಪ್ಪು ಚಹಾ ಮಾಡಿಕೊಂಡು ಕುಡಿತೇನಿ ' ಎಂದು ಕೇಶವನು ನಕ್ಕನು. ಅದೇ ಎದ್ದು ಸ್ಟೋವನ್ನು ಹೊತ್ತಿಸಿದನು. ಅಷ್ಟರಲ್ಲಿ ಬಾಗಿಲಲ್ಲಿ ಟಾಂಗಾದ ಸಪ್ಪಳವು ಕೇಳಿಸಿತು. ನೆರೆಹೊರೆಯವರ ಮನೆಗೆ ಯಾರಾದರೂ ಬಂದಿರಬಹುದೆಂದು ಬಗೆದು ಕೇಶವನು '' ಬೆದರುತ ತೆರಳುವ ದದೇತಕೆ '' ಎಂದು ಹಾಡುತ್ತ ಅಡಿಗೆ ಮನೆಯ ತುಂಬ ತಿರುಗಾಡಹತ್ತಿದನು. ಸ್ಟೋವಿನ ಸಪ್ಪಳವನ್ನೂ ಕೇಶವನ ಆವೇಶವನ್ನೂ ಕೇಳುತ್ತ ಜಾನಕಿ ಬಾಯಿಯವರ ಪ್ರವೇಶವಾಯಿತು. ಅದೇ ಟಾಂಗಾದವನ ಕೂಡ ರೊಕ್ಕದ ಸಲುವಾಗಿ ಬಡಿದಾಡಿ ರೇಗಿ ಬಂದಿದ್ದರು. ಅಡಿಗೆಯ ಮನೆಯಲ್ಲಿ ಈ ದೃಶ್ಯ ಬೇರೆ. ಜಾನಕಿಬಾಯಿಯವರಿಗೆ ಹಿಡಿಸಲಾರದಷ್ಟು ಸಂತಾಪವಾಯಿತು. ಅವರು ತಾವು ಅದೇ ಊರಿನಿಂದ ಬಂದವರೆಂಬುದನ್ನು ಮರೆತು ಬಿಟ್ಟರು. ನಡುಮನೆಯೊಳಗಿಂದ ಗಟ್ಟಿಯಾಗಿ ಒದರಿಕೊಂಡರು. '' ಏ ಕೇಶ್ಯಾ! ಅಡಿಗಿಮನಿಯೊಳಗೇನು ಅನ್ಯಾಯ? ಬಾ ಹೊರಗ? ಕಪ್ಪು ಬಸಿ ಯಾರ ಹರವ್ಯಾರ ಇಲ್ಲೆ? ಕುಲಗೆಟ್ಟವರ ಮನ್ಯಾಗ ಇರೋ ಪಾಳಿ ನನಗ ತಂದ್ಯಾ, ದೇವಾ? ಮಡಿ ಇಲ್ಲ, ಮೈಲಿಗಿಲ್ಲ. ಊರಿಗೆ ಹೋದಾಗ ಏನು ಮಾಡ್ಯಾರೊ

ಏನು ಬಿಟ್ಟಾರೋ ! ಇವರು ಕಾಲಿಟ್ಟ ಅಡಿಗಿ ಮನ್ಯಾಗ ನಾ ಅಡಿಗಿಯಾರ ಹ್ಯಾಂಗ ಮಾಡಲಿ? ''

ಕೇಶವನು ಬೆಚ್ಚಿಬಿದ್ದನು. ತಾಯಿಯು ಹೀಗೆ ಆಕಸ್ಮಾತ್ತಾಗಿ ಬರುವಳೆಂದು ಅವನು ತಿಳಿದಿರಲಿಲ್ಲ. ಆದರೂ ಉತ್ತರಕೊಡುವ ಸಾಹಸ ಮಾಡಿದನು. " ಹೌರಗ ಮಾತಾಡ, ಅವ್ವಾ. ಅಪ್ಪೇನು ಮನ್ಯಾಗಿಲ್ಲ. ಅಪ್ಪಿದ್ದಾಗ ಗುಡುಗು ಮಳಿಯಾಗಲಿ. ನಾ ಇದ್ದಾಗ ಯಾಕ ಬಿಸಿಲು ಬೀಳಬಾರದು ? ''

" ಎಲ್ಲಿ ಹೋಗ್ಯಾರೋ ಕೇಶವ ಅವರು ? ಮನ್ಯಾಗ ಇದ್ದಾರ ಅಂತ ಮಾಡಿದ್ದೆನಲ್ಲಾ ! ''

" ಅಪ್ಪ ಹೋಗ್ಯಾನ ರಂಗಾಸಾನಿ ಮನಿಗೆ. ಇನ್ನು ಬರೋದು ಯಾ ಹೊತ್ತೋ ಅಂತ ಒಂದು ಕಪ್ಪು ಚಹಾ ಮಾಡಿಕೋತಿದ್ದೆ '' ಎಂದು ಅಳು ಮೋರೆಯಿಂದ ಕೇಶವನು ಹೇಳಿದನು.

" ನನಗ ಗೊತ್ತು. ಸಾನಿಯವರ ಮನಿ ಮುಂದ ಸನಾದಿ ಊದೋ ದೇಸಾಯರ ಮನಿಗೆ ನನಗ ಕೊಡಬ್ಯಾಡಾ ಅಂತ ಗಂಟುಬಿದ್ದೆ. ಅಪ್ಪ ಕೇಳ ಲಿಲ್ಲಿ. ಇದ್ದ ಹೊಲಸ ಮನ್ಯಾಗ ಇಷ್ಟು ಧರ್ಮ ಉಳಸೋಣು ಅಂದ್ರು ಅಡಿಗಿ ಮನ್ಯಾಗ ಈ ಅನಾಹುತ ಬ್ಯಾರೆ. ಆಗಲಿ.ದೇವರ ಇಚ್ಛಾ.ಯಾರೇನು ಮಾಡೋದು. ಕೇಶವಾ ! ನೀ ಇಷ್ಟು ಹೊರಗ ಬಾರಪಾ. ಅಡಿಗಿಮನೀ ಸಾರಿಸಿ ಮೈ ತೊಳಕೊಂಡು ನಿನಗ ಬೆಲ್ಲಾಹಿಟ್ಟು ಕಲಿಸಿ ಕೊಡತೇನಿ. ಬಿಟ್ಟು ಬಿಡು ಸುಟ್ಟ ಚಹಾ, ಆ ಟೋ ಆರಸು. ''

" ಅರ್ಧ ಚಹಾ ಆಗೇದವಾ. ಮಾಡಿದ್ದು ಕೆಡಸೋದೇನು? ಇದ ನ್ನಿಷ್ಟು ಕುಡಿತಿನಿ. ಆ ಮ್ಯಾಲ ಬೆಲ್ಲಾ-ಹಿಟ್ಟು ಕೊಡುವಂತಿ '' ಎಂದು ಕೇಶವನು ತನ್ನ ತಾಯಿಯ ಪ್ರೀತಿಯನ್ನು ಕಾಯ್ದುದ್ದಲ್ಲದೆ ತನ್ನ ಇಚ್ಛೆ ಯನ್ನೂ ನೆರವೇರಿಸಿದನು !

ದೇಸಾಯರ ಮನೆಯಲ್ಲಿ ನಡೆಯುತ್ತಿದ್ದ ಇಂಥ ಪ್ರಸಂಗಗಳಿಗೆ ಲೆಕ್ಕ ವಿಲ್ಲ. ಒಂದು ವರ್ಷ ಕೇಶವನು ಎರಡನೆ ಇಯತ್ತೆಯಲ್ಲಿ ನಪಾಸಾದದ್ದು ಕೇವಲ ಚಹದ ಸಲುವಾಗಿ ! ಮುಂಜಾನೆ ಆರು ಗಂಟೆಗೆ ಎದ್ದು ಅನೇಕ ಹುಡುಗರು ಏನನ್ನೂ ತಿನ್ನದೆ ಸಾಲೆಗೆ ಬರುತ್ತಿದ್ದರು. ಉಳಿದವರು

ಕಿಸೆಯಲ್ಲಿ ವಿಧ ವಿಧದ ತಿಂಡಿಯನ್ನು ತುಂಬಿಕೊಳ್ಳುತ್ತಿದ್ದರು. ಗೊಡ್ಡೆವಿಮ್ಮ ಯವರ ಮನೆಯ ವಿರೂಪಾಕ್ಷನು ಒಂದು ಲೋಟ ಹಾಲು ಕುಡಿದು ಬರುತ್ತಿದ್ದನು. ದೇಶಪಾಂಡೆ ಬೋದರಾಯರ ಮನೆಯ ವಿಷ್ಣು ಅವಲಕ್ಕಿಯನ್ನು ತೆಗೆದುಕೊಂಡು ಬರುತ್ತಿದ್ದ. ಕೇಶವನು ಮಾತ್ರ ನಿತ್ಯವೂ ಚಹ ಕುಡಿದು ಆಮೇಲೆ ಸಾವಕಾಶವಾಗಿ ಸಾಲೆಯೆಡೆಗೆ ಹೊರಳುತ್ತಿದ್ದ.

ಕೇಶವನು ಎರಡನೆ ಇಯತ್ತೆಯಲ್ಲಿ ನಪಾಸಾದ ಸಂಗತಿಯು ಎಲ್ಲರಿಗೂ ಗೊತ್ತು. ವಾರ್ಷಿಕ ಪರೀಕ್ಷೆಯಿದ್ದುದರಿಂದ ನಸುಕಿನಲ್ಲಿ ಸಾಲೆಗೆ ಹೋಗಬೇಕಾಗಿತ್ತು. ಅಂದು ಕೇಶವನ ಮನೆಯಲ್ಲಿ ಚಹ ಮಾಡುವದಕ್ಕೆ ತುಸು ಹೊತ್ತಾಯಿತು. ಆದರೆ ಆತನೇನು ಮನೆ ಬಿಟ್ಟು ಕದಲಲಿಲ್ಲ. ಚಹ ಕುಡಿದ ಮೇಲೆ ಇದ್ದರೆ ಪರೀಕ್ಷೆಯೆಂದು ನಿರ್ಧರಿಸಿದನು. ಅವನ ನಂಬರು ಹಾರಿ ಹೋಯಿತು. ಸಾಲೆಗೆ ಬರುವಷ್ಟರಲ್ಲಿ ಪರೀಕ್ಷೆಯು ಮುಗಿಯಲಿಕ್ಕೆ ಬಂದಿತ್ತು.

"ಎಲೆ! ಕೇಶ್ಯಾ? ಧಡ್ಡ ಸೋ....ಮಗನ! ಈಗ ಎದ್ದೇನು?" ಎಂದು ಪರೀಕ್ಷಕರ ಬಳಿಯಲ್ಲಿ ಕುಳಿತಿದ್ದ ಮಾಸ್ತರರು ಎದ್ದು ಬಂದು ಹಲ್ಲು ಕಡಿಯುತ್ತ ಕೇಳಿದರು.

"ಚಹಾ ಆಗಿದ್ದಿಲ್ಲರಿ ಮಾಸ್ತರ ಮನ್ಯಾಗ" ಎಂದು ಕೇಶವನು ನಡುಗುತ್ತ ಹೇಳಿದನು. ಕಿವಿ ಹಿಂಡುತ್ತ ಕೇಶವನನ್ನು ಎಳೆದೊಯ್ದು ಗುರುಗಳು ಪರೀಕ್ಷಕರೆದುರಿಗೆ ಒಯ್ದು ನಿಲ್ಲಿಸಿದರು. ಅವನಿಗೆ ಒಂದು ಶಬ್ದವನ್ನೂ ಹೇಳುವದಾಗಲಿಲ್ಲ!

ಈಗ ಮತ್ತೆ ಎರಡನೆ ಇಯತ್ತೆಯಲ್ಲಿ ಕೇಶವನು ವಿರಾಜಮಾನನಾಗಿದ್ದ. ಒಂದು ದಿವಸ ತುಪ್ಪ ಹಚ್ಚಿದ ಅವಲಕ್ಕಿಗಳನ್ನು ಕಿಸೆಯೊಳಗಿಂದ ತುಸುವೆ ತೆಗೆದು ತಿನ್ನುತ್ತ ಸಾವಕಾಶವಾಗಿ ಸಾಲೆಯೆಡೆಗೆ ಸಾಗಿದ್ದನು. ಹಾದಿಯಲ್ಲಿ ಅವನ ಪರಮಸ್ನೇಹಿತನಾದ ಭೀಮು ಭೆಟ್ಟಿಯಾದ.

"ಹೊತ್ತಾತೇನೋ ಕೇಶವ?"

"ಇಲ್ಲಿ ಬಾರೋ, ನಿನ! ಮಾಸ್ತರS ಹೊತ್ತೇರಿ ಬರತಾರ. ಅವಲಕ್ಕಿ ಬೇಕೇನು?"

" ಕೊಟ್ಟರ ಬೇಕು " ಭೀಮೂನ ಪಾಲಿಗೆ ಒಂದು ಹಿಡಿ ಅವಲಕ್ಕಿ ಒಂದವು. ಇಬ್ಬರೂ ಮೆಲ್ಲನೆ ಮುಂದುವರಿದರು.

ಎಲ್ಲ ಹುಡುಗರೂ ತಮ್ಮ ವರ್ಗದಲ್ಲಿ ನೆರೆದು ಗುರುಗಳು ಬರುವ ದಾರಿಯನ್ನು ನೋಡುತ್ತಿದ್ದರು. ಕಡೆಯ ಗಂಟೆಯೂ ಆಯಿತು. ಸುಳಿವಿಲ್ಲದಾದ ಕೂಡಲೆ ಹುಡುಗರ ಹರಟೆಗೆ ಆರಂಭವಾಯಿತು. ಭೀಮೂನಿಗೆ ಕೇಶವನಿಂದ ಇನ್ನಿಷ್ಟು ಅವಲಕ್ಕಿಗಳು ಸಿಕ್ಕವು. ಹೀಗೆ ಎಲ್ಲರೂ ನಿರ್ಭೀತರಾಗಿರುವಾಗ ಬಡಿಗೆಯ ಸಪ್ಪಳವಾಯಿತು. ಒಂದರು ಮಾಸ್ತರು ! ಶಿಷ್ಯರು ತಮ್ಮ ತಮ್ಮ ಸ್ಥಳದಲ್ಲಿ ಎದ್ದು ನಿಂತರು.

ಭವ್ಯವಾಗಿ ವಿಭೂತಿಯನ್ನು ಬಡೆದುಕೊಂಡು ಜರದ ಪಾವುಡವನ್ನು ಸುತ್ತಿ ಇನ್ನೂ ಚಿಕ್ಕ ವಯಸ್ಸಿನವರಾದ ಚೆನ್ನಪ್ಪನವರು ಬಂದರು.ಮುಲ್ಕೀ ಪರೀಕ್ಷೆಯಲ್ಲದೆ ಕಾಲೇಜಿನಲ್ಲಿಯ ಒಂದು ವರ್ಷದ 'ಕಲ್ಕಿ' ಪರೀಕ್ಷೆಯೂ ಆಗಿತ್ತು.

" ಎದ್ದು ನಿಂದರ್ರಲೆ ಸೆಟ್ಟಗ ! ಕಾಸೀಮ ಹ್ಯಾಂಗ ನಿಂತಾನ ನೋಡು ........ಹೊಳ್ಳಿಸಿಕೊಂಡು! ಏ ! ಡೊಳ್ಳುಹೊಟ್ಟಿ ಆಚಾರಿ ! ಮಾನಮ್ಮ ತುಪ್ಪ ಭಾರಾಗ್ಯೆತೇನು ? ಯಾಕಲೆ ! ಚೆನ್ಯಾ ! ಹೀಂಗ ಮಾಡಿದರ ರಂಟಿ ಹೊಡ್ಯಾಕ ಕಳಸತಾನ ನಿಮ್ಮಪ್ಪ ! ' ಕಾಲು ಜೋಡಿಸುತ್ತ **ಕಂಭದಂತೆ** ನಿಲ್ಲಿರಿ ' ಕಲತಿಲ್ಲೇನು ಕವತೇನ ?"

ಎಲ್ಲವೂ ನಿಶ್ಯಬ್ದವಾಗಿತ್ತು. ಯಾರೂ ಪಿಳ್ಳೆಂದು ಮಾತಾಡಲಿಲ್ಲ. ಮಾಸ್ತರರು ಹೋಗಿ ಕುರ್ಚಿಯ ಮೇಲೆ ಕುಳಿತರು. ಅವರ ಸಿಂಹಾಸನಾರೋಹಣವಾಯಿತು. ದಾನ,-ಕಾಣಿಕೆ- ಇವುಗಳ ಸುರಿಮಳೆ ಇನ್ನೂ ಉಳಿಯಿತು.

" ಇವತ್ತ ಯಾರ್ರಲೆ ಹೊತ್ತುಮಾಡಿ ಬಂದವರು ? " ಮಾಸ್ತರರು ಗರ್ಜಿಸಿದರು.

" ಭೀಮು, ಕೇಶವರಿ, ಮಾಸ್ತರ—" ಅವರ ಚಾಳಿ 'ಘೂ' ಬಿಟ್ಟ ನಾನಿಯು ಹೇಳಿದನು.

" ಕುರ್ಚೆ ನಿಂದರ್ಯೋ ಮಂಗ ನನ ಮಕ್ಕಳರ್ಯಾ ! ಏ ಕಾಸೀಮಾ ! ನಿಂದರಸು ಅವರನ್ನ ಬಗ್ಗಿಸಿ ! ಒಲ್ಲೆ ಅಂತಾರೇನು ? ಚಂಡಿನ ಮ್ಯಾಲೊಂದು

ಗುದ್ದು ! ಹೂ ! ಹಾಂಗ ! ತಗಿರಿ ಇನ್ನ ಮೂಡೂನು ಕವತೀದ ಅರ್ಥ !
ಯಾ ಪಾಟಲೆ ಬಸ್ಯಾ ? ''

'' ಧ್ರುವಂದರಿ, ಮಾಸ್ತರ'' ಎಂದು ಹೇಳಿ ಪಟ್ಟಶಿಷ್ಯನಾದ ಒಸವಣ್ಣಿಯು ಉಳಿದ ಹುಡುಗರ ಕಡೆಗೆ ದರ್ಪದಿಂದ ನೋಡಿದನು.

ಗುರುಗಳು ಪ್ರಾರಂಭಿಸಿದರು. '' ಶಿನೇ ಪಾಠ. ಧ್ರುವಚರಿತ್ರೆ. ಓದೂದು ಕೇಳ್ರಿ:–

'' ಒಂದು ದಿನ ಧ್ರುವ ತಾಯ ಬಳಿಯಲಿ
ಬಂದು ತನ್ನಯ ತಂದೆ ಯಾರೌ.....

ಎಲೆ ! ಶಂಕರ್ಯಾ ತಿಳಿತೇನು ಅರ್ತ ?''

ಏನನ್ನಾದರೂ ಹೇಳಿದರೆ ಕಪಾಳಮೋಕ್ಷವಾಗಬಹುದೆಂದು ಹೆದರಿದ ಶಂಕರನು '' ಇನ್ನೂ ಇಲ್ಲರಿ ! '' ಎಂದು ಹೇಳಿದನು.

'' ಸರಳ, ಬಡ್ಡಿ ಹಾಂಗೈತಿ. ಇಷ್ಟು ತಿಳ್ಯಾಕಿಲ್ಲ ಬಡ್ಡಿಮಗನ ! ಕೇಳಿಲ್ಲೆ. ಕಿವಿ ಕೊಡು ನನ್ನ ಕೈಯ್ಯಾಗ! ಈಗ ನಿಂದs ನೋಡು. ನಿನ್ನ ಹೆಸರು ನಿಮ್ಮವ್ವನ ಹೆಸರು ಹಚ್ಚೈತಿ ಹಾಜರ್ಯಾಗ. ನಿಮ್ಮಪ್ಪನ ಹೆಸರು ಯಾಕ ಹಚ್ಚಲಿಲ್ಲಪಾ ? ನಿನಗ ಗೊತ್ತಿಲ್ಲ ನಿಮ್ಮಪ್ಪನ ಹೆಸರು. ಅಂತ ನೀನs ಮನ್ನೆ ಕೇಳಲಿಲ್ಲೇನಲೇ ಎಲ್ಲವ್ವಗ ? ಧ್ರುವಾನು ತಮ್ಮವ್ವಗ ಹೀಂಗ ಕೇಳಿದ. ಗೊತ್ತೈತೇನು ? ''

ಶಂಕರನು ಲಜ್ಜೆಯಿಂದ ಮೋರೆಯನ್ನು ಕೆಳಗೆ ಹಾಕಿದನು. ಕಾಸೀಮನು ನಕ್ಕನು. ಉಳಿದ ಹುಡುಗರು ಗಾಂಭೀರ್ಯದಿಂದ ಸುಮ್ಮನಿದ್ದರು. ಹೀಗೆಯೇ ಗುರುಗಳ ಉಪನ್ಯಾಸವು ನಡೆಯಿತು:—

" ಒಂದೆ ಮನದೊಳು ಮಂತ್ರ ಜಪಿಸಲು
ಬಂದು ದೇವನು ತಪಕೆ ಮೆಚ್ಚಿದೆ.....

ತಿಳಿತೇನ್ರಲೆ ! ' ದೇವ ' ಇದರ ಅರ್ತೇನಲೆ ಕಾಸೀಮ ! ''

'' ಅಲ್ಲಾಸರಿ '' ಕಾಸೀಮನು ಹೇಳಿದನು.

' ನೀನಲೆ ಪರಸ್ಯಾ ? '

' ಅದಾನಲ್ಲರಿ ಪರಶಿವಾ ' ಎಂದು ಪರಸ್ಯಾನ ಉತ್ತರ ಬಂತು.

'' ಅಲ್ಲ. ನೀ ಹೇಳಲೆ ಆಚಾರಿ. ''

" ಮಾಸ್ತರ, ದೇವರು ಅಂದರ ನರಸಿಂಹಮೂರ್ತಿರಿ " ಆಚಾರ ಹುಡುಗನು ಒದರಿ ಹೇಳಿದನು.

" ನಾ ಹೇಳತೇನರಿ ಮಾಸ್ತರ ! " ಒಂದು ಹೆಜ್ಜೆಯನ್ನು ಮುಂದಿಟ್ಟು ಬಸವಣ್ಣೆಯು ಬೆರಳನ್ನು ಮುಂದೆ ಮಾಡಿದನು.

" ಹೂಂ. ಹೇಳು. "

" ದೇವರು ಅಂದರೆ ಸೃಷ್ಟಿಕರ್ತ. " ಬಸವಣ್ಣೆಯು ದನಿ ತೆಗೆದು ಹೇಳಿದನು.

" ಹೌದೆಲೆ ! ಗುದ್ದು ಅವರ್ನ. ಹೀಂಗ ಹೇಳಬೇಕು ಅರ್ಥದ ಪುಸ್ತಕ ದಾಗ ಇದ್ದಾಂಗ ! ಭರಮ್ಯಾ ಎರಡನೆ ಪಾಠಾನ ಉಜಳಣಿ ಮಾಡಿ ಯೇನು ? "

" ಹೂಸರಿ ಮಾಸ್ತರ ! "

" ಅನ್ನು ಹಂಗಾದರೆ "

" ಏಳು ಮಾತಿನ ಗಿಣಿಯೆ, ಏಳು ಮುಪ್ಪಿನ ಕಣಿಯೆ
ಏಳು ಸದ್ಗುಣ ಮಣಿಯೆ ಏಳು ಬೆಳಗಾಯಿತೂ ೂ ೂ "

" ಎಳದು ಕೊಲ್ಲಬ್ಯಾಡಲೇ ಅಕ್ಷರಾನ. ೧ನೇ ಶ್ಲೋಕದಾಗ' ಕತ್ತಲೆ, ಮತ್ತೆ, ಮುತ್ತು, ಅತ್ತ, ಒತ್ತಿ, ' ಇಷ್ಟು ಅಂಥಾವ ಶಬ್ದ ಬಂದಾವ. ಇದಕ ಏನಂತಾರು ? "

" ಕವಿತಾ ಅಂತಾರ್ರಿ ಮಾಸ್ತರ. "

" ಹಾಂಗ ! ನೆಪ್ಪಿನಾಗ ಐತಿ ನಿನ್ನೆ ಹೇಳಿದ್ದು. ಮುಂದೋದಲೆ ! " ಭರಮನು ಮುಂದೆ ಓದಿದನು.

" ಕಾಗೆ ಕಾಕಾಯೆಂದು ಗುಬ್ಬಿ ಚಿವು ಚಿವುಯೆಂದು " ......

ಅಷ್ಟರಲ್ಲಿಯೇ ಆಚಾರ ಹುಡುಗನು ಖೊಕ್ ಎಂದು ನಕ್ಕನು. ಚೆನ್ನಯ್ಯ ನವರು ಸಿಟ್ಟಿನಿಂದ ಅತ್ತಕಡೆಗೆ ತಿರುಗಿ ನೋಡಿದರು. " ಯಾಕಲೇ ಆಚಾರಿ ? ನಗೋದು ? "

" ನಾನೂ ಒಂದು ಕವಿತಾ ಮಾಡೇನರಿ, ಮಾಸ್ತರ, " ಆಚಾರ ಹುಡುಗನು ಬೆಚ್ಚಿ ಬಿದ್ದು ಹೇಳಿದನು.

" ಹೇಳು ನೋಡೂನು? "

" ಬೆಕ್ಕು ಮಿವ್ ಮಿವ್ಹೆಂದು ನಾಯಿ ಗುರ್ ಗುರ್ರೆಂದು... "

ಚೆನ್ನಯ್ಯನವರು ರೇಗಿಗೆದ್ದರು. " ಥೂ! ಸೋ........ ಮಗನ? ಬಾಯಿ ಮುಚ್ಚು! ಏ! ಗುರ್ಯಾ! ಅವನ ಡೊಗ್ಗಿಸಿ ಹತ್ತಲಿ ಮ್ಯಾಕ! ಕವಿತೆ ಬರಿತಾನ ಮಗಾ, ಕವಿತೇನ! "

ಗುರಣ್ಣನಯು ಹಾಗೆಮಾಡಿದನು.

ಅಷ್ಟರಲ್ಲಿ ಕುರ್ಚಿ ನಿಂತಲ್ಲಿಯೇ ಕೇಶವನು ನಗಲು ಪ್ರಾರಂಭಿಸಿದನು. ಮೊದಲೇ ಚೆನ್ನಯ್ಯನವರು ಸಿಟ್ಟಿಗೆದ್ದಿದ್ದರು. ಇನ್ನು ಹೆಚ್ಚು ಹೊತ್ತು ಅವರು ಅಹಿಂಸಾವ್ರತವನ್ನು ಆಚರಿಸುವದು ಶಕ್ಯವಿರಲಿಲ್ಲ. " ಯಾಕಲೇ ಕೇಶ್ಯಾ " ಎಂದು ಕಣ್ಣು ಕೆಂಪಗಾಗಿಸಿ ಪ್ರಶ್ನೆಮಾಡಿದರು.

ತುಂಟ ಕೇಶವನು ಸುಮ್ಮನಿರಲಿಲ್ಲ. ಅವನು ಇಂಥ ಎಷ್ಟೋ ಮಾಸ್ತರರನ್ನು ಮೂಗು ತಿಕ್ಕಿಸಿದ್ದನು. " ಕಾಗಿ ಯಾಕ ಕಾಕಾ ಅಂತಾವರಿ ಮಾಸ್ತರ? "

ಎಲ್ಲ ಹುಡುಗರೂ ಖೊಳ್ಳನೆ ನಕ್ಕರು.

ಚೆನ್ನಯ್ಯನವರು ವಿಪರೀತವಾಗಿ ಸಂತಪ್ತರಾದರು. ಅವರು ಕೇಶವನನ್ನು ಚೆನ್ನಾಗಿ ಥಳಿಸಿದರು. ಕೈಕಾಲುಗಳ ಮೇಲೆ ಬಾಸಾಳು ಮೂಡಿದ್ದಲ್ಲದೆ ಅವನ ಹಣೆಯಿಂದ ರಕ್ತವು ಸುರಿಯತೊಡಗಿತು. ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಡಬಾರದಿತ್ತೆಂದು ಅಷ್ಟರಲ್ಲಿ ಚೆನ್ನಯ್ಯನವರಿಗೆ ಎನಿಸಿರಬೇಕು.

ತಾನು ಬಯಸಿದ್ದೆ ಕೇಶವನಿಗೆ ದೊರೆತಂತಾಯಿತು. ಅವನ ರಂಬಾಟಕ್ಕೆ ಸಾಲೆಗೆ ಸಾಲೆಯೇ ನೆರೆದಿತು. " ಈ ಮಾಸ್ತರನ್ನ ಎಲ್ಲಿ ಬಿಡತೇನಿ? ಖೂನಿ ಖಟ್ಲೆ ಹಾಕಸತೇನಿ ಇವರ ಮ್ಯಾಲ " ಎಂದು ಮನೆಯವರೆಗೆ ದೊಡ್ಡ ದನಿಯಿಂದ ಅಳುತ್ತ ನಡೆದನು.ಚೆನ್ನಯ್ಯನವರು ದೇಸಾಯರ ಹುಡುಗನನ್ನು ಮಿಂತಿಮೀರಿ ಹೊಡೆದರೆಂದು ಊರೆಲ್ಲ ಡಂಗುರ ಹೊಡೆಯಿತು. ಜಾನಕೀ-ಬಾಯರ ಕೋಪಾಗ್ನಿಗೆ ಯಾವ ಇಂಧನವೂ ಸಾಕಾಗಲಿಲ್ಲ. ಚೆನ್ನಯ್ಯನವರ ಮೈಗೆ ಅದು ತಾಕುವದು ಶಕ್ಯವಿದ್ದರೆ ಅವರು ಇಷ್ಟರಲ್ಲಿ ನಾಲ್ಕೆಂಟು ಸಲ ಉರಿದು ಹೋಗುತ್ತಿದ್ದರು. ರಂಗಾಸಾನಿಯ ಮನೆಯ ವರೆಗೂ ಸುದ್ದಿ ಮುಟ್ಟಿ ದೇಸಾಯರು ಅಲ್ಲಿಂದ ಮನೆಗೆ ಬಂದರು. ಮಾಡಿಕೊಂಡ ಹೆಂಡತಿ,

ಪಡೆದ ಮಕ್ಕಳ ಅರಿವಿಲ್ಲದ ಗಂಡನು ನನ್ನ ಪಾಲಿಗೆ ಗುಂಡುಕಲ್ಲೆಂದು ಜಾನಕಿಬಾಯಿಯರು ಹಾಡಿಕೊಂಡು ಅತ್ತರು. ದೇಸಾಯರು ಇದನ್ನೆಲ್ಲ ಕೇಳಿ ಸುಮ್ಮನಿದ್ದರು. ಸಾಲೆಗೆ ಹೋಗಿ ವಿಚಾರಿಸಲು ಚೆನ್ನಯ್ಯನವರು ನಡೆದ ಸಂಗತಿಯನ್ನೆಲ್ಲ ವಿವರಿಸಿ ಹೇಳಿ ತಾವು ಮಿತಿಮೀರಿ ಸಿಟ್ಟಾಗಿದ್ದಕ್ಕೆ ಅಸಮಾಧಾನವನ್ನು ವ್ಯಕ್ತಪಡಿಸಿದರು. ಮುಂದೇನು? ದೇಸಾಯರು ತಿರುಗಿ ಬಂದರು. ಚೆನ್ನಯ್ಯನವರು ಹೇಳಿದ್ದು ಅವರಿಗೆ ಸ್ವಲ್ಪವಾದರೂ ಸಮಂಜಸವಾಗಿ ತೋರಿತು. ಕೇಶವನ ಗಾಯಗಳು ಮಾಯುವದಕ್ಕೆ ಕೆಲವು ದಿವಸಗಳು ಹಿಡಿದವು. ಮುಂದೆ ಕೆಲವು ದಿವಸಗಳಲ್ಲಿ ಏನು ಕಾರಣದಿಂದಲೋ ಚೆನ್ನಯ್ಯನವರಿಗೆ ವರ್ಗವಾಯಿತು. ಊರ ಜನರೆಲ್ಲ ನಡೆದ ಸಂಗತಿಯನ್ನು ನಿಧಾನವಾಗಿ ಮರೆತು ಬಿಟ್ಟರು.

ಆದರೆ ಇದರಿಂದ ಒಂದು ವಿಷಯವು ಮಾತ್ರ ನಿರ್ಧಾರವಾಯಿತು. ಕೇಶವನು ಸಾಲೆಗೆ ಶರಣುಹೊಡದು ಮನೆಯಲ್ಲಿಯೇ ಕುಳಿತನು. ಒಂದು ದಿನ ಅಡಿಗೆಮನೆಯಲ್ಲಿ ಅವಲಕ್ಕಿಯನ್ನು ಮೆಲ್ಲುತ್ತಿದ್ದ ಕೇಶವನನ್ನು ರಾಯರು ಮಾತನಾಡಿಸಿದರು.

" ಇನ್ನೇನು ಸಾಲೆಗೆ ಹೋಗವದಿಲ್ಲೇನಪಾ, ಕೇಶವಾ! "

" ಆಂ? ಸಾಲಿ? ಎಲ್ಲಿ ಸಾಲಿ? " ಹಾವನ್ನು ಮೆಟ್ಟಿದವರಂತೆ ಕೇಶವನು ಬೆಚ್ಚಿ ಕೇಳಿದನು.

"ಅಲ್ಲೋ! ಮುಂದ ಸಾಲಿ ಕಲಿತರ ನಾಕು ಮಂದ್ಯಾಗ ಮರ್ಯಾದಿ. ಇಲ್ಲದಿದ್ದರ ನಿನ್ನ ಯಾರ ಕೇಳತಾರ? "

ಕೇಶವನು ನಕ್ಕುಬಿಟ್ಟನು. ಮತ್ತೆ ಮಸರು-ಅವಲಕ್ಕಿಯನ್ನು ಬಾಯಲ್ಲಿ ಸುರಿಸಿ, " ಇರ್ಲಿ ಬಿಡಪಾ! ಸಾಲಿ ಕಲಿತು ಯಾರು ಮುಂದಾಗ್ಯಾರ? ದುಡ್ಡಿದ್ದವರೂ ಸಾಲಿ ಕಲಿಬೇಕೇನು? ಹೊಟ್ಟೆಗಿಲ್ಲದವರು ಕಲಿತು ಹೊಟ್ಟೆ ತುಂಬಿಕೋಳ್ಳಿ, ನನಗೇನು ಕಡಿಮ್ಯಾಗೇದ? "

ಅಷ್ಟರಲ್ಲಿ ಹಿತ್ತಲದಲ್ಲಿ ಹೋಗಿದ್ದ ಜಾನಕಿಬಾಯಿಯವರು ದುರುದುರನೆ ನೋಡುತ್ತ ಬಂದರು. ರಾಯರು ಅಡಿಗೆಮನೆಯಲ್ಲಿ ಕಾಲಿಟ್ಟದ್ದನ್ನು ನೋಡಿ ಅವರಿಗೆ ಆಶ್ಚರ್ಯವಾಗಿತ್ತು. ಆದರೆ ಕೇಶವನೊಡನೆ ಅವರಾಡಿದ ಮಾತುಗಳನ್ನು ಕೇಳಿ ಅವರಿಗೆ ಸಮಾಧಾನವಾಗಿತ್ತು. ತಮ್ಮ

ವಿಶ್ವರೂಪದರ್ಶನವನ್ನು ಮಾಡಿಸಲು ಇದೊಂದು ಸುಸಮಯವೆಂದು ತಿಳಿದುಕೊಂಡರು.

"ಕಲಿ ! ಕಲಿ ! ಕಲಿ ! ಹತ್ತ್ಯಾರ ಹುಡುಗನ ಮುತ್ತ ! ನೀವು ಕಲಿತು ಮುಣ್ಣ್ಯಾ ಹೊಯ್ದದ್ದು ಅಷ್ಟರಾಗ ಅದ ನೀವು ಕಲಿತು ನನ್ನೇನು ಪಲ್ಲಕ್ಕ್ಯಾಗ ಕೂಡಿಸಿದ್ದು ? ಹಿರೇರು ಮಾಡಿಟ್ಟ ಕೂಳಿನ ಮ್ಯಾಲ ಇಪತ್ತಿಗಾದರು ಇದ್ದೀರಿ. ಮಾವಂದಿರು ಮಾಡಿಟ್ಟ ದುಡ್ಡೆಲ್ಲ ಹಾಳುಮಾಡಿ ಹತ್ತೀಬತ್ತಿದಿರಿ ! ಈಗ ಹೌದಲ್ಲ ಕೇಶ್ಯಾನ ಕೈಯಾಗ ಪರಟಿಕೊಟ್ಟು ಕಳಸೋದು ? ಅವನ್ನ ಊನ–ಗೀನ ಮಾಡಿ ಖೂನೀನು ಮಾಡಿಸಬೇಕಂತೀರೇನು ?

ರಾಯರು ಮೋರೆ ಕೆಳಗೆ ಹಾಕಿ ಹೊರಗೆ ಹೋದವರು ತಿರುಗಿ ಕೇಶವನ ಶಿಕ್ಷಣದ ಮಾತೆತ್ತಲಿಲ್ಲ. ಕೇಶವನು ದಿನದಿನಕ್ಕೆ ಪುಟ್ಟ ದೇಸಾಯಿಯಾದನು. ಒಂದು ಆಲಸಿಗರ ಕೂಟವನ್ನು ನಿರ್ಮಿಸಿ ಅದಕ್ಕೆ ಮೇಲಾಧಿಕಾರಿಯಾದನು. ತನ್ನ ಸಂಗಡಿಗರಿಗೆ ಚಹ ಕುಡಿಸುವದು, ಸಿಗರೇಟು ಸೇದುವದು, ಹುಡಿಗೆಯರ ಬೆನ್ನುಹತ್ತಿ ಅಲೆದಾಡುವದು,– ಇವು ಅವನ ನಿತ್ಯದ ವ್ಯವಸಾಯಗಳಾದವು. ತಂದೆ ಮಾಡಿಟ್ಟ ಸಾಲವನ್ನೆಲ್ಲ ತೀರಿಸಿದರೂ ನನಗೆ ವರ್ಷಕ್ಕೆ ಸಾವಿರ ರೂಪಾಯಿ ಉತ್ಪನ್ನವಾದರೂ ಉಳಿಯುವದಲ್ಲ ! ಎಂದು ಆತನಿಗೆ ಬಲವಾದ ಹೆಮ್ಮೆ ! ತಾರುಣ್ಯವು ಅವನನ್ನು ತುಂಬಿ ತುಳಿಕಿಸಹತ್ತಿದ ಹಾಗೆ ಅವನ ಹೆಮ್ಮೆಯೂ ಬೆಳೆಯಿತು.

---

## ಪ್ರಕರಣ ೬

# ಕುಸುಮಾ

ಕೇಶವನ ತಂಗಿ ಕುಸುಮಾನ ಬೆಳವಣಿಗೆಯು ಇದಕ್ಕಿಂತ ತೀರ ಭಿನ್ನವಾಗಿತ್ತು. ಕುಸುಮೆಯು ಒಬ್ಬ ಮುದ್ದಾದ ಹುಡಿಗೆ. ಆಕೆಯಲ್ಲಿ ತಾಯಿಯ ವಿಚಿತ್ರ ಹೆಣ್ಣುತನದ ಸುಳಿದಾಟವಿಲ್ಲ, ಕೇಶವನ ಮೈಗಳ್ಳತನವಿಲ್ಲ, ತಂದೆಗಿದ್ದ ಪಾತರಗಿತ್ತಿಯಂತಹ ಸ್ವಭಾವವಿಲ್ಲ. ಅವಳದು ಅತಿ ಸರಳವಾದ ನಡತೆ. ನಗೆ ಬಂದರೆ ನಕ್ಕುಬಿಡುವಳು. ಅಳುವು ಬಂದರೆ ತಟತಟ ಕಂಬನಿಗಳನ್ನು ಮಾತ್ರ ಸುರಿಸುವಳು. ದುಷ್ಟಬುದ್ಧಿಯೆಂದರೆ ಅವಳಿಗೆ ತಿಳಿಯಲಾರದ ಬುದ್ಧಿ. ಒಳ್ಳೆತನವು ಅವಳ ನೆರಳಿದ್ದಂತೆ. ಇದೆಲ್ಲ ಗೋವಿಂದರಾಯರ ಮೂಲಸ್ವಭಾವವಾಗಿರಬೇಕು. ಇಲ್ಲವೆ ಒಂದು ಕುಟುಂಬವು ಕವಲೊಡೆಯುವಾಗ, ಪುನರುಜ್ಜೀವಿತವಾಗುವಾಗ, ಜನಿಸುವ ಹೊಸ ಮಾದರಿಗಳಲ್ಲಿ ಇದೊಂದು ಆಗಿರಬೇಕು. ಕೇಶವ-ಕುಸುಮೆಯರು ತಮ್ಮ ಮನೆತನದ ಇತಿಹಾಸದ ಎರಡು ತುದಿಗಳಂತಿದ್ದರು.

ಒಮ್ಮೆ ಜಾನಕಿಬಾಯಿಯರು ಕುಸುಮೆಯನ್ನು ಕರೆದುಕೊಂಡು ತವರೂರಿಗೆ ಹೋಗಿದ್ದರೆಂದು ಹಿಂದೆ ಹೇಳಿದೆಯಷ್ಟೆ? ಅವರು ತಿರುಗಿ ಬಂದಾಗ ಸಂಭವಿಸಿದ ಸಂಗತಿಗಳನ್ನೂ ಬಣ್ಣಿಸಿದೆ. ಅದೇ ದಿವಸ ಕುಸುಮೆಯು ತಾಯಿಯೊಡನೆ ಮರಳಿ ಬಂದಿದ್ದಳು. ಬಂದವಳೇ ತಾನು ಹಿತ್ತಲದಲ್ಲಿ ಹಚ್ಚಿ ಬೆಳೆಸಿದ ಮಲ್ಲಿಗೆ ಬಳ್ಳಿಯು ಎಷ್ಟು ಹಬ್ಬಿದೆಯೆಂದು ನೋಡುವದರಲ್ಲಿ ಮಗ್ನಳಾಗಿ ಹೋಗಿದ್ದಾಳೆ. ಕೇಶವನು ಕೆಲವು ನಿಮಿಷಗಳ ವರೆಗೆ ಅವಳ ಹಿಂದೆ ನಿಂತುಕೊಂಡು ಆಮೇಲೆ ಗಟ್ಟಿಯಾಗಿ ನಕ್ಕನು. "ಯಾಕಲಾ! ಕೇಶಣ್ಣಾ! ಹಿಂದಿನಿಂದ ನಗತೀಯೇನು?" ಎಂದು ನಸುಕೋಪ ತಾಳಿ ಕುಸುಮೆಯು ಕೇಳಿದಳು. ಕೇಶಣ್ಣನು ಮತ್ತಿಷ್ಟು ನಕ್ಕನು "ಅಹಾ! ಏನು ಪ್ರೀತಿ! ನೀನು ಹೋದಾಗ ಬಳ್ಳಿಯನ್ನು ಕಿತ್ತು ಬಿಸುಟಬೇಕೆಂದು ಮಾಡಿದ್ದೆ. ಅದರ ದೈವ. ಉಳಿದುಕೊಂಡಿತು."

ಅಷ್ಟರಲ್ಲಿ ಆಚಾರ್ಯರ ಪದ್ಮಾವತಿಯು ಬಂದಳು. ಕುಸುಮೆಯನ್ನು ಕಂಡರೆ ಅವಳಿಗೆ ಹಿಡಿಸಲಾರದಷ್ಟು ಆನಂದ. ಅವಳ ಮುಗ್ಧ ಜೀವಕ್ಕೆ ಕುಸುಮೆಯ ಸೌಂದರ್ಯವೂ ಪ್ರೌಢಿಮೆಯೂ ಅಧಿಕಾರದ ವಾಣಿಯೂ ಅತ್ಯಾಶ್ಚರ್ಯಕರವಾಗಿ ತೋರಿದ್ದುವು. ತನ್ನ ತಮ್ಮನೊಬ್ಬನೆ ಪ್ರತಿಭಾಶಾಲಿಯೆಂದು ಅವಳು ತಿಳಿದಿದ್ದಳು. ಆದರೆ ಕುಸುಮೆಯಲ್ಲಿಯೂ ದೇವರು ಆ ತೇಜವನ್ನು ಬಚ್ಚಿಟ್ಟಿರುವನೆಂದು ಅವಳ ಭಾವನೆ. 'ಬಂದೆಯಾ ಕುಸುಮಾ !' ಎಂದು ಪ್ರೇಮಪೂರಿತ ದೃಷ್ಟಿಯಿಂದ ಪದ್ಮಾವತಿಯು ಹೋಗಿ ಕುಸುಮೆಯನ್ನು ಮುತ್ತಿಟ್ಟಳು. ಪದ್ಮಾವತಿಯಾಗದೆ ಇನ್ನೊರ್ವ ಹುಡಿಗೆಯಾಗಿದ್ದರೆ ಕೇಶವನು ಅವಳನ್ನು ಕೆಣಕದೆ ಬಿಡುತ್ತಿದ್ದಿಲ್ಲ. ಆದರೆ ಪದ್ಮಾವತಿಯೆಂದರೆ ಅವನಿಗೆ ತುಸು ಭಯ. ಬೇರೊಂದು ಕಡೆಗೆ ಹೊರಟು ಹೋದನು.

'ಬಂದೆಯಾ ಕುಸುಮಾ !'

ಮುಗುಳ್ನಗೆ ನಕ್ಕು ಕುಸುಮೆಯು ಮೋರೆಯನ್ನು ಕೆಳಗೆ ಹಾಕಿದಳು. ತುಸು ಹೊತ್ತಿನ ಮೇಲೆ: "ಅಕ್ಕಾ ! ನನ್ನ ಬಳ್ಳಿ ಹೇಗೆ ಹಬ್ಬಿದೆ ನೋಡು.ಮೂರು ನಾಲ್ಕು ಮೊಗ್ಗೆಗಳು ಬಿಟ್ಟಿವೆ. ಹೂವಾದಾಗ ನಿನಗೂ ಕೊಡಲೇ, ಅಕ್ಕ ?" ಎಂದು ಉತ್ಸಾಹದಿಂದ ಕೇಳಿದಳು.

'ನನಗಿಂತ ಮೊದಲು ನಿನ್ನ ಗೊಂಬೆಗೆ ಕೊಡು' ಎಂದು ಪದ್ಮಾವತಿಯು ನಗುತ್ತ ಹೇಳಿದಳು.

"ಗೊಂಬೆಗೂ ನಿನಗೂ ಕೊಡಿಯೇ. ನಾಲ್ಕು ಹೂ ಅರಳುವವು ನಮ್ಮ ಬಳ್ಳಿಯಲ್ಲಿ" ಎಂದು ಕುಸುಮೆಯು ತೊದಲು ನುಡಿದಳು.

"ಅಲ್ಲ ! ಮತ್ತ ನಿನ್ನ ಹೆಸರು ತೆಗೆದು ಬಿಟ್ಟಾರಂತಲ್ಲ ಸಾಲ್ಯಾಗ ?" ಪದ್ಮಾವತಿಯು ಕೇಳಿದಳು.

"ತಗದರ ಮತ್ತೆ ಹಚ್ಚಸತೇನಿ. ನಾನೂ ಸಾಲೆಗೆ ಹೋಗತೇನಿ" ಎಂದು ಕುಸುಮೆಯು ಗಾಂಭೀರ್ಯದಿಂದ ಹೇಳಿದಳು.

'ಸರಿರಿ ! ಸರಿರಿ ! ಮುಟ್ಟಿಗಿಟ್ಟೀರಿ !' ದೊಡ್ಡ ದನಿಯೊಂದು ಒಳಗಿನಿಂದ ಕೇಳಬಂದಿತು. ಪದ್ಮಾವತಿ ಕುಸುಮೆಯರು ಗಾಬರಿಯಾಗಿ ಹಿಂದೆ

ಸರಿದರು. ಕೂಡಲೆ ಅರ್ಧಮರ್ದ ದಾಬಳಿಯನ್ನು ಹಚ್ಚಿಕೊಂಡಿದ್ದ ಜಾನಕಿ ಬಾಯಿಯವರ ಮೂರ್ತಿಯು ಕಣ್ಣೆದುರಿಗೆ ಬಂದಿತು. ಎರಡೂ ಕೈಗಳಿಂದ ಅವರು ನೀರಿನ ಪಾತೇಲಿಯೊಂದನ್ನೆತ್ತಿ ಹಿತ್ತಲದಲ್ಲಿ ಸುರುವಲು ಸಾಗಿದ್ದರು.

"ತುಸು ಹಿಡಿಯಲಾ ಜಾನಕಿಬಾಯರ, ಭಾರವಾಗಿರಬಹುದು" ಎಂದು ಪದ್ಮಾವತಿಯು ವಿನಯದಿಂದ ಕೇಳಿದಳು.

"ಛೀ ಹುಚ್ಚುಮುಂಡೆ! ಹೆಸರಿಗೆ ಆಚಾರ ಮನೆ. ಎಲ್ಲಾ ಅನಾಚಾರ. ಸೆರೆ ಹಾದ ನಿಮ್ಮಪ್ಪ ನಾಲ್ಕು ಲಗ್ನ ಮಾಡಿಕೊಂಡ. ದುಡ್ಡಿದ್ದವರಿಗೇನು. ಎಲ್ಲ ಚಂದ. ಇನ್ನೊಂದೆರಡು ಮಾಡಿಕೋಳಿ. ಅಂದರ ಉಳಿತದ ಕುಲ."

ಪದ್ಮಾವತಿಯು ಸಿಡಿಲನ್ನು ಕರೆದು ಬಡಿಸಿಕೊಂಡಂತಾಯಿತು. ಮೋರೆಯನ್ನು ಸಣ್ಣಗೆ ಮಾಡಿ ಇನ್ನು ಹೊರಡುವದರಲ್ಲಿದ್ದಳು. ಅಷ್ಟರಲ್ಲಿ ಪಾತೇಲಿಯನ್ನು ತೆರವು ಮಾಡಿಕೊಂಡು ಜಾನಕಿಬಾಯಿಯವರು ಒಳಗೆ ಬಂದರು. "ಅಲ್ಲ, ಪದ್ದಿ, ರಮಾಬಾಯರು ಏನು ಮಾಡತಾರ?"

"ಅವ್ವ ಅನ್ನಕ್ಕಿಟ್ಟು ಸಾರು ಮಳ್ಳಸತಿದ್ದಳು. ಹೋಗತೀನಿ ನಾನು" ಎಂದು ಪದ್ಮಾವತಿಯು ಉದಾಸೀನಳಾಗಿ ನುಡಿದಳು.

"ಅಲ್ಲ ಬಾರS ಇಲ್ಲೆ. ನಿಮ್ಮವ್ವ ಸೀತಾಬಾಯಿ ಎಂಥಾ ಚಲೋ ಹೆಣ್ಣುಮಗಳು! ಆಕಿನ್ನ ಎರಡೂ ಕಣ್ಣಲೆ ನೋಡಿದರ ಸಾವಿತ್ರಿನ್ನ ನೋಡಿದ ಹಾಂಗಾಗತಿತ್ತು. ಅಂಥ ಮಾರಾಯಳ ಕೂಡ ನಿಮ್ಮಪ್ಪ ಹಗಲು ರಾತ್ರಿ ಬಡದಾಡತಿದ್ದ. ಈಗ ಈಕಿ ಎದುರಿಗೆ ನಾಯಿ ಹಂಗ ಆಗ್ಯಾನಿಲ್ಲೊ, ನಾಯಿ ಹಂಗ? ಒಂದು ಧರ್ಮ, ಒಂದು ವರ್ಮ, ಈ ಮರ್ಮಗೇಡಿಗೆ ಏನದ ಮಣ್ಣಾಗ? ಆ ಬುಚಡ, ಬೈತಲ, ಸೀರೆ, ಸೆರಗು,— ರಂಭೆ ಅಂತ ತಿಳಕೊಂಡಾಳ ನಮ್ಮವ್ವ! ಮರತು ಬಿಟ್ಟಳು ಕಾಣತದ ಆಚಾರು ಮೈಸೂರ ಕಡೆ ಹೋಗಿ ಕೊಂಡುಕೊಂಡು ಬಂದದ್ದು."

'ನಾ ಹೋಗಿ ಬರತೇನಿ. ಹೊತ್ತಾತು!' ಮೋರೆ ಕೆಳಗೆ ಹಾಕಿ ಪದ್ಮಾವತಿಯು ನಡೆದಳು.

"ಹೋಗಿ ಬಾರವ್ವ. ಈಗಿನ ಹೆಂಗಸರ ಕುಂಕುಮ ಸ್ಥಿರ ಇಲ್ಲ,

ಗಂಡಸರ ಮನಸು ಸಮಾ ಇಲ್ಲ. ಕಾಲಮಾನಾಸs ತಿರುಗ್ಯಾವ." ಜಾನಕಿ ಬಾಯಿಯವರು ತಮ್ಮ ರಾಜಧಾನಿಯಾದ ಅಡಿಗೆಮನೆಗೆ ನಡೆದರು.

ಈ ಸಂಭಾಷಣೆಯು—ವಿಶೇಷತಃ ಉಪನ್ಯಾಸವು— ನಡೆಯುವಾಗ ಕುಸುಮೆಯು ತಾಯಿಯ ಮೋರೆಯನ್ನು ಮಿಕಿ ಮಿಕಿ ನೋಡುತ್ತ ನಿಂತಿದ್ದಳು. ಪದ್ಮಾವತಿಯು ಹೋದ ಮೇಲೆ ಮೂಲೆಯಲ್ಲಿ ಬಿದ್ದ ಕುಪ್ಪಸವನ್ನು ತೋರಿಸಿ "ಅವ್ವಾ, ಇಲ್ಲ್ಯದ ನೋಡು ನಿನ್ನ ಕುಬಸಾ. ಬರೇ ಮೈಲೆ ಯಾಕ ತಿರುಗ್ಯಾಡತಿ. ತೊಟಕೋ ಇದನ" ಎಂದು ತರಲು ಹೋದಳು.

ಅಕಸ್ಮಿಕವಾಗಿ ಎಚ್ಚರಗೊಂಡವರಂತೆ ಜಾನಕಿಬಾಯಿಯವರು ಸೆರಗನ್ನು ಸರಿಪಡಿಸಿಕೊಂಡು ಕವಕ್ಕನೆ ಮಗಳ ಮೈಮೇಲೆ ಹೋಗಿ "ಏ ಹುಚ್ಚು ಬೋ............ಡಿ! ನನ್ನ ಬರೇ ಮೈ ತೊಗೊಂಡು ನೀ ಏನು ಮಾಡತಿದಿ! ಒಳ್ಳೊಳ್ಳೆ ಗಂಡಸರು ಪಡಸಾಲ್ಯಾಗ ಬಂದು ಕೂತಾಗ ನಾ ಈ ಧಾಬಳಿ ಬಿಟ್ಟಿಲ್ಲ. ಈಗಿನ ಹುಡುಗರ ಬುದ್ಧಿನ ವಿಕಾರ ಹೊಂದೇದ" ಎಂದು ಒದರಾಡುತ್ತ ಒಳಕ್ಕೆ ಹೋದರು.

ಮುಂದೆ ಪ್ರತಿನಿತ್ಯ ಕುಸುಮೆಯು ಸಾಲೆಗೆ ಹೋಗತೊಡಗಿ ಕನ್ನಡ ನಾಲ್ಕು ವರ್ಗಗಳನ್ನು ವಿಶೇಷ ತರಗತಿಯಲ್ಲಿ ಉತ್ತೀರ್ಣಳಾದಳು. ಇನ್ನು ಇಂಗ್ಲಿಷ ಕನ್ಯಾಶಾಲೆಗೆ ಹೋದರೆ ಅವಳಿಗೆ ವಿದ್ಯಾರ್ಥಿವೇತನವು ದೊರೆಯುವ ಸಂಭವವೂ ಇದ್ದಿತು. ಆದರೆ ಹೆಣ್ಣು ಹುಡುಗರಿಗೆ ಕಲಿಸುವದೆಂದರೆ ಜಾನಕಿಬಾಯರಿಗೆ ಸರಿಬರುತ್ತಿರಲಿಲ್ಲ.

"ಬಿಡ್ರೆ ನಮ್ಮವ್ವಾ! ಕಲಿತರೇನು? ಮುಸುರಿ ತಿಕ್ಕೋದು ಬೇರೆ ಬಿಟ್ಟದ್ದಲ್ಲ" ಎಂದು ಅವರು ಮೂಗುಮುರಿಯುತ್ತಿದ್ದರು. ಕುಸುಮೆಗೆ ಈ ವೇದಾಂತವನ್ನು ಕೇಳಿ ಕೇಳಿ ಬೇಸರಪಟ್ಟಿತ್ತು.

"ಅಲ್ಲ, ಅವ್ವಾ! ಒಂದಿಲ್ಲಾ ಒಂದು ದಿವಸ ಸಾಯೋದು ಅಂತ ಇವತ್ತ ಇರೋದು ಬಿಡತೀಯೇನು? ಮುಸುರಿ ತಪ್ಪಿದ್ದಲ್ಲಾ ಅಂತ ಕಸೂತಿ ಸೀರಿ ಉಡೋದು ಬಿಡತಿಯೇನು? ಏನು ನಾಗಮುರಿಗೆ ಇಡೋದು ಬಿಡತೀಯೊ?"

ಜಾನಕಿಬಾಯಿಯವರಿಗೆ ಬ್ರಹ್ಮೇತಿ ಸಿಟ್ಟು ಬಂದಿತು. "ನನಗ! ಸಾಯುಂತಿಯಾ! ಅಯ್ಯ! ನಿನ ಹೆಣಾ ಎತ್ತಲಿ! ತಿರುಗಿ ವಾದಸತಿಯಾ!" ಎಂದು ಅವರು ಕುಸುಮೆಯನ್ನು ಹೊಡೆದು ಹೊಡೆದು ಹಣ್ಣುಮಾಡಿದರು. ರಾತ್ರಿ ರಾಯರು ಬರುವ ವರೆಗೆ ಕುಸುಮೆಯು ಅಳುತ್ತ ಕುಳಿತಿದ್ದಳು. ರಾಯರು ಬಂದು ವಿಚಾರಿಸಿದರು.ಅವರ ಮನಸ್ಸಿಗೆ ಬಹಳ ವ್ಯಥೆಯಾಯಿತು. ಕುಸುಮೆಯ ಸೂಕ್ಷ್ಮವಾದ ಅಂತಃಕರಣವನ್ನೂ ಉದಾತ್ತವಾದ ಸ್ವಭಾವ ವನ್ನೂ ರಾಯರೊಬ್ಬರು ಮಾತ್ರ ಅರಿತಿದ್ದರು. "ಕುಸುಮಾ! ನೀ ಸಾಲೆಗೆ ಹೋಗುವಂತಿ. ನಿನ್ನ ಮನಸ್ಸಿಗೆ ಬರೋತನಕ ಇಂಗ್ಲಿಷು ಕಲಿವಂತಿ. ನಾ ನಿನ್ನ ಸಾಲೆಗೆ ಕಳಸತೇನಿ" ಎಂದು ಅಭಿವಚನವನ್ನಿತ್ತರು. ಕುಸು ಮೆಯು ಸುಮ್ಮನಾದಳು. ರಾಯರ ವಚನದ ಬೆಲೆಯು ಅವಳಿಗೆ ಗೊತ್ತಿತ್ತು. ದಿನಬೆಳಗಾದರೆ ಹರಿಹಾಯುವ ಜಾನಕಿಬಾಯಿಯವರಿಗೆ ಕೂಡ, ಬಹುಶಃ ಸುಮ್ಮನಿರುವ ರಾಯರು ಬಂದು ಮಾತನಾಡಿದರೆ, ಮಾರ್ನುಡಿಯುವ ಧೈರ್ಯವಿರಲಿಲ್ಲ. ಆದರೆ ಅಂದಿನಿಂದ ಜಾನಕಿಬಾಯಿಯವರು ಮಗಳನ್ನು ಬೇರೆ ದೃಷ್ಟಿಯಿಂದ ಕಾಣತೊಡಗಿದರು. ಅವಳನ್ನು ಕಂಡರೆ ಅವರಿಗೆ ಸೇರಿಕೆ ಬರುತ್ತಿರಲಿಲ್ಲ. ಕೇಶವನ ಮೇಲೆ ಅವರ ಮೋಹವು ಹೆಚ್ಚಿದ ಹಾಗೆ ಕುಸುಮೆಯ ಮೇಲಿನ ಅವರ ಪ್ರೀತಿಯು ಕಡಮೆಯಾಗಹತ್ತಿತು.

ಕುಸುಮೆಯು ಪದ್ಮಾವತಿಯನ್ನು ಅಕ್ಕನಂತೆ ತಿಳಿದುಕೊಂಡು ವರ್ತಿ ಸುತ್ತಿದ್ದಳು. ಅವರಿರ್ವರ ಒಲವುಗಳು ಒಂದೇ ರೀತಿಯಾಗಿ ಹರಿಯುತ್ತಿ ದ್ದವು. ಪದ್ಮಾವತಿಗಾದರೂ ಕುಸುಮೆಯ ಮೇಲೆ ಬಲು ಜೀವವಿತ್ತು. ಅಕ್ಕನ ಒಡನಾಡಿಯಾದ ಕುಸುಮೆಯನ್ನು ಕಂಡರೆ ಅಂತಃಕರಣವು ಉಕ್ಕಿ ಬರುತ್ತಿತ್ತು. ಕುಸುಮೆಯು ಇಂಗ್ಲಿಷು ಕಲಿಯುವದಾದರೆ ತಾನು ಅವ ಳಿಗೆ ಮನೆಯಲ್ಲಿ ಹೇಳಿಕೊಡುವೆನೆಂದು ಅವನು ವಚನ ಕೊಟ್ಟಿದ್ದನು.ತಾನು ಏನನ್ನು ತಿಂದರೂ ಇವರನ್ನು ಬಿಟ್ಟು ಕುಸುಮೆಯು ತಿನ್ನುತ್ತಿರಲಿಲ್ಲ. ಅವರು ತಮ್ಮ ಈ ಸ್ನೇಹವೆಲ್ಲ ಹಿರಿಯರಿಗೆ ಮಾತ್ರ ತಿಳಿಯದ ಹಾಗೆ ಏರ್ಪಾಡು ಮಾಡುತ್ತಿದ್ದರು.

ಒಂದು ದಿವಸ ಸಂಜೆಗೆ ನರಹರಿಯು ಸಾಲೆ ಬಿಟ್ಟಮೇಲೆ ಶೀನೂನ ಸಂಗಡ ತಿರುಗಿ ಬರುತ್ತಿದ್ದ. ಇರ್ವರು ಈಗ ಇಂಗ್ಲಿಷ ನಾಲ್ಕನೆ ಇಯತ್ತೆ

ಯಲ್ಲಿ ಓದುತ್ತಿದ್ದರು. ನರಹರಿ ಒಂದನೆಯ ನಂಬರು, ಎರಡನೆಯವನೆ ಶೀನು. ಆದರೆ ಅದರಲ್ಲಿ ಯಾವ ಬಗೆಯ ಅಸೂಯೆಯೂ ಇರಲಿಲ್ಲ. ಜೀವದ ಗೆಳೆಯರಾಗಿದ್ದರು. ತಿಪ್ಪನು ಅವರನ್ನು ಸಾವಕಾಶವಾಗಿ ಹಿಂಬಾಲಿಸಿದ್ದನು. ಆತನೂ ಇದೇ ಇಂಗ್ಲಿಷ ಒಂದನೆ ಇಯತ್ತೆಯಲ್ಲಿ ಕಲಿಯುತ್ತಿದ್ದನು.

ಇಂಗ್ಲಿಷು ಕಲಿಯಲಿಕ್ಕೆ ಪ್ರಾರಂಭಿಸಿದ್ದ ಕುಸುಮೆಯು ಅದೇ ಹಾದಿಯಿಂದ ತಿರುಗಿ ಬರುತ್ತಿದ್ದಳು. ಸಾಲೆಗೆ ಹೋಗಹತ್ತಿ ಕೆಲವು ತಿಂಗಳಾಗಿದ್ದವು. ಆಕೆಗೆ ಎಲ್ಲವೂ ಹೊಸತು. ಒಂದು ಬಾಳಿನ ಹೊಸತಾದ ಮೆಟ್ಟಿಲವನ್ನೇರಿದಂತೆ ಅವಳಿಗೆನಿಸಿತ್ತು. ನರಹರಿಯನ್ನು ನೋಡಿದ ಕೂಡಲೆ ತನ್ನ ಗೆಳತಿಯರನ್ನು ಬಿಟ್ಟು ಬಂದು ಅಂದು ತಾನು ಕಲಿತ ಪಾಠವನ್ನೂ ಶಾಲೆಯಲ್ಲಿ ಮಾಸ್ತರರು ಹೇಳಿದುದನ್ನೂ ವರ್ಣಿಸತೊಡಗಿದಳು. ಹಿಂದಿನಿಂದ ಬರುತ್ತಿದ್ದ ತಿಪ್ಪನ ಚೇಷ್ಟೆಗೆ ಪ್ರಾರಂಭವಾಯಿತು. “ ದೇಖೋ ! ಬೊಂಬಾಯಕಿ ರಾಜಾರಾಣಿ ! ದೇಖೋ ! ” ಎಂದು ಹಾಡಿ ಅವನು ಗಟ್ಟಿಯಾಗಿ ನಗಲಾರಂಭಿಸಿದನು. ನರಹರಿಗೆ ವಿಪರೀತವಾದ ಸಂತಾಪವಾಯಿತು. ತನ್ನ ಪುಸ್ತಕಗಳನ್ನು ಶೀನೂನ ಕೈಯಲ್ಲಿ ಕೊಟ್ಟು ತಿಪ್ಪನನ್ನು ಕಿವಿ ಹಿಡಿದೆಳೆದು ಕೆನ್ನೆಯ ಮೇಲೊಂದು ಬಲವಾಗಿ ಕೊಟ್ಟನು. ತಿಪ್ಪನ ರೋದನಕ್ಕೆ ಪ್ರಾರಂಭವಾಯಿತು. ಅಳುತ್ತ ಓಡುತ್ತ ಮನೆಗೆ ಬಂದು ನರಹರಿಯು ಹೊಡೆದದ್ದನ್ನು ಬಣ್ಣಿಸಿ ತಿಪ್ಪನು ರಮಾಬಾಯಿಯವರೆದುರಿಗೆ ದೂರು ಹೇಳಿದನು. ಅವರ ಆರ್ಭಟಕ್ಕೆ ತಡವೇ ಇಲ್ಲ. ನರಹರಿಯ ಹೆಸರಿನಿಂದ ಒಂದು ಸೂಕ್ತವನ್ನೇ ಸುರುವು ಮಾಡಿದರು. ಏನಾಗಿದೆಯೋ ತಿಳಿದುಕೊಳ್ಳಬೇಕೆಂದು ಪದ್ಮಾವತಿಯು ನರಹರಿಯ ದಾರಿಯನ್ನು ಕಾಯುತ್ತ ಬಾಗಿಲಲ್ಲಿಯೇ ನಿಂತು ಕೊಂಡಿದ್ದಳು. ಅದೇ ಮುಳುಗುತ್ತಿರುವ ಸೂರ್ಯನ ಹೊಂಬೆಳಕು ಅವಳ ಮುಖವನ್ನು ಮುದ್ದಾಗಿಸಿತ್ತು; ಸಹಜವಾಗಿ ಕಾಂತಿಮಯವಾದ ಅವಳ ಕಂಗಳಲ್ಲಿ ಒಂದು ವಿಲಕ್ಷಣ ಪ್ರಭೆಯನ್ನು ತಂದಿತ್ತು. ಈ ಸಮಯಲ್ಲಿ ಕೇಶವನು ತನ್ನ ಸಂಗಡಿಗರೊಂದಿಗೆ ತಿರುಗಾಡಲಿಕ್ಕೆಂದು ಹೊರಗೆ ಹೊರಡುವದರಲ್ಲಿದ್ದನು. ಆಗ ಅವನ ಗೆಳೆಯರಲ್ಲೊರ್ವನಾದ ಭೀಮು, ಪದ್ಮಾವತಿಯ ಕಡೆಗೆ ಬೆರಳು ಮಾಡಿ ತೋರಿಸಿದನು.

" ಕೇಶಣ್ಣಾ ! ಅಲ್ಲಿ ನೋಡು ! ಎಂಥ ಹುಡಿಗೆ ! ನಿನಗೆ ಇಂಥ ಕನ್ಯೆ ಇನ್ನೆಲ್ಲಿ ಸಿಗಬಹುದು ! "

ಕೇಶವನು ಒಂದು ಕ್ಷಣಹೊತ್ತು ದಿಟ್ಟಿಸಿ ನೋಡಿ ಮೌನವಾಗಿ ಮುಂದೆ ಸಾಗಿದನು.

---

## ಪ್ರಕರಣ ೫

## ಒಂದು ಪತ್ರ

ಪದ್ಮಾವತಿಯ ಹಾದಿಯನ್ನು ಕಾಯುತ್ತ ರಮಾಬಾಯಿಯವರು ಒಂದು ದಿನ ಅಡಿಗೆ ಮಾಡುತ್ತಿದ್ದರು. ಇನ್ನೂ ಬರಲಿಲ್ಲವಲ್ಲ ! ಎಂದು ಕಿಟಿಕಿಯೊಳಗಿಂದ ಹಣಿಕಿ ನೋಡುತ್ತಿದ್ದರು. ಕಡೆಗೊಮ್ಮೆ ಪದ್ಮಾವತಿಯು ಬಂದಳು.

" ಎಲ್ಲಿ ಹೋಗಿದ್ದೆ ?"

" ಕುಸುಮಾ ಊರಿಂದ ಬಂದಳು. ನೋಡಲಿಕ್ಕೆ ಹೋಗಿದ್ದೆ. "

" ದಿನಾ ಸ್ಟೇಶನ್ನಿಂದ ನೂರು ಮಂದಿ ಊರಿಗೆ ಬರತಾರೆ. ನೋಡಲಿಕ್ಕೆ ಹೋಗತೀಯೇನೆ ? "

" ಇಲ್ಲ "

" ಹಾಗಾದರೆ ಈಗ ಯಾಕ ಹೋಗಿದ್ದು ? "

" ಕುಸುಮಾ ಬಂದಿದ್ದಳು. "

" ಆ ರಾಕ್ಷಸಿ–ಮುದಿಗೂಬಿ ಮನೆಗೆ ಕಾಲಿಡಕೂಡದು ಅಂತ ನಿನಗ ಹೇಳಿಲ್ಲೇನೆ ? ನಿನಗ ಮಸ್ತಿ ಏನೆ ? ನಿನಗ ಸೆಡವೇನೆ ? ನಿನಗ ಸಿಸ್ತೇನೆ ? ಏನೆ ? "

" ಉಂ "

" ಬಿಕ್ಕ ಬ್ಯಾಡ, ಬಾಣಂತಿ. ಬಿಕ್ಕಬ್ಯಾಡ ನನ ಮಲತಾಯಿ. ಬಾ

ಇಲ್ಲಿ" ಪದ್ಮಾವತಿಯನ್ನು ಕಿವಿ ಹಿಡಿದೆಳೆದು ಅಂದು ರಮಾಬಾಯಿಯವರು ಅವಳನ್ನು ಮೈಯ್ಯತುಂಬ ಚಿವುಟಿದರು.

ಇಂಥ ಎಷ್ಟೋ ಪ್ರಸಂಗಗಳು ನಡೆಯುತ್ತಿದ್ದವು. ಪದ್ಮಾವತಿಗೆ ಈಗ ಹದಿಮೂರು ತುಂಬಿ ಹದಿನಾಲ್ಕರಲ್ಲಿ ಬಿದ್ದಿತ್ತು. ಬೆಳೆಗೆಯ ಹುಡಿಗೆ. ಬಹಳ ಎತ್ತರವಾಗಿ ಬೆಳೆದಿದ್ದಳು. ಅಗಲವಾದ ಕಣ್ಣುಗಳು, ಸರಳವಾದ ಮೂಗು. ದುಂಡನ್ನ ಮುಖ, ಮೋರೆಯ ಮೇಲೆ ಉಕ್ಕುತ್ತಿರುವ ಕಳೆ,— ಇವೆಲ್ಲ ನೋಡುವವರನ್ನು ಮೋಹಿಸಿಬಿಡುತ್ತಿದ್ದವು. ತನ್ನ ತಾಯಿಯ ಹಾಗೆ ಆಕೆಯ ವರ್ಣವು ನಸುಗೆಂಪು. ಈಗ ವಿಶೇಷವಾಗಿ ಪದ್ಮಾವತಿಯು ಹೊರಗೆ ಹೋಗುತ್ತಿರಲಿಲ್ಲ. ಮನೆಯಲ್ಲಿಯೇ ಕೆಲಸಮಾಡುತ್ತ ಕೂಡಿದಾಗ ಓದುತ್ತ ಕಾಲವನ್ನು ಕಳೆಯುತ್ತಿದ್ದಳು.

ಹೈಗ್ರೀವಾಚಾರ್ಯರು ಲಗ್ನವಿಲ್ಲದೆ ಹೀಗೆ ಹುಡಿಗೆಯನ್ನು ಬೆಳೆಯಗೊಡುವವರಲ್ಲ. ಲೋಕವಿರುದ್ಧವಾಗುವದಲ್ಲವೆ? ಧರ್ಮವಿರುದ್ಧವಾಗುವದಿಲ್ಲವೆ? ಆದರೆ ಹೆಂಡತಿಯ ಮಾತು ಕೇಳಿ ನಿರುಪಾಯರಾಗಿದ್ದರು. ರಮಾಬಾಯಿಯವರ ಮಗುವು ಇನ್ನೂ ಸಣ್ಣದಿತ್ತು. ಕೈ ಬಿಡುತ್ತಿರಲಿಲ್ಲ. **ವೆಂಕಮ್ಮನವರು ತೀವ್ರ ಹೋಗುವವರು.** ಪದ್ಮಾವತಿಯ ಲಗ್ನವಾದ ಮೇಲೆ ಅತ್ತೆಯ ಮನೆಯವರು ಕರೆದುಕೊಂಡು ಹೋದರೆ ರಮಾಬಾಯಿಯವರಿಗೆ ಮನೆಗೆಲಸ ನೀಗಬಹುದೆ? ಕೃಷ್ಣನಿಗೆ ಒಂದು ವರುಷವಾಗಲಿ. ಮೇಲಾಗಿ ಈ ದಿನದಲ್ಲಿ ೧೩ ವರ್ಷಗಳಾಗದೆ ಲಗ್ನವಾದ ಹುಡುಗೆಯರು ಎಷ್ಟು ಮಂದಿ? ರಮಾಬಾಯಿಯವರು ತಮ್ಮ ನೆನಪು ತಂದುಕೊಟ್ಟರು; "ನೀವು ನನ್ನ ಕೈ ಹಿಡಿದಾಗ ನನಗೆಷ್ಟು ವರ್ಷ ತಾನೆ ಅಂತ ತಿಳಿದೀರಿ! ಹದಿನಾಲ್ಕು ತುಂಬಿದ್ದವು!"

ಹೀಗಾಗಿ ಆಚಾರ್ಯರಿಗೆ ಲಗ್ನವನ್ನು ಮುಂದಕ್ಕೆ ಹಾಕದೆ ಗತಿಯಿರಲಿಲ್ಲ. ಸುಬ್ಬನಿಗೆ ಮಾತ್ರ ವರಾನ್ವೇಷಣೆಮಾಡಲಿಕ್ಕೆ ಹೇಳಿದ್ದರು. "ನಮ್ಮ ಹುಡಿಗೆಗೆ ಇನ್ನೂ ೧೧ ವರುಷ, ಈಗ ಲಗ್ನದ ವಿಚಾರ" ಎಂದು ಮಂದಿಗೆ ಹೇಳುತ್ತಿದ್ದರು. ಈ ವರ್ಷ ಲಗ್ನಮಾಡಿಬಿಡಬೇಕೆಂದು ಆಚಾರ್ಯರು ನಿಶ್ಚಯಿಸಿದ್ದರು.

ಇದೇ ಸುಮಾರಿನಲ್ಲಿ ಸ್ವಾಮಿಗಳ ದಿವ್ಯದರ್ಶನವಾಗುವಂತಹ ಅಲಭ್ಯ ಲಾಭವು ಮೊಗ್ಗಾವಿಯ ಜನರಿಗೆ ಸಂಭವಿಸಿತು. ಮೊಗ್ಗಾವಿಯ ಇತಿಹಾಸದಲ್ಲಿ ಇದೊಂದು ವಿಶೇಷವಾದ ಸಂಗತಿಯು ಜರುಗಿತೆನ್ನಬೇಕು. ಅಲ್ಲಿಯ ಭಕ್ತ ವೃಂದಕ್ಕೆ ಇಂಥ ಸುಸಂಧಿಯು ಬಹಳ ದಿನಗಳಿಂದ ದೊರೆತಿರಲಿಲ್ಲ. ಆಗ ಊರಲ್ಲಾದ ಆಡಂಬರವನ್ನು ತಿಳಿಯಲು ಇನ್ನೂ ಅನೇಕ ಆಧಾರಗಳು ದೊರೆಯುತ್ತವೆ. ಇವುಗಳಲ್ಲಿ ನರಹರಿಯ ಗೆಳೆಯ ಶೀನೂನ ತಂದೆಯಾದ ಗಣಪತಿ ರಾಯರ ಪತ್ರವೊಂದು. ಅದನ್ನು ಅವರು ಪುಣೆಯಲ್ಲಿ ಕೆಲಸ ಮಾಡುವ ತಮ್ಮ ಸ್ನೇಹಿತರಾದ ಶ್ರೀ. ಮೋಡಕರವರಿಗೆ ಬರೆದಿದ್ದರು. ಅದು ಇಂಗ್ಲೀಷಿನಲ್ಲಿದ್ದು ಅದರ ಅನುವಾದವನ್ನು ಮಾತ್ರ ಇಲ್ಲಿ ಕೊಟ್ಟಿದೆ.

ಕ್ಷೇಮ ಮೊಗ್ಗಾವಿ

೧೩-೨-೧೯೧೦

**ಪ್ರಿಯ ಮೋಡಕ,**

ನಿಮ್ಮ ಪತ್ರವು ಮುಟ್ಟಿತು. ಇಲ್ಲಿ ಎಲ್ಲರೂ ಕ್ಷೇಮವಾಗಿದ್ದೇವೆ. 'ಕೇಸರಿ' ಆಫೀಸಿನಲ್ಲಿ ನನ್ನ ಪೂರ್ಣ ವಿಳಾಸವನ್ನು ತಿಳಿಸಿ ತಪ್ಪದೆ ನನಗೆ ಸಂಚಿಕೆಗಳು ಬಂದು ಮುಟ್ಟುವಂತೆ ಮಾಡಿದ್ದಕ್ಕಾಗಿ ನನ್ನ ಅನಂತ ಪ್ರಣಾಮ ಗಳು. ಪುಣೆಯ ಸುದ್ದಿಯನ್ನೆಲ್ಲ ಕೇಳಿ ವಿಸ್ಮಯಗೊಂಡೆ. ಹಿಂದುಸ್ಥಾನದ ರಾಜಕಾರಣಕ್ಕೆಲ್ಲ ಪುಣೆಯೇ ಇಂದು ಕೇಂದ್ರಸ್ಥಾನವಾಗಿದೆ. ಟಿಳಕ-ಗೋಖಲೆಯವರ ನಡುವೆ ಮತಭೇದವೆದ್ದರೇನಾಯಿತು? ಇವರಿರ್ವರನ್ನು ಒಳಗೊಂಡ ಪುಣ್ಯಪತ್ತನದ ಪುಣ್ಯವನ್ನು ಎಷ್ಟೆಂದು ವರ್ಣಿಸುವದು?"

"ಮೊಗ್ಗಾವಿಯಲ್ಲಿ ಏನು ನಡೆದಿದೆಯೆಂದು ನೀವು ಪ್ರಶ್ನೆ ಮಾಡಿದ್ದೀರಿ. ಮೊಗ್ಗಾವಿಯು ಪುಣೆಯಷ್ಟು ದೊಡ್ಡ ಪಟ್ಟಣವಲ್ಲವೆಂಬುದು ನಿಮಗೆ ಗೊತ್ತೇ ಇದೆ. ಇಲ್ಲಿಯ ದೊಡ್ಡ ಪಟ್ಟಣಗಳಲ್ಲಿಯೂ ಸಹ ಇನ್ನೂ ಆ ಚೇತನೆಯ ಸಂಚಾರವಾಗಿಲ್ಲ. ಅಂದ ಮೇಲೆ ಮೊಗ್ಗಾವಿಯ ಸ್ಥಿತಿಯನ್ನಾರು ನೋಡುವರು? ಇಲ್ಲಿಯ ಜನರು ಇನ್ನೂ ಎಚ್ಚತ್ತಿಲ್ಲ. ಮೊನ್ನೆ ನಡೆದ ಒಂದು ಪ್ರಸಂಗವನ್ನು ನಿಮಗಾಗಿ ಇಲ್ಲಿ ವರ್ಣಿಸುವೆನು. ಒರ್ವ

ಸ್ವಾಮಿಗಳು ಇಲ್ಲಿಗೆ ದಯಮಾಡಿಸಿದ್ದಾರೆ. ಸ್ವಾಮಿಗಳೆಂದರೆ? ಮೊದಲು ಅವರು ಧರ್ಮಕ್ಕೆ ಸ್ವಾಮಿ! ಸನಾತನಧರ್ಮವನ್ನು ಸಂರಕ್ಷಿಸಲೆಂದು ಟೊಂಕಕಟ್ಟಿದವರು. ಕಲಿಯುಗದಲ್ಲಿಯೂ ಕೃತಯುಗ (ಘೃತಯುಗ?) ವನ್ನು ತರುವವರು! ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸುವ ವಶಿಷ್ಠರೆಂದು ಹೆಸರಾಗಿದ್ದರು. ಅವರ ಮೂವತ್ತುಮೂರು ಕೋಟಿ ದೇವತೆಗಳು, ಅವರ ಸ್ವರ್ಣಮಂಟಪ, ಅವರ ಅಷ್ಟಪ್ರಧಾನರು, ಅವರ 'ಮುಟ್ಠಾಳರ' ಪರಿವಾರ! ಅವರ ಅಧಿಕಾರವೇ ಅಧಿಕಾರ! ಅವರ ದೌಲತ್ತೇ ದೌಲತ್ತು! ಅವರ ದರ್ಪವೇ ದರ್ಪ! ಆಹಾ! ಅಯ್ಯೋ! ಎನಿತು ವರ್ಣಿಸಲಿದರ ಚಪಲ ಚೇಷ್ಟೆಯನು!"

"ಸ್ವಾಮಿಗಳು ಊರಿಗೆ ದಯಮಾಡಿಸಿದರು. ಊರ ಜನರು ಕಹಳೆ-ಬ್ಯಾಂಡ್-ತೆಗೆದುಕೊಂಡು ಹೋಗಿ ಈ ಜೀವಂತ ದೇವರನ್ನು ಕರೆದುಕೊಂಡು ಬಂದು ಗುಡಿಯಲ್ಲಿಳಿಸಿದರು. ಇಲ್ಲಿಯ ಆಚಾರ್ಯರ ಗಡ್ಡಿಗೆ ಆಗಿರಬಹುದಾದ ಆನಂದವನ್ನು ವರ್ಣಿಸಲಳವಲ್ಲ. ಸ್ವಾಮಿಗಳ ಛತ್ರದಲ್ಲಿ ಇನ್ನು ಷಡ್ರಸ ಭೋಜನವು ಸಿಕ್ಕುವದಲ್ಲ! 'ಭೋಜನೋತ್ತರ' ದಲ್ಲಿ ದಕ್ಷಿಣೆ! ಉಳಿದ ವೇಳೆಯಲ್ಲಿ 'ಶ್ರಾದ್ಧ-ಪಕ್ಷ'ಗಳಿಗೆ ಹೊಗುವ 'ವೈದಿಕರು' ಈಗ 'ಗೃಹಸ್ಥರ'ನ್ನು ಕಂಡರೆ ಮಾತನಾಡಿಸದೆ ಮೋರೆಯನ್ನು ತಿರುವಿ ಸಾಗುತ್ತಿದ್ದರು. ಊರ ತುಂಬ ಈ ಭಕ್ಷ್ಯಪ್ರಿಯರ ಕೋಲಾಹಲವೇ ಕೋಲಾಹಲ! ಊರೆಲ್ಲ ಗದುಗಪ್ಪಿಸಿ ಹೋಯಿತು."

"ದಿನಾಲು ಸ್ವಾಮಿಗಳು ತಮ್ಮ 'ದರ್ಬಾರ'ವನ್ನು ನೆರೆಯಿಸುತ್ತಿದ್ದರು. ವಿದ್ವನ್ಮನ್ನಣೆಯಾಗಬೇಕಲ್ಲ? ಸ್ವಾಮಿಗಳೂ ಸ್ವತಃ ವಿದ್ವಾಂಸರು. 'ಸುಧಾರಕರ' ಮತವನ್ನು ಖಂಡನೆಮಾಡಿ ತಮ್ಮ ಸಿದ್ಧಾಂತವನ್ನು ಪ್ರಸ್ಥಾಪಿಸುವ ಒಂದು ಪ್ರಚಂಡವಾದ ಗ್ರಂಥವನ್ನು ಬರೆಯುವದರಲ್ಲಿದ್ದರು. ಕೆಲವರು ಮುಕ್ತಾಫಲ ಪರೀಕ್ಷಕರಿರುತ್ತಾರೆ. ಸ್ವಾಮಿಗಳು ವಿದ್ವನ್ಮಣಿ ಪರೀಕ್ಷಕರಿದ್ದರು. ಒದರುವದರ ಮೇಲಿಂದ, ಕಾಣುವದರ ಮೇಲಿಂದ, ಅವರು ಅಗಾಧವಾದ ಪಾಂಡಿತ್ಯದ ಅಪಾರವಾದ ಮಹಿಮೆಯನ್ನು ತಿಳಿಯುತ್ತಿದ್ದರು. ಒಬ್ಬ ಹುಡುಗನಿಗೆ ವಾಯುಸ್ತೋತ್ರವು ಮುಖೋದ್ಗತವಾಗಿತ್ತು. ಸ್ವಾಮಿಗಳು ಅವನಿಗೆ ಮುದ್ರಾಧಾರಣವನ್ನು ಮಾಡಿಸಿದರು.

ಇನ್ನೊಬ್ಬನು ವೇದಾಧ್ಯಯನವನ್ನು ನಡೆಸಿದ್ದನು. ಅವನನ್ನು ವಿಶೇಷವಾಗಿ ಪರಾಂಬರಿಸಿದರು. ಹೊಟ್ಟೆಗಿಲ್ಲದ ಆಚಾರ್ಯರು ಬಂದು ಒಂದು ಶ್ಲೋಕ ವನ್ನು ಹೇಳಿದರು. ಅವರಿಗೆ ೧೦ ರೂಪಾಯಿಗಳನ್ನು ಕಾಣಿಕೆಯಾಗಿ ಕೊಟ್ಟರು ಊರಿಗೇ ಪ್ರತಿಭಾಶಾಲಿಯೆಂದು ಹೆಸರಾದ ವೇದವ್ಯಾಸಾಚಾರಿ ಯೆಂಬ ತರುಣ ವಿದ್ವಾಂಸನು ಬಂದನು. ಅರ್ಧಮರ್ಧ ಇಂಗ್ಲೀಷು ಕಲಿತು ಇದು ಮ್ಲೇಂಚ್ಛ ವಿದ್ಯೆಯೆಂದು ಹೇಳಿ ಅದನ್ನು ತ್ಯಜಿಸಿ, ಈಗ 'ವೇದಾಂತ' ವನ್ನು ಪರಿಶೀಲಿಸುತ್ತಿದ್ದನು. ಅಲ್ಲದೆ ಅವನು ಸಂಸ್ಕೃತದಲ್ಲಿ ಉತ್ತಮ ಕವಿ ಯೆಂದೂ ಹೆಸರಾಗಿದ್ದನು. ಅವನನ್ನು ಈ ಕಾವ್ಯಶಕ್ತಿಗೋಸ್ಕರ ಅಭಿ ನಂದಿಸಲು ಅವನ ಕಾವ್ಯದಷ್ಟೇ ಮೃಧುಮಧುರವಾದ ಶೈಲಿಯಲ್ಲಿ ಅವನ ಸ್ನೇಹಿತರಾದ ನಾರಾಯಣಾಚಾರ್ಯರು "ಕವೀಶ ಕಾಲಿದಾಸೋಪಿ ತಾಡಿತಸ್ತವ ಕವಿತಯಾ" ಎಂದು ಪ್ರಾರಂಭವಾಗುವ ಪದ್ಯಾವಳಿಯನ್ನು ಮಾಡಿದ್ದರು. ವೇದವ್ಯಾಸಾಚಾರಿಯು ಮುದ್ರಣದ ಖರ್ಚನ್ನು ನಾಲ್ಕು ಜನರಿಂದ ಕೂಡಿಸಿ 'ಧ್ರುವಚರಿತ್ರಂ' ಎಂಬ ಕಾವ್ಯವನ್ನು ಬರೆದು ಅಚ್ಚುಹಾಕಿ ಸಿದ್ದನು. ಈಗ ಒಂದು ಪ್ರತಿಯನ್ನು ತಂದು ಸ್ವಾಮಿಗಳ ಪದತಲದಲ್ಲಿಟ್ಟು ಸಾಷ್ಟಾಂಗವೆರಗಿದನು. ಅವನನ್ನು ಸ್ವಾಮಿಗಳು ಹಿಡಿದೆತ್ತಿ, ಮನ್ನಿಸಿದ್ದಲ್ಲದೆ ಸುಧಾರಕರ ವಿರುದ್ಧವಾಗಿ ಕಾವ್ಯವನ್ನು ಬರೆಯಲು ೫೦ ರೂಪಾಯಿಗಳನ್ನು ದಯಪಾಲಿಸಿದರು !

"ದರ್ಬಾರದೊಡನೆ ದಬ್ಬಾಳಿಕೆಯೂ ನಡೆಯಿತು. ಸಮೀಪದಲ್ಲಿರುವ 'ಮುಟ್ಠಾಳರಿಗೆ ದಬ್ಬು' ಎಂದು ಹೇಳುವದೇ ತಡ, "ಸದ್ಗೃಹಸ್ಥರ" ನ್ನಾಗಲಿ "ಸಭ್ಯಗೃಹಸ್ಥರ" ನ್ನಾಗಲಿ, ಅವರು ಜಂಡಿಗೆ ಕೈಕೊಟ್ಟು ದಬ್ಬಿ ಬಿಡುತ್ತಿದ್ದರು. ಚಂದ್ರಾಪುರದಿಂದ ಮುದ್ರಾಧಾರಣಕ್ಕೆಂದು ಒಬ್ಬ ಬ್ರಾಹ್ಮಣನು ಬಂದಿದ್ದನು. ಆ ಬ್ರಾಹ್ಮಣನಿಗೆ ೨೦೦ ರೂಪಾಯಿಗಳನ್ನು ಕೊಡೆಂದು ಸ್ವಾಮಿಗಳು ಆಜ್ಞೆಮಾಡಿದರು. ಆ ಯೋಗ್ಯತೆಯಿಲ್ಲದ ಬ್ರಾಹ್ಮ ಣನು ಗೋಳ್ಳೋ ಎಂದು ಅತ್ತನು. ವಕೀಲ ಗುಂಡೇರಾಯರ ಮಗನು ಕ್ರಾಪು ಬಿಡಿಸಿದ್ದಕ್ಕಾಗಿ ಸ್ವಾಮಿಗಳು ಅವನನ್ನು ಬಯ್ದು ಮುಚ್ಚಿದರು. ನರಸಿಂಗರಾಯರ ಮನೆಯಲ್ಲಿರುವ ಬಾಲವಿಧವೆಯು ಕೇಶ-ವಪನವು ಇನ್ನೂ ಉಳಿದದ್ದಕ್ಕಾಗಿ ಅವರಿಗೆ ಹೆದರಿಕೆಹಾಕಿದರು. ನನ್ನ ಮಗ ಶ್ರೀಪಾದನ

ಎಲ್. ಎಲ್. ಬಿ. ಆದ ಮೇಲೆ ಅವನನ್ನು ವಿಲಾಯತಿಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವ ವಿಚಾರದಲ್ಲಿ ನಾನಿದ್ದೆನು. ಸ್ವಾಮಿಗಳು ನಮ್ಮ ಕುಲಕೋಟಿಯನ್ನೇ ಶಪಿಸಿದರು. ಆಕಸ್ಮಾತ್ತಾಗಿ 'ದರ್ಶನ'ಕ್ಕ ಬಂದಿರುವ ಶ್ರೀನಿವಾಸರಾಯರಿಗೆ ಸ್ವಾಮಿಗಳು ಇಂದು ನಿಮ್ಮಿಂದ ಊರ ಪ್ರಸ್ಥವಾಗ ಬೇಕೆಂದರು. ರಾಯರು ಹಿಂದು ಮುಂದೆ ನೋಡಲು ಪ್ರಸಂಗವು ದೀರ್ಘಕ್ಕೆ ಹೋಗಬಹುದೆಂದು ಎಚ್ಚರಿಕೆ ಕೊಟ್ಟರು."

"ಹೀಗೆ ಊರಿನಲ್ಲಿ ಗೊಂದಲವೆದ್ದಿತು. ಪ್ಲೇಗಿನಕಿಂತ ಭಯಂಕರವಾದ ಈ ಅಂಟುರೋಗವು ಕೆಲವರನ್ನು ಪಾದಾಕ್ರಾಂತರನ್ನಾಗಿ ಮಾಡಿತು. ಸರಕಾರದ ಬಲುಮೆಯಷ್ಟು ಭೀಕರವಾದ ಈ ಒತ್ತಾಯವು ಜನಮನಸನ್ನು ನಡುಗಿಸಿತು. ಯಮನು ಆವಿರ್ಭೂತನಾದನೇನು? ಜನರಿಗೆ ತಿಳಿಯದಾಯಿತು."

"ಪ್ರಿಯ ಮೋಡಕ, ಇದೀಗ ನಮ್ಮ ಪ್ರಾಂತದಲ್ಲಿಯ ಸ್ಥಿತಿ. ನಾನೇನು ಸಾಹಿತಿಯಲ್ಲ. ಆದರೂ ನಡೆದ ಪ್ರಸಂಗವನ್ನು ಯಥಾಮತಿಯಾಗಿ ಬಣ್ಣಿಸಲು ಪ್ರಯತ್ನಿಸಿದ್ದೇನೆ. ನಮ್ಮ ಪ್ರಾಂತವು ಸುಧಾರಿಸಬೇಕೆಂದು ನೀವು ಹೇಳುವಿರಿ.ಅದು ಸುಧಾರಿಸುವದು ಇನ್ನಾವಾಗ? ಅಗರಕರರಂಥ ಸಾಹಸಿಗಳು ನಮ್ಮಲ್ಲಿ ಇನ್ನೂ ಹುಟ್ಟಿಲ್ಲ. ಇದ್ದಬಿದ್ದವರಲ್ಲಿ ಚಾರಿತ್ರವಂತಿಕೆಯಿಲ್ಲ,"

"ಇನ್ನೇನು ವಿಶೇಷ? ಹಾಳಾಗಲಿ ನಿಮ್ಮ ರೆವ್ಹಿನ್ಯೂಡಿಪಾರ್ಟಮೆಂಟು! ನಿಮಗೆ ಸೂಟಿಯೇ ಇಲ್ಲ. ರಜೆಯನ್ನಾದರೂ ತೆಗೆದುಕೊಂಡು ಕೆಲವು ದಿನದ ಮಟ್ಟಿಗೆ ಮೊಗ್ಗಾವಿಗೆ ಬನ್ನಿರಿ. ಸರಸಗೋಷ್ಠಿಯಲ್ಲಿ ಇಬ್ಬರೂ ಕಾಲವನ್ನು ಕಳೆಯಬಹುದು."

ಇತಿ ಬಲವುಗಳು

ತಮ್ಮ ಸ್ನೇಹಾಂಕಿತ,

**ಗಣಪತರಾಯ.**

**ಮ. ಮಾ.** ನಮ್ಮ ಶೀನೂ ಇನ್ನೂ ಇಂಗ್ಲಿಷ ನಾಲ್ಕನೆ ಇಯತ್ತೆಯಲ್ಲಿ ಕಲಿಯುತ್ತಿದ್ದಾನೆ. ಮೇಟ್ರಿಕ್ ಆದ ಮೇಲೆ ಅವನನ್ನು ಪುಣೆಗೆ ಕಳಿಸುವೆ. ಅವನಲ್ಲಿಯಾದರೂ ಅಲ್ಲಿಯ ಮಹನೀಯರ ವಿಚಾರಗಳು ಫಲವತ್ತಾಗಲಿ."

ಈ ಪತ್ರದಲ್ಲಿ ಸಮತೂಕವಿದೆಯೆಂದು ಹೇಳಲಾಗುವದಿಲ್ಲ. ತಾವು ಸಾಹಿತಿಗಳಲ್ಲವೆಂದು ಹೇಳಿಕೊಂಡಿದ್ದರೂ ಗಣಪತರಾಯರು ವರ್ಣನೆಯಲ್ಲಿ ಅತಿಶಯೋಕ್ತಿಯನ್ನು ಬೆರೆಸಿರಬೇಕು. ಅಂತೇ ಈ ಪತ್ರವನ್ನು ಓದಲು ಸುಧಾರಕರಿಗೆ ರುಚಿಕಟ್ಟೆನಿಸಬಹುದು. ಸನಾತನಿಗಳಿಗೆ ಇದು ಕೇವಲ ನಿಂದೆಯ ಪರಮಾವಧಿಯಾಗಿ ತೋರಬಹುದು. ಇದ್ದುದನ್ನು ಜನತೆಯೆದುರಿಗಿಡುವದು ನಮ್ಮ ಕೆಲಸ.

ಅದೇನೇ ಇರಲಿ. ಮೊಗ್ಗಾವಿಯಲ್ಲಿ ಈ ಸಮಯಕ್ಕೆ ಆಚಾರ್ಯರ ಪಂಗಡವು ಪ್ರಾಶಸ್ತ್ಯವನ್ನು ಪಡೆಯಿತೆಂಬುದು ಮಾತ್ರ ಅಕ್ಷರಶಃ ನಿಜವಾಗಿದೆ. ಈ ಪಂಗಡಕ್ಕೆ ಹೈಗ್ರೀವಾಚಾರ್ಯರೇ ಮುಖ್ಯಸ್ಥರಾಗಿದ್ದರು. ಸ್ವಾಮಿಗಳಿಗೆ ಅವರ ಮೇಲೆ ಮಮತೆಯು ಬಹಳ. ಸ್ವಾಮಿಗಳೇ ಆಚಾರ್ಯರಿಗೆ ನಾಲ್ಕನೆಯ ಲಗ್ನವನ್ನು ಮಾಡಿಕೊಳ್ಳಲು ಹೇಳಿದ್ದರು. ವರಾರ್ಥಿಯಾಗಿ ತಮ್ಮಲ್ಲಿಗೆ ಕೆಲವರು ಬಂದಿದ್ದರೆಂದು ಆಚಾರ್ಯರು ಸ್ವಾಮಿಗಳಿಗೆ ಹೇಳಿದಾಗ ಅವರು "ಹೈಗ್ರೀವ, ಲಗ್ನಮಾಡಿಕೋತೇನಿ ಅಂತ ಹೇಳಿಬಿಡು! ಮನೆತನಕ ಲಕ್ಷ್ಮಿ ನಡಕೋತ ಬಂದರ ಬ್ಯಾಡಾ ಅಂತ ಹ್ಯಾಂಗ ಹೇಳೋದು? ದೇವರು ಕೊಟ್ಟಾಗ ಭೋಗಿಸಬೇಕು. ಬಿಟ್ಟೇನು ಮಾಡೋದು? ಈಸಬೇಕು, ಇದ್ದು ಜಯಿಸಬೇಕು ಅಂತ ದಾಸರು ಹೇಳಿಲ್ಲ?" ಎಂದು ಅವರು ಆಚಾರ್ಯರನ್ನು ಸಮಾಧಾನಪಡಿಸಿದ್ದರು. ಆಮೇಲೆ ಸ್ವಾಮಿಗಳ ಅಪ್ಪಣೆ ಸಿಕ್ಕ ಮೇಲೆ ಇನ್ನೇತಕಂಜುವದೆಂದು ಆಚಾರ್ಯರು ಮೈಸೂರಿನ ಕಡೆಗೆ ಹೋಗಿ ಲಗ್ನಮಾಡಿಕೊಂಡು ಬಂದಿದ್ದರು.

ಈಗ ಸುಮಾರು ಅರ್ಧವರ್ಷದ ಮಗುವಾದ ಕಿಟ್ಟು ಹುಟ್ಟುವ ಪೂರ್ವದಲ್ಲಿ, ನಾಲ್ಕನೆಯ ಹೆಂಡತಿಯ ಹೊಟ್ಟೆಯಲ್ಲಿ ಮಕ್ಕಳು ಹುಟ್ಟದೆ ಇರುವದು ಅಲೌಕಿಕವೆಂದು ಹೈಗ್ರೀವಾಚಾರ್ಯರು ಚಿಂತಿಸುತ್ತಿದ್ದರು. ಅವರು ತಮ್ಮ ಈ ವ್ಯಸನವನ್ನು ಸ್ವಾಮಿಗಳೆದುರಿಗೆ ತೋಡಿಕೊಂಡಾಗ ಅವರು ನಕ್ಕುಬಿಟ್ಟಿದ್ದರು.

"ಹೈಗ್ರೀವ! ಎಲುಬಿನ ಹಂದರದ್ಹಾಂಗಿದ್ದ ನಿನಗ ಮಕ್ಕಳೆಲ್ಲಿಂದ ಬರಬೇಕು? ಅದಕ್ಕ ದೇವರ ಪ್ರಸಾದನ ಬೇಕು. ಈ ತೀರ್ಥಪ್ರಸಾದ ಒಯ್ದುಕೊಡು" ಎಂದು ಹೇಳಿದ್ದರು. ಹೈಗ್ರೀವಾಚಾರ್ಯರು ಸಂಕೋಚ

ಪಟ್ಟು ತಿರುಗಿ ಸ್ವಾಮಿಗಳೆದುರಿಗೆ ಈ ಮಾತನ್ನೆತ್ತಿರಲಿಲ್ಲ. ಈಗ ದೇವರ ದಯೆಯಿಂದ ಕಿಟ್ಟು ಹುಟ್ಟಿದ್ದ. ತಮ್ಮ ಮನೆಯಲ್ಲಿ ಸ್ವಾಮಿಗಳ ಪಾದ ಧೂಲಿಯು ಬೀಳಬೇಕೆಂದು ಆಚಾರ್ಯರು ಬಿನ್ನವಿಸಿಕೊಂಡರು. ಮರು ದಿವಸ ಮುಂಜಾನೆ ಬರಬಹುದೆಂದು ಸ್ವಾಮಿಗಳು ಹೇಳಿ ಕಳುಹಿದರು. ಅದರಂತೆ ತಾಸು ಹೊತ್ತೇರಿದಾಗ ಆಚಾರ್ಯರ ಮನೆಯ ಮುಂದೆ ಬೋವಿ ಗಳು ಒಂದು ಮೇಣೆಯನ್ನು ಇಳಿಸಿದರು. ಪ್ರಾತರ್ವಿಧಿಗೆಂದು ಊರ ಹೊರಗೆ ಹೋಗಿದ್ದ ಸ್ವಾಮಿಗಳು ಆಚಾರ್ಯರ ಮನೆಯ ಮಾರ್ಗದಿಂದ ತಿರಗೋಣವೆಂದು ಇಲ್ಲಿ ಬಂದು ತಾತ್ಪೂರ್ತಿಕವಾಗಿ ಇಳಿದಿದ್ದರು. ದರ್ಶನ ಕ್ಕೆಂದು ಊರಿಗೆ ಬಂದ ಸುಬ್ಬನನ್ನು ಆಚಾರ್ಯರು ಬಾಗಿಲಲ್ಲಿ ನಿಲ್ಲಿಸಿದ್ದರು. ಸುಬ್ಬನು ಸ್ವಾಮಿಗಳೆದುರಿಗೆ ಅಡ್ಡಬಿದ್ದು ಅವರನ್ನು ಒಳಗೆ ಕರೆದುಕೊಂಡು ಬಂದನು. ಎಲ್ಲ ಕಡೆಗೆ ತಿರುಗಾಡಿ ಆನಂದವನ್ನು ವ್ಯಕ್ತಪಡಿಸಿ ಕೈಮುಗಿದು ಕೊಂಡು ಮೂಲೆಯಲ್ಲಿ ನಿಂತ ರಮಾಬಾಯಿಯವರ ಮೇಲೆ ಹಾಯ್ದು ಹೋದ ಸ್ವಾಮಿಗಳ ದೃಷ್ಟಿಯು ಪದ್ಮಾವತಿಯನ್ನು ನಿಟ್ಟಿಸದೆ ಬಿಡಲಿಲ್ಲ. ಕೂಡಲೆ ಅವರ ಮುಖವು ತುಸು ಗಂಟಿಕ್ಕಿತು.

"ಹೈಗ್ರೀವ! ಮಗಳು ಬೆಳದು ನಿಂತಾಳಲ್ಲಾ!"

"ಹೌದು ಮಹಾಸ್ವಾಮಿ." ತಡವರಿಸುತ್ತ ಆಚಾರ್ಯರು ಉತ್ತರ ವನ್ನಿತ್ತರು. ಪ್ರಸಂಗವು ಈ ಮನೆಗೆ ಬರಬಹುದೆಂದು ಅವರಿಗೆನಿಸಿರಲಿಲ್ಲ. ಅನಿಸಿದ್ದರೆ ಅವರು ಪದ್ಮಾವತಿಯು ಸ್ವಾಮಿಗಳ ಕಣ್ಣಿಗೆ ಬೀಳದಂತೆ ಎಂದೋ ನೋಡಿಕೊಳ್ಳುತ್ತಿದ್ದರು.

ಸ್ವಾಮಿಗಳಿಗೆ ಸಿಟ್ಟು ಬಂತು. "ನಮ್ಮ ಶಿಷ್ಯರು ಧರ್ಮ ಮೀರಿದರ ಮುಂದ ಧರ್ಮದ ಗತಿಯೇನು? ನಿಂತ ಕಾಲ ಮ್ಯಾಲ ಮಗಳ ಲಗ್ನ ಆಗಲಿ. ಕನಿಷ್ಠ ಪಕ್ಷಕ್ಕೆ ನಿಶ್ಚಯನಾರ ಹಾಕಲಿಕ್ಕೆ ಬೇಕು" ಎಂದು ಅವರು ತಮ್ಮ ಅಧಿಕಾರಯುಕ್ತ ವಾಣಿಯಿಂದ ಹೇಳಿದರು.

"ಬಹು ಕಷ್ಟ, ಸ್ವಾಮಿ. ಧರ್ಮಿಷ್ಠರಿಗೆ ದುಡ್ಡು ಹುಟ್ಟದ ಕಾಲ. ವರ ಹುಡುಕಬೇಕಾದರ ಜೀವ ವರ ವರ ಅನ್ನೋ ದಿವಸ. ಮೂರು ತಿಂಗಳ ಮುದ್ದತಾದರೂ ಕೊಡಿರಿ, ಮಹಾಸ್ವಾಮಿ!" ಆಚಾರ್ಯರು ದೈನಾಸ ಬಟ್ಟರು.

"ಊಹುಂ! ನಿಂತಕಾಲ ಮ್ಯಾಲ ನಿಶ್ಚಯಮನಕಾ ಆಗಲಿಕ್ಕೀ ಬೇಕು. ಇಲ್ಲದಿದ್ದರ ಮಗಳನ್ನ ನನ್ನ ಚಾಕರಿ ಗೋಸ್ಯಾಗ ಕೊಡತೀಯೇನು? ದೇವರ ಸೇವಾಕು ಉಪಯೋಗ ಆಗತಾಳ?" ಎಂದು ಸ್ವಾಮಿಗಳು ಸವಾಲು ಹಾಕಿದರು.

ಆಚಾರ್ಯರು ದಿಙ್ಮೂಢರಾದರು. ಅವರ ಹೃದಯವು ತತ್ತರಿಸ ಹತ್ತಿತು. "ಸಂಜೆ ಕಡೆಗೆ ಬಂದು ಹೇಳತೇನಿ ಮಹಾಸ್ವಾಮಿ, ನನ್ನ ನಿಶ್ಚಯಾಸ" ಆಚಾರ್ಯರು ಬೇಡಿಕೊಂಡರು.

ಆಗಬಹುದೆಂದು ಸ್ವಾಮಿಗಳು ನುಡಿದು ಕೇಶವದೇವರ ಗುಡಿಯಲ್ಲಿಯ ತಮ್ಮ ಬಿಡಾರದ ಕಡೆಗೆ ತೆರಳಿದರು.

ಅಂದು ಹೈಗ್ರೀವಾಚಾರ್ಯರ ಮನೆಯಲ್ಲಿ ದೀರ್ಘಾಲೋಚನೆಯು ನಡೆಯಿತು. ಹಾದಿಯಲ್ಲಿ ಹೋಗುವ ದೆವ್ವವನ್ನು ಮನೆಯಲ್ಲಿ ತಂದು ಬಿಟ್ಟಿದ್ದು ಮೂರ್ಖತನವಾಯಿತೆಂದು ಆಚಾರ್ಯರು ಚಡಪಡಿಸಿದರು. ಇನ್ನು ನಿಂತ ಕಾಲಮೇಲೆ ವರನನ್ನು ಎಲ್ಲಿ ಹುಡುಕುವದು? ಸ್ವಾಮಿಗಳ ವ್ಯವಹಾರದಲ್ಲಿ ಕೈಹಾಕಿದ್ದು ತಪ್ಪಾಯಿತೆಂದು ಸುಬ್ಬಣಾಚಾರ್ಯರು ವಿಷಾದಿಸಿದರು. ಆದರೆ ಮುಂದೇನು? ದೀಪಹಚ್ಚುವ ವರೆಗೆ ಈ ಮಂತ್ರಾಲೋಚನೆಯು ನಡೆಯಿತು. ಸುಬ್ಬಣಾಚಾರ್ಯರು ತಮಗೆ ಗೊತ್ತಿದ್ದ ವರ ನಾಮಾವಳಿಯನ್ನೆಲ್ಲ ಪಠಿಸಿದರು. ಆದರೆ ಗೋತ್ರ ಬಿಟ್ಟರೆ ಮನಸ್ಸು ಕೂಡುತ್ತಿರಲಿಲ್ಲ; ಕಷ್ಟವು ತೂಕ ಮಾಡಿದಹಾಗಾಯಿತು. ಕಡೆಗೊಮ್ಮೆ ಸುಬ್ಬಣಾಚಾರ್ಯರು ಮೆಲುದನಿಯಲ್ಲಿ ಹೈಗ್ರೀವಾಚಾರ್ಯರಿಗೆ ಕಿವಿಮಾತನ್ನೇನೋ ಹೇಳಿದರು. ಅದಕ್ಕೆ ಅವರು ಸಂತೋಷಪಟ್ಟರು. ತಲೆಯಿದ್ದರೆ ಸುಬ್ಬನ ತಲೆಯೆಂದು ಅವರು ಅವನ ತಲೆಯ ಮೇಲೆ ಕೈಯ್ಯಾಡಿಸಿದರು. ಇಬ್ಬರೂ ಕೂಡಿ ಸ್ವಾಮಿಗಳ ಸನ್ನಿಧಾನಕ್ಕೆ ಹೋದರು. ಕೆಲವು ಹೊತ್ತಿನ ವರೆಗೆ ಚರ್ಚೆಯಾಗಿ ಅವರು ಹೇಳುವ ಮಾತನ್ನು ಸ್ವಾಮಿಗಳು ಒಪ್ಪಿಕೊಂಡಂತೆ ತೋರಿತು. ಕುಶಲಚಿತ್ತರಾಗಿ ಆಚಾರ್ಯದ್ವಯರು ಮನೆಯೆಡೆಗೆ ತೆರಳಿದರು!

## ಪ್ರಕರಣ ೬

# ಮಧ್ಯಸ್ತಿಕೆ

ಮುಂದೆ ಒಂದೆರಡು ದಿವಸಗಳ ಮೇಲೆ ಆಚಾರ್ಯರು ಸುಬ್ಬನನ್ನು ಕರೆದುಕೊಂಡು ದೇಸಾಯಿ ಗೋವಿಂದರಾಯರು ಮನೆಯಲ್ಲಿರುವ ಹೊತ್ತನ್ನು ಸಾಧಿಸಿ ಅವರ ಮನೆಯೊಳಕ್ಕೆ ಕಾಲಿಟ್ಟರು. ಇವರನ್ನು ನೋಡಿ ರಾಯರಿಗೆ ಆಶ್ಚರ್ಯವಾಯಿತು. ಕರೆದು ಮೇಲೆ ಕೂಡಿಸಿ ಕುಶಲ ಪ್ರಶ್ನೆಗಳಾದ ಮೇಲೆ ಆಚಾರ್ಯರು ತಾವು ಬಂದ ಕಾರಣವನ್ನು ಹೇಳಿದರು. ತಮ್ಮ ಮನೆತನದ ಗೌರವವನ್ನು ವಿಶದಪಡಿಸಿ ದೇಸಾಯರ ದೊಡ್ಡಿಸ್ತಿಕೆಯನ್ನು ಹೊಗಳಿದರು. ಎರಡೂ ಮನೆತನಗಳ ನಡುವೆ ಇಲ್ಲಿಯವರೆಗಿದ್ದ ಸರ್ವಸಾಮಾನ್ಯವಾದ ನಡತೆಗೆ ಉದಾಸೀನವೃತ್ತಿಯೇ ಕಾರಣವೆಂದು ಹೇಳಿದರು.ಅದನ್ನು ಹೋಗಲಾಡಿಸಲು ಅವರು ಈ ರಕ್ತಸಂಬಂಧದ ಹಂಚಿಕೆಯನ್ನು ಮಾಡಿದ್ದು. ಕೇಶವರಾಯನಿಗೆ ಪದ್ಮಾವತಿಯನ್ನು ಕೊಟ್ಟು ಲಗ್ನ ಮಾಡಿದರೆ ಪರಸ್ಪರ ಪ್ರೇಮವು ಉಳಿದಂತಾಗುವದಿಲ್ಲವೆ? ಶ್ರೀಗಳವರು ಈ ಮಾತಿಗೆ ಅನುಮೋದಿಸಿದ್ದರು. ನಿಜವಾಗಿ ನೋಡಿದರೆ ನೆರೆಮನೆಯ ಕೇಶವರಾಯನಿಗೆ ನಿನ್ನ ಮಗಳನ್ನೇಕೆ ಕೊಡಬಾರದೆಂದು ಅವರೇ ಸೂಚಿಸಿದ್ದರು. ವರದಕ್ಷಿಣೆ ಮುಂತಾದವುಗಳನ್ನು ಹಿಂದುಗಡೆ ನೋಡಲಿಕ್ಕೆ ಬಂದೀತು.ಆದರೆ ಇದಕ್ಕೆ ರಾಯರ ಅಭಿಪ್ರಾಯವೇನು ?

ರಾಯರಿಗೆ ಅತ್ಯಾಶ್ಚರ್ಯವಾಯಿತು.ಅವರ ಕನಸು–ಮನಸಿನಲ್ಲಿಯೂ ಈ ವಿಚಾರವು ಸುಳಿದಿರಲಿಲ್ಲ. ಪದ್ಮಾವತಿಯು ಅವರೆದುರಿಗೆ ಬೆಳೆದ ಹುಡುಗಿ. ಆಕೆಯ ಉಚ್ಚತಮ ಗುಣಗಳನ್ನೆಲ್ಲ ಅವರು ತಿಳಿದುಕೊಂಡಿದ್ದರು. ಆದರೆ ಈ ಆಚಾರಿ,— ಹೆಣ್ಣುಕೊಡಲು ಬರುವಷ್ಟು ಅಧಿಕಾರವು ಇವನಿಗೆ ಬಂದಿತೆ? ಬಂದಿರಬಹುದು. ಸಮಾಜದಲ್ಲಿ ಇಂದಿನ ಮೇಲ್ಮೆಯನ್ನು ಕಂಡು ಹಿಡಿಯುವದೆಂದರೆ ಸಾಂಪತ್ತಿಕ ಸ್ಥಿತಿಯ ಮೇಲಿಂದ. ವರಹಗಳನ್ನು ಧಾರೆಯೆರೆದು ಕೊಟ್ಟರೆ ರಾಜಕುಮಾರರು ಸಹ ಪ್ರಜೆಗಳ ಕುವರಿಯರನ್ನು

ಲಗ್ನವಾಗುವರು. ಮೇಲೆ ಹುಡಿಗೆಯು ರೂಪವಂತೆ, ಗುಣವಂತಿ. ಇತ್ತ ತಮ್ಮ ಮನೆತನದ ಸ್ಥಿತಿಯಾದರೂ ಅಷ್ಟು ಸೆಟ್ಟಗಿರಲಿಲ್ಲ. ಏಕೆ ಬಂದಿರಬಾರದು? ಎಂದು ಇನ್ನೊಂದು ವಿಚಾರವು ಅವರ ಮನಸ್ಸಿನಲ್ಲಿ ತೇಲಹತ್ತಿತು. ರಾಯರಿಗೆ ಏನೆಂದು ನಿರ್ಣಯಿಸುವದಕ್ಕೂ ಸಾಧ್ಯವಾಗಲಿಲ್ಲ. 'ವಿಚಾರಿಸಿ ಒಂದೆರಡು ದಿನಗಳಲ್ಲಿ ತಿಳಿಸುತ್ತೇನೆ' ಎಂದು ಹೇಳಿ ಅವರು ಹೊರಡಲನುವಾದರು. ಆಚಾರ್ಯರೂ ಸುಬ್ಬನೊಡನೆ ಎದ್ದರು.

ಹೈಗ್ರೀವಾಚಾರ್ಯರು ಒಗೆದ ಮಾಯಾಜಾಲವು ಹೀಗೆ ತುಸುವಾದರೂ ಪರಿಣಾಮಕರವಾಗಿತ್ತು. ಪದ್ಮಾವತಿಯ ಲಗ್ನದ ವಿಚಾರವು ಅವರ ಮನಸ್ಸಿನಲ್ಲಿ ಸುಳಿದಾಗೆಲ್ಲ ಕೇಶವನ ಮೂರ್ತಿಯು ಅವರ ಕಣ್ಣೆದುರಿಗೆ ನಿಲ್ಲುತ್ತಿತ್ತು. ದೇಸಾಯರ ಮನೆಗೆ ಮಗಳನ್ನು ಕೊಟ್ಟರೆ ತೀರಿತು. ಮಕ್ಕಳನ್ನು ಅಲಕ್ಷಿಸಿರುವನೆಂದು ಜನರು ದೂಷಿಸುವದೂ ಇಲ್ಲದಾಗುವದು. ಆದರೆ ಇದಕ್ಕೆ ವರದಕ್ಷಿಣೆ ಹೇರಳವಾಗಿ ಬೇಕು. ಅಷ್ಟು ದುಡ್ಡನ್ನು ಕಳೆದು-ಕೊಳ್ಳುವದು ಯೋಗ್ಯವಾಗಬಹುದೆ? ಮೇಲಾಗಿ ಗೋವಿಂದರಾಯರು ಈ ಲಗ್ನಕ್ಕೆ ಒಪ್ಪಬಹುದೆ? ಇವೆಲ್ಲ ವಿಚಾರಗಳು ಆಚಾರ್ಯರ ತಲೆಯಲ್ಲಿ ಸುಳಿದಾಡಿ ಅವರನ್ನು ಉದಾಸೀನರನ್ನಾಗಿ ಮಾಡಿದ್ದವು. ಕೊನೆಗೆ ಅವರು ಕೇಶವನ ವಿಷಯವನ್ನೇ ಬಿಟ್ಟಿದ್ದರು.

ಆದರೆ ಆಕಲ್ಪಿತವಾಗಿ ಈ ವಿಚಾರವೇ ಈಗ ಮತ್ತೆ ಅವರೆದುರಿಗೆ ಬಂದು ನಿಂತಿತ್ತು. ಅದನ್ನು ಸುಬ್ಬನು ಮಂಡಿಸಿದ್ದನು. ಹುಡಿಗೆ ರೂಪವತಿ. ಕೇಶವನಂಥ ಹುಡುಗನ ಬಾಯಿ ನೀರುಬಿಡಬಹುದು ಇಂಥ ಹೆಣ್ಣಿಗೆ! ಮೇಲಾಗಿ ಪದ್ಮಾವತಿಯು ಒಳ್ಳೆ ಸ್ವಭಾವದವಳು. ಜಾನಕಿಬಾಯರಂಥವರೂ ಅವಳನ್ನು ಕಂಡರೆ ಮೆಚ್ಚಬಹುದು. ಇನ್ನು ಎರಡೂ ಮನೆತನಗಳ ನಡುವಿನ ತಪ್ಪುತಿಳುವಳಿಕೆಯಾದರೂ ಎಂಥದು! ಹೆಣ್ಣಿನವರು ಗಂಡಿನವರನ್ನು ಗೌರವಿಸಿದರೆ ಸಾಕು! ಮತ್ತೆ ಪ್ರೀತಿ ಬೆಳೆಯುವದು. ಇದಾದ ಮೇಲೆ ಉಳಿದ ಮಾತುಗಳು ಎರಡು. ಒಂದು ಸ್ವತಃ ಗೋವಿಂದರಾಯರು ಹೈಗ್ರೀವಾಚಾರ್ಯರ ಬಗ್ಗೆ ಪಡುವ ತಿರಸ್ಕಾರ, ಇನ್ನೊಂದು ವರದಕ್ಷಿಣೆಯ ಭಾರ. ಇವೆರಡು ವಿಷಯಗಳಲ್ಲಿಯೂ ಸ್ವಾಮಿಗಳ ಸಹಾಯವನ್ನು

ದೊರಕಿಸಬಹುದೆಂದು ಸುಬ್ಬಣಾಚಾರ್ಯರು ಸೂಚಿಸಿದ್ದರು. ಗೋವಿಂದ ರಾಯರ ಧರ್ಮಬಾಹಿರತೆ-ನೀತಿಬಾಹಿರತೆಯನ್ನು ಶ್ರೀಗಳವರ ಸಿದರ್ಶನಕ್ಕೆ ತರಬೇಕು. ಹೈಗ್ರೀವಾಚಾರ್ಯರಂಥ ಧರ್ಮಸಂಪನ್ನರ ಮನೆತನದೊಡನೆ ಲಗ್ನಸಂಬಂಧವನ್ನು ಬೆಳೆಸದಿದ್ದರೆ **ಬಹಿಷ್ಕಾರ**ವೆಂದು ಅವರಿಂದ ಹೆದರಿಕೆ ಹಾಕಿಸಬೇಕು. ಆಗ ದೇಸಾಯರು ಹಾದಿಗೆ ಬರಲಿಕ್ಕಿಲ್ಲವೆ? ಹೀಗೆ ಶ್ರೀಗಳಿಂದ ತನ್ನ ಮೇಲೆ ಬರಬಹುದಾದ ದಬ್ಬಾಳಿಕೆಯನ್ನು ಹೈಗ್ರೀವಾಚಾರ್ಯರು ಅನಾಯಾಸವಾಗಿ ದೇಸಾಯರ ಮೇಲೆ ಸೂಕಿ ಬಿಡಬಹುದು !

ಇದಕ್ಕೆಲ್ಲ ಸ್ವಾಮಿಗಳ ಅನುಮತಿಯಿದ್ದಿರಬೇಕು ಅಂತೇ ಇಬ್ಬರೂ ರಾಯರ ಮನೆಗೆ ಬರುವ ಸಾಹಸಮಾಡಿದ್ದರು. ರಾಯರನ್ನಂತೂ ಮಾತಾಡಿಸಿದ್ದಾಯಿತು. ಇನ್ನು ಜಾನಕಿಬಾಯರ ಮನವೊಲಿಸದೆ ಯಾವ ಕೆಲಸವೂ ಆಗುವ ಹಾಗಿಲ್ಲ. ಕಾರಣ ಅವರ ಆಳವನ್ನಷ್ಟು ಪರಿಕಿಸಬೇಕೆಂದು ಆಚಾರ್ಯರು ಸುಬ್ಬನೊಡನೆ ನಡುಮನೆಯನ್ನು ಪ್ರವೇಶಿಸಿದರು. ಜಾನಕಿಬಾಯರು ಅವರನ್ನು ಉಪಚರಿಸಿ ಬರಮಾಡಿಕೊಂಡರು. ಇದೀಗ ನಡೆದ ಮಾತು ಕಥೆಗಳನ್ನು ಅವರು ತುಸುಮಟ್ಟಿಗೆ ಕೇಳಿ ತಿಳಿದಿದ್ದರು.

ವಿಧಿವಿಲಾಸವು ಸಹ ಹೈಗ್ರೀವಾಚಾರ್ಯರ ಮೇಲೆ ಕರುಣಿಸಿತ್ತೆನ್ನಬೇಕಾಗುತ್ತದೆ. ಏಕೆಂದರೆ ಇತ್ತೀಚೆಗೆ ಕೇಶವನ ನಡತೆಯಿಂದ ಜಾನಕಿಬಾಯರ ಮನಸ್ಸಿಗೆ ಸ್ವಾಸ್ಥ್ಯವಿದ್ದಿಲ್ಲ

ಕೇಶವನು- ಏನು ಕಾರಣವೋ ದೇವರೆ ಬಲ್ಲ- ಲಗ್ನವಾದರೆ ತಾನು ಆಚಾರ್ಯರ ಪದ್ಮಾವತಿಯನ್ನೇ ಲಗ್ನವಾಗುವೆನೆಂದು ಹಟ ಹಿಡಿದಿದ್ದನು. "ಅವ್ವಾ! ನೀ ಹೋಗಿ ಕೇಳು ಅವರಿಗೆ ಪದ್ದಿನ್ನ ನನಗ ಕೊಡತಾರೋ ಇಲ್ಲೊ" ಎಂದು ತಾಯಿಗೆ ದುಂಬಾಲು ಬೀಳುತ್ತಿದ್ದನು. ಅಭಿಮಾನವು ತುಂಬಿ ತುಳುಕುತ್ತಿರುವ ಜಾನಕಿಬಾಯಿಯವರಿಗೆ ಇದರಿಂದ ಎಷ್ಟು ದುಃಖವಾಗಿರಬೇಡ ! ಪದ್ಮಾವತಿಯ ಸ್ವಭಾವವೇನೋ ಅವರ ಮನಸ್ಸಿಗೆ ಬಂದಿತ್ತು. ತಮಗೆ ವಿಧೇಯಳಾಗಿ ನಡೆದುಕೊಳ್ಳುವ ಒಂದು ಹುಡುಗೆಯೆಂದರೆ ಇವಳೆಂದು ಅವರ ವಿಶ್ವಾಸವಿತ್ತು. ಮೇಲಾಗಿ ತಾವು ಆದರಿಸುತ್ತಿದ್ದ ಸೀತಾಬಾಯಿಯ ಮಗಳು. ಪಾಪ? ಪರದೇಶಿ? ಆ ಹುಡುಗೆಯನ್ನು ರಮಾಬಾಯಿಯು ಪರಿಪರಿಯಾಗಿ ಉರಿಸುತ್ತಿದ್ದಳು.

ಆದರೆ ತಾವಾಗಿ ಈ ವಿಚಾರವನ್ನು ಸೂಚಿಸುವದು ಹೇಗೆ ? ಅಲ್ಲದೆ ರಮಾಬಾಯಿಯೊಡನೆ ಬೀಗತನವೆಂದರೆ ಅವರ ಮನಸ್ಸು ಒಪ್ಪದಾಗಿತ್ತು. ಇಷ್ಟೇ ಅಲ್ಲ.ಅವರದು ಆಚಾರ್ಯರ ಮನೆತನ. ತಮಗೆ ತಕ್ಕ ವರದಕ್ಷಿಣೆ–ವರೋಪಚಾರ–ಮೊದಲಾದವುಗಳನ್ನು ಕೊಟ್ಟರೆ ಮಾತ್ರ ಅವರ ಮನೆಯ ಹೆಣ್ಣನ್ನು ತಾವು ತೆಗೆದುಕೊಳ್ಳಬಹುದು.

ಅದು ಏನೇ ಇರಲಿ. ಮಗನಿಗೆ ಹೆಣ್ಣುಕೊಡಲು ಜನರು ಮನೆಗೆ ಬಂದರೆ ಯಾವ ತಾಯಿಗೆ ತಾನೆ ಆನಂದವಾಗಲಿಕ್ಕಿಲ್ಲ ? ಅದರಲ್ಲಿ ಇಲ್ಲಿಯವರೆಗೆ ಎರಡೂ ಮನೆತನಗಳ ನಡುವೆ ಈರ್ಷೆ–ಸ್ಪರ್ಧೆಗಳು ಬೆಳೆಯುತ್ತ ಬಂದಾಗ ಒಂದು ಮನೆಯ ಹಿರಿಯರು ತಾವಾಗಿಯೇ ಇನ್ನೊಂದು ಮನೆಗೆ ವರಾರ್ಥಿಯಾಗಿ ಹೋದಲ್ಲಿ ಆ ಮನೆಯವರಿಗೆ ಅಭಿಮಾನವೆನಿಸುವದರಲ್ಲಿ ಆಶ್ಚರ್ಯವೇನು ? ಆಚಾರ್ಯರೂ ಸುಬ್ಬನೂ ಬಂದೊಡನೆಯೆ ಜಾನಕಿಬಾಯಿಯವರು ಎರಡು ಮಣೆಗಳನ್ನಿರಿಸಿ ಅವರನ್ನು ಆದರದಿಂದ ಬರಮಾಡಿಕೊಂಡರು.

ಈ ಆದರವನ್ನು ನೋಡಿ ಆಚಾರ್ಯರ ಮನಸ್ಸಿನಲ್ಲಿ ಅರ್ಧ ಹಗುರಾಯಿತು. ಮನೆಯಲ್ಲಿ ಕಾಲಿಟ್ಟ ಕೂಡಲೆ ಹೊರಗೆ ದೂಡುವ ಹೆಣ್ಣುಮಗಳಿವಳು. ಏನೋ ಶುಭ ಲಕ್ಷಣವಿದೆಯೆಂದರು.

“ ಕುಸುಮಾ ಬೆಳದು ನಿಂತಾಳಲ್ಲಾ ” ಎಂದು ಆಚಾರ್ಯರು ಹತ್ತಿರ ನಿಂತಿದ್ದ ಕುಸುಮೆಯನ್ನು ನೋಡಿ ನುಡಿದರು.

“ ಈಗಿನ ಹುಡುಗೂರು. ಹತ್ತು ವರ್ಷ ಆಗೋದರಾಗ ಮುಗಿಲುದ್ದ ಆಗತಾವ. ಅದರಾಗ ಇಂಗ್ಲಿಷ ಸಾಲೆಗೆ ಹೋದರ ಮುಗಿ ನೀರು ಎರದ್ಹಾಂಗ. ನಮ್ಮ ಮನ್ಯಾಗ ಹುಡುಗರಿಗೆ ಕೆಲಸ ಹಚ್ಚೂದುಲ್ಲ, ಎತ್ತಿಗೋಳಲಿಕ್ಕೆ ಅಂದ್ರ ಮುಂಗಡಿ ಕೂಸಿಲ್ಲ. ಮನ್ಯಾಗ ಕೂಡೋದ ಸಾಲೆಗೆ ಹೋಗತಾಳ ” ಎಂದು ಜಾನಕಿಬಾಯಿಯವರು ದನಿ ತೆಗೆದು ಹೇಳಿದರು.

ಈ ಬಾಣವು ಆಚಾರ್ಯರ ಮರ್ಮಕ್ಕೆ ತಗಲಿತು. ಮಾಡುವದೇನು? ಸಹಿಸಿಕೊಂಡರು. “ ನಮ್ಮ ಪದ್ಮಾವತೀನು ಮನ್ಯಾಗ ಕಲತಾಳ. ವೈದಿಕರ ಮನೆತನ. ಸಾಲೆಗೆ ಹ್ಯಾಂಗ ಕಳಸೋದು ? ನರಹರಿ ಸಂಗತೀಲೆ ಕನಡು ಕಲತಾಳ.ಆಗೀಗ ಇಂಗ್ಲಿಷು ಕಲಸತಾನ ನರಹರಿ.”ತನ್ನ ಹವಣಿಕೆಯಲ್ಲಿದ್ದ

ಹುಲಿಯನ್ನು ಈ ಮಾತಿನಿಂದ ತಾವು ಮತ್ತಿಷ್ಟು ಕೆರಳಿದೆವೆಂದು ಆಚಾರ್ಯರಿಗೆನಿಸಲಿಲ್ಲ.

ಜಾನಕಿಬಾಯಿಯವರು ಮೋರೆಯನ್ನು ಗಂಟಿಕ್ಕಿ ನುಡಿದರು. 'ನನ್ನ ಮಾತು ಕೇಳಿದರ ಯಾವ ಗಂಡ ಹುಡುಗರನ್ನೂ ಇಂಗ್ಲಿಷು ಸಾಲೆಗೆ ಹಾಕ ಬಾರದು ನೋಡಿರಿ! ತಾವು ಕೇಡೋದಲ್ಲದ ಮನಸ್ಯಾಗಿನ ಹೆಣ್ಣು ಹುಡುಗರನ್ನೂ ಕೆಡಸತಾವ. ಓದು-ಬರಿಲಿಕ್ಕೆ ಬಂದರ ಸಾಕು. ಹೆಚ್ಚೇನು ಬೇಕು? ಇದರ ಸಲುವಾಗಿ ಅಲ್ಲೇನು ನಾವು ಕೇಶವನ್ನ ಸಾಲೆ ಬಿಡಿಸಿದ್ದು''

ಇನ್ನು ವಿಹಿತವಲ್ಲವೆಂದು ಸುಬ್ಬಣಾಚಾರ್ಯರು ಸಂಭಾಷಣೆಯ ಸೂತ್ರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರ ಅವರು ಸರಸವಾಗಿ ಕೇಶವನ ಗುಣಗಾಯನವನ್ನು ಮಾಡಿದ್ದಲ್ಲದೆ ಜಾನಕಿಬಾಯಿಯವರ ಗುಣ ವೈಭವವನ್ನು ಬಣ್ಣಿಸಿ ಹೇಳಿದರು. ' ಇಂಥ ದೇಸಾಯ್ರು ಮನೆಗೆ ಬೀಗೋದಂದ್ರ ಹೆಣ್ಣಿನ ಪುಣ್ಯ, ಬಾಯ್ರು, ಹೆಣ್ಣಿನ ಪುಣ್ಯ. ನಾ ಡಂಗುರ ಹೊಡಿತೇನಿ ಈ ಮಾತು ' ಎಂದು ಅವರು ಎದೆಯ ಮೇಲೆ ಕೈಯಿಟ್ಟರು.

ಜಾನಕಿಬಾಯಿಯವರು ಸಂತುಷ್ಟರಾದರು. ಬಳಿಕ ಹೈಗ್ರೀವಾಚಾರ್ಯರು ತಾವು ಮಗಳನ್ನು ಕೊಡಲು ಬಂದ ಮಾತೆತ್ತಿದ್ದರು. ರಾಯರೆದುರು ನುಡಿದಂತೆ ಪರಸ್ಪರ ಪ್ರೇಮವು ಬೆಳೆಯಲೆಂದು ಹಾರೈಸಿದರು. ಇದಲ್ಲದೆ ಸ್ವತಃ ಸ್ವಾಮಿಗಳು-ಧರ್ಮಮೂರ್ತಿಗಳು-ಈ ಲಗ್ನವನ್ನು ಬಯಸಿರುವರೆಂದು ಹೇಳಿದರು.ಅವರ ಆಜ್ಞೆಯನ್ನು ಶಿರಸಾವಹಿಸಿ ಆಚಾರ್ಯರು ಇಲ್ಲಿ ಬಂದಿದ್ದರು. ಇದನ್ನೆಲ್ಲ ಜಾನಕಿಬಾಯಿಯವರು ಗಂಭೀರವಾಗಿ ಕೇಳಿದರು.ಸ್ವಾಮಿಗಳಲ್ಲಿ ಅವರ ಭಕ್ತಿ ಬಹಳ. ತೀರ್ಥಪ್ರಸಾದರು ಮೊಗ್ಗಾವಿಗೆ ಬಂದಂದಿನಿಂದ ಅವರ ಭಾವಿಕತೆಗೆ ಸೀಮೆಯೇ ಇರಲಿಲ್ಲ. ಸ್ವಾಮಿಗಳೆಂದರೆ ಸಾಕ್ಷಾತ್ ದೇವರೆಂದು ಅವರ ಕಲ್ಪನೆಯಾಗಿತ್ತು. ಇಂಥ ಸ್ವಾಮಿಗಳು ಸ್ವತಃ ತಮ್ಮ ಮಗನ ಲಗ್ನದ ವಿಚಾರದಲ್ಲಿ ಉತ್ಸುಕರಾಗಿರುವದು ಅವರಿಗೊಂದು ಹೆಮ್ಮೆಯ ವಿಷಯವಾಯಿತು. ಇನ್ನು ರಮಾಬಾಯಿಯವರ ವಿಚಾರ. ತಾವು ಗಂಡಿನವರಾಗಿ ಬಿಟ್ಟರೆ ಅವರ ಸೊಕ್ಕನ್ನು ಚೆನ್ನಾಗಿ ಮುರಿದಂತಾಗುವದೆಂದು ಜಾನಕಿಬಾಯಿಯವರಿಗೆ ಸಂತೋಷವಾಯಿತು. "ಮೊನ್ನೆ ಹೊನ್ನಿಹಳ್ಳಿಯವರು ಬಂದಿದ್ದರು. ಅವರಿಗೆ ಮೂರು ಸಾವಿರ

ವರದಕ್ಷಿಣೆ ಕೇಳಿದ್ದೇವೆ.ಸಣ್ಣವರ ತುತ್ತಲ್ಲ. ಸುಮ್ಮನೆ ತಿರುಗಿ ಹೋದರು'' ಎಂದು ಜಾನಕಿಬಾಯಿಯವರು ಅರ್ಥಪೂರ್ಣವಾಗಿ ನುಡಿದರು.

ಆಚಾರ್ಯರು ಹೊತ್ತ ದೋತರವನ್ನು ಜಾಡಿಸುತ್ತ ಎದ್ದರು '' ವರ ದಕ್ಷಿಣೆ ಕಾಳಜಿ ಬಿಡ್ರಿವಾ ! ಸ್ವಾಮಿಗೋಳ ಸಮಕ್ಷಮ ಎಲ್ಲಾ ಗೊತ್ತು ಮಾಡೋಣು. ರಾಯರು ಬರಲಿ. ಮುಖ್ಯ ಇರೋದು ಅಂತಃಕರಣ'' ಎಂದು ಹೇಳಿ ಹೊರಡಲನುವಾದರು. ಬಾಯಿಯವರು ಬಾಗಿಲ ವರೆಗೆ ಹೋಗಿ ಅವರನ್ನು ಕಳಿಸಿ ಬಂದರು.

ಇತ್ತ ಊಟವಾದ ಮೇಲೆ ತನ್ನ ಕೋಣೆಯಲ್ಲಿ ಸ್ವಸ್ಥವಾಗಿ ಮಲಗಿ ಕೊಂಡ ಕೇಶವನು ಈ ಸಂಭಾಷಣೆಯ ಮಧ್ಯದಲ್ಲಿ ಎಚ್ಚರಗೊಂಡಿ ದ್ದನು. ಎಲ್ಲ ವಿಷಯವು ಅವನಿಗೆ ವಿದಿತವಾಗಿತ್ತು. ಆಚಾರ್ಯರು ಹೋದ ಮೇಲೆ ತನ್ನ ಕಿಟಿಕಿಯೊಳಗಿಂದ ಹಣಿಕಿ ಹಾಕಿ ನೋಡಿದನು. ಸೂರ್ಯನ ಹೂಬಿಸಿಲು ಸಂಧ್ಯಾಕಾಲವನ್ನು ಸೂಚಿಸಿತ್ತು. ಅವನಿಗಾದ ಆನಂದವನ್ನು ಬಣ್ಣಿಸಲಳವಲ್ಲ. ಏನು ಮಾಡುತ್ತೇನೆಂಬುದರ ಅರಿವಿಲ್ಲದೆ '' ಹೋ ! '' ಎಂದು ಒದರಿಕೊಂಡನು.ಜಾನಕಿಬಾಯಿಯವರು ಗಾಬರಿಯಾಗಿ ಹೋಗಿ ನೋಡಿದರು. ಕೇಶವನು ಕೋಣೆಯ ತುಂಬ ಕುಣಿಯಹತ್ತಿದ್ದನು !

ಪದ್ಮಾವತಿಯು ತಕ್ಕ ವಧುವಲ್ಲವೆನ್ನಲು ಜಾನಕಿಬಾಯರ ಕಾರಣ ಗಳೇನೇ ಇರಲಿ. ಕೇಶವನ ಈ ಹುಚ್ಚನ್ನು ನೋಡಿ ಅವರು ಅಧೀರರಾದರು. ಅವನ ಮೇಲಿನ ಮೋಹಕ್ಕೆ ಅವರು ಮೋಸಹೋದರು. ಅಂತೇ ಇನ್ನು ಈ ಲಗ್ನದ ವಿಷಯವು ಮುಂದುವರಿದರೆ ಅದಕ್ಕೆ ತಡೆಹಾಕುವದು. ಉಚಿತ ವಲ್ಲೆಂದು ಮನಸ್ಸಿನಲ್ಲಿ ನಿರ್ಧರಿಸಿದರು.

ಅಂದು ರಾತ್ರಿ ಮನೆಗೆ ಬಂದು ರಾಯರು ಈ ಮಾತೆತ್ತಿದಾಗ ಹೆಂಡ ತಿಗೆ ಈ ಲಗ್ನವು ಇಷ್ಟವಿದ್ದುದನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಮುಂಜಾನೆಯಿಂದ ಸಂಜೆಯ ವರೆಗೆ ಆಚಾರ್ಯರ ಮನೆತನವನ್ನು ಹಳಿದು ಕೊಳ್ಳುತ್ತಿದ್ದಳು. ಈಗ ಇದೇನು ? ರಾಯರು ಕೇಶವನ ಮನಸ್ಸನ್ನು ತಿಳಿಯಲಪೇಕ್ಷಿಸಿದರು. ಆದರೆ ಪದ್ಮಾವತಿಯನ್ನು ಲಗ್ನವಾಗುವೆನೆಂದೂ ಇಲ್ಲದಿದ್ದರೆ ಆಜನ್ಮ ಬ್ರಹ್ಮಚಾರಿಯಾಗಿ ಉಳಿಯುವೆನೆಂದೂ ಅವನು ಸ್ಪಷ್ಟ ವಾಗಿ ಹೇಳಿದನು. ಅಂದು ಸಂಭವಿಸಿದ ಸಂಗತಿಯಿಂದ ಅವನ ಉತ್ಸಾಹಕ್ಕೆ

ಪುಟ ಬಂದಿತ್ತು. ಆಗ ರಾಯರಿಗೆ ತಮ್ಮ ಹೆಂಡತಿಯ ಅಭಿಪ್ರಾಯದ ಅರ್ಥ ವಾಯಿತು. ಮಗನ ಸಲುವಾಗಿ ಈ ಹೆಣ್ಣುಮಗಳು ತನ್ನ ದ್ವೇಷವನ್ನೂ ಬದಿಗಿಡಲು ಸಿದ್ಧಳಿರುವಳಲ್ಲ ! ಎಂದು ಅವರು ಆಶ್ಚರಿಗೊಂಡರು.

ರಾಯರಿಗೆ ಇದೊಂದು ಬಲವಾದ ಪ್ರಘಾತವಾಯಿತೆನ್ನಬಹುದು. ಹೈಗ್ರೀವಾಚಾರ್ಯರ ನೆರಳೂ ಸಹ ಅವರಿಗೆ ಬೇಡಾಗಿತ್ತು. ಅಲ್ಲದೆ ಚಾಣಾಕ್ಷರಾದ ಅವರು ಈ ಪ್ರಸಂಗದಲ್ಲಿ ಆಚಾರ್ಯರ ಕಾರಸ್ಥಾನವನ್ನು ಕಂಡು ಹಿಡಿದಿದ್ದರು. ಸ್ವಾಮಿಗಳು ಕರೆಸಿದರೆ ಹೋಗಕೂಡದೆಂದೂ ಬಹಿಷ್ಕಾರವನ್ನು ಪ್ರಸಂಗ ಬಂದರೆ ಸ್ವೀಕರಿಸಬಹುದೆಂದೂ ಮನಸ್ಸಿನಲ್ಲಿ ನಿರ್ಧರಿಸಿದ್ದರು. ಆದರೆ ಇದೆಲ್ಲ ಈಗ ಹಳಪಂಡವಾಯಿತು. ತಾಯಿಗೂ ಮಗನಿಗೂ ಈ ಲಗ್ನವು ಬೇಕಿದ್ದಾಗ ಮನೆಯ ವಿಷಯದಲ್ಲಿ ವಿರಕ್ತಿಯನ್ನು ತಾಳಿದ ಅವರು ಇದನ್ನು ಏನೆಂದು ವಿರೋಧಿಸುವದು ? ಅದಕ್ಕಿಂತ ತಮ್ಮ ಪಾಲಿಗೆ ಬಂದ ಅವಮಾನ ವನ್ನು ಸಹಿಸಿಕೊಂಡಿರುವದು ಒಳಿತಲ್ಲವೆ ?

ಮರುದಿವಸ ನಿರೀಕ್ಷಿಸಿದಂತೆ ಸ್ವಾಮಿಗಳಿಂದ ಕರೆಯು ಬಂದಿತು. ನಿರ್ವಾಹವಿಲ್ಲದೆ ರಾಯರು ಹೋದರು. ಶ್ರೀಗಳವರ ಸನ್ನಿಧಿಯಲ್ಲಿ ಹೈಗ್ರೀವಾಚಾರ್ಯರೂ ಸುಬ್ಬಣಾಚಾರ್ಯರೂ ಕುಳಿತುಕೊಂಡಿದ್ದರು. ರಾಯರು ಹೋಗಿ ನಮಸ್ಕರಿಸಲು ಸ್ವಾಮಿಗಳು "ಗೋವಿಂದರಾಯಾ ! ಈಗ ನಡೆದ ಪ್ರಶ್ನೆಗೆ ನಿನ್ನ ಸಮ್ಮತಿಯಿರುವದಷ್ಟೆ ?" ಎಂದು ಹಸನ್ಮುಖರಾಗಿ ಕೇಳಿದರು. ರಾಯರು ಸುಮ್ಮನಿದ್ದರು. ಬಳಿಕ ಸ್ವಾಮಿಗಳು ಧರ್ಮದ ಮೇಲೆ ಒಂದು ಉಪನ್ಯಾಸವನ್ನು ಪ್ರಾರಂಭಿಸಿದರು. ಧರ್ಮಹೀನರನ್ನು ದಂಡಿಸಲು ತಮಗೆ ಸಂಪೂರ್ಣವಾದ ಅಧಿಕಾರವಿರುವದನ್ನು ಸ್ಪಷ್ಟಪಡಿಸಿದರು. ಇಂಥವರನ್ನು ಭಕ್ತವೃಂದದಿಂದ ಹೊರಗಿಡಬೇಕಾಗುತ್ತದೆ. ಅಷ್ಟು ದೀರ್ಘಕ್ಕೆ ಹೋಗುವ ಇಚ್ಛೆಯಿಲ್ಲ; ಇತ್ಯಾದಿ, ಇತ್ಯಾದಿ

ರಾಯರ ಪಿತ್ತವು ತಲೆಗೇರಿತು. "ಮಹಾಸ್ವಾಮಿ, ಈ ಲಗ್ನಕ್ಕೆ ನನ್ನ ಸಮ್ಮತಿಯಿರುವ ಪ್ರಸಂಗ ಬಂದಿದೆ. ಆದರೆ ಅದಕ್ಕೂ ಧರ್ಮಕ್ಕೂ ಎನು ಸಂಬಂಧ ? ನನ್ನ ಧರ್ಮಹೀನತೆಗಾಗಿ ಬೇಕಾದರೆ ತಾವು ನನ್ನನ್ನು ಬಹಿಷ್ಕರಿಸಬಹುದು." ಎಂದು ಧರ್ಪದಿಂದ ಉತ್ತರಕೊಟ್ಟರು.

ಸ್ವಾಮಿಗಳ ಕಣ್ಣು ಕೆಂಪೇರಿದವು. ಈ ಧಿಟ್ಟತನವು ಅವರಿಗೆ ಸಹನ ವಾಗಲಿಲ್ಲ. ಇಷ್ಟರಲ್ಲಿಯೇ ಶಾಪವನ್ನು ಕೊಡುವವರು; ಆಗ ಆಚಾರ್ಯ ದ್ವಯರಿಬ್ಬರೂ ಸ್ವಾಮಿಗಳೆದುರಿಗೆ ಅಡ್ಡಬಿದ್ದರು. ಅವರ ಚಿಂತೆಯಲ್ಲಿ ಬಯಲಾಗುವ ಮಾತು ಬಂದಿತ್ತು "ಜೀಯ, ಮಹಾಸ್ವಾಮಿ! ರಾಯರು ಲಗ್ನವಾಗಬಹುದೆಂದು ಒಪ್ಪಿದ್ದಾರೆ. ಈಗ ತಮ್ಮ ಕರುಣಿಸಿರಿ" ಎಂದು ಅಂಗಲಾಚಿ ಬೇಡಿಕೊಂಡರು.

ಸ್ವಾಮಿಗಳು ಶಾಂತರಾದರು. "ನಮ್ಮ ಪರಮಶಿಷ್ಯನ ಮನಸ್ಸನ್ನು ವಿಚಾರಿಸಲರಿಯದೆ ಇದನ್ನು ಇಲ್ಲಿಗೆ ಬಿಟ್ಟಿದ್ದೇನೆ. ಲಗ್ನಕ್ಕೆ ನಿಮ್ಮ ಸಮ್ಮತಿ ಯಿದೆಯಷ್ಟೇ?"

"ಇದೆಯೆಂದು ಮೊದಲೇ ಹೇಳಿದೆನಲ್ಲ?" ರಾಯರು ನಗುವಿನಿಂದ ಉತ್ತರಕೊಟ್ಟರು.

ಶ್ರೀಗಳವರು ಮತ್ತೆ ಪ್ರಸನ್ನರಾದರು. "ಹಾಗಲ್ಲ, ಗೋವಿಂದರಾಯರೇ! ನಿಮ್ಮಂಥ ಸ್ಪಷ್ಟೋಕ್ತಿಯ ಶಿಷ್ಯರಿಂದ ನಮ್ಮ ಭಕ್ತವೃಂದದ ಕೀರ್ತಿಯು ಬೆಳೆಯುತ್ತಲಿದೆ. ಈ ಲಗ್ನಕ್ಕೆ ಒಪ್ಪಿರುವದು ನಿಮಗೆ ಭೂಷಣವಾಗಿದೆ. ಇದರಿಂದ ನಿಮ್ಮ ವಂಶವು ಉತ್ತರೋತ್ತರವಾಗಿ ಬೆಳೆಯುವದು" ಎಂದು ರಾಯರನ್ನು ಪರಾಂಬರಿಸಿದರು.

ಇದೇ ಸಮಯದಲ್ಲಿ ಸಾಷ್ಟಾಂಗವೆರಗಬೇಕೆಂದು ಸುಬ್ಬಣಾ ಚಾರ್ಯರು ರಾಯರಿಗೆ ಸನ್ನೆಯಿಂದ ಸೂಚಿಸಿದರು. ಆದರೆ ಅವರು ಹಾಗೆ ಮಾಡಲಿಲ್ಲ.

ಮುಂದೆ ಮಾತು-ಕಥೆಗಳು ನಡೆದವು; ಎಲ್ಲವೂ ಸುಸೂತ್ರವಾಗಿ ಕೊನೆಗಂಡಿತು. ವರದಕ್ಷಿಣೆಯು ಎರಡು ಸಾವಿರಕ್ಕೆ ನಿಂತಿತು. ಇದೊಂದು ವಿಷಯವು ಮಾತ್ರ ಜಾನಕಿಬಾಯಿಯರಿಗೆ ಸಮಂಜಸವಾಗಿ ತೋರಲಿಲ್ಲ. ಆದ ರೇನು? ಶ್ರೀಗಳವರ ಚಿತ್ತ. ಸುಮ್ಮನಿದ್ದರು. ಮುಂದೆ ಮೂರು ತಿಂಗಳ ಮೇಲೆ ಲಗ್ನದ ವೇಳೆಯಲ್ಲಿ ಹೆಚ್ಚಿನದನ್ನು ಬೇಡಬಹುದಲ್ಲ'

ಕೆಲವು ದಿವಸಗಳಲ್ಲಿಯೇ ಈ ಲಗ್ನವು ನಿಶ್ಚಿತವಾದ ಸುದ್ದಿಯು ಊರ ಲ್ಲೆಲ್ಲ ಹಬ್ಬಿತು.

ಪ್ರಕರಣ ೭

## ವಧೂಪರೀಕ್ಷೆ

ಅಂತೂ ಕೇಶವನ ಜೀವನದ ಒಂದು ಸುವರ್ಣಸ್ವಪ್ನವು ಪ್ರತ್ಯಕ್ಷವಾಗುವಂತಾಯಿತು. ಅವನ ಆನಂದಕ್ಕೆ ಅಂತವಿಲ್ಲ. ಒಂದು ಕ್ಷಣವಾದರೂ ಅವನಿಗೆ ಕಲ್ಪವೃಕ್ಷ–ಕಲ್ಪಲತೆಗಳಲ್ಲಿ ವಿಶ್ವಾಸವು ಉತ್ಪನ್ನವಾಯಿತು. ಆನಂದದೊಡನೆ ಒಂದು ಹೆಮ್ಮೆ, ಹೆಮ್ಮೆಯೊಡನೆ ಒಂದು ಪೌರುಷ,–ಇಷ್ಟೆಲ್ಲ ಬಂದು ಅವನಲ್ಲಿ ಮನೆಮಾಡಿಕೊಂಡಿದ್ದವು. ಲಗ್ನವು ನಿಶ್ಚಯವಾದ ಸಂಗತಿಯು ಕೇಶವನ ಗೆಳೆಯರಿಗೆ ತಿಳಿದೊಡನೆ ಅವರೆಲ್ಲರೂ ಅವನ ಸುತ್ತ ನೆರೆದರು. ಭೀಮನ ದರ್ಪಕ್ಕೆ ಸೀಮೆಯೇ ಉಳಿಯಲಿಲ್ಲ. ಅವನು ಹೇಳಿದ ಹುಡಿಗೆಯು ಕೇಶವನಿಗೆ ಸಿಕ್ಕಿತಲ್ಲವೆ? ಎಲ್ಲ ಗೆಳೆಯರೂ ಕೇಶವನ ಸುದೈವವನ್ನು ವರ್ಣಿಸಿದರು.

ಆದರೂ ವಧೂಪರೀಕ್ಷೆಯಾಗದೆ ಲಗ್ನವಾಗಬಹುದೆ? ಗೆಳೆಯರೆಲ್ಲ ಕೇಶವನನ್ನು ಕೆಣಕಿದರು. ಅವರಿಗೊಂದು ಆಹಾರ–ವಿಹಾರಕ್ಕಾಗಿ ನಿಮಿತ್ತವು ಬೇಕಾಗಿತ್ತು. ಕೇಶವನನ್ನು ಹುರಿದುಂಬಿಸಿದರು. ಕೇಶವನೂ ಪದ್ಮಾವತಿಯನ್ನು ಮೊದಲು ನೋಡಿದ್ದೇನೋ ನಿಜ. ಆದರೆ ಸಂಪ್ರದಾಯದಂತೆ ಹೆಣ್ಣನ್ನು ನೋಡಲಿಕ್ಕೆ ಹೋಗದೆ ಲಗ್ನವಾಗುವದು ಅವನಿಗೆ ಲಾಂಛನಾಸ್ಪದವೆನಿಸಿತು. ಇದೊಂದು 'ಬಾಬತ' ನ್ನಾದರೂ ಏಕೆ ಬಿಡಬೇಕು? ಕೊನೆಗೆ ಒಂದು ದಿನ ಮುಂಜಾನೆ ಅವನು ಭೀಮನೊಡನೆ ಆಚಾರ್ಯರಿಗೆ ಹೇಳಿಕಳುಹಿದನು.

ಆಚಾರ್ಯರಿಗೆ ಆಶ್ಚರ್ಯವಾಯಿತು. ಆದರೆ ಇದ್ದ ಸಂಗತಿಯು ಅವರಿಗೆ ತಟ್ಟನೆ ಹೊಳೆಯಲು ಆಗತ್ಯವಾಗಿ ಬರಬಹುದೆಂದು ಹೇಳಿದರು. ಮುಂದೊಂದು ತಾಸಿನಲ್ಲಿ ಕೇಶವನು ತನ್ನ ಪರಿವಾರದೊಂದಿಗೆ ಪದ್ಮಾವತಿಯ ಮನೆಗೆ ಬಂದನು. ಸುಬ್ಬನು ಬಾಗಿಲಿಗೆ ಒಂದು ಭಯಭಕ್ತಿಯಿಂದ ಅವರನ್ನು ಕರೆದುಕೊಂಡು ಹೋದನು. ಕೇಶವನ ಈಗಿನ ವೇಷವೇ

ಬೇರೆ. ಒಂದು ದಡಿಯಂಚಿನ ದೋತರ, ರೇಶಿಮೆಯ ಸಿಲ್ಕಂಗಿ, ಮೇಲೊಂದು ದೋತರ, ಜರದಂಚಿನ ರುಮಾಲು; ಎರಡು ಕೈಗಳ ಎಂಟು ಬೆರಳುಗಳಲ್ಲಿಯೂ ಅಷ್ಟಪೈಲಿನ ಉಂಗುರಗಳು; ಒಂದು ಕೈಯ ಮುಂಗೈಯಲ್ಲಿ ರಿಸ್ಟವಾಚು, ಇನ್ನೊಂದು ಕೈಯಲ್ಲಿ ಪೋಚೆ. ಎಂದೂ ಉಪಯೋಗಿಸದವನು ಇಂದು ಕನ್ನಡಕಗಳನ್ನು ಧರಿಸಿದ್ದನು. ಕುಸುಮೆಯು ಇದನ್ನೆಲ್ಲ ನೋಡಿ ನಕ್ಕು ಬಿಟ್ಟಿದ್ದಳು. "ಅಣ್ಣಾ! ಪದ್ದಕ್ಕ ನಿನ್ನ ನೋಡಿದರ ನಾಚಿಕೊಂಡು ಒಳಗ ಹೋಗತಾಳ. ಹುಲಗೇರಿ ಕಾಮಣ್ಣನ ಹಂಗ ಆಗಿಯಲ್ಲೊ!" ಎಂದು ಛೇಡಿಸಿದಳು. ಕೇಶವನಿಗೆ ಅತಿಶಯವಾಗಿ ಸಿಟ್ಟು ಬಂದರೂ ಗಂಭೀರನಾಗಿ ಮುಂದೆ ಸಾಗಿದ್ದನು.

ಕನ್ಯಾದರ್ಶನಾಪೇಕ್ಷಿಯಾದ ವರನು ಗೆಳೆಯರೊಡನೆ ಹೀಗೆ ಬಂದು ಕುಳಿತಿರಲು ಆದರ-ಸತ್ಕಾರವಾಗಿ ಫಲಹಾರ ಮುಂತಾದ ಕಾರ್ಯಗಳೂ ಕೊನೆಗಂಡವು. ರಮಾಬಾಯಿಯವರು ಆಗೀಗ ಬಂದು ಹಣಿಕಿ ನೋಡಿ ಮುಗುಳ್ನಗೆ ನಗುತ್ತ ಹೋಗುತ್ತಿದ್ದರು. ತಾಂಬೂಲಸೇವನೆಯೂ ಆಯಿತು. ಆದರೆ ಕನ್ಯೆಯೇ ಹೊರಗೆ ಬರಲಿಲ್ಲ. ಸುಬ್ಬನು ಹೊರಗಿನಿಂದ ಒಳಕ್ಕೆ ಮತ್ತೆ ಒಳಗಿನಿಂದ ಹೊರಕ್ಕೆ ನೂರೆಂಟು ಸಲ ಹಾಯ್ದರೂ ಕನ್ಯೆಯು ಬರುವ ಮಾತನ್ನೇ ಎತ್ತಲಿಲ್ಲ. ಎಲ್ಲವೂ ನಿಶ್ಶಬ್ದವಾಯಿತು. ಕೇಶವನ ಮೋರೆಯನ್ನು ಅವನ ಗೆಳೆಯರೆಲ್ಲರೂ ಮಿಕಿ ಮಿಕಿ ನೋಡಿದರು. ಕೇಶವನು ತನ್ನ ಗೆಳೆಯರ ಮೋರೆಯನ್ನು ನೋಡಿದನು. ಕಡೆಗೆ ಭೀಮನು ದರ್ಪದಿಂದ ಸುಬ್ಬನಿಗೆ "ಆಚಾರಸ್ವಾಮಿ, ಹುಡಿಗಿನ್ನ ಕರಕೊಂಡು ಒರ್ರಿಲಾ" ಎಂದು ಹೇಳಿದನು. ಸುಬ್ಬನು ಆಶ್ಚರ್ಯವನ್ನು ನಟಿಸಿದನು. "ಇಷ್ಟೇನೆ! ಮೊದಲೇ ಹೇಳಬೇಕಾಗಿತ್ತು; ಇಲ್ಲಿಯೇ ತಂದು ಕೂಡಸತಿದ್ದೆ" ಎಂದಂದು ಒಳಗೆ ಹೋಗಿ ಪದ್ಮಾವತಿಗೆ ಬರಹೇಳಿದನು. ಪದ್ಮಾವತಿಯು ಬಂದು ಎಲ್ಲರಿಗೂ ನಮಸ್ಕರಿಸಿ ದೂರದಲ್ಲಿ ಮುದುಡಿಕೊಂಡು ಕುಳಿತಳು. ಆಕೆಯು ಯಾವ ಆಭರಣವನ್ನೂ ಇಟ್ಟಿರಲಿಲ್ಲ. ಹೊಸ ಸೀರೆಯನ್ನೂ ಸಹ ಉಟ್ಟಿರಲಿಲ್ಲ. ಆದರೆ ಅವಳು ಒಂದೊಡನೆಯೆ ಅವಳ ವರ್ಚಸ್ಸು ಎಲ್ಲರ ಮಾತನ್ನು ಮುಳುಗಿಸಿತು. ಎಲ್ಲರೂ ತಟಸ್ಥರಾಗಿ ಪದ್ಮಾವತಿಯನ್ನು ನೋಡತೊಡಗಿದರು. ಕೇಶವನು ಒಮ್ಮೆ ಆಚಾರ್ಯರನ್ನೂ ಒಮ್ಮೆ ಪದ್ಮಾವತಿಯನ್ನೂ

ನೋಡುತ್ತ ಜನಿವಾರವನ್ನು ತನ್ನ ರಿಸ್ಟ್‌ವಾಚನ್ನು ನೋಡಿಕೊಂಡನು. ಕ್ಷಣ ಕ್ಕೊಮ್ಮೆ ಅವನು ಮುಚ್ಚಿದ್ದ ಕೋಟಿನ ತುದಿಯನ್ನು ಮೇಲಕ್ಕೇರಿಸಿ ಕೊಳ್ಳುತ್ತಿದ್ದನು.

ನಿಮಿಷದವು ನಿಮಿಷಗಳ ವರೆಗೆ ಯಾರೂ ಮಾತನಾಡಲಿಲ್ಲ. ಕಡೆಗೆ ಸುಬ್ಬಣ್ಣಾಚಾರ್ಯರು “ಪದ್ಮಕ್ಕಾ! ಇನ್ನು ಒಳಗೆ ಹೋಗುವಾ!” ಎಂದು ಹೇಳುತ್ತಿದ್ದರು. ಪದ್ಮಾವತಿಯು ಹೊರಡಲನುವಾದಳು. ಕೂಡಲೆ ಎಲ್ಲರು ಬಡಿದೆಬ್ಬಿಸಿದಂತೆ ಎಚ್ಚರಗೊಂಡರು. ಕೇಶವನು ಸರಿದಾಡಹತ್ತಿದನು. ಭೀಮನು ರೇಗಿಗೆದ್ದನು. “ಯಾಕೆ ಆಚಾರಸ್ವಾಮಿ! ಒಳ್ಳೆ ಪಿರೇತನ ಕಾಂತದ ನಿಮ್ಮದು” ಎಂದು ಆವೇಶದಿಂದ ಕೇಳಿದನು. ಸುಬ್ಬಣ್ಣಾಚಾರ್ಯರು ದೇವತಾಪರೀ ನಗೆಯನ್ನು ನಕ್ಕರು. “ಹೀಂಗs! ಕೂಡವಾ ಪದ್ಮವ್ವಾ! ಇಷ್ಟೊಂದು ತಾನು ಕೂಡು, ರಾಯರ ಮನಸ್ಸಿಗೆ ಒಂದರ! ಒದಿಸಿಗೋತೀರೇನು ಹುಡುಗನ್ನ? ಓದಿ ನೋಡಿರಿ. ತೊಗೋರಿ ಈ **ಪ್ರಜಾಮತ**ದ ಪತ್ರಾನ” ಎಂದು ವರ್ತಮಾನ ಪತ್ರವನ್ನು ತೆಗೆದು ಅವರು ಭೀಮನ ಕೈಯಲ್ಲಿ ಕೊಟ್ಟರು. ಭೀಮನು ಕೇಶವನ ಕಡೆಗೆ ನೋಡಿದನು. ಕೇಶವನು ತಲೆಹಾಕಿದನು. ಆಗ ಭೀಮನು ಮೇಲಿನ ಪಾನಿನಲ್ಲಿಯೇ ಒತ್ತಿ ಮುದ್ರಿತವಾಗಿದ್ದ ಕೆಲವು ಪಙ್ಕ್ತಿಗಳನ್ನು ತೋರಿಸಿ ಅವುಗಳನ್ನು ಓದಿರೆಂದು ಸುಬ್ಬಣ್ಣಾಚಾರ್ಯರಿಗೆ ಹೇಳಿದನು. ಪದ್ಮಾವತಿಯು **ಪ್ರಜಾಮತ**ವನ್ನು ತೆಗೆದುಕೊಂಡು ಪಙ್ಕ್ತಿಗಳನ್ನು ದಿಟ್ಟಿಸಿದಳು. ಆದರೆ ಓದಲಿಲ್ಲ.

ಅಲ್ಪಾವಧಿಯ ವರೆಗೆ ತಡೆದು ಭೀಮನು ನಿಷ್ಠುರನಾಗಿ ಕೇಳಿದನು. “ಯಾಕೆ, ಆಚಾರ! ಹುಡುಗಿಗೆ ಓದು-ಬರಹ ಕಲಿಸಿಲ್ಲೇನು?”

ಹೈಗ್ರೀವಾಚಾರ್ಯರು ಬೆಚ್ಚಿಬಿದ್ದರು. “ಕಲಿತಾಳ, ರಾಯರ, ಕಲಿತಾಳ! ಪದ್ಮಕ್ಕಾ! ಸುಮ್ಮನ್ಯಾಕ ಕೂತಿ? ಓದು! ಓದಿ ಮುಗಿಸು!”

ಪದ್ಮಾವತಿಯು ಸೆರಗಿನಿಂದ ಬಾಯನ್ನೊರಿಸಿಕೊಂಡು ತುಸು ನಕ್ಕಳು. “ಅಪ್ಪಾ! ಅದು ಓದುವ ಹಾಗಿಲ್ಲ” ಎಂದು ಮೆಲ್ಲನೆ ಹೇಳಿದಳು.

“ಯಾಕ! ಅದಕೇನಾಗೇದ! ಶಿರೋನಾಮ ಏನದ?” ಎಂದು ಆಚಾರ್ಯರು ಗಡಿಬಿಡಿಯಿಂದ ಕೇಳಿದರು.

“ಭಯಂಕರ ಕೊಲೆ!” ಎಂದು ಪದ್ಮಾವತಿಯು ಸಣ್ಣದನಿಯಿಂದ ಗಾಬರಿಯಾಗಿ ಹೇಳಿದಳು.

ಸುಬ್ಬಣ್ಣಾಚಾರ್ಯರಿಗೆ ನಿಂತಲ್ಲಿಯೇ ಕೂದಲು ನೆಟ್ಟಗಾದವು. ಅವರು ಮುಂದುವರಿದು ಪ್ರಜಾಹಂಸವನ್ನು ಕಸಿದುಕೊಂಡರು. “ಅಯ್ಯೋ! ಅಮಂಗಲ! ಭಯಂಕರ ಕೊಲೆ! ರಾಯರ! ಏನನ್ಯಾಯ! ಏನನ್ಯಾಯ! ಗಂಡ-ಹೆಂಡತಿನ್ನ ಕೊಂದದ್ದು! ರಾಯರ! ನೀವು ಇದನ್ನು ಓದಲಿಕ್ಕೆ ಹೇಳಬೇಕ? ನಿಮಗ ಓದು ಬರುದುಲ್ಲ?” ಎಂದು ಭೀಮನಿಗೆ ಪ್ರಜಾಹಂಸವನ್ನು ಕೊಟ್ಟು ಮನೆ ತುಂಬ ತಿರುಗಾಡಹತ್ತಿದರು. ಕೇಶವನ ಗೆಳೆಯರೆಲ್ಲರೂ ಗಾಬರಿಯಾದರು. ಭೀಮನು ಮುಂದುಗಾಣದೆ ಕೂತನು. ಕೇಶವನ ಹಣೆಯ ಮೇಲೆ ಬೆವರು ಹನಿಗೂಡಿದ್ದವು.

ಇನ್ನು ನಿರ್ವಾಹವಿಲ್ಲೆಂದು ಸುಬ್ಬಣ್ಣಾಚಾರ್ಯರು ಸಾವರಿಸಿಕೊಂಡು ಎದ್ದರು. “ರಾಯರ! ಏನೂ ಹರವಾ ಇಲ್ಲ! ಕಣ್ಣು ತಪ್ಪಿ ಆಗತಾವ. ಇನ್ನ ನಾನು ನಿಮ್ಮ ಮುಸಿ ಕತೆ ಹಿರೇ ಮನಸ್ಯಾ ಆಗತೇನಿ. ಕುಡುಗನ್ನ ಹೀಂಗ ಪರೀಕ್ಷಾ ಮಾಡಬೇಕು ನೋಡರಿ!” ಎಂದು ಹೇಳಿ ಹೋಗಿ ಪದ್ಮಾವತಿಯಿಂದ ತುಸು ದೂರದಲ್ಲಿ ಕುಳಿತರು. ಆಗ ಅವರ ಮುಖಚರ್ಯೆಯು ಬದಲಾಯಿತು. ಹುಬ್ಬುಗಳು ಗಂಟಿಕ್ಕಿದವು. ಕಣ್ಣುಗಳು ಹೆಚ್ಚಿಗೆ ತೀಕ್ಷ್ಣವಾದವು. ತಂದೆಯ ಈ ಸ್ಥಿತಿಯನ್ನು ನೋಡಿ ಪದ್ಮಾವತಿಯು ಸಹ ಗಾಬರಿಯಾದಳು.

“ನಿನ್ನ ಹೆಸರೇನು?” ಆರೋಪಿಯನ್ನು ನ್ಯಾಯಾಧೀಶರು ಕೇಳುವಂತೆ ಆಚಾರ್ಯರು ಪದ್ಮಾವತಿಯನ್ನು ಕೇಳಿದರು.

‘ಪದ್ಮಾವತಿ’ ಎಂದು ಹುಡುಗಿಯು ಉತ್ತರವಿತ್ತಳು.

“ಎಲ್ಲಿ, ನೋಡೋಣ? ಮೋರೆಯನ್ನು ಮೇಲೆತ್ತು? ಕೇಶವರಾವ್! ದೃಷ್ಟಿದೋಷ ಇರಬಹುದೇನು?” ಇದನ್ನು ಕೇಳಿ ಕೇಶವನು ಆಶ್ಚರ್ಯಚಕಿತನಾಗಿ ಆಚಾರ್ಯರ ಕಡೆಗೆ ನೋಡಿದನು. ಪದ್ಮಾವತಿಯು ಮುಖವನ್ನು ಮೇಲೆತ್ತಿದಳು. ಆಚಾರ್ಯರು ದಿಟ್ಟಿಸಿ ನೋಡಿ “ಇಲ್ಲ, ದೃಷ್ಟಿದೋಷ ಇಲ್ಲ. ಎಷ್ಟು ಕಲಿತಿಯವಾ ತಂಗಿ?” ಎಂದು ಮತ್ತೆ ಕೇಳಿದರು.

“ಕನ್ನಡ ಓದಿಕೊಂಡೇನಿ ಮನ್ಯಾಗ” ಪದ್ಮಾವತಿಯು ಹೇಳಿದಳು

“ ಎಲ್ಲಿ? ಓದು ನೋಡೋಣು! **ಮುದ್ರಾಮಂಜೂಷ** ತೊಗೊಂಡು ಬಾರೊ, ನರಹರಿ! ರಾಯರ! **ಮುದ್ರಾಮಂಜೂಷ** ಅಂದರ ಕನ್ನಡ ಭಾಷಾದ ಕಾಮಧೇನು ” ಎಂದು ಆಚಾರ್ಯರು ಕೇಶವನ ಕಡಗೆ ತಿರುಗಿ ನುಡಿದರು. ಇದನ್ನೆಲ್ಲ ನೋಡಿ ವಿಸ್ಮಯವನ್ನು ಪ್ರಕಟಿಸುವ ನರಹರಿಯು ಆ ಗ್ರಂಥವನ್ನು ತಂದುಕೊಟ್ಟನು. ಪದ್ಮಾವತಿಯು ಅರ್ಧ ಪಾನಿನ ವರೆಗೆ ಓದಿದಳು.

“ ಸಾಕು ಬಿಡವ್ವಾ, ತಂಗಿ! ರಾಯರ, ನೋಡಿರಿ, ಎಷ್ಟು ಮನೋಹರ ಅದ ” ಎಂದು ಆಚಾರ್ಯರಂದರು. ಕೇಶವನು ತಲೆ ಹಾಕಿದನು. ತಿಳಿಯಿತೋ ಬಿಟ್ಟಿತೋ ದೇವರೇ ಬಲ್ಲ.

“ ನಿನಗ ಇಂಗ್ಲಿಷು ಬರತದೇನು ತಂಗಿ! ” ಆಚಾರ್ಯರು ಮತ್ತೆ ಮಗಳ ಕಡೆಗೆ ತಿರುಗಿದರು.

‘ ಹೂಂ ’ ಪದ್ಮಾವತಿಯು ಉತ್ತರಕೊಟ್ಟಳು. ಆಚಾರ್ಯರು ಹೇಳಿದಂತೆ ಮತ್ತೆ ಕೆಲವು ಇಂಗ್ಲಿಷು ವಾಕ್ಯಗಳನ್ನು ಓದಿ ತೋರಿಸಿದಳು. ಕೇಶವನು ಅವನ ಗೆಳೆಯರೂ ಅಸಾಧಾರಣ ಪಂಡಿತರು. ಕನ್ನಡು ಓದಲಿಕ್ಕೆ ಚೆನ್ನಾಗಿ ಬರುತ್ತಿರಲಿಲ್ಲ. ಇಂಗ್ಲಿಷಿನ ಮಾತಂತೂ ದೂರವಾಯಿತು. ಎಲ್ಲರೂ ತಲೆ ಕೆಳಗೆ ಹಾಕಿ ಸುಮ್ಮನೆ ಕುಳಿತರು.

“ ರಾಯರೇ! ಇನ್ನು ಕಂಠ ಪರೀಕ್ಷೆಮಾಡೋಣು. ಹಾಡಲಿಕ್ಕೆ ಬರತದೇನು ತಂಗಿ! ” ಎಂದು ಮತ್ತೆ ಆಚಾರ್ಯರು ಕೇಳಿದರು.

ಪದ್ಮಾವತಿಯು ‘ ಹೂಂ ’ ಎಂದಳು. ಎಲ್ಲರಿಗೂ ಇಲ್ಲಿಯವರೆಗಾದ ಅಭಿಮಾನಖಂಡನೆಯು ಸಾಕಾಗಿ ಹೋಗಿತ್ತು. ಕಡೆಗೆ ಭೀಮನು ನುಡಿದನು. “ ಆಚಾರ ! ಇನ್ನು ಸಾಕು ಬಿಡ್ರಿ. ಒಳಗ ಕಳಸರಿ ಹುಡುಗಿನ್ನ. ”

ಆಚಾರ್ಯರು ತುಸು ನಕ್ಕರು. “ ಹೀಂಗ? ಒಳಗ ಹೋಗವಾಪದ್ದಕ್ಕ! ಅಕಾ ನೋಡರಿ, ರಾಯರ! ಈ ಹೊತ್ತಿನ್ಯಾಗ ನಡಿಯೋದು ನೋಡಬೇಕು. ಹೆಜ್ಜ್ಯಾಗ ಏನು ದೋಷಿಲ್ಲ. ” ಎಂದು ಮತ್ತೆ ಕೇಶವನ ಕಡೆಗೆ ಹೊರಳಿ ಹೇಳಿದರು.

“ ಭಲೆ! ಆದರ ಹೀಂಗ ಆಗಬೇಕು ಹೆಣ್ಣಿನ ಪರೀಕ್ಷೆ ” ಎಂದು ಸುಬ್ಬಣಾಚಾರ್ಯರು ಶ್ಲಾಘನೆಮಾಡಿದರು.

ಕೇಶವನಿಗೆ ಸಾಕುಬೇಕಾಗಿ ಹೋಗಿತ್ತು. ಭೀಮನು ಹೋಗಿಬರುತ್ತೇವೆಂದು ಹೇಳಿ ಎಲ್ಲರೊಡನೆ ಎದ್ದನು. ಆಚಾರ್ಯರು ಮತ್ತೆ ಮನೆಯ ಹಿರಿಯರಾಗಿ ಎಲ್ಲರನ್ನೂ ಬೀಳ್ಕೊಟ್ಟರು !

ಇತ್ತ ಅಕ್ಕನ ಲಗ್ನವು ಗೊತ್ತಾದಂದಿನಿಂದ ನರಹರಿಗೆ ವೇಳೆಯೇ ಸಿಕ್ಕುತ್ತಿರಲಿಲ್ಲ. ವಾರ್ಷಿಕ ಪರೀಕ್ಷೆಯ ಅಭ್ಯಾಸವನ್ನು ಅವನು ಚೆನ್ನಾಗಿಯೇ ಮಾಡಿದ್ದನು. ಅಭ್ಯಾಸಕ್ಕೆಂದು ಅವನು ವಕೀಲರ ಶೀನೂನ ಕೋಣೆಗೆ ಹೋಗುವ ಪರಿಪಾಠವನ್ನು ಇಟ್ಟುಕೊಂಡಿದ್ದನು. ಪರೀಕ್ಷೆಗೆ ಇನ್ನೂ ಒಂದು ತಿಂಗಳಿತ್ತು. ಪರೀಕ್ಷೆ ಮುಗಿದ ಎಂಟು ದಿನಗಳ ಮೇಲೆಯೇ ಅಕ್ಕನ ಲಗ್ನ ! ಲಗ್ನದ ಪೂರ್ವತಯಾರಿಯಲ್ಲಿ ನರಹರಿಯ ಅಂಗವೂ ಇತ್ತು. ಸುಬ್ಬಣಾಚಾರ್ಯರಿಗಂತೂ ಒಂದು ಕ್ಷಣ ಅವಕಾಶವಿರಲಿಲ್ಲ. ಸಾಮಾನುಗಳ ಯಾದಿ ಮಾಡುವದು, ಸಣ್ಣ ಸಣ್ಣ ಚೀಲಗಳನ್ನು ಹೊಲಿದು ಅವಕ್ಕೆ ಹೆಸರಿಡುವದು, 'ಕೋಠೀಕೋಣೆ'ಯ ಸೃಷ್ಟಿಯನ್ನೆಲ್ಲ ನಿರ್ಮಿಸುವದು, ಇವೇ ಮುಂತಾದ ಕಾರ್ಯಕಲಾಪಗಳಲ್ಲಿ ಅವರು ತೊಡಗಿಹೋಗಿದ್ದರು. ತಿಪ್ಪನಿಗೂ ಕೆಲವು ಸಣ್ಣ ಕೆಲಸಗಳನ್ನು ಆಚಾರ್ಯರು ನಿರ್ಮಿಸಿಕೊಟ್ಟಿದ್ದರು. ಮೇಲಾಗಿ ಬಾಣಂತಿತನಕ್ಕೆಂದು ಬಂದ ವೆಂಕಮ್ಮನವರು ಈಗ ಲಗ್ನಕ್ಕಾಗಿ ದುಡಿಯುತ್ತಿದ್ದರು. ಕಿಟ್ಟು ರಮಾಬಾಯರ ಕೈಯನ್ನೇ ಬಿಡುತ್ತಿರಲಿಲ್ಲ. ಸ್ವಾಮಿಗಳು ಊರಲ್ಲಿರುವನಕ ಹೈಗ್ರೀವಾಚಾರ್ಯರಿಗೆ ಪುರಸತ್ತಿರಲಿಲ್ಲ. ಈಗ, ಶ್ರೀಗಳವರು ಇನ್ನೊಂದು ಊರಿಗೆ ಬಿಜಯಂಗೈಯಿಸಿದ ಮೇಲೆ, ಅವರಿಗೆ ಬಿಡುವು ದೊರೆತಿತ್ತು.

ಅಕ್ಕನು ಸುಖವಾಗಿರಬೇಕೆಂದು ನರಹರಿಯ ಆಕಾಂಕ್ಷೆ. ಅದಕ್ಕಾಗಿ ಅವನು ಮಾಡುವ ವಿಶ್ವಪ್ರಯತ್ನವು ಮೋಹಕವಾಗಿತ್ತು. ಹಾದಿಯಲ್ಲಿ ಅಕಸ್ಮಾತ್ತಾಗಿ ಕೇಶವನು ಭೆಟ್ಟಿಯಾದರೆ ಮನೆಗೆ ಬಂದು "ಅಕ್ಕಾ ! ಇಂದು ಕೇಶವರಾಯರು ಭೆಟ್ಟಿಯಾಗಿದ್ದರು. ನನ್ನ ನೋಡಿ ನಕ್ಕರು" ಎಂದು ಸುದ್ದಿ ಬೀರುತ್ತಿದ್ದನು. ಮತ್ತೆ ಅಕ್ಕನಿಗೆ "ನೀನು ಊರಟಣಿ ಮಾಡುವಾಗ ಮರಾಠಿ ಒಗಟ ಹಾಕಬಾರದು. ಹಾಕಿದರ ನಾ ಸಿಟ್ಟಾಗತೇನಿ ನೋಡು. ಮರಾಠಿ ಹಾಕಿದರ ವರ್ತಮಾನಪತ್ರದಾಗ ಟೀಕಾಮಾಡತಾರ" ಎಂದು ತನ್ನ ಮನವನ್ನು ಬಿಚ್ಚಿಹೇಳುತ್ತಿದ್ದನು. ಪದ್ಮಾವತಿಗೆ

ಇವನ್ನೆಲ್ಲ ಕೇಳಿ ಒಮ್ಮೊಮ್ಮೆ ನಗೆ ಬರುತ್ತಿತ್ತು. ಮತ್ತೆ ಮರುಕ್ಷಣದಲ್ಲಿ ನರಹರಿಯು ಗದ್ದವನ್ನು ಹಿಡಿದು "ನನ್ನ ಕಡೆಗೆ ನೋಡು, ಮಗು! ಅಪ್ಪ ಲಗ್ನ ಗೊತ್ತುಮಾಡಿದ. ಅಪ್ಪ ಹಾಕಿದ ಒಗಟ ನಾನು ಇನ್ನು ಬಿಡಿಸಬೇಕು. ನಾ ಒಗಟ ಹಾಕೋದು, ಬಿಡೋದು ಲಗ್ನ ಮಾಡಿಕೊಂಬೋರ ಮನಸಿನ ಮ್ಯಾಲ" ಎಂದು ರಮಿಸುತ್ತಿದ್ದಳು. ಹೀಗೆ ಮಾತಾಡಿ ತನಗೆ ತಿಳಿಯುವಂತೆ ಅಕ್ಕನು ಒಮ್ಮೊಮ್ಮೆ ನೆರಗಿನಿಂದ ಕಣ್ಣೊರಸಿಕೊಳ್ಳುವದನ್ನೂ ನರಹರಿಯು ನೋಡಿದ್ದನು. ಆಗ ಅವನಿಗೆ ಅತಿ ವ್ಯಸನವಾಗಿತ್ತು. ಅಕ್ಕನ ಮನಸ್ಸು ನೋಯುವದನ್ನು ಕಂಡು ಅವಳೆದುರಿಗೆ ಈ ವಿಷಯಗಳನ್ನು ಪ್ರಸ್ತ ಎತ್ತಲಿಲ್ಲ.

ಕುಸುಮೆಗೆ ಇನ್ನು ಪದ್ಮಕ್ಕನು ತನ್ನ ಮನೆಗೆ ಬರುವಳೆಂದು ಹಿಡಿಸಲಾರದಷ್ಟು ಆನಂದವಾಗಿತ್ತು. ತನ್ನ ಮನೆಯಲ್ಲಿ ಲಗ್ನದ ಸಲುವಾಗಿ ನಡೆದ ಸಂಭ್ರಮವನ್ನು ನರಹರಿಯೆದುರಿಗೆ ಬಣ್ಣಿಸಿ ಹೇಳುತ್ತಿದ್ದಳು. ಮುಂದೆ ನರಹರಿಯು ಪರೀಕ್ಷೆಯಾಯಿತು. ಅವನೂ ಶೀನೂ ಕೂಡಿಯೇ ಚೆನ್ನಾಗಿ ಪೇಪರು ಬರೆದಿದ್ದರು. ಹೀಗೆ ಲಗ್ನವು ಇಂದು ನಾಳೆಯೆಂದು ಎಲ್ಲರೂ ನಿರೀಕ್ಷಿಸುತ್ತಿರಲು ಕಡೆಗೊಂದು ದಿನ ಲಗ್ನವು ಬಂದೇಬಿಟ್ಟಿತು.

---

## ಪ್ರಕರಣ ೮

## ಇನ್ನೊಂದು ಪತ್ರ

ಕ್ಷೇಮ ಶ್ರೀ ಶಿಗ್ಗಾವಿ

೨೫-೪-೧೯೧೦

**ಪ್ರಿಯ ಮೋಡಕ,**

ನಿಮ್ಮ ಪತ್ರ ಮುಟ್ಟಿತು. ಇಲ್ಲಿಯ ವರೆಗೆ ನಿಮಗೆ ಉತ್ತರ ಬರೆಯಲಾಗದ್ದಕ್ಕೆ ಸಂಕೋಚಪಟ್ಟುಕೊಳ್ಳಬೇಡಿ. ಜಡ್ಡಾದರೆ ಯಾರೇನು ಮಾಡುವರು? ಹಾಗಾದರೆ ಈಗ ಎರಡು-ಎರಡೂವರೆ ತಿಂಗಳು ರಜೆಯ ಮೇಲಿದ್ದೀರಾ? ನೆಟ್ಟಗಾಯಿತು. ಆಫೀಸಿನ ಕೆಲಸವೇನು ಇದ್ದೇ ಇರುತ್ತದೆ.

ಈಗ ಪ್ರಕೃತಿ ಒಳಿತಾಗಿದೆಯಷ್ಟೆ? ಜಪ್ಪಿಸಿಕೊಂಡಿರಬೇಕೆಂದು ನಾನು ಬೇರೆ ನಿಮಗೆ ಹೇಳಬೇಕಿಲ್ಲ. ಪುಣೆಯ ಮಳೆರಾಯನ ಯಾತನೆಯನ್ನು ದೇವರೇ ಬಲ್ಲ!''

''ಹಾಗಾದರೆ ಇಷ್ಟು ದಿನ ರಜೆಯ ಮೇಲಿದ್ದುದರಿಂದ ಈಗ ಇತ್ತ ಕಡೆಗೆ ಬರಲು ಶಕ್ಯವಿಲ್ಲವೆನ್ನುವಿರಾ? ಅದಕ್ಕೆ ನಾನೇನೂ ಹೇಳಲಾರೆ. ಆದರೆ ಗಾಡಿಗೆ ಖರ್ಚಾಗುವದೆಂದು ಮಾತ್ರ ನೀವು ಹೀಗೆ ಮಾಡೀರಿ. ನಿಮ್ಮ ಸ್ವಭಾವವು ನನಗೆ ಗೊತ್ತು. ಅದಕ್ಕಾಗಿ ನಾನು ಇದನ್ನು ಇಷ್ಟು ಸ್ಪಷ್ಟವಾಗಿ ಬರೆಯುತ್ತಲಿದ್ದೇನೆ. ಪ್ರಯಾಣದ ಈ ವೆಚ್ಚವು ನಿಮಗೆ ಭಾರವೆನಿಸಿದರೆ ಹೇಳಿರಿ. ನಾನು ಕೊಡಲು ಸಿದ್ಧನಿದ್ದೇನೆ.''

''ಇದೇ ಪ್ರಕೃತಿಸ್ವಾಸ್ಥ್ಯವನ್ನು ಗಳಿಸುತ್ತಿರುವ ನಿಮಗೆ ಇಲ್ಲಿ ಮೊನ್ನೆ ಮೊನ್ನೆ ಜರುಗಿದ ಒಂದು ಸಂಗತಿಯ ಬಣ್ಣನೆಯಿಂದ ವಿರಾಮವೆನಿಸಬಹುದು. ಅದಕ್ಕಾಗಿ ಅದನ್ನು ನಾನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ ಮೊನ್ನೆ ಇಲ್ಲಿ ಒಂದು ಲಗ್ನಸಮಾರಂಭವು ನೆರವೇರಿತು. ನಮ್ಮ ಜನರು ಎಚ್ಚತ್ತಿಲ್ಲವೆಂದು ನಾನು ಹಿಂದಿನ ಪತ್ರದಲ್ಲಿ ನಿಮಗೆ ಹೇಳಿದ್ದಿಲ್ಲವೆ? ಈ ಸನ್ನಿವೇಶವೊಂದು ಅದೇ ಮಾತನ್ನು ನಿದರ್ಶನಕ್ಕೆ ತರುತ್ತದೆ. ಲಗ್ನವೆಂದರೆ ಕರ್ನಾಟಕದ ರೀತಿಯಲ್ಲಾದ ಲಗ್ನ!''

''ಪ್ರತಿಷ್ಠಿತರಾದ ದೇಸಾಯರ ಮನೆಗೆ ಪ್ರತಿಷ್ಠಿತರಾದ ಆಚಾರ್ಯರು ಹೆಣ್ಣುಕೊಟ್ಟರು. ಇವರಿರ್ವರ ಮನೆಯಲ್ಲಿಯೂ ಲಕ್ಷ್ಮೀದೇವಿಯು ಕಾಲುಮುರಿದು ಬಿದ್ದಿರುವಳೆಂದು ಜನರಾಡಿಕೊಳ್ಳುತ್ತಿದ್ದರು. ಆದರೆ ಲಗ್ನದ ಸಮಯದಲ್ಲಿ ಆ ದೇವಿಯು ವಿಶೇಷವಾಗಿ ಹೊರಗೆ ಬಂದಂತೆ ತೋರಲಿಲ್ಲ. ಒಂದೆರಡು ಸಲ ಹಾಯ್ದು ಹೋದಳೆನ್ನಬಹುದು. ಒಮ್ಮೆ ಊರೆಲ್ಲ ಮೆರವಣಿಗೆಯಾಯಿತು. ಅಂದರೆ ಆಭರಣ, ಪೀತಾಂಬರ, ವಸ್ತ್ರ, ಒಡವೆ,– ಇವುಗಳ ಪ್ರದರ್ಶನವಾಯಿತು. ನೆರೆದ ನಾರೀಸಮೂಹದಿಂದ ಜನರ ಕಂಗಳಿಗೂ ಹಬ್ಬವಾಯಿತೆಂದು ಕೆಲವರಂದುಕೊಂಡರು. ಅದು ನನಗೆ ಗೊತ್ತಿಲ್ಲ ಹೀಗೆ ಹಬ್ಬವನ್ನು ಮಾಡಬೇಕೆಂದು ಆ ಸುದತಿಯರೇ ಮನಸ್ಸು ಮಾಡಿದಾಗ ನಾನೇನು ಹೇಳಬೇಕು? ಅದಕ್ಕಾಗಿಯೋ ಅವರು ತಾಸೆಯವರನ್ನು 'ಬ್ಯಾಂಡಿ'ನವರನ್ನು ತರಿಸಿದ್ದು. ಕೈಹಿಡಿದ ಹಾಗಾಗಬಾರದೆಂದು ತಮ್ಮ

ಕಿರಿಗೂಸುಗಳನ್ನು ಗಂಡಂದಿರ ಕೈಯಲ್ಲಿ ಅವರು ಅದಕ್ಕಾಗಿಯೇ ಕೊಟ್ಟಿದ್ದು. ಹತ್ತು ಬಿಟ್ಟು ಇಪ್ಪತ್ತು 'ಕಿಟ್ಸನ್' ದೀಪಗಳನ್ನು ಅವರು ತರಿಸಿದ್ದಾದರೂ ಇದರ ಸಲುವಾಗಿಯೇ. ವಧೂ-ವರರಿಗಿಂತ ಮೆರವಣಿಗೆಯು ಉಳಿದ ಸ್ತ್ರೀ ಸಮುದಾಯಕ್ಕೆ ಹೆಚ್ಚಾಗಿ ಅನ್ವಯಿಸಿತ್ತೆಂದು ಹೇಳಬಹುದು."

"ಯಾಕಂದರೆ ಪಾಪ! ವಧುವಾದ ಹುಡಿಗೆ ಕೆಳಗೆ ಮೋರೆಹಾಕಿ ಹಮಣಿಯಲ್ಲಿ ಕುಳಿತವಳು ತಿರುಗಿ ಮೋರೆಯನ್ನು ಮೇಲೆತ್ತಲಿಲ್ಲ. ಮಲ ತಾಯಿಯು ಬಯ್ದಳೆಂದು ಕೆಲವರಾಡಿಕೊಂಡರು. ಹುಡಿಗೆಗೆ ವರನು ಮನಸ್ಸಿಗೆ ಬಂದಿಲ್ಲನೆಂದು ಬೇರೆ ಕೆಲವರಂದುಕೊಂಡರು. ಏನಾಗಿತ್ತೋ ದೇವರಿಗೆ ಗೊತ್ತು. ವಧುವಿನ ಮುಖವು ಮ್ಲಾನವಾಗಿದ್ದು ಮಾತ್ರ ನಿಜ ವೆಂದು ಹೇಳಿಬಡುವೆನು. ಆದರೆ ಆಕೆಯ ಭಾಗದ ಕೊರೆತೆಯೆಲ್ಲ ವರನ ಉತ್ಸಾಹದಲ್ಲಿ ತುಂಬಿಕೊಂಡಿತ್ತು. ಕೇವಲ ಲಗ್ನಕ್ಕೋಸ್ಕರವೆಂದು ಆತನು ಮುಂಬಯಿಯಿಂದ ತನ್ನ 'ಡ್ರೆಸ್ಸ' ನ್ನು ಹೊಲಿಸಿ ತರಿಸಿದ್ದನು. ನವೋನವ ವಾದ ಒಂದು ಭಾರಿ ಜರದ ರುಮಾಲವನ್ನು ಸುತ್ತಿದ್ದನು. ಮೆರವಣಿಗೆಯು ಹೊರಟಮೇಲೆ ವರನಿಗೆ ಇನ್ನೊಂದು ಸಂಗತಿಯು ನೆನಪಾಯಿತು. ಲಗ್ನದ ವೇಳೆಯಲ್ಲಿ ಕೊರಳಲ್ಲಿರಿಸಿದ ದುಂಡುಮಲ್ಲಿಗೆಯ ಮಾಲೆಯನ್ನು ಆತನು ಮಣಿಯ ಮೇಲೆ ಮರೆತುಬಂದಿದ್ದನು. ಸ್ಮರಣೆಗೆ ಬಂದಕೂಡಲೆ ಗೆಳೆಯರಲ್ಲೊಬ್ಬನನ್ನು ಕಳುಹಿಸಿ ತರಿಸಿ ಮತ್ತೆ ಮಾಲೆಯಿಂದ ತನ್ನನ್ನು ಸಿಂಗರಿಸಿಕೊಂಡನು!"

"ಸ್ತ್ರೀಸಮುದಾಯದಲ್ಲಿ ವಿದ್ಯುಲ್ಲತೆಯಂತೆ ಸಂಚರಿಸುತ್ತಿರುವ ವರ ಮಾತೆಯನ್ನು ಯಾರಾದರೂ ನೋಡಬಹುದಾಗಿತ್ತು. ಮೂಗಿನಲ್ಲಿರುವ ಮುಖರೆಯನ್ನು ಮುಂದೆ ಮಾಡಿ ಅವರು ಉಳಿದ ಗೆಳತಿಯರನ್ನು ಮಾತ ನಾಡಿಸುತ್ತಿದ್ದರು. ಉಂಗುರವಿಟ್ಟ ಬೆರಳನ್ನು ಮುಂದೆ ಮಾಡಿ ದೂರ ಹೋದ ಹುಡುಗರನ್ನು ಕರೆಯುತ್ತಿದ್ದರು. ವಂಕಿ–ನಾಗಮುರಿಗೆಯಿಂದ ಭಾರವಾದ ಕೈಯನ್ನು ಮುಚ್ಚಬಾರದೆಂದು ಸೆರಗನ್ನು ಅಲೆಯಬಿಟ್ಟಿದ್ದರು. ಅವರ ಹತ್ತಿರದಲ್ಲಿಯೇ ಅವರ ಮಗಳಾಗಬಹುದಾದ ವಧೂಮಾತೆಯು (ಇವರು ಮಲತಾಯಿ ಮತ್ತೆ! ಆಚಾರ್ಯರಿಗೆ ನಾಲ್ಕನೆಯ ಲಗ್ನವಾಗಿದೆ!) ವಸ್ತ್ರಗಳಿಂದ ಭಾರವಾದ ಮೈಯನ್ನು ಅತ್ತಿತ್ತ ತೂಗುತ್ತ ವರ್ಷದ

ಮಗುವನ್ನು ಎತ್ತಿಕೊಂಡು ಮುಂದಕ್ಕೆ ಸಾಗಿದ್ದರು. ತನಗಾಗಿಯೇ ಬಹು ವಿಜೃಂಭಣೆಯಿಂದ ರಚಿಸಲ್ಪಟ್ಟ ಈ ಮೆರವಣಿಗೆಯನ್ನು ಜನರು ಬಾಗಿಲಲ್ಲಿ ನಿಂತು ನೋಡುತ್ತಿದ್ದರು. ಆದೇ ಅತ್ತೆಯ ಮನೆಯ ಸೌಖ್ಯವನ್ನು ಅನುಭೋಗಿಸುತ್ತಿರುವ ಒಬ್ಬ ಹೆಣ್ಣುಮಗಳು ಬಾಗಿಲಲ್ಲಿ ಇಣಿಕಿನೋಡುತ್ತಿದ್ದಳು. ಆಗ ಅತ್ತೆಯವರು ಓಡಿ ಬಂದು ಆ “ಹುಚ್ಚು ಮುಂಡಿ” ಯನ್ನು ಒಳಗೆ ಕಳುಹಿ ಮೆರವಣಿಗೆಯು ಹೋಗುವವರೆಗೆ ಅದನ್ನು ತಮ್ಮ ನಯನೋತ್ಸವವನ್ನಾಗಿ ಮಾಡಿದರು!”

“ಲಕ್ಷ್ಮೀದೇವಿಯು ಹೊರಗೆ ಬಂದದ್ದು ಇನ್ನೊಂದೇ ಸಲವೆನ್ನಬಹುದು,— ಆಚಾರ್ಯರು ವರದಕ್ಷಿಣೆಯನ್ನು ಕೊಡುವ ಕಾಲಕ್ಕೆ. ಎರಡು ಸಾವಿರ ರೂಪಾಯಿಗಳು ಕೈಬಿಟ್ಟು ಹೋಗುವವೆಂದು ಆಚಾರ್ಯರಿಗೆ ಬಲು ವ್ಯಸನವಾಯಿತು. ಈಗ ಕೊಡುವೆವೆಂದರು. ಇನ್ನೊಂದು ಗಳಿಗೆಗೆ ಕೊಡುವೆವೆಂದರು. ಊಹುಂ! ದೇಸಾಯರು ‘ಅಕ್ಕೀಕಾಳು’ ಹೇಳುವದನ್ನು ತಡೆದು ನಿಲ್ಲಿಸಿದರು. ಆಚಾರ್ಯರು ಚೀಲವನ್ನು ಬಿಚ್ಚಲೇಬೇಕಾಯಿತು. ಎಣಿಸುವಾಗ ಕಡೆಯ ರೂಪಾಯಿಯ ಮೇಲಿರುವ ವಿಕ್ಟೋರಿಯಾ ಮಹಾರಾಣಿಯ ಮೋರೆಯನ್ನು ನೋಡಿ ದೈನಾಸಬಟ್ಟು ರಾಯರಿಗೆ ಕೈ ಮುಗಿದರು!”

“ಪ್ರಿಯ ವೋಡಕ, ಲಗ್ನವೆಂದರೆ ವ್ಯಾಸಮಹರ್ಷಿಯು ಬರೆದ ಪ್ರಚಂಡಕಾವ್ಯವಿದ್ದಂತೆ! ಕರ್ನಾಟಕದ ಮಹಾಭಾರತವನ್ನು ಬರೆಯಲು ಕುಮಾರವ್ಯಾಸನು ಬೇಕಾಗುವದು ಆಶ್ಚರ್ಯವಲ್ಲ. ಲೆಕ್ಕವಿಲ್ಲದಷ್ಟು ಜನರು ಕೂಡುವರು ಲೆಕ್ಕವಿದ್ದಷ್ಟು ವೃತ್ತಿಗಳನ್ನು ವಿಸಾರಿದ ಜನರು ಕಲೆಯುವರು. ಹಿಡಿಂಬೆಯಂತಹ ಹೆಂಗಳೆಯರು ಕೆಲವರು, ಪ್ರಮೀಳೆಯಂತಹ ಸ್ತ್ರೀಯರು ಹಲವರು. ಕೆಲವು ಜನರು ದುರ್ಯೋಧನನಂತೆ, ಕೆಲವರು ಭೀಮಸೇನನಂತೆ. ಧರ್ಮರಾಯನಂತಹ ಜನರು ತೀರ ವಿರಳ. ಇವರೆಲ್ಲರು ಮಾಡುವ ಕೃತಿಗಳಾದರೂ ಅಗಾಧವಾದುವು. ಇಲ್ಲಿಯೂ ಬದ್ಧದ್ವೇಷ, ಲೆತ್ತ, ಧೂಮ್ರಪಾನ, ಯುದ್ಧ. ಇಲ್ಲಿಯೂ ಐಶ್ವರ್ಯಮದ, ತೋಳಿನ ತಿಂಡಿ, ನಾಲಿಗೆಯ ಚುರುಕುತನ, ಹೊಟ್ಟೆಯ ಹಂಬಲು. ಬಕಾಸುರನಂತೆ ಕೆಲವರು ಬಂಡಿತುಂಬಿದ ಉಂಡೆಗಳನ್ನು ತಿನ್ನುವರು. ವಶಿಷ್ಠರಂತೆ ಕೆಲವರು ಹಂಡೆಗಳ

ತುಂಬಿದ್ದ ಖೀರು ಕುಡಿಯುವರು. ಇಲ್ಲಿಯೂ ಬಕಾಸುರನೊಡನೆ ಭೀಮನ ಸ್ಪರ್ಧೆ, ಕಿನ್ನರ ಕಿಂಪುರುಷರ ಮತ್ಸರ. ಇಲ್ಲಿಯೂ ಯಕ್ಷನೊಡನೆ ಸಂವಾದ, ಯಕ್ಷಗಾನ, ಕಾಮಾಕ್ಷಿಯರ ನೃತ್ಯ, ಸಿರಕ್ಷರ ಕುಕ್ಷಿಗಳ ಜಂಭ. ವಿದುರರು ಕೃಷ್ಣರನ್ನು ಬಿಟ್ಟು ಕೃಷ್ಣೆಯರನ್ನು ಸೇವಿಸುವವರು. ಪಾಂಡವರು ತಂಡುಲಧ್ವಂಸವನ್ನು ಮಾಡುವರು. ಕೌರವರು ಅತಿಪ್ರಯಾಸದಿಂದ ಗೌರವವನ್ನು ಕಾಯ್ದುಕೊಳ್ಳುವರು. ಕಡೆಗೊಮ್ಮೆ ಘಟೋತ್ಕಚನು ಕನ್ಯೆಯನ್ನು ಹೊತ್ತುಕೊಂಡೊಯ್ದರೂ ಕೇಳುವವರಿಲ್ಲ ! ''

'' ಒಮ್ಮೆ ಭೂಮದ ಹಾಡಿನಲ್ಲಿ ಬೀಗರು ವರನು ಕಲಿತವನಲ್ಲವೆಂದು ಹೇಳಿದಾಗ ವರನ ತಾಯಿ ಸಿಟ್ಟು ಬೆಂಕಿಯಾದರು. ಹುಡಿಗೆಯ ವುಲ ತಾಯಿಯ ದರ್ಪಕ್ಕೆ ಸಿಕ್ಕು ಸೊರಗಿದೆಯೆಂದು ಗಂಡಿನವರು ಹಾಡಲು ವಧುವಿನ ತಾಯಿ ಊಟವನ್ನು ಬಿಟ್ಟಿದ್ದರು. ಕಳುಹೂಟದ ದಿವಸ ಅಳಿಯನು 'ಸೆಟೆದು' ಕುಳಿತು 'ಸಾಯುಕಲ್ಲ'ನ್ನು ಬೇಡಿದಾಗ ಹೈಗ್ರೀವಾ ಚಾರ್ಯರು ಕಲ್ಲುಬಡೆದುಕೊಂಡು ಸಾಯುವೆನೆಂದರು ! ಎಲ್ಲಕ್ಕೂ ಹೆಣ್ಣಿನ ಕಡೆಯ ಪುರೋಹಿತರು ಸಮಾಧಾನಿ. ಊಟ ಬಿಟ್ಟಿದ್ದ ಬೀಗತಿಯನ್ನು ಬುದ್ಧಿ ಹೇಳಿ ಮತ್ತೆ ಕೂಡಿಸಿದರು. ಸಾಯಲು ಸಿದ್ಧರಾದ ಆಚಾರ್ಯರನ್ನು ಸಮಾ ಧಾನಮಾಡಿ ಉಂಗುರದ ಮೇಲೆ ಕೆಲಸವನ್ನು ಬಗೆಹರಿಸಿದರು. ಪುರೋಹಿತರ ಮಗನ ಧ್ವನಿಯಂತೂ ತುಪ್ಪದ ಬುಡದಲ್ಲಿ ಸಿಕ್ಕುಹೋಗಿತ್ತು. ''

'' ಪ್ರಿಯ ಮೋಡಕ, ಇದೀಗ ನಮ್ಮ ಪ್ರಾಂತದಲ್ಲಿಯ ಸ್ಥಿತಿ. ನಿಮ್ಮ ಪ್ರಾಂತದಲ್ಲಿಯೂ ಮೆರವಣಿಗೆಗಳು ಆಗುವದಿಲ್ಲವೆಂತಲ್ಲ. ಆದರೆ ನಿಮ್ಮಲ್ಲಿಯ ಹೆಣ್ಣುಮಕ್ಕಳು ತಿಳಿದವರಿರುತ್ತಾರೆ. ನಮ್ಮಲ್ಲಿ ಅಂಥ ತಿಳುವಳಿಕೆಯು ಎಂದು ಹುಟ್ಟಿಬರಬೇಕು ? ''

'' ಮನೆಯಲ್ಲಿ ಎಲ್ಲರೂ ನೆಟ್ಟಗಿದ್ದಾರೆಯೆ ? ಎಲ್ಲರೂ ಎಂದು ಹೇಳಲಿಕ್ಕೆ ನೀವೆಷ್ಟು ಮಂದಿ ! ನೀವು, ನಿಮ್ಮ ಪತ್ನಿ ! ''

ಇತಿ ಒಲವುಗಳು

ನಿಮ್ಮ ಸ್ನೇಹಾಂಕಿತ,

**ಗಣಪತರಾಯ.**

**ಮ. ಮಾ.** ನಮ್ಮ ಶ್ರೀಪಾದನ ವಕೀಲಿಯ ಉದ್ಯೋಗವು ನೆಟ್ಟಗೆ

ನಡೆದದೆ. ಸುರುವುಮಾಡಿ ಮೂರು ತಿಂಗಳಾದರೂ ಅವನ ಮುಂದೆ ಭವ್ಯ ಭವಿತವ್ಯತೆಯಿದೆ. ನಾನೇ ನನ್ನೊಡನೆ ಅವನನ್ನು ಕಚೇರಿಗೆ ಕರೆದುಕೊಂಡು ಹೋಗುತ್ತಿದ್ದೇನೆ. ನಮ್ಮ ಶೀನೂ ಇದೀಗ ನಾಲ್ಕನೆ ಇಯತ್ತೆಯ ವಾರ್ಷಿಕ ಪರೀಕ್ಷೆಯಿಂದ ಮುಕ್ತನಾಗಿದ್ದಾನೆ."

ಗಣಪತರಾಯರ ಈ ಪತ್ರದಲ್ಲಿಯೂ ವಿಷಾದವು ಮಿಡಿಯುತ್ತಿದೆ. ಅವರ ಪತ್ರಗಳೇ ಹೀಗೆ. ಆದರೂ ಈ ಪತ್ರದಮೇಲಿಂದ ಕೇಶವ–ಪದ್ಮಾವತಿಯರ ವಿವಾಹವು ಅಷ್ಟೊಂದು ಸುಸೂತ್ರವಾಗಿ ಸಾಗಲಿಲ್ಲವೆಂಬುದು ಸಹಜವಾಗಿ ಕಂಡುಬರುವಂತಿದೆ.

ನೆರೆದ ಹುಡುಗರಿಗೂ ಹೆಣ್ಣುಮಕ್ಕಳಿಗೂ ಮಾತ್ರ ಇದೊಂದು ನಿಜವಾದ ಸಮಾರಂಭವಾಗಿರಬೇಕು. ಕುಸುಮೆಗೆ ಇನ್ನೂ ಏನೂ ತಿಳಿಯದು. ಲಗ್ನವೆಂದರೆ ಅವಳಿಗೆ ಒಂದು ಶೋಭೆಯ ಕೆಲಸ. ಹೊಸ ಸೀರೆಯನ್ನು ಉಟ್ಟುಕೊಂಡು ತನ್ನ ಗೆಳತಿಯರೊಡನೆ ಆಕೆಯು ನಗುತ್ತ-ಕೆಲೆಯುತ್ತ ತಿರುಗಾಡುತ್ತಿದ್ದಳು. ಕೇಶವನು ಸಿಕ್ಕರೆ ಅವನನ್ನು ನಿಲ್ಲಿಸಿ ಹೆಂಡತಿಯ ಹೆಸರನ್ನು ಕೇಳುವದು, ಪದ್ಮಾವತಿಯನ್ನು ತಡೆದು ಗಂಡನ ಹೆಸರು ಹೇಳೆಂದು ದುಂಬಾಲು ಬೀಳುವದು,– ಇವು ಅವಳಿಗೆ ಆನಂದವನ್ನು ದೊರಕಿಸುವ ಹೊಸ ಸಾಧನಗಳಾಗಿದ್ದವು. ಉರುಟಣೆಯ ವೇಳೆಯಲ್ಲಿ ಅವಳು ಯಾವಾಗಲೂ ಪದ್ಮಕ್ಕನ ಬಳಿಯಲ್ಲಿಯೇ ಕುಳಿತುಕೊಳ್ಳುತ್ತಿದ್ದಳು. ಪದ್ಮಾವತಿಯು ಎದ್ದು ನಿಂತು ತುಸು ಗಂಭೀರಳಾಗಿ ಮೆಲ್ಲನೆ 'ಉರುಟಣೆ'ಯನ್ನು ಮಾಡುವಾಗ ಅವಳಿಗೆ ಹಿಡಿಸಲಾರದಷ್ಟು ನಗೆ ಬರುತ್ತಿತ್ತು !

ಆದರೆ ಲಗ್ನದ ಸಮಯದಲ್ಲಿ ನರಹರಿಯ ಸ್ಥಿತಿಯು ಬಲು ವಿಚಿತ್ರವಾಗಿತ್ತು. ಶೀನುನೊಡನೆ ಆತನು ಲಗ್ನದ ಕಾರ್ಯಗಳಲ್ಲೆಲ್ಲ ತೊಡಗಿದ್ದು ನಿಜ. ಅಲ್ಲದೆ ಮೆರವಣಿಗೆ ಹೊರಟಾಗ ಡಮಣಿಯ ಎಡಬಲದಲ್ಲಿ ತಾನು ಶೀನೂ ಕುಳಿತು ಹೋಗಿದ್ದರು. ಆದರೆ ಅಕ್ಷತೆಗಳು ಬೀಳುವ ವೇಳೆಯಲ್ಲಿ ಅಕ್ಕನ ಮೋರೆಯನ್ನು ನೋಡಿದಾಗಿನಿಂದ ನರಹರಿಯ ಜೀವವೇ ಹೋದಂತಾಗಿತ್ತು. ಕೊನೆಯ ನಿಮಿಷದ ವರೆಗೆ ಸಾವರಿಸಿಕೊಂಡು ಕುಳಿತ ಅಕ್ಕನ ಮುಖಮುದ್ರೆಯಿಂದ ಒಮ್ಮೆಲೆ ಒಂದು ಜ್ಯೋತಿಯು ಹಾರಿ ನಂದಿ ಹೋದಂತೆ ಅವನಿಗೆ ಭಾಸವಾಯಿತು. ಆಕಸ್ಮಿಕವಾಗಿ ಕಂದಿದ ಆ

ಮುಖವನ್ನು ಅನಾಥೆಯಂತೆ ಅಕ್ಕನು ಒಮ್ಮೆ ಮೇಲೆತ್ತಿದಳು. ಕರುಣೆಯನ್ನು ಯಾಚಿಸುವಂತೆ ಕಂಬನಿದುಂಬಿದ ಅವಳ ಅರಳೆಗಣ್ಣುಗಳು ದಿಕ್ಕು ದಿಕ್ಕಿನಲ್ಲಿ ನೋಡಿ ಕಾಯುವವರಾರೂ ಇಲ್ಲವೆಂದು ನಿರಾಶೆ ಹೊಂದಿದವು. ತುಂಬಿ ಬರುತ್ತಿರುವ ಶೋಕವನ್ನು ಬಹು ಪ್ರಯಾಸದಿಂದ ಬಿಗಿಹಿಡಿದು ಅಕ್ಕನು ಒಂದು ಮೂಲೆಯ ಕಡೆಗೆ ದಿಟ್ಟಿಸಿ, ದಿಟ್ಟಿಸಿ ನೋಡಿದಳು. ಆಗ ಅವಳಿಗೆ ತಡೆಯದಾಗಲು ಎರಡು ದೊಡ್ಡ ಕಂಬನಿಗಳುದುರಿದವು. ಇದನ್ನೆಲ್ಲ ನೋಡಿ ಎದೆಯಲ್ಲಿ ಕಳವಳಗೊಂಡ ಸರಹರಿಯು "ಅಕ್ಕಾ ! ಏಕೆ ?" ಎಂದು ದೈನ್ಯ ದಿಂದ ಕೇಳಿದನು.

"ಮಗು ! ಅಪ್ಪ !" ಎಂದು ಮೂಲೆಯ ಕಡೆಗೆ ನೋಡುತ್ತ ಕಂಪಿತ ಸ್ವರದಿಂದ ಪದ್ಮಾವತಿಯು ಉತ್ತರವಿತ್ತಳು. ಎದೆಯಲ್ಲಿ ಬೇಗೆಯೇಳುತಿದ್ದ ಸರಹರಿಯು ಮೂಲೆಯ ಕಡೆಗೆ ಹೊರಳಿ ನೋಡಿದನು. ಅಲ್ಲಿ ಯಾರೂ ಇರ ಲಿಲ್ಲ. ನೆರೆದ ನೂರಾರು ಜನರ ಮೋರೆಯನ್ನು ಆತನು ಕಕ್ಕಾವಿಕ್ಕಿಯಾಗಿ ನೋಡಿದನು. ಆ ಗಲಭೆಯನ್ನೂ ಗೊಂದಲವನ್ನೂ ಕೇಳಿ ಸರಹರಿಯು ಹೊಟ್ಟೆಯಲ್ಲಿ ಕಸವಿಸಿಯಾಯಿತು. ಈ ಜನರನ್ನು ಇಲ್ಲಿಂದ ಹೊಡೆದೋಡಿಸಿ ಅಕ್ಕನನ್ನು ಕರೆದೊಯ್ದು ಲಗ್ನವನ್ನು ನಿಲ್ಲಿಸಿಬಿಡಬೇಕೆಂಬ ಒಳದನಿಯೊಂದು ಅವನಲ್ಲಿ ಬಲವತ್ತರವಾಯಿತು. ಆದರೇನು ? ಮರುಕ್ಷಣದಲ್ಲಿಯೇ ಅಕ್ಷತೆ ಗಳು ಬಿದ್ದು ಅಂತಃಪಟವು ಹಾರಿ ಲಗ್ನದ ಪರಿಸಮಾಪ್ತಿಯಾಯಿತು. ಕೇಶವ-ಪದ್ಮಾವತಿಯರು ಪತಿ–ಪತ್ನಿಯರಾಗಿ ಹೋಗಿದ್ದರು.

———

## ಪ್ರಕರಣ ೯

# ಮೈನೆರೆದಳು

ಲಗ್ನವಾಗಿ ಒಂದು ತಿಂಗಳಾದಮೇಲೆ ಮತ್ತೆ ಒಂದು ದಿವಸ ಮುಂಜಾನೆ ಆಚಾರ್ಯರ ಮನೆಯಿಂದ ಹೆಂಗಳೆಯರು ಗುಂಪುಗುಂಪಾಗಿ ಹೊರಬೀಳುವದನ್ನು ಕಾಣಬಹುದಾಗಿತ್ತು. ಕಿವಿಮಾತು ಹೇಳುವ ಹಾಗೆ ಎಲ್ಲರೂ ಮೆಲ್ಲನೆ ಕೆಳದನಿಯಲ್ಲಿ ಮಾತನಾಡುತ್ತಿದ್ದರು. ಅವರ ವಿಷಯವು ಒಂದೆ–ಪದ್ಮಾವತಿಯ ಸೌಂದರ್ಯ.

ಅಂದೇ ಪದ್ಮಾವತಿಯು ಮೈನೆರೆದಿದ್ದಳು. ಲಗ್ನದ ಮರುದಿವಸಗಳನ್ನು ಮುಗಿಸಿಕೊಂಡು ಹೊರಟುನಿಂತಿದ್ದ ಸುಬ್ಬನಿಗೆ ಈ ಸುದ್ದಿಯು ತಿಳಿಯಲು ಅತ್ಯಾನಂದವಾಯಿತು. ಮತ್ತೆ ೧೫ ದಿವಸಗಳವರೆಗೆ ಅವನು ಸಹಜವಾಗಿ ಆಚಾರ್ಯರ ಆಶ್ರಿತನಾಗಬಹುದು! ಆದರೆ ಸುಬ್ಬನೇ ಉತ್ಸಾಹಿ. ಪದ್ಮಾವತಿಯನ್ನು ಕೂಡಿಸಲೆಂದು ಒಂದು ಉತ್ತಮವಾದ ಮಂಟಪವನ್ನು ರಚಿಸಿದನು. ನರಹರಿಯಾದರೂ ಇದಕ್ಕೆ ತನ್ನ ಶಕ್ತಿ ಮೀರಿ ಸಹಾಯಮಾಡಿದನು.

ಸುಂದರಚಿತ್ರಗಳು, ಬಣ್ಣ ಬಣ್ಣದ ಕಾಗದದ ಕುಸುರುಗಳು,–ಮೊದಲಾದವುಗಳಿಂದ ನಿರ್ಮಿತವಾದ ಕೃತ್ರಿಮವನದ ಮಧ್ಯದಲ್ಲಿ ಸೀತೆಯಂತೆ ಪದ್ಮಾವತಿಯು ಕುಳಿತಿದ್ದಳು.ಒಂದು ತಿಂಗಳಲ್ಲಿಯ ಅವಳ ಬೆಳವಣಿಗೆಯು ಬಹು ಭವ್ಯವಾಗಿತ್ತು. ಅವಳ ವಿಶಾಲವಾದ ನೇತ್ರಗಳಲ್ಲಿ ಕಾಂತಿ ಜಲವು ತುಂಬಿ ತುಳುಕುತ್ತಿತ್ತು. ಉಟ್ಟ ಸೀರೆ, ಕುಳಿತ ಮೋಡಿ, ಗಾಂಭೀರ್ಯವನ್ನು ತಳೆದಿರುವ ಅವಳ ಮೋರೆಯ ಕಳೆ,– ಇವುಗಳನ್ನು ನೋಡುವವರಿಗೆ ಒಂದು ತರಹದ ಆದರವು ಉತ್ಪನ್ನವಾಗುತ್ತಿತ್ತು. ಪದ್ಮಾವತಿಯ ದೇಹವು ಈ ಮಂಟಪವನ್ನು ಅಲಂಕರಿಸಿದ ಹಾಗೆ ಅವಳ ಜೀವವು ಮಾತ್ರ ಅಲ್ಲಿಯೇ ವಿಶ್ರಮಿಸಿರಲಿಲ್ಲ. ಇದನ್ನೆಲ್ಲ ಮೀರಿ ಬೇರೊಂದು ವಿಶಾಲವಾದ ಲೋಕವನ್ನು ಅವಳ ದೃಷ್ಟಿಯು ಭೇದಿಸುವಂತೆ ತೋರಿತು. “ ಇಂಥ

ಸೌಂದರ್ಯವನ್ನು ನಾನು ಅಖಂಡವಾಗಿ ನಿರ್ಮಿಸಬಲ್ಲೆನು. ನನ್ನ ಜೀವವು ಇಂತಹ ಸೌಂದರ್ಯದ ತವರುಮನೆ, ಆದರೆ ಈಗ-ಮಂಟಪದಲ್ಲಿ ಕುಳಿತಿದ್ದೇನೆ '' ಎಂಬ ಒಂದು ಭಾವವು ಅಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು. ಇದು ನನಗೆ ತಕ್ಕುದಲ್ಲ, ಮಂಟಪದಲ್ಲಿ ನಾನು ಸೆರೆಸಿಕ್ಕವಳಲ್ಲ, ಹಕ್ಕಿಯಂತೆ ನಾನು ಅಲೆದಾಡುವವಳು,ಕೋಗಿಲೆಯಂತೆ ನಾನು ಹಾಡುವವಳು, ನನಗೆ ಸ್ವಾತಂತ್ರ್ಯವು ಬೇಕು; ಆದರೆ–ದೈವಗತಿಯಿಂದ–ಮಂಟಪದಲ್ಲಿ ಸೆರೆಸಿಕ್ಕುಬಿದ್ದಿದ್ದೇನೆಂದು ಅವಳ ಜೀವವು ಮರುಗುವಂತೆ ಭಾಸವಾಯಿತು. ಆದರೆ ಪ್ರೇಕ್ಷಕರಿಗೆ ಇದೆಲ್ಲ ತಿಳಿಯಲಿಲ್ಲ. ಪದ್ಮಾವತಿಯ ಈ ಅಲೌಕಿಕ ಸೌಂದರ್ಯದ ಪ್ರಭಾವವು ಮಾತ್ರ ಅವರ ಕಣ್ಮನಗಳನ್ನು ಸೆಳೆದಿತ್ತು.

ಬೇರೊಂದು ತರಹದ ಬಾಳುವೆಯ ಹೊಸ್ತಿಲವನ್ನು ಮೆಟ್ಟುವೆನೆಂದು ಪದ್ಮಾವತಿಯು ಕಳೆಗುಂದಲಿಲ್ಲ. ತನ್ನ ಸ್ವಾತಂತ್ರ್ಯದ ಲಾಲಸೆಯು ಇನ್ನು ನಿರ್ನಾಮವಾಗುವದೆಂದು ಅವಳು ಧೈರ್ಯವನ್ನು ಬಿಡಲಿಲ್ಲ. ಇಲ್ಲಿಯವರೆಗೆ ಅವಳು ಸಹಿಸಿದ ಕಷ್ಟದ ಚಿನ್ಹವೂ ಕೂಡ ಅವಳ ಪವಿತ್ರವಾದ ಕಾಂತಿಯನ್ನು ಮಲಿನವಾಗಿ ಮಾಡಲಿಲ್ಲ. ಇನ್ನುಮುಂದೆ ಸಹಿಸಬೇಕಾದ ಯಾತನೆಯ ನೆನಪಿನಿಂದ ಅವಳು ಅಧೀರಳಾಗಲಿಲ್ಲ. ಹೆಣ್ಣಿನ ಜನ್ಮವೆಂದರೆ ಅನಂತವಾದ ಸಹನಶೀಲತೆಯ ಜನ್ಮ, ಅಪಾರವಾದ ದುಃಖದ ತಿಮಿರವನ್ನು ನುಂಗಿ ಮೇಲೆ ಮತ್ತೆ ಬೆಳಕುಬೀರುವ ನಗೆಯನ್ನು ತಳೆಯುವ ತಾಳ್ಮೆಯ ಜನ್ಮ,– ಎಂಬ ಒಂದು ನಿಶ್ಚಯವು ಮಾತ್ರ ಅವಳ ಮೋರೆಯ ಮೇಲೆ ಒಡೆದುಕಾಣುತ್ತಿತ್ತು.

ನರಹರಿಗೆ ಇದು ಅಲ್ಪಸ್ವಲ್ಪ ತಿಳಿದಿತ್ತು. ಸಂಸ್ಕೃತಿಗಾಗಿ ಹಾತೊರೆಯುವ ಅಕ್ಕನ ಜೀವನದ ಗುಟ್ಟನ್ನು ಆತನು ಮೊದಲಿನಿಂದ ಕಂಡುಹಿಡಿದಿದ್ದನು. ಎಲ್ಲ ಕಡೆಗೆ ಹುಡುಕಿ ಅಕ್ಕನಿಗೆ ಬೇಕಾದ ಪುಸ್ತಕಗಳನ್ನು ತಂದುಕೊಡುತ್ತಿದ್ದನು. ಇನ್ನು ಸಮೀಪದಲ್ಲಿ ಪ್ರಸಂಗಗಳು ಸಿಗುವ ಸಂಭವವಿಲ್ಲದ್ದರಿಂದ ಈಗೊಮ್ಮೆ ಮೆರವಣಿಗೆಯಾಗಬೇಕೆಂದು ರಮಾಬಾಯಿಯವರು ಹಟಹಿಡಿದರು. ಆಗ ಅಕ್ಕನ ಮೋರೆಯನ್ನು ದಿಟ್ಟಿಸಿ ನೋಡಿದ ನರಹರಿಗೆ ಹೃದಯದಲ್ಲಿ ಕಳವಳವಾಗಿತ್ತು. ಅವನಿಗಾದರೂ ಕೆಡಕೆನಿಸಿತು. ಏನೆಂದು ಮೊರೆಸಬೇಕು ! ಭೋ ! ಪುರನಿವಾಸಿಗಳಿರಾ ! ಇಲ್ಲಿ ನೋಡಿರಿ ! ಈ

ಹುಡಿಗೆಯೂ ಮೈನೆರೆದಿದ್ದಾಳೆ! ಮಾನವನ ಭೋಗ್ಯವಸ್ತುವಾದ ಸ್ತ್ರೀಜಾತಿಯಲ್ಲಿ ಇನ್ನೊಂದು ಕುಸುಮವರಳಿತು! ಮನ್ಮಥನು ಇನ್ನೊಂದು ಮಹಾಸ್ತ್ರವನ್ನು ತೊಟ್ಟನು! ಆದರೆ ಅದು ನಿಮಗಲ್ಲ! ಒರ್ವ ವ್ಯಕ್ತಿಗೆಂದು ಈ ವಸ್ತುವು ನಿರ್ಮಿತವಾಗಿದೆ! ತಜ್ಞರಾದ ನಿಮಗೆ ಈ ನವೋನವವಾದ ಕುಸುಮದ ಬೆಲೆಯು ತಿಳಿಯಲೆಂದು ಮಾತ್ರ ಇದನ್ನು ಒಂದು ಕ್ಷಣಹೊತ್ತು ಹೊರಗೆ ತಂದಿದ್ದೇವೆ! ನೋಡಿ ಸಂತೋಷಪಡಿರಿ! ಎಂದು ಡಂಗುರ ಸಾರಬೇಕೆ? ಹೀಗೆ ತನ್ನ ಅಕ್ಕನನ್ನು ಎಂದಿಗೂ ಅಪಮಾನವಾಗಗೊಡಲಿಕ್ಕಿಲ್ಲೆಂದು ನರಹರಿಯು ಹಟಹಿಡಿದನು. ಮಗನ ಕಠೋರವಾದ ನಿಶ್ಚಯವನ್ನು ನೋಡಿ ಬಜಂತ್ರಿಯ ಖರ್ಚುಳಿಯಿತೆಂದು ಹೈಗ್ರೀವಾಚಾರ್ಯರು ಸುಮ್ಮನಾದರು. ರಮಾಬಾಯಿಯವರು ನರಹರಿಯನ್ನು ಬಯ್ದು ಬಯ್ದು ಶಪಿಸಿದರು. ಆದರೆ ನಿರುಪಾಯರಾಗಿ ಕುಳಿತುಕೊಳ್ಳಬೇಕಾಯಿತು.

ಮುಂದೆ ಹದಿನಾರು ದಿನಗಳಲ್ಲಿಯೇ ಫಲಶೋಭನದ ಕಾರ್ಯವನ್ನು ಮುಗಿಸಿಬಿಡಬೇಕೆಂದು ಬೀಗರು ಆಗ್ರಹಮಾಡಿದರು. ಎಂದಾದರೂ ಒಮ್ಮೆ ಈ ಖರ್ಚು ಬಡೆದುಕೊಳ್ಳುವದೆಂದು ಪೂರ್ಣವಾಗಿ ತಿಳಿದಿದ್ದ ಆಚಾರ್ಯರು ಇದಕ್ಕೆ ಸಮ್ಮತಿಸಿದರು. ಆಚಾರ್ಯರ ಸ್ವಭಾವವು ಯಾರಿಗೆ ಗೊತ್ತಿಲ್ಲ? ಮತ್ತೆ ಬೀಗ-ಬೀಗರ ಕದನಗಳಾದವು. ತಮ್ಮ ಮಗನಿಗೆ ಯೋಗ್ಯವಾದ ಉಪಚಾರವಾಗಲಿಲ್ಲವೆಂದು ಜಾನಕಿಬಾಯಿಯವರು ಹಾಡಿಕೊಂಡು ಅತ್ತರು. ಇದರಿಂದ ಅವರಲ್ಲಿ ದ್ವೇಷವು ಮಾತ್ರ ಬೆಳೆಯಿತು. ಉದಾಸೀನರಾದ ರಮಾಬಾಯಿಯವರು ಇದರಲ್ಲಿ ವಿಶೇಷವಾದ ಭಾಗವನ್ನು ತೆಗೆದುಕೊಳ್ಳಲಿಲ್ಲ. ಅತ್ತ ಗೋವಿಂದರಾಯರು ಎಲ್ಲ ಅಧಿಕಾರವನ್ನು ಪತ್ನಿ-ಪುತ್ರರಿಗೆ ಅರ್ಪಿಸಿಬಿಟ್ಟಿದ್ದರು. ಪ್ರಸ್ತದ ಬಾಹ್ಯ-ಸ್ವರೂಪವು ಎಂದಿನಂತೆ ಸುಬ್ಬಣಾಚಾರ್ಯ-ತಿಪ್ಪರ ಕೈಯ್ಯಲ್ಲುಳಿಯಿತು.

* * * *

ಮಹತ್ವವಾದ ಆ ದಿನವು ಬೆಳಗಾಗುವ ಪೂರ್ವದಲ್ಲಿಯೆ ಪದ್ಮಾವತಿಯು ಹಾಸಿಗೆಯ ಮೇಲೆ ಎದ್ದು ಕುಳಿತಳು. ಇನ್ನೂ ಜುಮುಜುಮು ನಸುಕಾಗಿತ್ತು. ಎದ್ದು ದೇವರಿಗೆ ನಮಸ್ಕರಿಸಿ ತಟಸ್ಥಳಾಗಿ ಒಂದೆರಡು ಕ್ಷಣ ಅಲ್ಲಿಯೇ ಕುಳಿತುಕೊಂಡಳು. ಆಮೇಲೆ ಎದ್ದು ನರಹರಿಯ ಕೋಣೆಗೆ

ಬಂದಳು. ರಾತ್ರಿಯೆಲ್ಲ ಕೆಲಸ ಮಾಡಿ ದಣಿದ ತಮ್ಮನು ಇನ್ನೂ ಮಲಗಿಕೊಂಡಿದ್ದನು. ಅವನ ಎಳೆತನದ ಮುದ್ದು ಮೊಗವನ್ನು ನೋಡಿ ನೋಡಿ ಪದ್ಮಾವತಿಯು ದಣಿಯದಾದಳು. ಇಂಥ ತಮ್ಮನನ್ನು ಬಿಟ್ಟು ಬೇರೊಂದು ಮನೆಗೆ ಹೋಗುವ ದೈವವು ಬಂದಿತೇ ಎಂದು ಅವಳ ಕಣ್ಣಲ್ಲಿ ನೀರು ಬಂದವು. ಹೀಗೆ ದೀರ್ಘವಾಗಿ ವಿಚಾರಿಸುತ್ತಿರಲು ಶಾಂತನಾಗಿ ಮಲಗಿದ್ದ ನರಹರಿಯು 'ಅಕ್ಕಾ !' ಎಂದು ಚಿಟ್ಟನೆ ಚೀರಿದನು. ಪದ್ಮಾವತಿಯು ಗಾಬರಿಯಾಗಿ ನರಹರಿಯನ್ನು ಮೃದುವಾಗಿ ಎಚ್ಚರಗೊಳಿಸಿದಳು. ನಿದ್ರೆ ತಿಳಿದೆದ್ದ ನರಹರಿಯು ಅಕ್ಕನನ್ನು ನೋಡಿ ಪ್ರಸನ್ನಚಿತ್ತನಾಗಿ ಎಳೆ ನಗೆಯನ್ನು ಬೀರಿದನು. "ಅಕ್ಕಾ ! ಎಂಥ ಕನಸು ! ನೀನು ಎಲ್ಲಿ ಹೋದಿಯೆಂದು ಗಾಬರಿಯಾಗಿದ್ದೆ ! ಈಗ ಸಮಾಧಾನವಾಯಿತು."

"ಮಗು ! ಎಚ್ಚರಿದ್ದಾಗ ಈಗ ನಿನ್ನನ್ನು ಅಗಲುವ ಪ್ರಸಂಗವು ಬಂದಿದೆ. ಇನ್ನು ನಾವು ಗಟ್ಟಿಯಾಗಬೇಕು" ಎಂದು ಪದ್ಮಾವತಿಯು ಧೀರ–ಗಂಭೀರಳಾಗಿ ನುಡಿದಳು.

ನರಹರಿಯು ಮೆಟ್ಟಿಬಿದ್ದನು. "ಅಕ್ಕಾ ! ನೀನೆಲ್ಲಿಗೆ ಹೋಗುತ್ತಿ ? ಇಲ್ಲಿಯೇ ಕುಸುಮೆಯ ಮನೆಯಲ್ಲಿ. ಆದರೇನು ? ದಿನಾಲು ಭೆಟ್ಟಿಯಾಗಬಹುದಲ್ಲವೆ ?" ನರಹರಿಯು ತಳಮಳಗೊಂಡು ಉತ್ತರವಿತ್ತನು.

"ಅಯ್ಯೋ ! ತಮ್ಮಾ ! ನಿನಗಿನ್ನೂ ತಿಳಿಯದು. ಇನ್ನು ನಾವು ಮಾತನಾಡುವದೂ ಸಹ ಕಷ್ಟವಾಗಬಹುದು." ಎಂದು ಪದ್ಮಾವತಿಯು ತನ್ನ ಹೃದಯವನ್ನು ಬಿಚ್ಚಿ ಹೇಳಿದಳು. ನರಹರಿಯು ಒಂದು ಕ್ಷಣಹೊತ್ತು ಸುಮ್ಮನಿದ್ದನು. ಆಮೇಲೆ ಸರಳವಾದ ನಗೆ ನಕ್ಕು "ಅಕ್ಕಾ ಇದೆಂತಹ ಮಾತು ! ನೀನೊಂದು ತಾಳ್ಮೆಯಿಂದಿರು" ಎಂದು ಆಕೆಯನ್ನು ವಿಧವಿಧವಾಗಿ ಸಂತೈಸಿದನು. ಪದ್ಮಾವತಿಗೆ ಸಮಾಧಾನವಾಗಲಿಲ್ಲ. ಆದರೆ ತಮ್ಮನ ಪ್ರೀತಿಯನ್ನೂ ಕೋಮಲತೆಯನ್ನೂ ನೋಡಿ ಅವಳ ತಳಮಳವು ತುಸು ಕಡಮೆಯಾಯಿತು.

ಇತ್ತ ಮುಂಜಾನೆ ಕೇಶವನ ಮನೆಯಲ್ಲಿ ಅವನ ಸ್ನೇಹಿತರಿಗೆಲ್ಲ ಆದರಾತಿಥ್ಯವಾಯಿತು. ಜಾನಕಿಬಾಯಿಯವರು ಸ್ವತಃ ನಿಂತು ಅವರ ಬೇಡಿಕೆಗಳನ್ನೆಲ್ಲ ಪೂರೈಸಿದರು. ಕೇಶವನು ತನ್ನ ಕೋಣೆಯನ್ನು ಬಗೆ

ಬಗೆಯಾಗಿ ಅಲಂಕರಿಸಿದ್ದನು. ಆದರೆ ಗೆಳೆಯರ ಅನ್ಯೋಕ್ತಿಗಳಿಗೆ ಗುರಿಯಾಗಬಾರದೆಂದು ಅದಕ್ಕೆ ಭದ್ರವಾಗಿ ಬೀಗಹಾಕಿದ್ದನು. ಅಧಿಕಪ್ರಸಂಗಿಗಳು ಕೆಲವರು ಬಾಗಿಲಕ್ಕೆ ತೂತು ಕೊರೆದಿರಬಾರದೆಂದು ಕಿಟಿಕೆಗಳಿಗೂ ಬಾಗಿಲಕ್ಕೂ ಪರದೆಗಳನ್ನು ಇಳಿಬಿಟ್ಟಿದ್ದನು. ಹೀಗೆ ತನಗೆ ತೋರಿದ ಎಲ್ಲ ಭದ್ರೋಪಾಯಗಳನ್ನು ಮಾಡುತ್ತ ಸಂಜೆಯವರೆಗೆ ಕಾಲವನ್ನು ಕಳೆಯಬೇಕಾದರೆ ಕೇಶವನಿಗೆ ಸಾಕುಬೇಕಾಗಿ ಹೋಯಿತು.

ರಾತ್ರಿಯಾದ ಮೇಲೆ ಕೇಶವನ ಮನೆಯಲ್ಲಿ ಜನರ ಸಂದಣಿಯು ನೆರೆಯಿತು. ಜಾನಕಿಬಾಯಿಯವರು ತಮ್ಮ ಗೆಳತಿಯರನ್ನೆಲ್ಲ ಕರೆದುಕೊಂಡು ಬಂದಿದ್ದರು. ಈ ಪ್ರಮೀಳಾ ರಾಜ್ಯದಲ್ಲಿ ಕೇಶವನನ್ನು ಬಿಟ್ಟು ಒಂದು ಗಂಡು ಹುಳಕ್ಕೆ ಸಹ ಪ್ರವೇಶವಿದ್ದಿಲ್ಲ. ನರಹರಿಯು ಮಾತ್ರ ಕುಸುಮೆಯೊಡನೆ ಮಾತನಾಡಿಕೊಂಡು ಪ್ರವೇಶವನ್ನು ದೊರಕಿಸಿದ್ದನು. ಪ್ರಸಂಗದ ನೆಸಪನ್ನು ತಂದುಕೊಂಡು ಇಷ್ಟು ಜನರನ್ನು ನೋಡಿ ಅಧೀರಳಾದ ಪದ್ಮಾವತಿಯು ಬಿಸಿಯಾಗಿ ದೀರ್ಘವಾಗಿ ಉಸಿರು ಬಿಡುತ್ತಿದ್ದಳು. ಕೆಲವರು ಕೋಣೆಯಲ್ಲಿ ಇಣಿಕಿನೋಡುತ್ತಿದ್ದರು. ತಮ್ಮ ತಾರುಣ್ಯವು ಕೊನೆಗಂಡಿರುವದರಿಂದ ಉಳಿದವರ ಸುಖವನ್ನು ನೋಡಿ ಅಂತಃಕರಣದಲ್ಲಿ ಕಲಮಲವಾಗುವದೆಂಬಂತೆ ಕೆಲವರು ಬಿರಿಬಿರಿ ಕಣ್ಣು ಬಿಡುತ್ತಿದ್ದರು. ಕಾಲನು ಬಂದು ಎಂದೋ ತಮ್ಮ ಕುಂಕುಮವನ್ನು ಅಳಿಸಿ ಹೋದ ಸತಿಯರು ಈ ಹೊಸಬಾಳಿಗಾದರೂ ಒಸಗೆಯಿರಲೇದು ಮೂಲೆಯಲ್ಲಿ ನಿಂತು ಚಿಂತಿಸುತ್ತಿದ್ದರು. ಗೊಂಬೆಗಳನ್ನಿಟ್ಟು ಗಂಡ-ಹೆಂಡಿರಾಟವನ್ನಾಡುವ ಹುಡಿಗೆಯರು ಆಟವೇ ಸತ್ಯಸೃಷ್ಟಿಯಲ್ಲಿ ಒದುವನ್ನು ನೋಡಿ ಒಮ್ಮೊಮ್ಮೆ ಉತ್ಸಾಹಪರರಾಗುತ್ತಿದ್ದರು, ಒಮ್ಮೆ ಮುಂಗಾಣದೆ ನಿಲ್ಲುತ್ತಿದ್ದರು ಈ ಸಮೂಹದಲ್ಲಿ ತಾಳ್ಮೆಯಿಂದಿರುವದು ಪದ್ಮಾವತಿಗೆ ಕಠಿಣವಾಯಿತು. ವರ್ತಮಾನವೂ ಭವಿತವ್ಯವೂ ಭೂತದಂತೆ ಅವಳೆದುರು ಬಂದು ನಿಂತಿದ್ದವು. ಅಸಹಾಯಳಾಗಿ ಹುಲ್ಲೆಯಂತೆ ಹೆಂಗಳೆಯರ ಸಮೂಹದಲ್ಲಿ ನಿಂತು ಪದ್ಮಾವತಿಯು ತನ್ನ ದುಃಖವನ್ನು ನುಂಗಿಕೊಂಡಿದ್ದಳು. ವಾಡಿಕೆಯಾಗಿ ಅವಳೊಡನೆ ವಿಷಮವಾಗಿಯೇ ನಡೆದುಕೊಳ್ಳುವ ರಮಾಬಾಯರು ಇಂದು ಪದ್ಮಾವತಿಯನ್ನು ನೆರಳಂತೆ ಹಿಂಬಾಲಿಸಿದ್ದರು, ನಗಿಸಲು ಪ್ರಯತ್ನಿಸುತ್ತಿದ್ದರು,

ಕಿವಿಮಾತು ಹೇಳುತ್ತಿದ್ದರು. ಏತರಿಂದಲೂ ಆಕೆಗೆ ಸಮಾಧಾನವಾಗಲಿಲ್ಲ. ಅಕ್ಕನ ಈ ದುರವಸ್ಥೆಯನ್ನು ನೋಡಿ ನರಹರಿಗೆ ವಿಪರೀತವಾದ ಸಂತಾಪ ವಾಯಿತು. ಕುಸುಮೆಯನ್ನು ಕರೆದು "ಈ ಜನರನ್ನು ಹೊರಗೆ ಕಳಿಸುವಂತೆ ನಿಮ್ಮಮ್ಮನಿಗೆ ಹೇಳು" ಎಂದು ಆಜ್ಞಾಪಿಸಿದನು ಕುಸುಮೆಯು ಹೋಗಿ ಅದರಂತೆ ತಾಯಿಯಲ್ಲಿ ಹೇಳಿಕೊಂಡಳು. ಉತ್ಸವದಲ್ಲಿ ಮಗ್ನರಾಗಿದ್ದ ಜಾನಕಿಬಾಯಿಯವರಿಗೆ ಇದನ್ನು ಕೇಳಿ ಸಿಟ್ಟುಬಂದಿತು. "ಇದರಾಗ ನಿನ್ನದೇನು ಹೋಗೇ, ಗಂಡಬೀರಿ! ನಾಕು ಜನರನ್ನ ನೋಡ್ಲಿ ಅಂತ ಕರಕೊಂಡು ಬಂದ್ರ ಹೊರಗ ಕಳಸಂತಾಳ ಅವ್ವಾ! ನಿನ್ನ ಫಲಶೋಭನದಾಗ ನಿನ್ನ ಮನಸ್ಸಿಗೆ ಬಂದ್ಹಂಗ ಮಾಡು!" ಎಂದು ಅವರು ಒದರಿಕೊಂಡರು. ಕುಸುಮೆಯು ತೆಪ್ಪಗಾದಳು.

ಆರತಿಯಾದ ಮೇಲೆ ಕೇಶವನು ತನ್ನ ಕೋಣೆಯನ್ನು ಸೇರಿದನು. ಆಗ ಬಾಗಿಲಿಗೆ ಹೆಂಗಳೆಯರ ಸಂದಣಿಯು ಕಿಕ್ಕಿರಿದು ನಿಂತಿತು. ಜಾನಕಿಬಾಯಿಯವರು ನಡುಗುತ್ತಿರುವ ಪದ್ಮಾವತಿಯನ್ನು ಕೈಹಿಡಿದೆಳೆದು ಸ್ತ್ರೀ ಸಮುದಾಯದ ನಟ್ಟ ನಡುವಿಂದ ಹಾಯ್ದು ಕೇಶವನ ಕೋಣೆಗೊಯ್ದು ಕುಳ್ಳಿರಿಸಿದರು – ಮಗನಿಗೆ – **ಆಹುತಿಯಾಗಿ.** ಅಯ್ಯೋ! ಪಾಪವೆ! ಪದ್ಮಾವತಿಯು ಹೌಹಾರಿ ಹೋಗಿದ್ದಳು. ಅವಳ ಮೈಮೇಲೆ ಎಚ್ಚರವೇ ಇರಲಿಲ್ಲ. ಎಚ್ಚರು ಬಂದಾಗ ಎದುರಿಗೆ ಕೇಶವನು ನಿಂತಿದ್ದನು. ಮೆಲ್ಲನೆ 'ಅವ್ವಾ!' ಎಂದು ಪದ್ಮಾವತಿಯು ಕಣ್ಣುಮುಚ್ಚಿಕೊಂಡಳು. ಆಗ ಕೇಶವನು ಗಾಬರಿಯಾಗಿ ನೀರು ಸಿಂಪಡಿಸಲು ಕಿಟಿಕೆಯಲ್ಲಿಟ್ಟಿದ್ದ ತಂಬಿಗೆಯನ್ನು ತರಹೋದನು. ಅಷ್ಟರಲ್ಲಿ ಪದ್ಮಾವತಿಯು ತನ್ನ ನೋವನ್ನೆಲ್ಲ ನುಂಗಿಕೊಂಡು ತಾಳ್ಮೆಯನ್ನು ತಂದುಕೊಂಡು ಮೋರೆಯನ್ನು ಮೇಲೆತ್ತಿ ಮುಗುಳ್ನಗೆ ನಕ್ಕಳು. ಕೇಶವನ ಜೀವದಲ್ಲಿ ಜೀವ ಬಂದಿತು.

ತುಸು ಹೊತ್ತು ಕೇಶವನು ಕೋಣೆಯಲ್ಲಿ ಅತ್ತಿಂದತ್ತ ತಿರುಗಾಡಿದನು, ವಿಚಾರಮಾಡಿದನು, ಕಿಟಿಕೆಯೊಳಗಿಂದ ಹಣಿಕಿಕ್ಕಿ ನೋಡಿದನು. ಕಡೆಗೊಮ್ಮೆ ಒಂದು ಮೂಲೆಯಲ್ಲಿ ಮುದುಡಿಕೊಂಡು ನೆಲವನ್ನು ಅಂಗುಷ್ಟದಿಂದ ಚಿಮ್ಮುತ್ತಿದ್ದ ಪದ್ಮಾವತಿಯ ಬಳಿಗೆ ಹೋಗಿ ಕುಳಿತನು. ಹುಡಿಗೆಯು ಮತ್ತೆ ಹೆದರಬಹುದೆಂಬ ಅವನ ಸಂಶಯವು ದೂರವಾಯಿತು.

ಮತ್ತಷ್ಟು ಮುದುಡಿಕೊಂಡರೂ ಪದ್ಮಾವತಿಯ ಮುಖದಲ್ಲಿ ಸುಸ್ವಾಗತದ ಎಳೆನಗೆಯಿತ್ತು. ತನ್ನ ಕೈಯಲ್ಲಿ ಅವಳ ಕೈಯನ್ನು ಹಿಡಿದುಕೊಂಡನು. ಅದರ ಮೇಲೆಲ್ಲ ಬೆವರುಹನಿಗಳು ಎದ್ದು ನಿಂತಿದ್ದವು. ಅವಳ ಮುಂಗುರು ಗಳನ್ನು ತೀಡಿದನು, ತುಟಿಯನ್ನು ತಿದ್ದಿದನು. ಪದ್ಮಾವತಿಯೇನು ಮಾತನಾಡಲಿಲ್ಲ. ಮೂಲೆಯಲ್ಲಿ ಸುಮ್ಮನೆ ಒರಗಿಕೊಂಡಿದ್ದಳು.

" ಇಷ್ಟೊಂದು ಗಾಬರಿಯೇಕೆ? " ಕೇಶವನೇ ಮಾತಿಗೆ ಮೊದಲು ಮಾಡಿದನು.

ಪದ್ಮಾವತಿಯು ಸುಮ್ಮನಿದ್ದಳು.

" ಹೆದರಲು ನಾನೇನು ಬ್ರಹ್ಮರಾಕ್ಷಸನೇ? " ಕೇಶವನು ಗಟ್ಟಿ ಯಾಗಿ ನಕ್ಕನು.

ಈ ಸಲವೂ ಪದ್ಮಾವತಿಯ ಮೌನವು ಕದಲಲಿಲ್ಲ.

" ಮಾತನಾಡಿದರೆ ಮುತ್ತು ಸುರಿಸಿದಂತಾಯಿತೆ? " ಕೇಶವನು ಮೋರೆಯನ್ನು ಗಂಟಿಕ್ಕಿ ಕೇಳಿದನು.ಅವನ ದನಿಯು ಗಂಡುದನಿಯಾಗಿತ್ತು. ಮುಖಮುದ್ರೆಯು ಮತ್ತಷ್ಟು ಉಗ್ರವಾಗಿತ್ತು.

" ಏನು ಮಾತನಾಡಲಿ? " ಪದ್ಮಾವತಿಯು ಪ್ರಯಾಸದಿಂದ ನುಡಿ ದಳು. ನಿಸ್ತೇಜವಾದ ಒಂದು ನಗೆಯು ಅವಳ ತುಟಿಗಳ ಮೇಲೆ ಸುಳಿ ದಾಡಿತು.

ಕೇಶವನು ಸುಪ್ರಸನ್ನನಾದನು. " ಇದೊಳ್ಳೆ ಪ್ರಶ್ನೆ! ನಮ್ಮ ಮನೆಗೆ ಬಂದಾಗ ಕುಸುಮಾನೊಡನೆ ಎರಡೆರಡು ತಾಸು ಹರಟೆ ಹೊಡೆಯುತ್ತಿದ್ದವ ರಾರು? " ಎಂದು ಅವಳನ್ನು ಹಿಡಿದೆತ್ತಿ ಮುದ್ದಿಸಿದನು.

ಪದ್ಮಾವತಿಯ ಎದೆಯಲ್ಲಿ ನಡುಗು ಹುಟ್ಟಿತು. ಅವನು ಕಚ್ಚಿದ ತುಟಿಗಳೂ ಅವನಿಗೆ ಗೊತ್ತಿಲ್ಲದೆ ಉಗ್ರತರವಾದ ಅವನ ಕಣ್ಣುಗಳೂ ಪದ್ಮಾ ವತಿಯನ್ನು ಅಧೀರಳನ್ನಾಗಿ ಮಾಡಿದವು.

" ದೂರ ಸರಿಯಿರೆಂದರೆ! ಬೇಕಾದ ಮಾತನಾಡೋಣ! " ಪದ್ಮಾ ವತಿಯು ಅತಿ ಪ್ರಯಾಸದಿಂದ ಕೇಶವನ ಸೆಳೆತವನ್ನು ತಪ್ಪಿಸಲು ಪ್ರಯತ್ನಿ ಸಿದಳು.

ಕೇಶವನು ಅವಳನ್ನು ತನ್ನ ನಿಡಿದೋಳುಗಳಿಂದ ಬಲವಾಗಿ ಸುತ್ತಿದನು.

" ಇದೊಳ್ಳೆಯ ಪ್ರಸಂಗ! ಮಾತನಾಡಲು ಬಂದಾಗ ಮಾತಿಲ್ಲ. ಇಲ್ಲದಾಗ ಮಾತು ! " ಕೇಶವನು ಪದ್ಮಾವತಿಯು ಮುಟ್ಟಿ ಬೀಳುವಂತಹ ದನಿಯಲ್ಲಿ ನುಡಿದನು. ಅವನ ಉಸಿರು ಮೊದಲಿನಿಗಿಂತ ತೀವ್ರವಾಗಿತ್ತು.

ಪದ್ಮಾವತಿಗೆ ಅವನ ಸೆಳೆತನವನ್ನು ತಪ್ಪಿಸುವದಾಗಲಿಲ್ಲ. ತೋಟಿಗನ ಕೈಗೆ ಸಿಕ್ಕ ಎಳೆಬಳ್ಳಿಯಂತೆ ವಿಲಿವಿಲಿ ಒದ್ದಾಡಿದಳು. 'ಅಯ್ಯೋ!' ಎಂದು ನರಳಿದಳು.

ಕೇಶವನಿಗೆ ಪ್ರಜ್ಞೆ ಬಂತು. ಅದರೊಡನೆ ಕರುಣೆಯೂ ಜಾಗೃತ ವಾಯಿತು. ಬಾಹುಪಾಶವನ್ನು ಸಡಿಲಿಸಿದನು.

ಇದರಿಂದ ಪದ್ಮಾವತಿಗೆ ತುಸು ಧೈರ್ಯವಾಯಿತು. ಬಂಧನದಿಂದ ತೀರ ಮುಕ್ತಳಾಗಬಹುದೆಂದೆಣಿಸಿ " ಬಿಡಿರಿ " ಎಂದು ಮುಗುಳು ನಗೆ ನಕ್ಕಳು.

ಆ ಮುಗುಳು ನಗೆಯೇ ಅವಳಿಗೆ ಮುಳುವಾಯಿತು. ಹತ್ತಿರ ಬಂದ ಕಾವಿಗೆ ಹಾಸಿಗೆ ಹಾಸಿ ಕರೆದಂತಾಯಿತು.

ಒಂದು ತೀಕ್ಷ್ಣವಾದ, ಅಮಾನುಷವಾದ ನೋಟವು ಕೇಶವನ ಕಣ್ಣೊಳಗಿಂದ ಹಾಯ್ದು ಪದ್ಮಾವತಿಯ ಹೃದಯವನ್ನು ಭೇದಿಸಿತು. ಅವಳ ಮುಖದಲ್ಲಿ ನಟ್ಟ ನೋಟವನ್ನು ಕೇಶವನು ಕಿತ್ತಲಿಲ್ಲ.

ಪದ್ಮಾವತಿಗೆ ಈ ಬಿರುನೋಟವನ್ನು ಸಹಿಸುವದಾಗಲಿಲ್ಲ. ಬಿಸಿಲಿನಲ್ಲಿ ಕೋಮಲ ಲತೆಯು ಕಮರುವಂತೆ ಅವಳು ಕಳೆಗುಂದಿ ಹೋದಳು. "ಅಯ್ಯೋ ! ದೇವರೆ !" ಎಂದು ಕಣ್ಣುಮುಚ್ಚಿ ನೆಲಕ್ಕುರುಳಿದಳು.

ಈ ಸಲ ಕೇಶವನಿಗೆ ಕರುಣೆ ಬರಲಿಲ್ಲ. ಅಸಹಾಯವಾಗಿ, ಅಲ್ಲಗಳೆ ಯದೆ, ಅರ್ಧಮರ್ಧ ಪ್ರಜ್ಞೆಯಿದ್ದು ಸುಮ್ಮನೆ ತನ್ನ ಅಂಕಿತದಲ್ಲಿ ಬಿದ್ದು ಕೊಂಡ ದೇಹದ ಮೇಲೆ ಕೇಶವನು ತನ್ನ ಅಧಿಕಾರದ ಮುದ್ರೆಯೊತ್ತಿದನು.

---

# ಪ್ರಕರಣ ೧೦

## ಸುಬ್ಬಣಾಚಾರ್ಯರ ಪ್ರಯಾಣ

"ಏ ತಿಪ್ಯಾ ! ತೊಗೊಂಡು ನಡಿ ಹಸಿಬೀನ ! ಹೊತ್ತಾತು. ಇಕಾ ! ಹಿರೇರಿಗೆ ನಮಸ್ಕಾರ! ಹೋಗಿ ಬರತೇನಿ, ಆಚಾರ ! ರಮಾಬಾಯರ ಹೋಗಿ ಬರತೇನಿ !" ಹೈಗ್ರೀವಾಚಾರ್ಯರ ಮನೆಯಲ್ಲಿ ಸುಬ್ಬಣಾಚಾರ್ಯರ ಗಡಿಬಿಡಿಯು ನಡೆದಿತ್ತು. ದಾವೆಯಿದ್ದುದರಿಂದ ಅಗ್ರಹಾರದಿಂದ ಕಾಗದ-ಪತ್ರ ತರಲು ಅವರು ನಡೆದಿದ್ದರು. ಮೇಲಾಗಿ ಅವರು ಮೊಗ್ಗಾವಿಗೆ ಬಂದು ಬಹಳ ದಿವಸಗಳಾಗಿದ್ದವು.

ಹೈಗ್ರೀವಾಚಾರ್ಯರು ಅಂತಃಕರಣದಿಂದ ಸುಬ್ಬನನ್ನು ಬೀಳ್ಕೊಟ್ಟರು. ಕಾರ್ಯಕುಶಲತೆಗಾಗಿ ಅವನನ್ನು ಪ್ರಶಂಸಿಸಿದ್ದಲ್ಲದೆ ಅವನಿಲ್ಲದಿದ್ದರೆ ಎಲ್ಲವೂ ತಮ್ಮಿಂದ ಜರಗುವದು ಬಲು ಕಠಿಣವಾಗಿತ್ತೆಂದು ಹೇಳಿದರು. ಸುಬ್ಬನು ನಗುತ್ತ ತಲೆಯಲ್ಲಾಡಿಸಿದನು. ಆಚಾರ್ಯರು ಹೇಳಿದಂತೆ ಮಾಡುವದು ತನ್ನ ಧರ್ಮವೆಂದು ಸಾರಿ ಹೇಳಿದನು. ಕಡೆಗೆ ಆಚಾರ್ಯರು ಬಾಗಿಲಲ್ಲಿ ನಿಂತು "ಏ ಸುಬ್ಯಾ ! ಕೆಲಸ ತೀರಿದ ಮ್ಯಾಲ ನಿಂದರ ಬ್ಯಾಡ! ನೀ ಇಲ್ಲದ ನಮ್ಮ ಶ್ರಾವಣಮಾಸ ಆಗೋಣ ಇಲ್ಲ." ಎಂದು ಒದರಿ ಹೇಳಿದರು. ಸುಬ್ಬನು ಹೊರಳಿ "ಆಚಾರ, ಬರತೇನಿ ! ಹೋಗಿ ಬರತೇನಿ !" ಎಂದಂದು ಮತ್ತೆ ಮುಂದೆ ಸಾಗಿದನು. ಹಿಂದಿನಿಂದ ಹಸಿಬೆಯನ್ನು ಹೊತ್ತುಕೊಂಡು ತಿಪ್ಪನು ಓಡಿ ಬರುತ್ತಿದ್ದನು.

ತಿಪ್ಪನು ಬರಲೆಂದು ಆಚಾರ್ಯರು ದಾರಿಯಲ್ಲಿ ತುಸು ನಿಂತರು. ಆ ಮೇಲೆ ಉಪದೇಶಾಮೃತವನ್ನು ಅವನಿಗೆ ಧಾರೆಯೆರೆಯಹತ್ತಿದರು. "ತಿಪ್ಯಾ! ಧಡ್ಡಸೋ....ನ ನಿನಗ ತಿಳೂದಿಲ್ಲ. ನರಹರಿನ್ನ ನೋಡು. ನಾಕನೇ ಎತ್ತಾ ಪಾಸಾಗಿ ಒಂದನೇ ನಂಬರು ಬಂದ. ಸ್ಕಾಲರ್‌ಶಿಫ್ ಸಿಗತದ. ಈಗ ಐದನೇ ಎತ್ತಾದಾಗ ಓದತಾನ. ನೀ ಈಗ ಒಂದನೇ ಎತ್ತಾ ಪಾಸಾದಿ ಕಡೇ ನಂಬರು ಬಂದೀದಿ. ಮತ್ತ ಓದೋದು ಬಿಡತೀದಿ- ಬಿಟ್ಟ್ರ ನಪಾಸು.

ನನ್ನ ಹೊಟ್ಯಾಗ ಬೆಂಕಿ ಹಾಕತೀಯೋ ಸೋಳೇಮಗನ!'' ಎಂದು ಸುಬ್ಬಣಾಚಾರ್ಯರು ಒಮ್ಮೆಲೆ ಹೊರಳಿ ತಿಪ್ಪನ ಕಿವಿ ಹಿಂಡಿದರು.

ತಿಪ್ಪನು ಕೊಂಯ್ಗುಡ ಹತ್ತಿದನು. "ಬಿಡಪಾ! ಬಿಡಪಾ! ಓದ ತೀನಿ ಬಿಡು!'' ಎಂದು ಹಲ್ಲುಕಿರಚಿದನು.

ತಂದೆಯು ಕಿವಿ ಸಡಿಲುಬಿಟ್ಟು ಮತ್ತೆ ನಾಲಿಗೆಯನ್ನು ಸಡಿಲು ಬಿಟ್ಟನು. "ಇಕಾ! ನೀ ಇಲ್ಲದ ಸೋಮಾರಿತನ ಮಾಡೀ! ನನ್ನ ಮ್ಯಾಲ ಇಲ್ಲದ ಅಪವಾದ ತಂದೀ! ನಾವು ಬಾಗಲಕೋಟಿ ಆಚಾರ ಮನೆತನ-ದವರು. ಕುಲ ಶೀಲ ಕಾಯ್ಕೊಂಡಿದ್ದೀವಿ, ನೀ ಮಂದಿ ಮನ್ಯಾಗ ಇರೋವ ದಿದ್ದಿ. ಇಕಾ! ಕಾಳಜಿಯಿಂದ ಇರು! ಮನ್ಯಾಗ ಕೆಲಸಾ ಹೇಳ್ಯಾರು ನೀ ಹೇಳಿದ್ದು ಮಾಡು. ಮನ್ಯಾಗ ನಾನು ಬದ್ಯಾರು. ನೀ ಬಯ್ಸಿಕೊಂಡು ಸುಮ್ಮನಿರು. ಮಂದೀಮನಿ ಹಿಡಿದ ಗೊತರ್ದ ಈಗ ನಮ್ಮ ಹೊಟ್ಟೆ ಹೊರಗ ಹೋಗುದಿಲ್ಲ, ಏನಪಾ ಅಂದ್ರ! ವೈದಿಕ ವಿದ್ಯಾದಾಗ ಏನು ಹಾನಲು ಉಳಿಲಿಲ್ಲ. ಈಗ ನಾನs ಕೂತಿಲ್ಲ ಮಂಗ್ಯಾನ್ಹಂಗ! ನೀ ಒಬ್ಬನ ಮುಂದ ಕಲಕೋತ ಹೋಗು. ನಾ ನನ್ನ ಜೀವ ಒತ್ತಿ ಇಟ್ಟು ದುಡ್ಡು ತಂದು ಕೊಡತೇನಿ. ಹೂಂ ಆರ ಅನಬಾರದ? ಕತ್ತಿಗಿತ್ತಿಗೆ ಹುಟ್ಟೀಯೇನು'' ಎಂದು ಆಚಾರ್ಯರು ಸಿಟ್ಟಿಗೆದ್ದು ಕೇಳಿದರು.

ತಿಪ್ಪನು 'ಹೂಂ' ಎಂದನು.

ಆಚಾರ್ಯರಿಗೆ ಮತ್ತೆ ಪುಟ ಸಿಕ್ಕಿತು. "ನಮ್ಮ ಹಿರೇರು ನಮಗ ಇಂಗ್ಲೀಷು ಕಲಿಸಲಿಲ್ಲ. ಇಲ್ಲದಿದ್ದರೆ ಇಷ್ಟೊತ್ತಿಗೆ ಎವ್ಮ ಆರ ಬ್ಯಾ ಆರ ಆಗತಿದ್ದಿವಿ. ಹೊಂತಗೂಟಲೆ ಆ ಮಾರ್ಯಾಳನ್ನ ಲಗ್ನಾ ಮಾಡಿ ಹೋದರು. ಆಕಿ ನಡು ನೀರಾಗ ಕೈಬಿಟ್ಟಳು. ಇನ್ನ ನೀ ಏನು ಮಾಡತೀ ನೋಡೋಣ. ಇಲ್ಲ ಬಿಡು! ನಮ್ಮ ಜನರು ಕಲಿಯೋಣಿಲ್ಲ. ಕಡಬು ತುಪ್ಪದ ನವಿ ಹತ್ತಿದವರಿಗೆ ವಿದ್ಯಾದ ನವಿ ಹತ್ತೀತ?........ಹತ್ತsದ ಅಂತಾರ ಹೇಳೋ ನನ ಮಗನ! ಕೇಳಿ ಸಂತೋಷ ಬಡತೇನಿ!'' ಎಂದು ಆಚಾರ್ಯರು ಮತ್ತೆ ತಿಪ್ಪನ ಕಿವಿಯೆಡೆಗೆ ಕೈಹಾಕಿದರು.

ತಡವರಿಸುತ್ತ ಎರಡೂ ಕಿವಿಗಳನ್ನು ಮುಚ್ಚಿಕೊಂಡು ತಿಪ್ಪನು 'ಹತ್ತದ, ಹತ್ತದ'' ಎಂದು ಕೂಗಿಕೊಂಡನು.

ಆಚಾರ್ಯರು ಮತ್ತೆ ಮುಂದೆ ಸಾಗಿದರು. "ಏನು ಹತ್ತದ? ನಿಮ್ಮಂಥವರಿಗೆ ಬೆಂಕಿ ಹತ್ತಿಡರ ಸೈ! ಇತ್ತಲಾಗ ಇಂಗ್ಲೀಷು ಇಲ್ಲ. ಅತ್ತಲಾಗ ವೈದೀಕನು ಇಲ್ಲ. ನೀ ಏನಾಗತಿ ಗೊತ್ತದ ನನಗ. ಭೂರಿ-ಕೂಳಿನ ಬ್ರಾಹ್ಮಣಾಗತಿ" ಎಂದು ಅವರು ವಿಷಣ್ಣವದನರಾಗಿ ನುಡಿದರು.

"ಇಲ್ಲಪಾ! ಕಲಿತೇನಿ!" ಎಂದು ತಿಪ್ಪನು ನಾಚಿಕೊಂಡು ಹೇಳಿದನು.

ಆಚಾರ್ಯರಿಗೆ ಆನಂದವಾಯಿತು. "ಆಂ? ಏನಂದಿ! ಕಲೀತೀಯಾ, ನನ ಮಗನ! ಕಲೀತೀಯಾ! ಅಡ್ಡಿ ಇಲ್ಲ. ವಿದ್ಯಾದ ಬೀಜ ಅದ ನಿನ್ನ ಹೊಟ್ಯಾಗ. ನಾ ಹೇಳಿದ್ಹಾಂಗ ಇರಕೋತ ಹೋಗು, ನಿನ್ನ ಕಲ್ಯಾಣ ಆಗ ತದ. ರಮಾಬಾಯಿರೂ ಒಳ್ಳೇ ಮನಸೇರಿದ್ದಾರ. ಅವರು ನಿನ್ನ ಎಲ್ಲಾ ರೀತಿಯಿಂದ ನೋಡಿಕೋತಾರ" ಎಂದು ಅವರು ಹೇಳಿದರು. ಅಲ್ಲಿಯೇ ಅವರು ಮಗನನ್ನು ಮುದ್ದಿಸಿ ಬಿಡುವವರು. ಆದರೆ ಭರ್ತಿ ಪೇಟೆ. ಸುಮ್ಮನಿದ್ದರು.

ಮೋಟರಿನ ನಿಲ್ಮನೆಯು ಸಮೀಪಿಸಿದ್ದು ತಿಪ್ಪನ ನೆನಪಿಗೆ ಬಂದಿತು. "ಅಪ್ಪಾ! ಅವರ ಮನ್ಯಾಗ ಊಟಕ್ಕ ಹೊತ್ತಾಗತದ; ನಡುವ ಹಸಿವಿ ಆಗ ತದ. ಹೀಂಗಾಗಿ ಮುಂಜಾನೆ ಓದೋದು ಆಗೂದೇ ಇಲ್ಲ" ಎಂದು ಚಾಣಾಕ್ಷನಾದ ತಿಪ್ಪನು ಹೇಳಿದನು.

ಸುಬ್ಬಣಾಚಾರ್ಯರಿಗೆ ಕರುಣೆ ಬಂದಿತು. ಅವರು ಮೋಟರಿನವನಿಗೆ ಕೊಡಬೇಕೆಂದು ಟೊಂಕದಲ್ಲಿಟ್ಟಿದ್ದ ರೂಪಾಯಿಯನ್ನು ತೆಗೆದು "ಇಕಾ! ತಿಪ್ಪ! ಇದನ್ನ ತೊಗೊ. ನಿನ್ನ ಅಭ್ಯಾಸಕ್ಕ ಹರಕತ್ತು ಬ್ಯಾಡ ನೋಡು. ತಿನ್ನು, ಉಣ್ಣು, ಓದೋದು ಬಿಡಬ್ಯಾಡಪಾ! ಅದು ಘಟಿಂಗರ ಲಕ್ಷಣ!" ಎಂದು ಉಪದೇಶ ಮಾಡಿದರು.

ಹೀಗೆ ಮಾತಾಡುತ್ತ ಸುಬ್ಬಣಾಚಾರ್ಯರು ಮೋಟರಿನ ನಿಲ್ಮನೆಗೆ ಹೋದರು. ಆದರೆ ಅಲ್ಲೇನಿದೆ? ಗಾಬರಿಯಾದರು. ಮೋಟರು ಹೋಗಿ ಬಿಟ್ಟಿತ್ತು!

"ಏ ತಿಪ್ಪಾ! ಇದೇನು ಅನಾಹುತ? ಹೋಗೇದಲ್ಲ ಮೋಟರು? ಇನ್ನೇನು ಮಾಡಲಿ?" ಎಂದು ಆಚಾರ್ಯರು ಒದರಿಕೊಂಡರು. ಅವರ ಮೋರೆಯು ಹುಚ್ಚುಚ್ಚಾಯಿತು.

ಜಟಕಾಗಾಡಿಗಳನ್ನು ಈ ಮೋಟರು ಸುಂಗಿ ನೀರು ಕುಡಿಸದ್ದು ಆಚಾರ್ಯರ ಮನಸ್ಸಿಗೆ ಬಂದಿದ್ದಿಲ್ಲ. ಮೊಗ್ಗಾವಿಯಿಂದ ಸ್ಟೇಶನ್ನಿಗೆ ಹೋಗಲಿಕ್ಕೆ ಈ ಮೋಟರ ಸರ್ವ್ಹಿಸು ಸುರುವಾಗಿ ಕೆಲವು ತಿಂಗಳಾಗಿದ್ದವು. ಆಚಾರ್ಯರು ಅದನ್ನು ನೂರು ಸಲ ಶಪಿಸಿದ್ದರು. ಊರಿಗೇ ಹೊಸದಾದ ಕೃತ್ಯಗಳನ್ನು ಮಾಡಲು ಹಂಬಲಿಸಿ ಹಾಳಾದ ಒಬ್ಬ ದೇಸಾಯರು ಈ ಸರ್ವ್ಹಿಸನ್ನು ಸ್ಥಾಪಿಸಿದ್ದರು.

ತಿಪ್ಪನು ಹಸಿಬೆಯನ್ನು ಕೆಳಗಿರಿಸಿ ಇನ್ನೂ ಹತ್ತಿರ ಹೋಗುತ್ತಿದ್ದ ಮೋಟರನ್ನು ನಿಲ್ಲಿಸಲು ಓಡಿ ಹೋದನು.

ಆ ಹಸಿಬೆಯನ್ನು ಹೊತ್ತುಕೊಂಡು ಓಡುತ್ತ "ನಿಂದ್ರು! ಸಿಂದ್ರು!" ಎಂದು ಎರಡೂ ಕೈಮಾಡಿ ಕರೆದು ಮೋಟರಿನವನು ನಿಲ್ಲಲು, "ಸಿಂದ್ರು! ಸೋ—ಸ! ಎಲ್ಲಿ ಓಡಿ ಹೋಗತಿ" ಎಂದು ಆಚಾರ್ಯರು ದರ್ಪದಿಂದ ಒದರಿದರು. ಈ ಮೋಜು ನೋಡಲು ಬೀದಿಯ ಮೇಲಿನ ಅನೇಕ ಜನರು ಗುಂಪುಗೂಡಿದರು. ಮೋಟರಿನಲ್ಲಿ ಹೋಗಿ ಕುಳಿತ ಮೇಲೆ ಆಚಾರ್ಯರಿಗೆ ಜೀವ ಬಂದಿತು. ಏಜಂಟನು ತಿಕೀಟು ಕೊಟ್ಟು ರೊಕ್ಕ ಬೇಡಿದನು. ಅವರು ಧೋತರದ ಒಂದು ಚುಂಗಿಗೆ ಹಾಕಿದ ಕಗ್ಗಂಟನ್ನು ಬಿಚ್ಚುತ್ತ "ಇಕಾ! ತಮ್ಮಾ! ಸ್ವಲ್ಪ ತಾಳು! ಹೊರಗ ಇದ್ದ ರೂಪಾಯಿ ತಿಪ್ಪಗ ಕೊಟ್ಟೇನಿ. ಗಂಟು ಬಿಚ್ಚಿದವನ ನಿನ್ನ ರೊಕ್ಕ ನಿನಗ ಕೊಡತೇನಿ" ಎಂದು ಅದನ್ನು ಬಿಚ್ಚಲು ಪ್ರಯತ್ನಿಸಿದರು. ಎರಡು ನಿಮಿಷಗಳಾದರೂ ಅದು ಅವರಿಗೆ ಸಾಧ್ಯವಾಗಲಿಲ್ಲ.

"ಹೂಂ ಲಗ್ಗನ ಕೊಡ್ರಿ! ತಿರುಗಿ ಗಾಡಿ ಟೇಶನ್ನಿಗೆ ಬರೋ ಹೊತ್ತಾತು" ಎಂದು ಏಜಂಟನು ಒದರಿದನು.

"ಏ ಕ್ಯಾ ಮಿಲ್ಯಾಬೆ ಪಾಸಂದರ! ಭಲೆ ಆಚಾರಿ!" ಎಂದು ಡ್ರಾಯ್ವ್ಹರನು ಮುಸುಕಾಡಹತ್ತಿದನು.

ಆಚಾರ್ಯರ ಕೋಪವು ಪ್ರಜ್ವಲಿತವಾಯಿತು. "ಇಕಾ! ತಮ್ಮಾ! ಆಚಾರಿ-ಗೀಚಾರಿ ಅಂತ ನೀ ನನಗ ಮುಸಲ್ಮಾನೀಲೆ ಬೈಬ್ಯಾಡ! ನಿನ್ನ ಲೆಕ್ಕ ನೀ ತೊಗೊ!" ಎಂದು ಅವರು ರೂಪಾಯಿಯನ್ನು ಏಜಂಟನ ಮೇಲೊಗೆದರು.

ಮೋಟರು 'ಸ್ಟಾರ್ಟ್' ಆದ ಕೂಡಲೆ "ಅಪ್ಪಾ ಹೋಗಿ ಬಾ !" ಎಂದು ತಿಪ್ಪಸು ಕೂಗಿದನು.

"ಹೂಂ ! ಹೋಗಿ ಒರತೇನಿ. ನಾ ಹೇಳಿದ್ಹಂಗ ಮಾಡು" ಎಂದು ಆಚಾರ್ಯರು ಕಿಟಿಕಿಯೊಳಗಿಂದ ಒದರಿಕೊಂಡರು. ಗಾಳಿಗುಂಟ ಅವರ ದನಿಯು ತೇಲಿ ಹೋಯಿತು !

---

## ಪ್ರಕರಣ ೧೧

## ಗಿಡಮಂಗ

ಪರೀಕ್ಷೆಯು ಮುಗಿದು ಹೋಗಿತ್ತು. ನರಹರಿಯು ಮೊದಲನೆ ನಂಬರು ಬಂದಿದ್ದ. ಶೀನೂ ಸಾಧಾರಣವಾಗಿ ಪಾಸಾಗಿದ್ದ. ಮೇಲಾಗಿ ನರಹರಿಯು ಮನೆಯಲ್ಲಿ ಪ್ರಸ್ಥದ ಕಾರ್ಯಗಳೆಲ್ಲ ಮುಗಿದಿದ್ದವು. ಇನ್ನೂ ಹದಿನೈದು ದಿವಸ ಸಾಲೆಗೆ ಸೂಟಿಯಿತ್ತು. ಹುಡುಗರಿಗೆ ಹದಿನೈದು ದಿವಸಗಳೆಂದರೆ ಹದಿನೈದು ಗಳಿಗೆಗಳಾಗಿ ಹೋದವು.

ಮೊಗ್ಗಾವಿಯ ಊರ ಹೊರಕ್ಕೆ ತೋಟಗಳ ಗುಂಪಿನ ಮಗ್ಗುಲಲ್ಲಿ ಒಂದು ಮಾವಿನ ತೋಪಿತ್ತು. ಆ ತೋಪಿನ ನಡುವೆ ಒಂದು ದೊಡ್ಡದಾದ ಹಳೆಯ ಮಾವಿನ ಮರವು ಶಾಖೋಪಶಾಖೆಯಾಗಿ ಮೆರೆಯುತ್ತಿತ್ತು. ಅದರ ಟೊಂಗೆಗಳೆಂದರೆ ಅಟ್ಟದ ಮನೆಯ ಮೆಟ್ಟಲುಗಳಿದ್ದಂತೆ. ತಳದಿಂದ ತುದಿಯ ವರೆಗೆ ಅದನ್ನು ಯಾರೂ ಅನಾಯಾಸವಾಗಿ ಏರಬಹುದು. ಸೂಟಿಯ ದಿನಗಳಲ್ಲಿ ಸಾಲೆಯ ಹುಡುಗರೆಲ್ಲ ಇಲ್ಲಿ ಗಿಡಮಂಗನಾಟಕ್ಕೆಂದು ಕಲೆ ಯುತ್ತಿದ್ದರು. ಸಂಜೆಯಾದಾಗ ಅಲ್ಲಿ ಯಾರಾದರೂ ತಿರುಗಾಡಲು ಹೋದರೆ ಆ ಮರದ ತುಂಬ ಮಂಗನಂಥ ಹುಡುಗರು ಅವಿತುಕೊಂಡು ಕುಳಿತಿರುವದನ್ನು ನೋಡಬಹುದಾಗಿತ್ತು ! ಈ ಹುಡುಗರ ತಂದೆ-ಅಜ್ಜಂದಿರು ಅವೇ ಮಾವಿನ ಮರದ ಮೇಲೆ ಗಿಡಮಂಗನಾಟವನ್ನಾಡಿ ಬೆಳೆದಿದ್ದರು.

ಈ ದಿನ ಸಂಜೆಗೆ ಪ್ರತಿನಿತ್ಯದಂತೆ ನರಹರಿ–ಶೀನರು ಮಾವಿನ ಮರದೆಡೆಗೆ ಸಾಗಿದ್ದರು. ಯಾವಾಗಲೂ ಇವರದೊಂದು ಜೋಡಿ. ತಿಪ್ಪನು ಆ ಆಟದಲ್ಲಿ ಇರುತ್ತಿದ್ದನಾದರೂ ಅವನ ಸಂಗಡಿಗರೇ ಬೇರೆಯಾಗಿದ್ದರು.

ಮನೆಯನ್ನು ಬಿಟ್ಟು ಕಚೇರಿಯ ಚೌಕಿಗೆ ಒಂದಾಗ ದಣಿದು ಆಫೀಸಿನಿಂದ ತಿರುಗಿ ಬರುತ್ತಿರುವ ಕಾರಕೂನರ ತಂಡವನ್ನು ನೋಡಿ ಶೀನು ಕೇಳಿದ. “ ನರಹರಿ, ನೀನೇನಾಗಬೇಕೆಂದು ಮಾಡಿರುವಿ ಮುಂದೆ?”

“ ದೇವರು ಮಾಡಿದ್ದನ್ನು. ” ನರಹರಿಯು ಉತ್ತರ ಕೊಟ್ಟನು.

“ ಅದಂತೂ ನಿಜ, ಬಿಡು. ನಿನ್ನಲ್ಲಿಯ ಮನುಷ್ಯಪ್ರಯತ್ನದ ನಿಟ್ಟಾವುದು ? ”

“ ನಾನು ಕವಿಯಾಗಬೇಕೆಂದು ಮಾಡಿದ್ದೇನೆ. ” ನರಹರಿಯು ಹೇಳಿದನು.

“ ವಾಹವಾ! ಕವಿತೆಗಳನ್ನು ಬರೆದು ಅವುಗಳನ್ನು ನುಂಗಿ ಹೊಟ್ಟೆ ತುಂಬಿಕೊಳ್ಳುವಿಯೋ ಏನು ? ” ಶೀನು ನಕ್ಕನು.

“ ನನ್ನ ಮಟ್ಟಿಗೆ ಕೇಳಿದರೆ, ನಾವೇನಾಗಬೇಕೆಂದು ನಿಶ್ಚಯಿಸಿರುವದು ಬೇರೆ; ಹೊಟ್ಟೆಯ ಉದ್ಯೋಗವು ಬೇರೆ. ನಾನು ಹೊಟ್ಟೆಗಾಗಿ ಯಾವ ಕೆಲಸವನ್ನೂ ಮಾಡಬಹುದು. ಆದರೆ ಕವಿಯಾಗಬೇಕೆಂದು ನನ್ನ ಕನವರಿಕೆ. ”

“ ನೀನು ಬಹಳ ವಿಚಾರವಂತ, ಬಿಡು ! ಇಷ್ಟೆಲ್ಲ ನನ್ನ ತಲೆಯಲ್ಲಿ ಸೇರದು. ಆದರೆ ನೀನು ಕವಿಯಾಗಬಲ್ಲೆಯಾ ?”

“ ಆಗಬಹುದೆಂದು ನನಗೆನಿಸುತ್ತದೆ. ”

“ ಏತರ ಮೇಲಿಂದ ? ”

“ ನಾನು ಬರೆದ ಒಂದೆರಡು ಕವಿತೆಗಳಿವೆಯಲ್ಲ ? ”

“ ಇಷ್ಟೇ ಆಧಾರ ಸಾಲದು ! ”

“ ಒಂದೆರಡು ಕನಸುಗಳು ಬಿದ್ದಿವೆ ನನಗೆ. ”

“ ಏನೆಂದು ? ”

“ ಒಮ್ಮೆ ನಾನೊಂದು ತೋಟದಲ್ಲಿ ತಿರುಗಾಡುತ್ತ ನಿಂತಾಗ ಸರಸ್ವತಿಯು ಬಂದು ನನ್ನ ತಲೆಯ ಮೇಲೆ ಕೈಯಿಟ್ಟಂತಾಯಿತು. ”

" ವಾಹವಾ! ನರಹರಿ! ಅವಳೇನು ಸರಸ್ವತಿಯೋ ನೆರೆಮನೆಯ ಸರಸಮ್ಮನವರೋ ಚೆನ್ನಾಗಿ ತಿಳಿದು ನೋಡು!" ಶೀನು ಗಟ್ಟಿಯಾಗಿ ನಕ್ಕನು.

ನರಹರಿಯ ತುಟಿಗಳ ಮೇಲೆ ಮುಗುಳು ನಗೆಯೊಂದು ಪಸರಿಸಿತು. ಆತನು ಸುಮ್ಮನಿದ್ದನು.

" ಅಂತೂ ನೀನು ಕವಿಯಾಗುವಿಯೆನ್ನು! ನನ್ನ ಹಣೆಬರಹ ತಿಳಿದೇ ಇದೆ. ನಮ್ಮಣ್ಣನಂತೆ ನಾನು ವಕೀಲನಾಗುತ್ತೇನೆ. ಗಳಿಸಬೇಕೆಂಬ ಅವಶ್ಯಕತೆಯಿಲ್ಲ. ಒರ್ವ ಚೆಲುವ ಹುಡಿಗೆಯನ್ನು ಲಗ್ನವಾಗಿ ಆಯುಷ್ಯವನ್ನು ಸುಖವಾಗಿ ಕಳೆಯಬೇಕೆಂದಿದ್ದೇನೆ. ಇಂಥ ಹುಡಿಗೆ ನನಗೆ ದೊರಕಬಹುದಲ್ಲವೆ, ನರಹರಿ?" ಶೀನೂ ಪ್ರಶ್ನೆ ಮಾಡಿದನು.

" ಶೀನೂ, ನೀನು ಭಾಗ್ಯಶಾಲಿ. ದೊರೆತರೂ ದೊರೆಯಬಹುದು." ನರಹರಿಯು ಆಶ್ವಾಸನವಿತ್ತನು.

" ದೊರೆತರೆ ಕೇಳುವದೇನು! ಈ ಹಾಳು ಮೊಗ್ಗಾವಿಯನ್ನಷ್ಟು ಸುಧಾರಿಸಬೇಕೆನ್ನುತ್ತೇನೆ. ಅಪ್ಪನು ಹೇಳುತ್ತಿರುವಂತೆ, ನಮ್ಮ ಜನರಿಗೆ ಬುದ್ಧಿಯಿಲ್ಲ ನೋಡು!"

" ಪುಣೆಯಲ್ಲಿ ನಾಗರಿಕತೆಯು ಭವ್ಯವಾಗಿ ಬೆಳೆದಿದೆಯೆಂದು ಹೇಳುತ್ತಾರೆ ನಿಮ್ಮ ತಂದೆಯವರು. ಪುಣೆಯನ್ನಾದರೂ ಒಮ್ಮೆ ನೋಡಬೇಕು!" ನರಹರಿಯು ವಿಚಾರಮಗ್ನನಾಗಿ ನುಡಿದನು.

" ಹೋಗುವದಿದೆಯಲ್ಲ ಮೆಟ್ರಿಕ್ ಆದ ಮೇಲೆ?" ಶೀನೂ ಸಂತೋಷದಿಂದ ನುಡಿದ.

" ನಿನಗಿದೆ. ನನಗ—" ನರಹರಿಯು ಮಾತನ್ನು ಅಷ್ಟಕ್ಕೆ ನಿಲ್ಲಿಸಿದನು. ಕೇಶವರಾಯರು ಗೆಳೆಯರೊಡನೆ ಹತ್ತಿರದಲ್ಲಿ ಹಾಯ್ದು ಹೋಗುತ್ತಿದ್ದರು. ಸಿಗರೇಟಿನ ಹೊಗೆಯು ಅವರನ್ನೆಲ್ಲ ಸುತ್ತಿಕೊಂಡಿತ್ತು. ಅವರ ನಗೆಯಾಟ ಕೆಲೆಯಾಟಕ್ಕೆ ಹತ್ತಿರ ಹೋಗುವವರು ಹತ್ತುಮೊಳ ದೂರ ಸರಿದು ಸಾಗುತ್ತಿದ್ದರು.

ನರಹರಿಯನ್ನು ನೋಡಿ ಕೇಶವರಾಯರು ಮೌನ ತಾಳಿದರು. ಅವರ ಸ್ನೇಹಿತರೂ ತಟಸ್ಥರಾದರು.

ಲಗುಬಗೆಯಿಂದ ನರಹರಿ–ಶೀನರು ಅಲ್ಲಿಯ ರಹದಾರಿಯನ್ನು ಬಿಟ್ಟು ಹೊಲಗಳನ್ನು ಹೊಕ್ಕು ಪೂವಿನ ಮರದೆಡೆಗೆ ಸಾಗಿದರು. ಮತ್ತೆ ಕೇಶವ ರಾಯರ ಗುಂಪಿನ ಚಲ್ಲಾಟವು ಯಥಾಪ್ರಕಾರವಾಗಿ ಸಾಗಿತು.

" ನಿಮ್ಮ ಕೇಶವರಾಯರು ಎಷ್ಟು ಚೈನಿ ಇದ್ದಾರೋ, ನರಹರಿ ! " ಶೀನೂ ಪ್ರಶ್ನೆಮಾಡಿದನು.

ನರಹರಿಗೆ ಹೃದಯದಲ್ಲಿ ತಳಮಳವಾಯಿತು. ಅವನು ಸುಮ್ಮ ನಿದ್ದನು.

" ಸೂಟಿಯಲ್ಲಿ ನೀನು ಏನು ಓದಿದಹಾಗಾಯಿತು ? ನಾನಾದರೋ ಪುಸ್ತಕವನ್ನು ಮುಟ್ಟಿಲ್ಲ ! " ಶೀನು ಮತ್ತೆ ಮಾತು ಬೆಳೆಸಿದನು.

ಸ್ವಪ್ನದಿಂದ ಎಚ್ಚತ್ತವನಂತೆ ಕಂಗಳನಗಲಿಸಿ ನರಹರಿಯು ನೋಡಿದನು.

" ಊಂ ! ಪುಸ್ತಕಗಳನ್ನೊ ! 'Arabian Nights' ನೀನು ನೋಡಿ ಲ್ಲವೆ ? ಸ್ಕಾಟನ ಕಾದಂಬರಿಗಳು: Ivanhoe, The Heart of Midlothian ! ಅಲ್ಲಿಯ ಅದ್ಭುತರಮ್ಯ ಸೃಷ್ಟಿಯನ್ನು ಕಂಡು ಬೆರಗುಬಟ್ಟಿದ್ದೇನೆ. ಡಿಕೆನ್ಸನ Oliver Twist, 'The Tale of Two Cities' ಮುಂತಾದವುಗಳನ್ನು ಓದಿ ಕಣ್ಣೀರು ಸುರಿಸಿದ್ದೇನೆ. ಶೀನು ! ಇಂಥ ಯಾತನೆಗಳು ಗ್ರಂಥಗಳಲ್ಲಿದ್ದ ಪಾತ್ರಗಳಿಗೆ ಮಾತ್ರ ಬರಬೇಕು ನೋಡು ! ಜೀವರಂಗದ ವ್ಯಕ್ತಿಗಳಿಗೆ ಅವು ಸರಿಯಲ್ಲ ! "

" ಏನೋಪಾ ! ಇದೆಲ್ಲ ನಿನಗೇ ಗೊತ್ತು ! " ಶೀನೂ ಮಾತು ಹಾರಿಸಿದನು.

ತುಸು ಹೊತ್ತು ಇಬ್ಬರು ಗೆಳೆಯರು ಸುಮ್ಮನೆ ಮುಂದೆ ನಡೆದರು.

" ನಿಮ್ಮ ತಿಪ್ಪನಿಗೆ ಹೇಗಿದೆ ಈಗ ? ಹೊಟ್ಟೆಶೂಲಿಯೆಂದು ನರಳುತ್ತಿ ದ್ದನಲ್ಲ ? " ಶೀನು ನಕ್ಕು ಕೇಳಿದನು.

" ಈಗ ಗುಣವಾಗಿದೆ. ಆದರ ಕತೆಯು ಗೊತ್ತಿದೆಯಲ್ಲವೇ ನಿನಗೆ ? ಅದು ಕೇವಲ ಹೋಳಿಗೆ–ತುಪ್ಪದ ಪ್ರಭಾವವಲ್ಲ. ಊರ ಹೊರಗಿನ ಬೈಲಿ ನಲ್ಲಿ ಜ್ಯೂನಿಯರ್ ಟೀಮಿನೊಡನೆ ಫುಟಬಾಲು ಆಡಲು ಹೋಗಿದ್ದ. ಜೋಶಿ ಮಾಸ್ತರೂ ಅಂದು ಆಟದಲ್ಲಿದ್ದರು. ಸಂಜೆಯಾಗಿ ಹೋಗಿದ್ದರಿಂದ ಒಬ್ಬರ ಮೋರೆಯು ಒಬ್ಬರಿಗೆ ಕಾಣುತ್ತಿರಲಿಲ್ಲ. ಇದೇ ಹೊತ್ತಿನಲ್ಲಿ ಗೋಲು

ಹೊರಿಸಬೇಕೆಂದು ಮಾಸ್ತರ ಪಕ್ಷದ ಮುಂದಾಳುಗಳು ಚಂಡನ್ನು ಭರ ದಿಂದ ಸಾಗಿಸಿ ತೆಗೆದುಕೊಂಡು ಬಂದರು. 'ಫುಲ್ ಬ್ಯಾಕ್' ಆಗಿದ್ದ ತಿಪ್ಪನು ಅವರನ್ನು ಎದುರಿಸಲು ಹೋದ. ಗೋಲಿನ ಮೇಲೆ ಬಲವಾಗಿ ಇಳಿದು ಬರುತ್ತಿದ್ದ ಆ ಚಂಡು ತಿಪ್ಪನ ಮರ್ಮಕ್ಕೆ ತಗಲಿ ಅವನನ್ನು ನೆಲಕ್ಕು ರುಳಿಸಿ ಬಿಟ್ಟಿತು!"

'ಓಹೋ!' ಶೀನು ಉತ್ಸುಕನಾಗಿ ನುಡಿದನು.

"ಘಾತವಾಯಿತೆಂದು ಮಾಸ್ತರು ತಿಪ್ಪನನ್ನು ಉಪಚರಿಸಹತ್ತಿದರು. ಕೆಲವರು ಹುಡುಗರು ಹೋಗಿ ಹತ್ತಿರವಿದ್ದ ಒಡ್ಡರ ಗುಡಿಸಲೊಳಗಿಂದ ನೀರು ತಂದು ತಿಪ್ಪನ ತಲೆಯ ಮೇಲೆ ಸುರುವಿದರು. ಇನ್ನೂ ಅವನಿಗೆ ಎಚ್ಚರವಾಗ ಲಿಲ್ಲ. ಅವನ ಧೋತರವನ್ನು ಸಡಿಲಿಸಿ ಹೊಟ್ಟೆಯನ್ನು ತಿಕ್ಕಬೇಕೆಂದರೆ ಅಸಾಧ್ಯವಾಯಿತು. ಎಂಥ ಕಗ್ಗಂಟು ಹಾಕಿ ಧೋತರವನ್ನುಟ್ಟಿದ್ದನೋ ತಿಳಿಯದು!"

"ಮೊನ್ನೆ ಮೊನ್ನೆಯ ವರೆಗೆ ಅವನ ಧೋತರವು ಕ್ಷಣಕ್ಕೊಮ್ಮೆ ಬಿಚ್ಚುತ್ತಿತ್ತಲ್ಲ!" ಶೀನೂ ನಗೆಯಾಡಿದನು.

"ಅದಕ್ಕಂತೇ ಈಗ ಅದನ್ನು ಅಷ್ಟು ಭದ್ರವಾಗಿರಿಸಿದ್ದು. ಕಡೆಗೆ ಮಾಸ್ತರು ಅವನು ಧೋತರದ ಚುಂಗಿನೊಳಗೆ ಒಂದು ದೊಡ್ಡ ಗೋಲಿ ಗುಂಡನ್ನು ಸಿಗಿಸಿರುವದನ್ನು ಕಂಡರು. ಅದನ್ನು ತೆಗೆದೊಡನೆ ಧೋತರವು ಸಡಿಲಾಯಿತು."

"ಭಲೇರೆ! ಮಗನೆ!" ಶೀನೂ ಉದ್ಘೋಷಿಸಿದನು.

"ಇಷ್ಟಕ್ಕೆ ಕಥೆ ಮುಗಿಯಲಿಲ್ಲ! ಮುಂದೆ ಎಚ್ಚರವಾಗಿ ಹಗುರೆನಿ ಸಿದ ಮೇಲೆ ಮಾಸ್ತರು ತಿಪ್ಪನನ್ನು ಮನೆಗೆ ಕಳಿಸಿದರು. ಗೋಲಿಗುಂಡು ಅವರ ಕಿಸೆಯಲ್ಲಿಯೇ ಉಳಿಯಿತು. ಮರುದಿವಸ ಭೂಗೋಲದ ತಾಸಿದ್ದಾಗ ಜೋಶಿ ಮಾಸ್ತರು ತಿಪ್ಪನ ಕ್ಲಾಸಿಗೆ ಹೋಗಿದ್ದರು. ಪೃಥ್ವಿಯು ಗೋಲಾ ಕಾರವಿರುತ್ತದೆಂದು ಹೇಳುತ್ತ ಕಿಸೆಯೊಳಗಿಂದ ಒಂದು ಗೋಲಿಗುಂಡನ್ನು ತೆಗೆದು ಮೇಜಿನ ಮೇಲಿರಿಸುತ್ತ "ಹೀಗಿರುತ್ತದೆ ನೋಡಿರಿ!" ಎಂದು ಸೋದಾಹರಣವಾಗಿ ತಿಳಿಸಿಕೊಟ್ಟರು.

"ಹೌದು ಬಿಡು, ಅದು! ಜೋಶಿ ಮಾಸ್ತರ ಹಿಡತ!" ಶೀನು ಬಾಯಿ ಚಪ್ಪರಿಸಿದನು.

"ಮೇಜಿನ ಮೇಲಿರಿಸಿದ ಗುಂಡನ್ನು ನೋಡಿ ತಿಪ್ಪನು ಹದ್ದಿನಂತೆ ಅದರ ಮೇಲೆರಗಿದನು. ಹಗಲೆಲ್ಲ ಹುಡುಕುತ್ತಿದ್ದ ಅವನಿಗೆ ಅದು ಈಗ ದೊರೆತಂತಾಯಿತು. ನಿನ್ನದೇನೆಂದು ಮಾಸ್ತರರು ಕೇಳಿದರು. ಹೌದೆಂದು ತಿಪ್ಪನು ಹೇಳಿದ. ಇದನ್ನೇನು ಮಾಡುತ್ತಿದ್ದೆಯೆಂದು ಪ್ರಶ್ನೆಮಾಡಿದರು. ಟೊಂಕದಲ್ಲಿ ಸಿಗಿಸುತ್ತಿದ್ದೆನೆಂದು ತಿಪ್ಪನು ಉತ್ತರ ಕೊಟ್ಟ. ಎಲ್ಲ ಹುಡುಗರು ಖೊಳ್ಳನೆ ನಕ್ಕರು. ಅದನ್ನು ತೆಗೆದುಕೊಂಡು ಹೋಗಿ ತಿಪ್ಪನು ತೆಪ್ಪಗಾಗಿ ತನ್ನ ಜಾಗದಲ್ಲಿ ಕುಳಿತ."

"ಅಲ್ಲಿ ನೋಡು! ಇಂದು ತಿಪ್ಪನೇ ಹುಚ್ಚುಮಂಗನಾಗಿದ್ದಾನೆ!" ಶೀನು ಬೊಟ್ಟುಮಾಡಿ ತೋರಿಸಿದನು ಇಬ್ಬರೂ ಗೆಳೆಯರು ಗಿಡಮಂಗನ ಮಾವಿನ ಮರವನ್ನು ಸಮೀಪಿಸಿದ್ದರು. ತಿಪ್ಪನ ಕೈಗೆ ನಿಲುಕದೆ ಎಲ್ಲ ಹುಡುಗರೂ ಹೋಗಿ ತುದಿಯ ರೆಂಬೆಗಳಲ್ಲಿ ಕುಳಿತಿದ್ದರು. ಅತ್ತಿಂದಿತ್ತ ತಿಪ್ಪನು ಮರದ ಕೆಳಗೆ ಅಲೆಯುತ್ತಿದ್ದನು. ಅವನು ಮರವನ್ನೇರಲು ಪ್ರಯತ್ನಿಸಿದರೆ ಎಲ್ಲರೂ ಸರಸರನೆ ಇಳಿದು 'ಫಾಜೇಗಟ್ಟಿ'ಯನ್ನು ಮುಟ್ಟಿಬಿಡುವರು! ಹೀಗಾಗಿ ತಿಪ್ಪನು ಹುಚ್ಚುಮಂಗನಾಗುವ ಹೊತ್ತು ಬಂದಿತ್ತು. ಅವನ ಅಳುಮೋರೆಯನ್ನು ನೋಡಿ ನರಹರಿಗೆ ಕರುಣೆ ಬಂದಿತು. ಆಟವನ್ನು ಹೊಸದಾಗಿ ಆಡೋಣವೆಂದು ಎಲ್ಲರನ್ನು ಹುರಿದುಂಬಿಸಿ ತಿಪ್ಪನ ಮಾನವನ್ನು ಉಳಿಸಿದನು. ಮತ್ತೆ ಹುಡುಗರ ಕೇಕೆಯು ಸುರುವಾಗಿ ಆಟಕ್ಕೆ ಕಳೆಯು ಬಂದಿತು.

ತಿರುಗಾಡಲು ಬಂದ ಹಿರಿಯರು ಹುಡುಗರ ಉಲ್ಲಾಸವನ್ನು ಕಂಡು ಹಿರಿ ಹಿರಿ ಹಿಗ್ಗುತ್ತಿದ್ದರು. ಬಾಳುವೆಯು ಅವರನ್ನು ಹುಚ್ಚುಮಂಗನನ್ನಾಗಿ ಮಾಡುತ್ತಿತ್ತು! ತಾವಾದರೂ ಬರಿಯ ಗಿಡಮಂಗಗಳಾಗಬಹುದಾಗಿದ್ದರೆ! ಕೇಶವನೂ ಅವನ ಸಂಗಡಿಗರೂ ಒಮ್ಮೊಮ್ಮೆ ಈ ಆಟವನ್ನಾಡಬೇಕೆಂದು ಮನಸ್ಸು ಮಾಡುತ್ತಿದ್ದರು. ಆದರೆ ಅವರು ಹಾಗೆ ಮಾಡದಿರುವದು ಸಮಾಜಕ್ಕೆ ಹೆದರಿ. ಅವರು ಆಡಿದ್ದರೆ ಒಳಿತಾಗುತ್ತಿದ್ದಿಲ್ಲವೆ? ಅವರ ಮಂಗತನವು ಬರಿಯ ಮರದ ಮೇಲಿಷ್ಟು ಕಂಡು ಬಂದಿದ್ದರೆ!

ಪ್ರಕರಣ ೧೨

## ಹೈಗ್ರೀವಾಚಾರ್ಯರ ಸೌಖ್ಯ

ಮಗುವು ಹುಟ್ಟಿದಾಗಿನಿಂದ ರಮಾಬಾಯಿಯವರು ತುಸು ಸೋತಿದ್ದರು. ಕೃಷ್ಣನಿಗೆ ಈಗ ಒಂದೂವರಿ ವರ್ಷದ ಮೇಲಾಗಿ ಹೋಗಿತ್ತು. ಪ್ರಪಂಚದ ಭವಿತವ್ಯತೆಯೆಲ್ಲ ಅವರೆದುರಿಗೆ ಬಂದು ನಿಲ್ಲುತ್ತಿತ್ತು. ವಯಸ್ಸಾದ ಹೈಗ್ರೀವಾಚಾರ್ಯರು ಇನ್ನೂ ತಮ್ಮಲ್ಲಿ ಸಾಮರ್ಥ್ಯವಿದೆಯೆಂದು ತೋರಿಸಲು ಹೆಣಗಾಡುತ್ತಿದ್ದರು. ಆದರೆ ಅವರು ರಮಾಬಾಯಿಯವರನ್ನು ಹೇಗೆ ವಂಚಿಸಬಹುದು ?

ಒಂದು ದಿವಸ ಸಂಜೆಯಲ್ಲಿ ಅವರು ಅಡಿಗೆ ಮಾಡುತ್ತ ಕುಳಿತುಕೊಂಡಿದ್ದರು. ಮಗುವು ಹತ್ತಿರ ಆಡುತ್ತಿತ್ತು. ಮಧ್ವಸಿದ್ಧಾಂತ ಪ್ರದೀಪಕ ಸಭೆಗೆ ಹೋದ ಆಚಾರ್ಯರು ಲಗುಬಗೆಯಿಂದ ಮರಳಿ ಬಂದರು. ನರಹರಿಯು ಆಡಲಿಕ್ಕೆ ಹೋಗುತಿದ್ದನು. ತಿಪ್ಪನೂ ಮನೆಯಲ್ಲಿರುತ್ತಿರಲಿಲ್ಲ. ಹೆಂಡತಿಯೊರ್ವಳನ್ನೆ ಮನೆಯಲ್ಲಿ ಬಿಡುವದು ವಿಹಿತವಲ್ಲವೆಂದು ಆಚಾರ್ಯರು ಎಲ್ಲಿ ಹೋದರೂ ದೀಪ ಹಚ್ಚುವ ಹೊತ್ತಿಗೆ ಮನೆಗೆ ಬರುತ್ತಿದ್ದರು. "ಏನೇ? ಏನು ಮಾಡತಿದಿ?" ಎನ್ನುತ್ತ ಆಚಾರ್ಯರು ಅಡಿಗೆಯ ಮನೆಗೆ ಹೋದರು. ಎಂದಿನಂತೆ ರಮಾಬಾಯಿಯವರು ಮಣಿ ಹಾಕಿ ಅವರನ್ನು ಕುಳ್ಳಿರಿಸಿದರು; ಆದರೆ ಮಾತನಾಡಲಿಲ್ಲ.

"ಯಾಕ? ಸಿಟ್ಟು ಬರೋ ಹಂಗ ನಾ ಏನು ಮಾಡೇನಿ? ಪೂರ್ವ ಅಂದರ ಪೂರ್ವ,ಪಶ್ಚಿಮ ಅಂದರ ಪಶ್ಚಿಮ. ನೀ ಹಾಕಿದ ಉಗುಳು ಇವತ್ತಿನ ತನಕ ದಾಟಿಲ್ಲ. ಹೀಂಗ ಸಿಟ್ಟಾಗಬ್ಯಾಡ ಮಾರ್‍ಯಾಳ!" ಎಂದು ದೀನವಾಣಿಯಿಂದ ಆಚಾರ್ಯರು ಬೇಡಿಕೊಂಡರು.

ರಮಾಬಾಯಿಯವರ ಮೋರೆಯ ಮೇಲೆ ಒಲೆಯ ಉರಿಯ ಪ್ರಭೆಯು ನೃತ್ಯವನ್ನೆಸಗುತ್ತಿತ್ತು. ಜ್ವಾಲೆಯನ್ನು ಚಾಚುವ ಎರಡು ಕಟ್ಟಿಗೆಗಳ ನಡುವೆ ಅವರ ದೃಷ್ಟಿಯು ನೆಟ್ಟಿತ್ತು. ಮುಖಮುದ್ರೆಯಲ್ಲಿ ಅಸಮಾಧಾನವೂ

ದುಃಖದ ಆವೇಗವೂ ಸ್ಪಷ್ಟವಾಗಿ ಒಡೆದು ಕಾಣುತ್ತಿದ್ದವು. ಮೋರೆಯನ್ನು ಹೊರಳಿಸಿ ಆಚಾರ್ಯರನ್ನು ಉದಾಸೀನರಾಗಿ ನೋಡಿ ಅವರು ಮತ್ತೆ ವಿಚಾರಾಕ್ರಾಂತರಾಗಿ ಕುಳಿತರು.

ಪ್ರಸಂಗವು ಕಠಿಣವಿದೆಯೆಂದು ಆಚಾರ್ಯರು ಮನದಲ್ಲಿ ಮಿಡುಕಿದರು. ಪತ್ನಿಯ ಮನಃಸ್ಥಿತಿಯು ಅವರಿಗೆ ಚೆನ್ನಾಗಿ ವಿದಿತವಾಗಿತ್ತು. ಚಂದ್ರನಂತಹ ಅವಳ ಮನಸ್ಸನ್ನು ಒಮ್ಮೆ ರಾಹುವು ಮುಸುಕಿಕೊಂಡಿತೆಂದರೆ ಅದನ್ನು ಮತ್ತೆ ಸುಪ್ರಸನ್ನವಾಗಿ ಮಾಡಲು ದೀರ್ಘವಾದ ಅವಕಾಶವು ಬೇಕಾಗುತ್ತಿತ್ತು. ಆಚಾರ್ಯರ ಬುದ್ಧಿಗೆ ಏನೂ ತೋಚದಾಯಿತು. ಅವರ ಹೃದಯದಲ್ಲಿ ಸಂಕಟವಾಯಿತು.

"ರಮಾ !" ಎಂದು ಅವರು ಮೆಲುದನಿಯಲ್ಲಿ ನುಡಿದರು. ದುಃಖವು ಒತ್ತರಿಸಿ ಒಂದೆರಡು ಕಂಬನಿಗಳುದುರಿದವು.

ರಮಾಬಾಯಿಯವರು ಕೈತೊಳೆದುಕೊಂಡು ಸೀರೆಯಿಂದ ಚೆನ್ನಾಗಿ ಒರಿಸಿಕೊಂಡು ಸಾವಕಾಶವಾಗಿ ತಮ್ಮ ಜಾಗದಲ್ಲಿ ಹೋಗಿ ಕುಳಿತರು. ಆಚಾರ್ಯರ ಗದ್ದವನ್ನು ಎಡಗೈಯಿಂದ ಮೃದುವಾಗಿ ಹಿಡಿದು ಒಳಸಿಕ್ಕ ಅವರ ಕಣ್ಣುಗಳಲ್ಲಿ ಮೂಡಿದ ತಮ್ಮ ಆಕೃತಿಯನ್ನು ದಿಟ್ಟಿಸಿ ದಿಟ್ಟಿಸಿ ನೋಡಿದರು. ಆಮೇಲೆ ಆಚಾರ್ಯರ ತೊಡೆಯ ಮೇಲೆ ಒರಗಿಕೊಂಡು ಮುಳು ಮುಳು ಅಳಲು ಪ್ರಾರಂಭಿಸಿದರು.

ರಮಾಬಾಯಿಯವರ ಹಸ್ತಸ್ಪರ್ಶವಾದ ಕೂಡಲೆ ಆಚಾರ್ಯರ ಮೈಯ್ಯಲ್ಲೆಲ್ಲ ವಿದ್ಯುತ್ಸಂಚಾರವಾಗಿತ್ತು. ತಮ್ಮ ನಿಧಿಯಾದ ರಮೆಯು ಈ ಪರಿಯಾಗಿ ಆದರಿಸುವದನ್ನು ನೋಡಿ ವೈಕುಂಠದ ಸುಖವೂ ಅವರ ಸುಖದ ಮುಂದೆ ಕುಂಠಿತವಾಗಿತ್ತು. ಆಚಾರ್ಯರು ಗದ್ದವನ್ನು ಹಿಡಿದು ಕುರುಳುಗಳನ್ನು ತೀಡಿ ಕುಂಕುಮದ ಬೊಟ್ಟಿನ ಮೇಲೆ ಬೊಟ್ಟಿಟ್ಟು ಪತ್ನಿಯ ಕಣ್ಣೊರಿಸಿದರು.

"ಛೀ ! ಹುಚ್ಚಿ ! ಅಳಲಿಕ್ಕೆ ಏನಾಗೇದ !" ಎಂದು ತಂದೆಯು ಮಗಳನ್ನು ರಮಿಸುವ ಹಾಗೆ ಅವರು ರಮಾಬಾಯಿಯವರನ್ನು ರಮಿಸಿದರು.

ರಮಾಬಾಯಿಯವರು ಹಠಾತ್ತಾಗಿ ಎದ್ದು ಕುಳಿತರು. ಅವರ ಧ್ವನಿಯಲ್ಲಿ ಇನ್ನೂ ಅಳುವಿನ ಶ್ಲೇಷವು ಉಳಿದಿತ್ತು. ಕಣ್ಣಿನಲ್ಲಿ ನಿಂತ ನೀರನ್ನು

ಸೆರಗಿನಿಂದ ಒರಿಸಿಕೊಳ್ಳುತ್ತ ಗದ್ಗದಿತ ಕಂಠದಿಂದ ಸರಾಗವಾಗಿ ನುಡಿದರು. "ಏನು ಆಗಿದೆ ಅಂತ ಅನತಾ ಇದ್ದೀರಾ ನೀವು ? ನಿಮಗೆ ಗೊತ್ತಿಲ್ವೆ ? ಹದಿಮೂರು ವರುಷದಾಕಿ ಇದ್ದಾಗ ನಿಮ್ಮ ಕೈಹಿಡಿದೆ. ಮುದುಕನ್ನ ಮದುವೆ ಆದ ಹುಡುಗಿ ಅಂತ ಜನರು ಹೀಯಾಳಿಸಿದರು. ನನಗೇನು ಕೆಡಕು ಅನಸಲಿಲ್ಲ. ಮುದುಕೇನು ತದಕೇನು, ಲಗ್ನ ಒಂದು ಆದರ ಸಾಕು, ಮುಂದೆಲ್ಲಾ ಒಳ್ಳೇದು ಆದೀತು ಅಂತ ಸಮಾಧಾನ ಮಾಡಿಕೊಂಡೆ. ನೀವೂ ನನ್ನ ನೆಟ್ಟಗ ನೋಡಿಕೊಂಡಿರಿ; ವಸ್ತ್ರ-ಆಭರಣಾನ ಕಂಡೆ. ಮೊನ್ನೆ ಕಿಟ್ಟು ಬ್ಯಾರೆ ಹುಟ್ಟಿತು. ನನ್ನ ಸಂಸಾರಕ್ಕ ದೇವರು ಏನು ಕಡಿಮೆ ಮಾಡಿಲ್ಲ. ಒಳ್ಳೊಳ್ಳೆ ಹದಿನೆಂಟು ವರುಷದ ಹುಡುಗನ್ನ ಲಗ್ನಾದ ವಕೀಲರ ಶಕುಂತಲಾ ಮೈನರೆಯೋದಕ ಮುಂದೆ ರಂಡೆಮುಂಡೆ ಆಗಲಿಲ್ಲ ? ಸುಬ್ಬಣಾಚಾರ ವೆಂಕಮ್ಮನವರು ನೆರವಾಗತಾ ಬಂದರು. ನನಗ ಯಾವ ತ್ರಾಸಾನು ಇಲ್ಲ. ಆದರ—"

ಮೈಯೆಲ್ಲ ಮುಳ್ಳೆದ್ದು ಈ ಭಾಷಣವನ್ನು ಕೇಳುತ್ತಿದ್ದ ಆಚಾರ್ಯರು 'ಆದರ' ಎಂದು ಪತ್ನಿಯು ತಡವರಿಸಿದ ಕೂಡಲೆ ಎಚ್ಚತ್ತವರಂತೆ ಗಲಭೆ ಮಾಡಿದರು. "ಆದರ ಅಂತ ಯಾಕ ನಿಂತಿ? ಮುಂದೇನು ಹೇಳತಿ ಹೇಳು?"

ರಮಾಬಾಯಿಯವರು ತುಸು ನಾಚಿ ಉಸುರತೊಡಗಿದರು. "ಆದರ—ಮುಂದ—ದೇವರು ಇದೇ ಸ್ಥಿತಿ ಉಳಸ್ಯಾನೇನೂ ಅಂತ ಸಂಶಯ ಬರತದ. ನಿಮಗ ಈಗ ಅರುವತ್ತು ವರುಷ ಆದವು. ದೇಶದಾಗಿನ ಸ್ಥಿತಿ ಬ್ಯಾರೆ ಸೂಕ್ಷ್ಮ, ನೀವು.... ವೈಕುಂಠ... ...."

"ಅನಬ್ಯಾಡಾ! ಬಾಯಿ ಮುಚ್ಚು!" ಎಂದು ಆಚಾರ್ಯರು ಚೀರಿ ಪತ್ನಿಯ ಬಾಯನ್ನು ಗಟ್ಟಿಯಾಗಿ ಮುಚ್ಚಿದರು. ಜುಮ್ಮೆಂದು ಅವರ ಮೈಯೆಲ್ಲ ಬೆವತಿತು. ತಮಗೆ ಇಷ್ಟು ವರ್ಷಗಳಾಗಿವೆಯೆಂದು ಅವರ ಕಲ್ಪನೆಯಿದ್ದಿಲ್ಲ. ಸಾವು ತಮ್ಮನ್ನು ಸಮೀಪಿಸಹತ್ತಿರುವದನ್ನು ಅವರು ಕನಸಿನಲ್ಲಿಯೂ ಕಂಡಿದ್ದಿಲ್ಲ. ತಾವು ಸಾಯಲು ಹುಟ್ಟಿಲ್ಲವೆಂದು ಅವರು ಮೇಲಿಂದ ಮೇಲೆ ಸಮಾಧಾನ ಹೊಂದುತ್ತಿದ್ದರು. ಈಗ ತಮ್ಮ ಪತ್ನಿಯ ಮಾತಿನಲ್ಲಿ ಸಾವಿನ ಭೀಕರಸ್ವರೂಪವನ್ನು ಅವರು ಮೊದಲು ಕಂಡರು.

ಅಭಿಮಾನವು ತುಂಬಿ ತುಳುಕುವ ರಮಾಬಾಯಿಯವರ ವಾಣಿಯು

ತಟಸ್ಥವಾಗಲಿಲ್ಲ. ಆಚಾರ್ಯರ ಕೈಯನ್ನು ದೂರ ಸರಿಸಿ ಕೆರಳಿದ ಹುಲಿಯಂತೆ ಎದ್ದು ನಿಂತು ಅವರು ಆರ್ಭಟಿಸಿದರು. "ಅಂತೇನಿ! ನೂರು ಸಾರೆ ಅಂತೇನಿ! ನೀವು ಹೋದ ಮ್ಯಾಲ ನನ್ನ ಗತಿ ಏನು? ನೀವು ಹೋದ ಮ್ಯಾಲ ನಾ ಯಾರ್ನ ನಂಬಿರಲಿ! ದೇವಾ! ನನ್ನ ಲಗ್ನಾ ಯಾಕ ಮಾಡಿದಿ!" ಎಂದು ಅವರು ತಲೆ ಅಪ್ಪಳಿಸಿದರು.

ಆಚಾರ್ಯರ ಎದೆಯು ಕರಗಿ ನೀರಾಯಿತು. ಕಾಲು ಥರಥರ ನಡುಗಹತ್ತಿದವು. ಉಸ್ಸೆಂದು ಗೋಡೆಗೆ ಅವರು ಆನಿತುಕೊಂಡು ಕುಳಿತರು. ಆದರೂ ಗಟ್ಟಿಮನಸ್ಸು ಮಾಡಿ ನುಡಿದರು. "ಸುಮ್ಮನಾಗ! ಕೈ ಮುಗಿತೇನಿ ಸುಮ್ಮನಾಗು! ಹೆಂಡತಿ ಆಗಿ ಹರಿಸೋದು ಬಿಟ್ಟು ಗಂಡನ್ಗೇ ಶಾಪಾ ಕೊಡತೀಯಲ್ಲಾ! ಮನಸ್ಯಾನ ಆಯುಷ್ಯ ನೂರು ವರ್ಷ. ಇನ್ನೂ ನಾಲ್ವತ್ತು ವರುಷ ಇರತೇನಿ, ಸುಮ್ಮನಾಗು!"

"ನಾ ನೋಡಲಾರೆ! ಇನ್ನು ಮೂರು ವರುಷ ಬದುಕಿದ್ದರ ನನ್ನ ಭಾಗ್ಯ ಅಂತ ತಿಳಿದೇನಿ. ಅದೇನಾರ ಇರ್ಲಿ. ನಾ ಹೇಳೋದು ಕೇಳತೀರೇನು?" ಎಂದು ರಮಾಬಾಯಿಯವರು ತಿರಸ್ಕಾರದಿಂದ ಮಾತನಾಡಿದರು.

"ಏನು ಹೇಳತಿ ಹೇಳು" ಮುಳುಗುವವನು ಬೆಂಡನ್ನು ಹಿಡಿಯುವಂತೆ ಆಚಾರ್ಯರ ಮನಸ್ಸಿನಲ್ಲಿ ಕೊನೆಯ ಆಸೆಯು ಅಂಕುರಿಸಿತು.

ರಮಾಬಾಯಿಯವರು ಸಮಾಧಾನದಿಂದ ಹೇಳಿದರು. "ನೀವು ನಾಳೆ ಸಾವಿನ ಪಾಲಾದರ ಆಸ್ತಿ ಎಲ್ಲಾ ಮಣ್ಣುಪಾಲು. ಮಲಮಗನ ಕೈಯ್ಯಾಗ ಉರಿಯೋ ಹೊತ್ತು ಬಂದೀತು ನನಗ! ನೀವು ಎಲ್ಲಾ ಪೂರ್ವ ತಯಾರಿ ಮಾಡಿಟ್ಟು ಹೋಗರಿ. ಕಾಯದೆ ನೋಡಿ ನನ್ನ ಪಾಲಿಂದು ನಮ್ಮ ಕಿಟ್ಟುನ ಪಾಲಿಂದು ನಮಗ ಬರೋ ಹಂಗ ಮಾಡ್ರಿ. ಬೇಕಾರ ನಿಮ್ಮ ಸುಬ್ಬಣಾಚಾರು ಎಲ್ಲಾ ನೋಡಿಕೊಂಡು ಹೋಗಲಿ."

'ಹೂಂ' ಎಂದು ಆಚಾರ್ಯರು ಸಮ್ಮತಿಯಿತ್ತರು. ಆದರೆ ಹೆಚ್ಚಿಗೆ ಮಾತನಾಡಲಿಲ್ಲ. ಎದ್ದು ಹೋಗಿ ತಮ್ಮ ಕೋಣೆಯಲ್ಲಿ ಕುಳಿತು ಬಹಳ ಹೊತ್ತಿನ ವರೆಗೆ ಆಲೋಚಿಸಿದರು. ಇತ್ತ ರಮಾಬಾಯಿಯವರು ಅಳುತ್ತ

ಬಂದ ಮಗುವನ್ನು ಕರೆದು ಮೊಲೆಯುಣ್ಣಿಸುತ್ತ ಕುಳಿತರು. ಎಷ್ಟು ಹೊತ್ತಾದರೂ ಏಳಲಿಲ್ಲ. ಕಡೆಗೊಮ್ಮೆ ರಾತ್ರಿಯಾದುದರ ಅರಿವು ಬರಲು ಎದ್ದು ದೇವರೆದುರಿಗೆ ದೀಪ ಹಚ್ಚಿದರು.

———

## ಪ್ರಕರಣ ೧೩

## ದೇವರು ಯಾಕ, ಹೊಲ್ಯಾ?

ಗೋವಿಂದರಾಯರ ಮನೆ. ಇನ್ನೂ ಚುಮುಚುಮು ಸಸುಕಾಗಿತ್ತು. ಬೀದಿಯಲ್ಲಿ ಜನರು ಸುಳಿದಾಡುವ ವೇಳೆಯಾಗಿರಲಿಲ್ಲ. ಬಾಡಿಗೆಯ ಚಕ್ಕಡಿಗಳು ಮಾತ್ರ ನೀರವತೆಯನ್ನು ಶಬ್ದಮಯವಾಗಿ ಮಾಡುತ್ತಿದ್ದವು. ಆಗ ಗೋವಿಂದರಾಯರ ಮನೆಯ ಮುಂಭಾಗವನ್ನು ಸಾರಿಸಿ ಒರ್ವ ಸುದತಿಯು ಹೊಸ್ತಿಲದ ಮೇಲೆ ರಂಗವಲ್ಲಿಯನ್ನು ಇಕ್ಕುತ್ತಿದ್ದಳು. ಒಂದು ಸುಳಿಯನ್ನು ತೆಗೆದು ಆಕೆ ಕ್ಷಣಹೊತ್ತು ಸುಮ್ಮನಿರುವಳು. ಇನ್ನೊಂದು ಸುಳಿಯನ್ನು ಹಾಕಿ ಮತ್ತೆ ದೀರ್ಘಾಲೋಚನೆಯಲ್ಲಿ ತೊಡಗುವಳು. ಹೊಸ್ತಿಲದ ಮೇಲ್ಪದಿಯನ್ನು ನಿಟ್ಟಿಸುತ್ತಿರುವ ಅವಳ ಕಣ್ಣುಗಳು ಮನಸ್ಸಿನ ಅಂತರಾಳವನ್ನು ಶೋಧಿಸುವಂತೆ ತೋರುತ್ತಿದ್ದವು. ಕುಸುರು ಕುಸುರನ್ನು ಎಳೆಯುವ ಅವಳ ಬೆರಳುಗಳು ನೀರಸವಾದ ಜೀವನವನ್ನು ರಸಮಯವಾಗಿ ಮಾಡುವ ಶಿಲ್ಪಿಯ ಬೆರಳುಗಳಂತೆ ಕಾಣುತ್ತಿದ್ದವು. ನಾಚಿ ಮುದುಡಿಕೊಂಡು ನಿಂತ ಲಲನೆಯ ಈ ಮೋಡಿಯಲ್ಲಿ ಗಾಂಭೀರ್ಯವಾದರೂ ವಾಸಿಸಿತ್ತು.

ತುಸು ಹೊತ್ತಿನಲ್ಲಿ ರಂಗವಲ್ಲಿಯನ್ನು ಇಕ್ಕುವದಾಯಿತು. ತರುಣಿಯು ಎದ್ದು ನಿಂತಳು. ಪೂರ್ವ ದಿಗ್ವಧುವಿಗೆ ಸಂತತವಾಗಿ ಸುಪ್ಪಿಗೆಯ್ಯುವ ಬಾಗಿಲಲ್ಲಿ, ಮೇಲಕ್ಕೆ ಉದಯಿಸುವ ದಿನೇಶನ ಪ್ರಭೆಯು ಹೆಚ್ಚುತಲಿತ್ತು. ತರುಣಿಯು ಬಾಲ ಭಾಸ್ಕರನ ಬಿಂಬವನ್ನು ಎವೆಯಿಕ್ಕದೆ ನೋಡಿದಳು. ಅವಳ ಎರಡೂ ಕಣ್ಣುಗಳಲ್ಲಿ ಮುಂಜಾವಿನ ಅರುಣಪ್ರಭೆಯು ತುಂಬಿ

ಸೂಸಿತು.ಹೀಗೆ ನೋಟವನ್ನು ಅಲುಗಿಸದೆ ನಿಂತ ಪದ್ಮಾವತಿಗಿಂತ ಮೋಹಕವಾದ ರೂಪವನ್ನು ಕಾಣುವದು ವಿರಳ. ಪದ್ಮಾವತಿಯು ಈಗ ಪ್ರಬುದ್ಧಳಾಗಿದ್ದಳು. ಅವಳ ದೈಹಿಕವಾದ ಸೌಕುಮಾರ್ಯದೊಡನೆ ಯೌವ್ವನದ ಕಾಂತಿಯು ಬೆರೆತು ನಿಂತಿತ್ತು. ಎಳೆತನದ ಅವಳ ಅಂಗಾಂಗಗಳು ಈಗ ಅಂದವಾದ ಉನ್ನತಿಯನ್ನು ಹೊಂದಿದ್ದವು. ಬಿಗಿಯಾಗಿರಿಸಿದ ಅವಳ ಸೆರಗಿನ ತುಂಬ, ಲೋಕವನ್ನೇ ಸೂರೆಗೊಳ್ಳುವ ಲಾವಣ್ಯವು ಅಡಕವಾಗಿತ್ತು. ಅಂತೂ ಬಾಲೆಯಾದ ಪದ್ಮಾವತಿಯು ಈಗ ಒರ್ವ ಪ್ರೌಢ ಲಲನೆಯಾಗಿದ್ದಳು. ಆದರೆ ಆಕೆ ವಿಶೇಷತಃ ಆಂತರಿಕ ಜೀವಿ; ವಿಶಾಲವಾದ ಹೃದಯವುಳ್ಳ ಗರತಿ. ಅವಳ ಕಂಗಳಲ್ಲಿ ನೆಲೆನೆಲೆಯಾಗಿ ನಿಂತ ಅಂತಃಕರಣವು ಈಗ ಇಮ್ಮಡಿಯಾಗಿತ್ತು ಆದರೆ ಈಗ ಅದರೊಡನೆ ಒಂದು ಪರಮಾವಧಿಯಾದ ದೀನತೆಯು ಮಾತ್ರ ತಳವೂರಿತ್ತು. ಮನಸ್ಸಿನ ಮೇಲೆ ಗಿಡುಗನಂತೆ ಯಾವುದೋ ಒಂದು ಕ್ರೂರ ಭಾವನೆಯು ಹಾರಾಡಿ ಕೆಣಕುತ್ತಿತ್ತು. ಒಂದು ಅಸಾಮಾನ್ಯವಾದ ಅಪಾರವಾದ ದುಃಖವು ಅವಳ ಕೋಮಲಾಂತಃಕರಣದಲ್ಲಿ ಮನೆಮಾಡಿತ್ತು. ಅವಳಿಗೆ ಈಗ ಜೀವನದಲ್ಲಿ ಸುಖವಿಲ್ಲ. ಪ್ರಕೃತಿ, ನರಹರಿ, ಕುಸುಮ,– ಈ ತ್ರಿಕೂಟದ ಮೇಲೆ ಅವಳ ಬಾಳುವೆಯ ಅಸ್ತಿವಾರವು ಇಲ್ಲಿಯ ವರೆಗೆ ನಿಂತಿರುವದು. ಅದಕ್ಕಾಗಿಯೆ ಅವಳು ಸೂರ್ಯನನ್ನು ಹಾಗೆ ಹಸಿದವರಂತೆ ನಿಟ್ಟಿಸಿ ನೋಡುತ್ತಿದ್ದಳು. ಅಂತರಂಗದಲ್ಲಿ ಹೀಗೆ ಬೇಗೆಯಿದ್ದರೂ ದೇಹವು ತನ್ನ ಅವಸ್ಥೆಗೆ ತಕ್ಕಂತೆ ಚೆಲುವಿನ ಸುಗ್ಗಿಯನ್ನು ಸುರಿಸುತ್ತಿತ್ತು. ಕೆಲವು ತಿಂಗಳಲ್ಲಿಯೇ ಪದ್ಮಾವತಿಯು ಹೀಗೆ ಬೆಳೆದು, ಹೆಚ್ಚಿನ ಚಿಂತೆಯನ್ನೂ ಚೆಲ್ವಿಕೆಯನ್ನೂ ತಳೆದು ನಿಂತುದು ಆಶ್ಚರ್ಯವೇ ಸರಿ.

"ಏ! ಬೋಕಾಣಗಿತ್ತಿ! ಸುರುವು ಆತೇನು! ಏಳೋದೊಂದ ತಡ; ಎದ್ದ ಕೂಡ್ಲೆ ಓಣ್ಯಾಗ ಹಾದು ಹೋಗೋವರನ್ನ ಮಿಕಿ ಮಿಕಿ ನೋಡತಿದಿ. ನಿನಗೇನು ಬಂತು ಬರಗಾಲ! ನಡಿ ಒಳಗ. ಮುಸುರಿ ಕೂತಾವ ನಿನ್ನ ಹೆಸರಲೆ!" ಜಾನಕಿಬಾಯಿಯವರ ಪ್ರಾಸಾದಿಕವಾಣಿಯು ಘಂಟಾಘೋಷವಾಗಿ ಕೇಳಿಸಿತು. ಪದ್ಮಾವತಿಯು ಬೆಚ್ಚಿಬಿದ್ದಳು. ಸಾವರಿಸಿಕೊಂಡು ರಂಗವಲ್ಲಿಯ ಪಾತ್ರೆಯನ್ನು ಹಿಡಿದುಕೊಂಡು ಒಳಗೆ ಬಂದಳು.

ಪದ್ಮಾವತಿ! ಪದ್ಮಾವತಿಯಂತಹ ಹೆಂಗಳೆಯರಿದ್ದ ಮನೆತನದ ಕುಲ-

ಕೋಟಿಯು ಉದ್ಧಾರವಾಗಬೇಕು. ಅಲ್ಲಿ ಗಂಗೆಯ ಅವತರಣವಾಗಬೇಕು, ದೇವತೆಗಳ ಅವತಾರವಾಗಬೇಕು. ಆದರೆ ಪದ್ಮಾವತಿಯು ಅಲ್ಲಿಗೆ ಬಂದಂದಿನಿಂದ ಜಾನಕಿಬಾಯಿಯವರ ಅವತಾರಕ್ಕೆ ಪಾತ್ರ ಪ್ರಾಶಸ್ತ್ಯವು ದೊರೆತಿತ್ತು. ಅವರು ಇನ್ನೊಂದು ಗುಡುಗು ಹಾಕಿದರು. "ಶನಿ ಆಗಿ ಬಂದೀಯೇನ ನಮ್ಮ ಮನಿಗೆ? ನೀ ಹೊಚ್ಚಲದಾಗ ಕಾಲಿಟ್ಟೀದಿ, ಹಿತ್ತಲದಾಗಿನ ತುಳಸೀ ಗಿಡ ಕಮರಿ ಹೋತು. ನಾ ನೋಡಿದರ ನಿನ್ನ ಎಡವಿ ಬಿದ್ದು ಕಾಲೆಲ್ಲಾ ಕೆತ್ತಿ ಹೋತು. ಹುಣ್ಣಿಮಿಗೊಮ್ಮೆ ಅಮಾಸಿಗೊಮ್ಮೆ ಮನ್ಯಾಗಿರೋ ಮಾರಾಯರು ಈಗ ಅಶನಕ್ಕೊಂದು ತಪ್ಪದ ಬರತಾರ. ಏನು ಮಂತ್ರ ಹಾಕೀದ್ದೇ ಮಳ್ಳಿ?" ಎಂದು ಪದ್ಮಾವತಿಯ ಮೋರೆಗೆ ಕೈ ತಿವಿದರು.

ಪದ್ಮಾವತಿಯ ದುಃಖವು ಒತ್ತರಿಸಿತು. ಆದರೂ ಅವಳು ಅದನ್ನು ತಡೆದುಕೊಂಡಳು. ಅನ್ಯ ಉಪಾಯವೆಲ್ಲಿ? ಸಮಾಧಾನದಿಂದ ಆಕೆ ಮಾರ್ನುಡಿಯಿತ್ತಳು. "ಗಿಡ ನೀರಿಲ್ಲದ ಬಾಡಿತು. ನಾ ನೀರು ಹಾಕಬೇಕಂದೆ. ನೀವು ನನ್ನ ಮುಡಿ ಒರೂದುಲ್ಲ ಅಂತ ಹೇಳಿದಿರಿ." ಎಂದು ಅವಳು ವಿನಯದಿಂದ ಹೇಳಿದಳು.

"ಅಯ್ಯ! ಊರ ಭೋ....ಡಿ! ತಿರುಗಿ ಉತ್ತರಾ ಕೊಡತೀಯಾ! ತಿದ್ದಿ ತಿದ್ದಿ ಮಾತಾಡಿದರ ತಿದ್ಯಾಗ ಹಾಕಿ ಸುಟ್ಟೇನು ನಿನ್ನ! ಎಚ್ಚರಿಕೆಯಿಂದಿರು!" ಎಂದು ಜಾನಕಿಬಾಯಿಯವರು ಪದ್ಮಾವತಿಯ ಮೇಲೆ ಕೈಯೆತ್ತಿದರು.

ಇದನ್ನೆಲ್ಲ ಹಾಸಿಗೆಯ ಮೇಲೆ ಎದ್ದು ಕುಳಿತು ನೋಡುವ ಕುಸುಮೆಗೆ ತಾಳುವದಾಗಲಿಲ್ಲ. "ಅವ್ವಾ! ನೀ ಹೀಂಗ್ಯಾಕ ದಿನಾ ಬೆಳಗಾರ ಬಯುತೀದಿ? ಅಂಥಾದೇನು ಮಾಡ್ಯಾಳ ಪದ್ದಕ್ಕ! ಬಯ್ದರ ನನಗ ಬಯ್ಯಿ. ಹೊಡದರ ನನಗ ಹೊಡಿ!" ಎಂದು ಕಣ್ಣೀರು ಸುರಿಸುತ್ತ ಕುಸುಮೆಯು ಬಂದು ನಿಂತಳು. ಜಾನಕಿಬಾಯಿಯವರು ಭ್ರಮಿಷ್ಟರಂತೆ ವರ್ತಿಸಿದರು. ಅವರ ಪಿತ್ತವು ತಲೆಗೇರಿತು. ಅತ್ಯಾವೇಶದಿಂದ ಆಕ್ರೋಶಿಸತೊಡಗಿದರು. "ನನ್ನ ಅಂಗಾಲು ನನಗ ಬುದ್ಧಿ ಹೇಳೋದ! ಈಗಾಗಳೆ ಇಷ್ಟು ಕಲತೇನು ಕುಸುಮಿ ಸಾಲ್ಯಾಗ! ಈ ಲದ್ದಿಗೆ ಬ್ಯಾರೆ ಕದ್ದು ಪುಸ್ತಕ ಕೊಡತೀದಿ ಓದಲಿಕ್ಕೆ! ಕೊಡುವಾ ನಮ್ಮವ್ವಾ! ಇಬ್ಬರು ಮಡ್ಡಮ್ಮಾಗಿ ಊರ ತುಂಬ

ಮೆರೀರಿ. ಸಂದೇನು ಅಳಬೇಕಾಗೇದ!'' ಎಂದು ಅವರು ಉದ್ಗಾರ ತೆಗೆದು ಕುಸುಮಾವತಿಯ ಕೆನ್ನೆಯನ್ನು ಕೆಂಪಾಗಿಸಿದರು.

ಹೀಗೆಯೇ ತಮ್ಮ ಹಾಡನ್ನು ಹಾಡಿ ಎಲ್ಲರನ್ನೂ ಶಪಿಸುತ್ತ ಕತ್ತಲು ಮನೆಮಾಡಿರುವ ದೇವರ ಕೋಣೆಯಲ್ಲಿ ಹೋಗಿ ದೊಡ್ಡ ದನಿ ತೆಗೆದು ಅಳುತ್ತ ಕುಳಿತರು.

ಜಾನಕಿಬಾಯಿಯವರ ರೋದನ; ಕುಸುಮೆಯ ಶೋಕ; ಪದ್ಮಾವತಿಯ ಮೌನವಾದ ಅಶ್ರುಜಲ,– ಇವುಗಳಿಂದ ಕೇಶವನಿಗೆ ನಿದ್ರಾಭಂಗವಾಯಿತು. ಅವನು ಪ್ರತಿದಿನದಂತೆ ೯ ಗಂಟೆಯ ವರೆಗೆ ಹೀಗೆಯೇ ಮಲಗುವನು; ಆದರೆ ಈಗ ಕೆರಳಿದ ಹುಲಿಯಂತೆ ಆರ್ಭಟಿಸಿಕೊಂಡು ಎದ್ದನು. ಅಸ್ತವ್ಯಸ್ತವಾದ ಕೂದಲು ಕೆಂಪೇರಿದ ಕಣ್ಣು ಮಾಸಿದ ದೋತರ, ಕರಾಳವಾದ ಮುಖಮುದ್ರೆ; ಇವನೇನು ಕೇಶವನೋ ಸರಾಯಿಯ ಅಂಗಡಿಯ ಸದಾಶಿವನೋ ತಿಳಿಯದಾಯಿತು. ಒಂದು ಕ್ರೂರವಾದ ದೃಷ್ಟಿಯು ಕೇಶವನ ಕಂಗಳಲ್ಲಿ ಮನೆ ಮಾಡಿಕೊಂಡಿತ್ತು. ಅದೇನು ಫಲಿಸದ ಆಕಾಂಕ್ಷೆಯ ಫಲವೋ, ಏನು ಸಂಸಾರದ ಝಳ ತಾಕಿ ಎಚ್ಚರಗೊಂಡ ಸುಷುಪ್ತ ಸ್ವಭಾವವೋ ಯಾರಿಗೆ ಗೊತ್ತು? ಬೇಟೆ ಸಿಗದ ಸಿಂಹದಂತೆ ಅವನ ಸ್ಥಿತಿಯಾಗಿತ್ತು. ಅವನ ಕೈವಶವಾಗಿದ್ದಳು ಸೌಂದರ್ಯಲಕ್ಷ್ಮಿ. ಆದರೆ ಭಣಭಣ ಹಾಳು ಸುರಿಯುತ್ತಿತ್ತು ಅವನ ಎದೆ ಮನವು. ಇಂದಿಲ್ಲ ನಾಳೆ ಇವಳನ್ನು ಗೆಲಿಯಬಹುದೆಂದು ಹಗಲೆಲ್ಲ ಡಂಗುರಸಾರುತ್ತಿತ್ತು ಅವನ ಹೃದಯ. ಆದರೆ ರಾತ್ರಿಯಾಗಿ ತನ್ನ ಭುವನೇಶ್ವರಿಯು ತನ್ನನ್ನು ಸಮೀಪಿಸಿದೊಡನೆ ಅವಳ ತೇಜವನ್ನು ತಾಳಲಾರದೆ ಮುಚ್ಚುತಿದ್ದವು ಅವನ ಕಣ್ಣು. ದಿನದಿನಕ್ಕೆ ಇದೇ ಹೊಯ್ದಾಟ, ತಾಕಲಾಟ, ಈ ಒಳತೋಟೆಯಲ್ಲಿ ಸಿಕ್ಕು ಕೇಶವನು ಬಲಗುಂದಿ ಹೋಗಿದ್ದನು. ಮೇಲೆ ತಾಯಿಯ ಕೆಣಕಾಟ. ನಿತ್ಯವೂ ತದೇಕಧ್ಯಾನದಲ್ಲಿದ್ದರೂ ತನಗೆ ವಶವಾಗದಿರುವ ಆ ಚೆಲುವಿನ ಪುತ್ಥಳಿಯ ಮೇಲೆ ಒಮ್ಮೊಮ್ಮೆ ಕೋಪವು ಬರುತ್ತಿತ್ತು ಅತಿ ಪ್ರೀತಿಯು ದ್ವೇಷವಾಗಿ ಬೆಳೆಯುವಂತೆ. ಆಗ ತಾಯಿಯೂ ಪದ್ಮಾವತಿಯನ್ನು ಆಡಿಕೊಂಡರೆ ತೀರಿತು. ತನ್ನ ಸುಖವನ್ನು ಎಲ್ಲಿಯೋ ಬಚ್ಚಿಟ್ಟುಕೊಂಡ ಈ ಮಂತ್ರ-ಮಾಟಗಳ

ಮಾರುತಿಯೇ ತನ್ನ ದುಃಖಕ್ಕೆ ಕಾರಣವಾಗಿದೆಯೆಂದು ಕೇಶವನಿಗನಿಸಿ ಪ್ರಳಯಸೃಷ್ಟಿಯೇ ಅವನೆದುರು ತೆರೆದಂತಾಗುತ್ತಿತ್ತು.

ಈಗ ಕೇಶವನು ಅಂಥ ಸ್ಥಿತಿಯಲ್ಲಿದ್ದನು. ಸೌಖ್ಯವಿಲ್ಲ, ಸ್ವಾಸ್ಥ್ಯ ವಿಲ್ಲ, ನಿದ್ರೆಯಿಲ್ಲ ಮುಂಜಾನೆ ಜಂಪು ಹತ್ತಿದ್ದರೆ, ನರಕಸಮಾನವಾದ ಈ ಯಾತನೆ ಬೇರೆ. ದ್ವೇಷದಿಂದ ಕೇಶವನು ಕೋಣೆಯ ಹೊರಕ್ಕೆ ಬಂದನು. "ಮನೆಯಲ್ಲಿ ದೆವ್ವ ಬಂದಿವೆ ದೆವ್ವ!" ಎಂದು ಹತ್ತಿರ ಮೂಲೆಯಲ್ಲಿ ಬಿದ್ದ ಬೆಳ್ಳಿಯ ಹಿಡಿಕೆಯ ಬೆತ್ತವನ್ನು ಹಿಡಿದು ಬೀಸಿದನು. ತಿಳಿದೋ ತಿಳಿಯ ದೆಯೋ ಅದು ಪದ್ಮಾವತಿಯ ಸೊಂಟದ ಮೇಲೆ ಇಳಿಯಿತು. ದುರ್ಭಾಗಿನಿ ಯಾದ ಪದ್ಮಾವತಿಯು ನೆಲಕ್ಕುರುಳಿದಳು. ನಂತರ ಕೇಶವನು ಅಳುತ್ತಿದ್ದ ಕುಸುಮೆಯ ಕಿವಿ ಹಿಡಿದು ಅವಳನ್ನು ದರ ದರ ಬೀದಿಯಲ್ಲಿ ಎಳೆದು ನಿಲ್ಲಿಸಿ ದನು. ಒಳಗೆ ಬಂದು ತಾಯಿಯು ಕುಳಿತಿದ್ದ ದೇವರ ಕೋಣೆಯಲ್ಲಿ ಇಣಿಕಿ ನೋಡಿ, "ಬಜಂತ್ರಿ! ಮನ್ಯಾಗೆಲ್ಲಾ ಬಜಂತ್ರಿ! ಮುಲ್ಲಾನ ಉರುಸು! ದೇವರ್ಗೆ ಗತಿ ಇನ್ನ! ದೇವರು ಯಾಕ, ಹೊಲ್ಯಾ? ಇದ್ದನಲ್ಲಾ ಉಡುಪಿ ಸುಬ್ಬಯ್ಯ!" ಎಂದು ಕೇಶವನು ಕೋಟನ್ನು ಹೆಗಲ ಮೇಲಿಂಸಿಕೊಂಡು ಹೋಟೆಲಿಗೆ ನಡೆದನು.

---

## ಪ್ರಕರಣ ೧೪

## ದೆವ್ವಗಳ ಕುಣಿತ

ಇದಾಗಿ ಮುಂದೆ ಕೆಲವು ದಿವಸಗಳ ಮೇಲೆ ಪದ್ಮಾವತಿಗೆ ಜಡ್ಡಾ ಯಿತು. ದಿನಾಲು ಜ್ವರ ಬರಹತ್ತಿ ತೀರ ನಿರ್ವಿಣ್ಣಳಾದಳು. ದೇಸಾಯರ ಮನೆಗೆ ಬಂದಂದಿನಿಂದ ಅವಳು ತಿರುಗಿ ತವರುಮನೆಯನ್ನು ಕಂಡಿದ್ದಿಲ್ಲ. ತವರು ಮನೆಯೇನೋ ಮನೆಯೆದುರಿಗಿನದೆ. ಮುಂಚೆಬಾಗಿಲಲ್ಲಿ ನಿಂತರೆ ಆಚಾರ್ಯರ ಮನೆಯ ಒಳಂಗಳದ ಕಾರ್ಯಕ್ರಮಗಳೆಲ್ಲ ಕಾಣುತ್ತಿದ್ದವು. ಆದರೆ ಅಲ್ಲಿ ಹೋಗುವದು ಹೇಗೆ ಜಾನಕಿಬಾಯರ ಕಟ್ಟಪ್ಪಣೆಯನ್ನು

ಏನೇರಿ ? ನರಹರಿಯೂ ಮಾತ್ರ ಆಗೀಗ ಬಂದು ಭೆಟ್ಟಿಯಾಗುತ್ತಿದ್ದ. ಕುಸುಮೆಯೂ ಆ ಮನೆಯ ಸುದ್ದಿಯನ್ನು ಹೇಳಿ ಪದ್ದಕ್ಕನನ್ನು ಸಂತವಿಸುತ್ತಿದ್ದಳು. ಕುಸುಮೆಯೂ ಈಗ ಇಂಗ್ಲಿಷ ಒಂದನೆ ಇಯತ್ತೆಯನ್ನು ಪಾಸಾಗಿ ಎರಡನೆಯದರಲ್ಲಿ ಕಲಿಯುತ್ತಿದ್ದಳು. ಮೊದಲಿನ ಕೆಲವು ನಂಬರುಗಳಲ್ಲಿಯೇ ಅವಳ ಹೆಸರಿತ್ತು. ಎರಡನೆ ಇಯತ್ತೆಯ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲರಿಗೂ ಮೇಲಾಗಬೇಕೆಂದು ಅವಳ ಆಕಾಂಕ್ಷೆ !

ದಾವೆಯ ಮುದ್ದತನ್ನು ತೀರಿಸಿಕೊಂಡು ತಿರುಗಿ ಮೊಗ್ಗಾವಿಗೆ ಬಂದ ಸುಬ್ಬಣಾಚಾರ್ಯರು ವೆಂಕಮ್ಮನವರನ್ನು ಅಗ್ರಹಾರಕ್ಕೆ ಕರೆದುಕೊಂಡು ನಡೆದಿದ್ದರು.ನಡುವೆ ಒಂದು ಸಣ್ಣ ಪ್ರಸಂಗವು ಸಂಭವಿಸಿತ್ತು. ಬಾಣಂತಿತನಕ್ಕಾಗಿ, ಲಗ್ನಕ್ಕಾಗಿ ಹಗಲಿರುಳು ಮೈಮುರಿದು ದುಡಿಯುವ ವೆಂಕಮ್ಮನವರಿಗೆ ದಿನಾಲು ಸಂಜೆಯಾಗುವಷ್ಟರಲ್ಲಿ ಹೆಚ್ಚಾಗಿ ಹಸಿವೆಯಾಗುತ್ತಿತ್ತು. ಗಂಡನು ಸತ್ತಂದಿನಿಂದ ಅವರ ಕುಂಕುಮವನ್ನಲ್ಲದೆ ಸಂಜೆಯ ಊಟವನ್ನೂ ಕಸಿದುಕೊಂಡು ಹೋಗಿದ್ದ. ಅವರಿಗೆ ಉಳಿದ ಸೌಕರ್ಯಗಳಿಷ್ಟೇ: ಮೊಸರು ಅವಲಕ್ಕಿ ಮೆಲ್ಲುವದು, ಹಿಟ್ಟು ಮುಕ್ಕುವುದು, ತಂಬಗೆರಡು ತಂಬಿಗೆ ನೀರು ಸೆಡ್ಡುವದು. ಬಹಳವಾದರೆ ಅವಲಕ್ಕಿಗೆ ಉಪ್ಪು ಕಾರದ ಒಪ್ಪು ಒಂದೊಂದು ಸಲ ಬರಬಹುದು. ಹಿಟ್ಟು ಬೆಲ್ಲಹಿಟ್ಟಾಗಬಹುದು, ಮಜ್ಜಿಗೆಹಿಟ್ಟಾಗಬಹುದು, ಒಗ್ಗರಣೆಯದಾಗಬಹುದು. ನಡುವೆ 'ಬಾಡಿಸಿ' ಕೊಳ್ಳಲು ಒಂದೆರಡು ನವತಿಕಾಯಿ – ಹಸಿಮೆಣಸಿನಕಾಯಿ ಸಿಕ್ಕರೆ ಅವರ ಸುಖವು ಮಿಗಿಲಾಯಿತೆನಬೇಕು ! ಹೀಗಿದ್ದರೂ ವೆಂಕಮ್ಮನವರು ಸಹಿಸಿಕೊಂಡಿದ್ದರು. ಆದರೆ ಮುಂದೆ ಕೆಲವು ದಿನಗಳಲ್ಲಿಯೇ ರಮಾಬಾಯರು ತಮ್ಮನ್ನು ಜನರೆದುರಿಗೆ ಆಡಿಕೊಳ್ಳುತ್ತಿದ್ದುದು ಅವರ ಕಿವಿಗೆ ಬಿದ್ದಿತು. " ಇವರಿಗೆ ಎಷ್ಟೆಂದು ಮೊಸರು – ಹಾಲು ಪೂರೈಸಬೇಕು, ತಾಯಿ ! ಚೀಲ ಅವಲಕ್ಕಿ ಎಂಟು ದಿನದಲ್ಲಿ ಮುಕ್ತಾಯವಾಗುತ್ತೆ ! ಹೆಣ್ಣುಮಗಳೋ ಹಿಡಿಂಬೆಯೋ ತಿಳಿಯದಾಗಿದೆ ! " ಅಂದಿನ ದಿನವೆಲ್ಲ ವೆಂಕಮ್ಮನವರಿಗೆ ಬಲು ದುಃಖವಾಯಿತು. ಅಂದೆಲ್ಲ ಅವರು ಉಪವಾಸಮಾಡಿದರು. ಆಗ ವಿಮೋಚನೆಯ ಕೆಲವು ಉಪಾಯಗಳು ಅವರೆದುರಿಗೆ ಹೊಳೆದುಹೋದವು. ಮರುದಿವಸದಿಂದ ಅವರು ಯಾವ ಕೆಲಸಕ್ಕೂ ಕೈಹಾಕಲಿಲ್ಲ. ಮೊಸರು – ಅವಲಕ್ಕಿಯನ್ನು

ಮಾತ್ರ ಅವರು ರಮಾಬಾಯಿಯರು ಹೇಳುವದಕ್ಕಿಂತ ಒಂದು ತೂಕ ಹೆಚ್ಚಾಗಿಯೇ ಮೆದ್ದರು. ರಮಾಬಾಯಿಯರು ಮತ್ತಿಷ್ಟು ಕೆರಳಿದರು. ಒಂದು ದಿನ ಮಾತಿಗೆ ಮಾತು ಹತ್ತಿ ರಮಾಬಾಯಿಯರು ವೆಂಕಮ್ಮನವರನ್ನು "ಭೋ....ಡಿ!" ಎಂದು ಬಯ್ದುದ್ದಲ್ಲದೆ ಸಿಟ್ಟಿನ ಭರದಲ್ಲಿ ಅವರ ಮೋರೆಗೆ ಕೈತಿವಿದಿದ್ದರು. ಸ್ವಭಾವತಃ ವೆಂಕಮ್ಮನವರು ಮೌನವುಳ್ಳವಳು; ಕುಲೀನ ಮನೆತನದಲ್ಲಿ ಹುಟ್ಟಿ ಬೆಳೆದು ಮಾನವಂತರ ಮನೆಯಲ್ಲಿ ಮರ್ಯಾದೆಯಿಂದ ಸಂಸಾರ ಮಾಡಿದವರು. ಅಂದು ರಾತ್ರಿಯೆಲ್ಲ ಅವರಿಗೆ ಕಣ್ಣೀರು ತಪ್ಪಲಿಲ್ಲ. ಈ ಹೊತ್ತಿನಲ್ಲಿ ಸುಬ್ಬಣಾಚಾರ್ಯರಿಲ್ಲದಿದ್ದರೆ ಪ್ರಸಂಗವು ವಿಕೋಪಕ್ಕೆ ಹೋಗುತ್ತಿತ್ತು. ಮರುದಿವಸ ಅವರು ನಡೆದದ್ದನ್ನೆಲ್ಲ ಸೂಕ್ಷ್ಮವಾಗಿ ಹೈಗ್ರೀವಾಚಾರ್ಯರಿಗೆ ಹೇಳಿ ವೆಂಕಮ್ಮನವರನ್ನು ತವರೂರಿಗೆ ಕಳಿಸಲು ನಡೆದರು.

ವೆಂಕಮ್ಮನವರು ಹೋದಮೇಲೆ ರಮಾಬಾಯಿಯರಿಗೆ ವಿಚಾರ ಬಿತ್ತು. ಪದ್ಮಾವತಿಯನ್ನು ಕೆಲವು ದಿನ ಕರೆಯಿಸಿಕೊಳ್ಳಬೇಕೆಂದು ಅವರಿಗೆನಿಸಿತು. ಈಗ ಪಾಪ ! ಪದ್ಮಾವತಿಗೆ ಜಡ್ಡಾಗಿತ್ತು. ಅತ್ತೆಮನೆಯಲ್ಲಿ ಅವಳು ಪಡುವ ಕಷ್ಟವು ರಮಾಬಾಯಿಯರಿಗೆ ಗೊತ್ತು. ಕೆಲವು ದಿನ ಉಪಚಾರವಾದರೂ ಮನೆಯಲ್ಲಾಗಲೆಂದು ಆಚಾರ್ಯರನ್ನು ಕಳುಹಿದರು. ಆಚಾರ್ಯರು ಹೋಗಿ ಕೇಳಲಾಗಿ ಜಾನಕಿಬಾಯಿ – ಕೇಶವರಿಂದ ಒಂದೇ ಉತ್ತರವು ಬಂದಿತು: ಈಗ ಕಳುಹಿಸುವದಿಲ್ಲವೆಂದು !

ಮನೆಯಲ್ಲಿ ಸಭೆಯು ನೆರೆಯಿತು. ಆಪ್ತಾಲೋಚನೆಗೆಂದು ಆಚಾರ್ಯರು ಕರೆಯಿಸಿಕೊಂಡಿದ್ದ ಸುಬ್ಬಣಾಚಾರ್ಯರೂ ಇದ್ದರು.

"ಕಳಸೂದುಲ್ಲಂತ ನಮ್ಮ ಮನಿಗೆ. ಕಳಸದಿದ್ರು ಬಿಡ್ಲಿ. ಹುಡುಗಿನ್ನ ಹೊಡದು ಹೊಡದು ಹಣ್ಣುಮಾಡಿ ಕೊಲ್ಲತಾರ" ಎಂದು ರಮಾಬಾಯಿಯವರು ಕಣ್ಣೀರು ಹಾಕಿದರು. ಮಲಮಗಳಾದರೇನು ? ಹೆಣ್ಣಿನ ದುಃಖವು ಹೆಣ್ಣಿಗೇ ಗೊತ್ತು.

"ದೇಸಾಯ್ರು ಮನಿ ಅಂತ ನೋಡಿ ಕೊಟ್ಟೆವಿ. ನಮ್ಮ ಮಗಳದು ಈ ಗತಿ. ದೇವರ ಇಚ್ಛಾ, ಯಾರು ಏನು ಮಾಡೋದು" ಎಂದು ಹೈಗ್ರೀ

ಪಾಚಾರ್ಯರು ನಿಟ್ಟುಸಿರು ಬಿಟ್ಟರು. ತಮ್ಮ ಅರ್ಧಾಂಗಿಯೂ ತಮ್ಮ ದುಃಖದಲ್ಲಿ ಪಾಲುಗಾರಳಾಗಿದ್ದನ್ನು ನೋಡಿ ಅವರಿಗೆ ತುಸು ಆನಂದ ವಾಯಿತು.

" ಜಡ್ಡಾಗಿ ಮಲಗ್ಯಾಳಂತ್ರಿ ಪದ್ಮಕ್ಕ, ರಮಾಬಾಯ್ರು ! ಬಾಳಿಸುಳೀ ಅಂಥ ಆ ಹುಡುಗಿ ಎಷ್ಟಂತ ಪೆಟ್ಟು ತಿಂದೀತು. ಹ್ಯಾಂಗಾದ್ರು ಮಾಡಿ ಕರಕೊಂಡು ಬರಬೇಕು ಮನಿಗೆ " ಸುಬ್ಬಣಾಚಾರ್ಯರು ಹೇಳಿದರು.

" ಅದೆಲ್ಲ ನಿಜ. ಆದರ ಹೋಗಿ ಕರಕೊಂಡು ಬರಬೇಕು ಯಾರು ? ದಿನಾ ಬೆಳಗಾದ್ರ ರಸ್ತೇದಾಗ ಭೆಟ್ಟಿ ಆದರ ಈಶನ ಮಾರಿ ತಿರುಹಿಕೊಂಡು ಹೋಗತಾನ. ಇನ್ನೇನು ಮಾಡಬೇಕು ? " ಎಂದು ಆಚಾರ್ಯರು ತಪ್ಪರಾದರು.

ಸುಬ್ಬಣಾರ್ಯರು ಸಾವರಿಸಿಕೊಂಡು ಎದ್ದರು. ಗಂಭೀರವಾದ ಮುಖಮುದ್ರೆಯನ್ನು ತಾಳಿ " ಆಚಾರ, ನಾ ಇರೋತನಕ ನೀವ್ಯಾಕ ಅಂಜೋದು. ಇಕಾ ! ಹೊರಟೆ ! ಪದ್ದಕ್ಕನ್ನ ಕರಕೊಂಡು ಬರತೇನಿ " ಎಂದು ನುಡಿದು ಹೊರಡಲನುವಾದರು.

" ಹೆಚ್ಚು ಮಾತಾಡಬ್ಯಾಡ್ರಿ. ಮತ್ತ ಹುಡುಗಿ ಜೀವಕ್ಕ ತ್ರಾಸು. ಕಳಸೂದುಲ್ಲಾ ಅಂದ್ರ ತಿರುಗಿ ಬಂದು ಬಿಡ್ರಿ " ಎಂದು ರಮಾಬಾಯಿಯವರು ಕಣ್ಣೊರಿಸುತ್ತ ಹೇಳಿದರು. " ಹೂಂ ಹೂಂ " ಎನ್ನುತ್ತ ಸುಬ್ಬಣಾಚಾರ್ಯರು ಗೋವಿಂದರಾಯರ ಮನೆಗೆ ದಯಮಾಡಿಸಿದರು. ಹೊರಗಿನ ಕೋಣೆಯಲ್ಲಿ ಹಣಿಕಿಹಾಕಿದರು. ಗೋವಿಂದರಾಯರಿರಲಿಲ್ಲ. ಆಗ ಅವರ ಅರ್ಧ ಜೀವವು ಹೋಯಿತು. ಸಂದೇಹಮನಸ್ಕರಾಗಿ ಮನೆಯೊಳಕ್ಕೆ ಇಣಿಕಿ ನೋಡಿದರು. ಯಾರ ಸುಳಿವೂ ಇರಲಿಲ್ಲ. ಸಾವಕಾಶವಾಗಿ ನರಳುವ ದನಿಯೊಂದು ಕೇಳಿ ಬರುತ್ತಿತ್ತು. ಗಟ್ಟಿ ಮನಸ್ಸುಮಾಡಿ ಆ ದಿಕ್ಕಿನಲ್ಲಿ ಹೋಗಿ ನೋಡಲು ಕಾಹಿಲೆಯಾದ ಪದ್ದಕ್ಕನು ನಿರ್ವಿಣ್ಣಳಾಗಿ ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದಳು.

" ಜಾನಕಿಬಾಯ್ರು ಇಲ್ಲೇನು, ಪದ್ದಕ್ಕ " ಎಂದು ಸುಬ್ಬಣಾಚಾರ್ಯರು ಮೆಲುದನಿಯಲ್ಲಿ ಕೇಳಿದರು. " ಇಲ್ಲ. ಪುರಾಣಕ್ಕ ಹೋಗ್ಯಾರ " ಎಂದು ಪದ್ಮಾವತಿಯು ಕಷ್ಟದಿಂದ ನುಡಿದಳು.

'ಕೇಶವರಾಯರು ಎಲ್ಲಿದ್ದಾರ?'

'ತಿರುಗ್ಯಾಡಲಿಕ್ಕೆ ಹೋಗ್ಯಾರ, ಕಾಣತದ'

"ಈಗ ಹ್ಯಾಂಗದ ಪ್ರಕೃತಿ, ಪದ್ದಕ್ಕಾ!" ವ್ಯಾಕುಲಚಿತ್ತರಾಗಿ ಸುಬ್ಬಣಾಚಾರ್ಯರು ಕೇಳಿದರು.

"ಹಂಗs ಅದ." ತುಸು ಹೊತ್ತು ಪದ್ಮಾವತಿಯು ಸುಮ್ಮನಿದ್ದಳು. ಮತ್ತೆ ಗಟ್ಟಿಸಿ ಮಾತನಾಡಿದಳು. "ಆಚಾರ, ಇಲ್ಲಿ ಯಾಕ ಬಂದ್ರಿ, ನನಗ ಗುಣ ಆಗತದ. ಮನ್ಯಾಗ ಎಲ್ಲರಿಗು ಕಾಳಜಿಮಾಡಬಾರದಂತ ಹೇಳರಿ. ಇನ್ನ ಹೋಗರಿ ನೀವು. ಅತ್ತೆಯವರು ಬರೋ ಹೊತ್ತಾತು."

"ನಿನ್ನ ಕರಕೊಂಡು ಹೋಗಲಿಕ್ಕೆ ಬಂದೇನಿ, ಪದ್ದಕ್ಕ" ಎಂದು ಆಚಾರ್ಯರು ದೈನ್ಯಪಟ್ಟು ಹೇಳಿದರು.

ಅಷ್ಟರಲ್ಲಿ ಹಿತ್ತಲಕ್ಕೆ ಹೋಗಿದ್ದ ಕುಸುಮೆಯು ತಿರುಗಿ ಬಂದಳು. ಪದ್ಮಾವತಿಗೆ ಕಾಹಿಲೆಯಾಗಿ ಎರಡು ದಿನಗಳಿಂದ ಅವಳು ಶಾಲೆಗೆ ಹೋಗಿದ್ದಿಲ್ಲ. ಅತ್ತಿಗೆಯ ಶುಶ್ರೂಷೆಯಲ್ಲಿ ತತ್ಪರಳಾಗಿದ್ದಳು.

ಸುಬ್ಬಣಾಚಾರ್ಯರು ಬಾಗಿಲ ಹತ್ತಿರವೇ ನಿಂತದ್ದನ್ನು ನೋಡಿ ಕುಸುಮೆಯು ಅವರಿಗಾಗಿ ಒಂದು ಜಮಖಾನೆಯನ್ನು ಹಾಸಿ ಕುಳ್ಳಿರಿಸಿದಳು. ಆ ಬಳಿಕ "ಚಹ ಮಾಡಲೇನು, ಪದ್ದಕ್ಕ" ಎಂದು ಕಿವಿಯಲ್ಲಿ ಕೇಳಿದಳು.

"ಛೇ! ಛೇ! ಚಹ ನಮಗ ನಿಷಿದ್ಧ ಅದನವಾ, ತಂಗಿ,– ಅದರ ಉಸಾಬರಿ ಬ್ಯಾಡ.... ಬಂದರ್ಯಾ, ಜಾನಕಿಬಾಯರ! ಬರ್ರಿ!" ಎಂದು ಆಚಾರ್ಯರು ಚಹದ ಸುದ್ದಿಯನ್ನು ಬಿಟ್ಟು ಹತ್ತಿಯ ಬುಟ್ಟಿಯನ್ನು ಹಿಡಿದುಕೊಂಡು ಬರುತ್ತಿದ್ದ ಜಾನಕಿಬಾಯಿಯವರನ್ನು ಮರ್ಯಾದಿಸಿದರು.

ಅವರು ಬಂದೊಡನೆ ಪದ್ಮಾವತಿಯು ಎದ್ದು ಕುಳಿತಳು. ಹುಬ್ಬುಗಂಟಿಕ್ಕಿ ಅವಳನ್ನು ನೋಡಿದ ಅತ್ತೆಯವರು ಸುಬ್ಬಣಾಚಾರ್ಯರೊಡನೆ ನಿರ್ವಾಹವಿಲ್ಲದೆ ಔಪಚಾರಿಕವಾಗಿ ಮಾತನಾಡಬೇಕಾಯಿತು. ಪದ್ಮಾವತಿಯನ್ನು ನೋಡಿ "ಮಲಕೋ! ಎದ್ದು ಯಾಕ ಕೂತಿ! ಈಕಿ ಪ್ರಕೃತಿ, ನೋಡಿರಿ ಆಚಾರ, ಬಹಳ ಅಶಕ್ತ ಅದ. ತೀರ್ಥ ಧಂಡಿ, ಪ್ರಸಾದ ಅಜೀರ್ಣ! ಆದರ ಏನು ಮಾಡಬೇಕು, ಹೇಳರಿ! ಈಗ ವೈದ್ಯರನ್ನ ಕರೆಕಳಿಸೇದ.

ಏನು ಔಷಧ ಕೊಡತಾರೋ ನೋಡಬೇಕು.'' ಎಂದು ಜಾನಕಿಬಾಯಿ ಯುವರಾಡಿದರು.

ಚಾಣಾಕ್ಷರಾದ ಆಚಾರ್ಯರು ಅವರನ್ನು ಅಳವಿಲ್ಲದೆ ಪ್ರಶಂಸಿಸಿ ತಮ್ಮ ಮಾತನ್ನು ಮುಂದೆ ಮಾಡಿದರು. ಹುಡಿಗೆಯನ್ನು ನಾಲ್ಕು ದಿವಸ ಮನೆಗೆ ಕಳಿಸಬೇಕೆಂದು ಕೇಳಿದರು.

"ಅದು ನನ್ನ ಕಡಿಗೆ ಇಲ್ಲ, ಆಚಾರ. ಕೇಳಬೇಕು ಮೊದಲ ಕೇಶವ ರಾಯರನ್ನ. ಇಂದಿನ ಅತ್ತೇರ ಕಯ್ಯಾಗ ಏನದ?'' ಎಂದು ಜಾನಕಿ ಬಾಯರು ಉದ್ಗಾರತೆಗೆದರು.

"ಮತ್ತ ಅತ್ತಿ, ಮತ್ತ ಸೊಸಿ. ನೀವ್ಯಾರ ಇಲ್ಲಿ, ಆಚಾರಿ?'' ಸುಬ್ಬಣಾಚಾರ್ಯರ ಜೀವವೇ ಹೋಯಿತು. ಅವರನ್ನೇ ಕೆರಳಿದ ಕಣ್ಣಿನಿಂದ ನೋಡುತ್ತ ಬರುತ್ತಿದ್ದ ಕೇಶವನು ತುಸು ಕ್ಷುಬ್ಧನಾಗಿ ಕಾಣುತ್ತಿದ್ದನು. ಅನೇಕ ದಿನಗಳಿಂದ ಅವನ ಗಲ್ಲಗಳು ಪಚ್ಚುಬಡೆದಿದ್ದವು. ಹೊಸತಾದ ಕ್ರೂರದೃಷ್ಟಿಯೊಂದು ಅವನ ಕಣ್ಣಿನಲ್ಲಿ ತುಂಬಿತ್ತು. ಸಿಗರೇಟಿಗಾಗಿ ರೊಕ್ಕ ಏದ್ದಿಲ್ಲ. ತರಲು ಮನೆಗೆ ಬಂದಿದ್ದನು.

ಅವನು ಬಂದಾಗಲೆ ಆಚಾರ್ಯರು ಗಡಬಡಿಸಿ ಎದ್ದರು. "ಏನಿಲ್ಲ, ಮಹರಾಯ. ಪದ್ದಕ್ಕನ್ನ ನೋಡಿಕೊಂಡು ಹೋಗಲಿಕ್ಕೆ ಬಂದಿದ್ದೆ. ಈಗ ಎರಡು ದಿವಸ....''

"ನಾಲ್ಕು ದಿವಸ ಮನೆಗೆ ಕಳಸತೀಯೇನು, ಕೇಶವ? ಕರಕೊಂಡು ಹೋಗಬೇಕಂತಾರ.'' ಎಂದು ಜಾನಕಿಬಾಯರು ತನ್ಮಧ್ಯೆ ಬಾಯಿ ಹಾಕಿ ದರು.

ಕೇಶವನ ಪಿತ್ತ ತಲೆಗೇರಿತು. "ಮನಿಗೆ? ಆ ಹಾ....ಗಿತ್ತಿ ರಮಾ ಬಾಯಿ ಮನಿಗೆ ಹೌದಲ್ಲೊ? ಈ ರಂ....ಗ.... ಆಚಾರಿ ಕರಕೊಂಡು ಹೋಗೋವ. ಯಾಕ? ತವರುಮನಿಗೆ ಹೋಗೋ ಹಂಗ ಆತೇನು?'' ಹೆಂಡತಿಯ ಕಡೆಗೆ ತಿರುಗಿ ಕೇಶವನು ಆರ್ಭಟಿಸಿದನು.

"ಇಲ್ಲ. ನಾ ಬರುದುಲ್ಲಂತ ಹೇಳತೇನಿ'' ಅತಿ ಪ್ರಯಾಸದಿಂದ ಪದ್ಮಾವತಿಯು ನುಡಿದಳು. ಅವಳ ಕಣ್ಣಲ್ಲಿ ನೀರು ತುಂಬಿತು.

ಕೇಶವನು ಆಚಾರ್ಯರ ಮೇಲೆ ಸವಾರಿಮಾಡಿದನು. ಅವರು ಹೊತ್ತ

ಧೋತರವನ್ನು ಹಿಡಿದು ದರ ದರ ಎಳೆದು ಬಾಗಿಲ ಹೊರಗೆ ನಿಲ್ಲಿಸಿ "ಹೂಂ ಸಾಗರಿ ಮುಂದ. ಇದು ಹೈಗ್ರೀವಾಚಾರ ಮನಿ ಅಲ್ಲ, ತಿಳಿತೇನು ?" ಎಂದು ಗರ್ಜಿಸಿದನು.

ಸುಬ್ಬಣಾಚಾರ್ಯರ ಕೋಪವು ಪ್ರಜ್ವಲಿತವಾಯಿತು. "ರಾಯರ, ಈ ಮಸ್ತಿ ಬಿಡರಿ ನೀವು. ವೈದಿಕಬ್ರಾಹ್ಮಣರಿಗೆ ಜೀವ ಇಲ್ಲಂತ ತಿಳಿದರಾ? ನೋಡರಿ ಈ ಸುಬ್ಬನ ಕರಾಮತಿ" ಎಂದು ಹೇಳಿ ರಭಸದಿಂದ ಮುಂದೆ ನಡೆದರು. ಮೈಮೇಲೆ ಬರುವ ತನಕ 'ಜೀಜೀ' ಎಂದು, ಬಂದ ಮೇಲೆ 'ಜಾಜಾ' ಎನ್ನುವ ವೈದಿಕವೃತ್ತಿಗೆ ಸುಬ್ಬಣಾಚಾರ್ಯರೇನು ಹೊರತಾಗಿದ್ದಿಲ್ಲ. ಇಂಥ ಅಪಮಾನವು ಅವರಿಗಾದದ್ದು ಇದೇ ಮೊದಲನೆ ಸಲ. ಮಾನವಂತ ಬ್ರಾಹ್ಮಣ! ಅವರ ತಲೆ ತಿರುಗಿ ಹೋಗಿತ್ತು.

ಉನ್ಮತ್ತರಾಗಿ ಅಲ್ಲಿಂದ ಹೊರಬಿದ್ದ ಆಚಾರ್ಯರು ಏನು ಮಾಡುತ್ತೇವೆಂಬುದರ ಅರಿವಿಲ್ಲದೆ ನೆಟ್ಟಗೆ ರಂಗಾಸಾನಿಯ ಮನೆಯ ಎದುರಿಗೆ ಬಂದು ನಿಂತರು. ಒಳಗೆ ಗೋವಿಂದರಾಯರು ನಿಶ್ಚಯವಾಗಿ ಸಿಕ್ಕುವರೆಂದು ಅವರಿಗೆ ಗೊತ್ತಿತ್ತು. ಕೇಶವನ ಲಗ್ನವಾಗಿ ಹೆಂಡತಿಯು ಮನೆಗೆ ಬಂದಂದಿನಿಂದ ಗೋವಿಂದರಾಯರು ಮನೆಗೆ ಬಹುಶಃ ಹೋಗುತ್ತಿರಲೇ ಇಲ್ಲ. ಆದರೆ ಮನೆಯಲ್ಲಿ ನಡೆದಿರಬಹುದಾದ ವೃತ್ತಾಂತದ ಅರಿವು ಮಾತ್ರ ಅವರಿಗೆ ಸಂಪೂರ್ಣವಾಗಿತ್ತು. ಹುಲಿ-ಸಿಂಹಗಳ ನಡುವೆ ಸಿಕ್ಕ ಎರಳೆಯಂತೆ ಪದ್ಮಾವತಿಯ ಸ್ಥಿತಿಯಾಗಿರುವದನ್ನು ಅವರು ಅರಿತಿದ್ದರು. ಅವರೇನು ಮಾಡಬಲ್ಲರು? ಒಂದು ದಿನವಲ್ಲ, ಎರಡಲ್ಲ; ಇದು ಜನ್ಮಾಂತರಕ್ಕೆ ಹತ್ತಿದ ಮಾತು; ಮನೆಗೆ ಕಳಿಸಿದರೆ ಪದ್ಮಾವತಿಯು ಗಂಡ ಬಿಟ್ಟ ಗರತಿಯಾಗುವಳು. ಜಾನಕಿಬಾಯರನ್ನು ನಿರ್ಬಂಧಿಸುವದು ಅವರಿಗೆ ಆಜನ್ಮ ಸಾಧಿಸಿದ್ದಿಲ್ಲ; ಕೇಶವನೂ ಅವರ ಹವಣನ್ನು ಮೀರಿದ್ದನು. ಹೊರಗೆ ಬಂದಾಗೊಂದು ಸಲ ಪ್ರಪಂಚದ ದುಃಖಗಳನ್ನು ಅನುಭವಿಸುವ ಧ್ಯಾನಿಯು ಧ್ಯಾನದಲ್ಲಿ ಮತ್ತಿಷ್ಟು ಒಳನುಗ್ಗುವಂತೆ ರಾಯರು ಹೆಚ್ಚು ಹೆಚ್ಚಾಗಿ ತಮ್ಮೊಳಗೇ ಸೇರಿದ್ದರು, ಸಾನಿಯ ಮನೆಯನ್ನು ಸೇರಿಕೊಂಡಿದ್ದರು.

ಸಾನಿಯ ಮನೆಯ ಎದುರಿಗೇನೋ ಸುಬ್ಬಣಾಚಾರ್ಯರು ಬಂದು ನಿಂತಿದ್ದು ನಿಜ. ಆದರೆ ಒಳಗೆ ಪ್ರವೇಶಿಸಬಹುದೇನೆಂಬ ಸಂಶಯವು ಅವರಲ್ಲಿ

ಈಗ ತಲೆದೋರಿತು. ಕೇಶವನೊಡನೆ ಆದಂತೆ ಇಲ್ಲಿಯೂ ಇನ್ನೊಂದು ಭೂತವಿದ್ದರೆ? ದೇಸಾಯರ ನೆಲೆಯನ್ನು ತಿಳಿದವರಾರು? ಈ ವಿಚಾರವು ಆಚಾರ್ಯರಲ್ಲಿ ಮಿಂಚಿಹೋಯಿತು ಮಾತ್ರ. ಅವರು ವಸ್ತುಸ್ಥಿತಿಯನ್ನು ತೂಗಿ ನೋಡುವ ಮನಃಸ್ಥಿತಿಯಲ್ಲಿದ್ದಿಲ್ಲ. ಆದ ಅಪಮಾನವು ಅವರ ಎದೆಯಲ್ಲಿ ಕುದಿಯುತ್ತಿತ್ತು. ತಟ್ಟನೆ ಸಾನಿಯ ಮನೆಯನ್ನು ಪ್ರವೇಶಿಸಿದರು.

ಅಹಾ! ಇಲ್ಲಿಯ ಜಗತ್ತೇ ಬೇರೆ. ಒಂದು ಉತ್ತಮವಾಗಿ ಅಲಂಕೃತವಾದ ಪಡಮನೆ. ಎಲ್ಲೆಡೆಗೆ ರತ್ನಗಂಬಳಿಗಳು ಹಾಸಿವೆ. ಅದರ ಮೇಲೆ ಕೂಡಲು ಬೂರಲ ಅರಳೆಯಿಂದ ತುಂಬಿದ ಸಣ್ಣ ಸಣ್ಣ ಗಾದೆಗಳನ್ನು ಗೋಡೆಗುಂಟ ಹಾಸಿದ್ದರು. ಬದಿಗೆ ಅವಿತು ಕುಳ್ಳಿರಲು ಲೋಡುಗಳು. ಗಾದೆಗಳ ಮೇಲೂ ಲೋಡುಗಳ ಮೇಲೂ ಅಚ್ಚ ಬಿಳಿ ಗಂಜಿಯಾದ ಆವರಣ. ಮಧ್ಯದಲ್ಲಿಟ್ಟ ಒಂದು ತಬಕದಲ್ಲಿ ವೀಳ್ಯದ ಸಲಕರಣೆ, ಅರಳಿದ ಮಲ್ಲಿಗೆಗಳು. ಅದರ ಸುತ್ತಲೂ ಅತ್ತರದಾನಿ-ಗುಲಾಬದಾನಿಯ ಹಿಡಿಕೆಗಳು. ಅಲ್ಲಲ್ಲಿ ಗಂಧದ ಬೀಸಣಿಕೆಗಳು ಬಿದ್ದಿದ್ದವು. ಊದುಬತ್ತಿಯ ಗಮಗಮ ವಾಸನೆಯೆಲ್ಲ ಪಡಮನೆಯ ತುಂಬ ಇಡಗಿತ್ತು. ಎರಡು ಅಮೇರಿಕನ್ ಕಂದೀಲುಗಳು ಮಂದಪ್ರಕಾಶದಿಂದುರಿದು ಗೋಡೆಗಳ ಮೇಲೆ ದಪ್ಪವಾಗಿ ಹಚ್ಚಿದ ನೀಲಿ ಬಣ್ಣವನ್ನು ನೀಲಮಯವಾಗಿ ಮಾಡುತ್ತಿದ್ದವು. ಆ ನೀಲಿಮತೆಗೆ ಕಳಸ ವಿಡುವಂತೆಯೇ ಏನೊ ಬಣ್ಣ ಬಣ್ಣದ ಚಿತ್ರಗಳನ್ನು ಮೇಲಕ್ಕೆ ಸಾಲು ಸಾಲಾಗಿ ಕಟ್ಟು-ಕನ್ನಡಿಗಳಲ್ಲಿ ಇರಿಸಿದ್ದರು. ಒಂದರಲ್ಲಿ ಒರ್ವ ಅಪ್ಸರಿಯು ಗಾನಮಾಡುತ್ತಿದ್ದಳು. ಇನ್ನೊಂದರಲ್ಲಿ ಅವಳಿಗೆ ಎದುರಾಗಿ ಒರ್ವ ಸುಂದರ ತರುಣನು ಬರುತ್ತಿದ್ದ. ಮತ್ತೊಂದರಲ್ಲಿ ಅವರ ಸ್ನೇಹದ ಗುರುತು ಚಿಗುರೊಡೆಯುವದು ಕಂಡುಬರುತ್ತಿದೆ. ಬೇರೊಂದರಲ್ಲಿ ಆ ಯುವಕನು ಹಾಕಿದ ತಾಳಕ್ಕೆ ಅಪ್ಸರಿಯು ನರ್ತಿಸುತ್ತಿದ್ದಾಳೆ. ಇನ್ನೆನಿತೋ ಚಿತ್ರಗಳು ತಳತಳಿಸಿ ಹೊಳೆಹೊಳೆದು ಕಣ್ಮನವನ್ನು ಸೆಳೆಯುತಿದ್ದವು. ಇತ್ತ ಲೋಡಿಗೆ ಅವಿತು ಕೊಂಡು ಹಸನ್ಮುಖರಾಗಿ ರಾಯರು ಕುಳಿತಿದ್ದಾರೆ. ಬಳಿಯಲ್ಲಿ ಕುಳಿತ ಅವರ ರಂಭೆಯು ಅದೇ ವೀಣೆಯನ್ನು ಬಾಜಿಸಿ ಕೆಳಗಿರಿಸಿ 'ವಿಳ್ಯ'ವನ್ನು ತಯಾರಿಸಿ ಕೊಡುತ್ತಿದ್ದಾಳೆ. ಮೆಲ್ಲನೆ ಮಾತು, ಕುಲುಕುಲು ನಗೆ. ಈ ಸ್ವರ್ಗಕ್ಕೆ ಬರಲು ತಮಗೆ ಅಧಿಕಾರವಿದೆಯೇನೆಂದು ಆಚಾರ್ಯರು

ಬೆದರಿದನು.ಸಿಟ್ಟಿನ ಭರದಲ್ಲಿ ಹೀಗೆ ಅಂತಃಪುರದ ರಹಸ್ಯದಲ್ಲಿ ಕಾಲಿಡಬಾರದಿತ್ತೆಂದು ನಾಲಗೆಯನ್ನು ಕಚ್ಚಿಕೊಂಡರು. ಇನ್ನು ಅವರು ಮರಳಿ ಹೋಗುವವರು. ಅಷ್ಟರಲ್ಲಿ ಅವರನ್ನು ಕಂಡಿದ್ದ ರಾಯರು ನಗುತ್ತ ಸ್ವಾಗತ ಮಾಡಿದರು.

" ಬರ್ರಿ, ಆಚಾರ! ಇಲ್ಲಿ ಕೂಡರಿ! ನೀವು ಇಲ್ಲೆ? ಇಂಥ ಮನೆಯೊಳಗ ನೀವು ಕಾಲಿಡಬಾರದು, ಆಚಾರ! "

" ಆಚಾರ ಪಾದಸ್ಪರ್ಶ ಆತು ನಮ್ಮ ಮನಿಗೆ ಇವತ್ತ; ನನ್ನ ಧರ್ಮ ಉಳಿತು! "

ರಂಗಾಸಾನಿಯು ಮೆಲುನಗೆ ನಕ್ಕು ಮುದುಡಿಕೊಂಡು ಕುಳಿತಳು.

ರಾಯರು ತೋರಿಸಿದ ಜಾಗೆಯಲ್ಲಿ ಆಚಾರ್ಯರು ಬಂದು ಬೆಪ್ಪನೆ ಕುಳಿತುಕೊಂಡರು.

" ಎಲ್ಲಿ, ನೋಡೋಣು ರಂಗು! ಆಚಾರರಿಗೆ ಒಂದು ವಿಡಾ ಮಾಡಿ ಕೊಡು " ರಾಯರು ಉತ್ಸಾಹಪರರಾಗಿ ನುಡಿದರು.

ಸುಬ್ಬಣಾಚಾರ್ಯರ ಮೈಯ್ಯು ಜುಮ್ಮೆಂದಿತು. " ಛೇ! ಛೇ! ಕ್ಷಮಿಸಿರಿ ರಾಯರ! ಬಡಸೋ....ಗ ನನಗ್ಯಾಕವಿಡಾ! ನಾಳೆ ನನ್ನ ವೈದಿಕ ವಿದ್ಯಾಕ ಚಕ್ರ ಬಂದೀತು. ನಾ ಬಂದಿದ್ದು ಬ್ಯಾರೆ ಕೆಲಸ. "

ಅವರು ಇಷ್ಟು ಮಾತನಾಡುವದರಲ್ಲಿಯೇ ಸಾನಿಯ ಕೈಯಲ್ಲಿ ವೀಳ್ಯವು ಸಿದ್ಧವಾಯಿತು. ನಗುತ್ತ ಕೈಮುಂದೆ ಮಾಡಿದಳು. ಆಚಾರ್ಯರು ಗಾಬರಿಯಾದರು. ಅವಳ ಆ ಮೃದುಮಧುರವಾದ ನಗೆ, ಆ ವರದ ಹಸ್ತ, ಕಲ್ಪಲತೆಯಂತೆ ಒಲಿದಾಡುವ ಆ ದೇಹ,–ಆಚಾರ್ಯರ ಬುದ್ಧಿಯು ಮಂಕಾಯಿತು. ತಮಗೆ ಗೊತ್ತಿಲ್ಲದೆ ವೀಳ್ಯವನ್ನು ಅವರು ಸಾನಿಯ ಕೈಯ್ಯಿಂದ ಇಸಿದುಕೊಂಡಿದ್ದರು. ಜಗತ್ತಿನಲ್ಲಿ ಆಚಾರ–ವಿಚಾರ. ಇಲ್ಲಿ –ಈ ಸ್ವರ್ಗದಲ್ಲಿ–ಸ್ವಾತಂತ್ರ್ಯವಲ್ಲವೆ? ಆದರೆ ಆಚಾರ್ಯರ ಮನಸ್ಸು ಮರುಕ್ಷಣವೆ ಜಾಗೃತವಾಯಿತು. ವೀಳ್ಯವನ್ನು ಬದಿಗಿಟ್ಟರು.

ಅವರ ಈ ಹೊಯ್ದಾಟವನ್ನು ನೋಡಿ ಮುಗುಳುನಗೆ ನಗುತ್ತಿದ್ದ ಗೋವಿಂದರಾಯರು " ಹೂಂ! ಇನ್ನ ಕೆಲಸವೇನು ಹೇಳರಿ ಆಚಾರ " ಎಂದು ಅವರ ತೊಡೆ ಚಪ್ಪರಿಸಿದರು.

"ಏನಿಲ್ಲ, ಮಹರಾಯ ! ಸಿಟ್ಟಿನ ಭರದಾಗ ಒಂದು ಬಿಟ್ಟೆ. ಹಾಂಗ ದುಡುಕಬಾರದಾಗಿತ್ತು. ನಾಳೆ ಬಂದು ಭೆಟ್ಟಿ ಆಗತೇನಿ." ಸಂಕೋಚ ಪಟ್ಟುಕೊಂಡ ಸುಬ್ಬಣಾಚಾರ್ಯರು ಹೊರಡಲನುವಾದರು.

"ಇಲ್ಲ. ಈಗ ಪುರಾಣಶ್ರವಣ ಆಗಿಬಿಡಲಿ. ಆಚಾರು ಬಂದವನ್ಯಾಲ ಹಂಗs ಹೋಗಬಾರದು" ಎಂದು ರಾಯರು ಮಾರ್ನುಡಿದರು ಅವರ ಮುಖವು ಬರಬರುತ್ತ ಗಂಭೀರವಾಯಿತು.

ಸುಬ್ಬಣಾಚಾರ್ಯರು ಮನದಲ್ಲಿ ಮಿಡುಕಿದರು. ಇಲ್ಲಿ ಬರಬಾರ ದಿತ್ತೆಂದು ಆಲೋಚಿಸಿದರು. ಉತ್ಸುಕಳಾದ ನಾನಿಯ ಮೋರೆಯನ್ನು ನೋಡಿ ಅವರಿಗೆ ಸಂಕೋಚವಾಯಿತು. ಆದರೇನು ಮಾಡುವದು ? ನಡೆದ ಕಥೆಯನ್ನೆಲ್ಲ ಹೇಳಬೇಕಾಯಿತು. ಆಚಾರ್ಯರು ಯಥಾರ್ಥವಾಗಿ ನಡೆದ ದ್ದನ್ನು ವರ್ಣಿಸಿದ್ದಲ್ಲದೆ ಅರಾಜಕಥೆಯ ಮೂಲಕ ಇಂಥ ಪ್ರಸಂಗಗಳು ಸಂಭವಿಸುವವೆಂದು ಆದಷ್ಟು ವಿನಯದಿಂದ ಸೂಚಿಸಿದರು.

ರಾಯರು ಎಲ್ಲವನ್ನು ಶಾಂತಚಿತ್ತರಾಗಿ ಕೇಳಿಕೊಂಡು ಮಾತಿಗೆ ಮೊದಲುಮಾಡಿದರು. "ಆಚಾರ ! ದೊಡ್ಡ ಶಬ್ದ ನೀವು ತಿಳೀದ ಉಪ ಯೋಗಿಸಬ್ಯಾಡ್ರಿ. ಇದು ಮಹಾ ವಿಷಯ. ನಾ ಇಲ್ಲಿ ಕೂತದ್ದು ಅರ್ಥ ಇದರ ಸಲುವಾಗಿ. ಸ್ವಾಮಿಗೋಳ ಎದುರಿಗೆ ಹೇಳಿ ಲಗ್ನ ಮಾಡಿಸಬೇಕಾ ದರ ಈ ಅರಾಜಕತೆ ವಿಷಯ ಎಲ್ಲಿ ಹೋಗಿತ್ತು ? ನಿಮ್ಮ ಯಜಮಾನರು ನಮಗ ಮೋಸಮಾಡಿದರು. ಈಗ ಅದರ ಫಲ ಉಣತಾರ. ನನಗ ಕಟ್ಟ ಅನಸೋದು ಆ ಹುಡುಗಿ ಸಲುವಾಗಿ; ವ್ಯರ್ಥ ನರಳತಾಳಲ್ಲಾ ಅಂತ."

ಸುಬ್ಬಣಾಚಾರ್ಯರು ದಂಗುಬಡೆದು ಕೂತರು. ಹಾಗಾದರೆ ಲಗ್ನದ ವೇಳೆಯಲ್ಲಿಯ ತಮ್ಮ ಹಂಚಿಕೆಯು ರಾಯರಿಗೆ ಗೊತ್ತಿದೆ !

"ಮಾಡೋದೇನು ? ವಿಧಿ ನಿಯಮ. ದೇವರು ಇದ್ದಾನ ಹೋಗರಿ. ನಾ ನೋಡಿಕೋತೇನಿ" ಎಂದು ಆಶ್ವಾಸನವಿತ್ತು ರಾಯರು ಆಚಾರ್ಯ ರನ್ನು ಬೀಳ್ಕೊಟ್ಟರು. ಅವರ ಗಂಭೀರವೃತ್ತಿಯನ್ನು ನೋಡಿ ನಾನಿಯು ತುಸು ದೂರ ಸರಿದು ನಿಂತಿದ್ದಳು. ಇಂಥ ನಿಮಿಷಗಳಲ್ಲಿ ರಾಯರನ್ನು ತಡವಿದರೆ ತನಗೇ ಕೆಡಕೆಂದು ನಾನಿಗೆ ಗೊತ್ತಿತ್ತು.

ತುಸು ಹೊತ್ತು ರಾಯರು ವಿಚಾರಮಗ್ನರಾಗಿ ಕುಳಿತು ಒಮ್ಮೆಲೆ

ಗಹಗಹಿಸಿ ನಕ್ಕರು. ಅವರ ನಗೆಗೆ ಸಾನಿಯು ಬೆಚ್ಚಿಬಿದ್ದಳು. ಸಾನಿಯು ಗಾಬರಿಯಾಗುವುದನ್ನು ಕಂಡು ರಾಯರು ಅವಳನ್ನು ಕೈಹಿಡಿದು ಕರೆದು ಕುಳ್ಳಿರಿಸಿ ಮನ್ನಿಸಿದರು.

"ಬೆದರಿದಿಯಾ, ರಂಗು ?"

"ನೀವು ನಕ್ಕಿದ್ದೇಕೆ ?" ಸಾನಿಯು ತುಸು ಧೈರ್ಯ ತಂದುಕೊಂಡು ತನ್ನ ಕೈಯಲ್ಲಿ ರಾಯರ ಬೆರಳನ್ನು ಸವರುತ್ತ ಕೇಳಿದಳು.

"ಛೀ ! ಹುಚ್ಚಿ ! ಬೆದರಲಿಕ್ಕೇನಾಯ್ತು ? ಎಣಿಕೆ ಹಾಕುತಿದ್ದೆ. ತನ್ನ ತಾ ಮರೆತಿರಲಿಕ್ಕೆ ಅಫು ತಿನ್ನುತ್ತಾನೆ ಮನುಷ್ಯ; ಸೆರೆ ಕುಡಿಯುತ್ತಾನೆ. ನೀನು ನನಗೆ ಸಿಕ್ಕಿಯೆಂದು ನೆನಪಾಯ್ತು. ನಕ್ಕುಬಿಟ್ಟೆ !"

"ಅರ್ಥವಾಗಲಿಲ್ಲ ನನಗೆ !" ಮೋಹಕವಾದ ಮಾತಿನ ಮಧುರ ರೀತಿಯಲ್ಲಿ ಅವಳು ಉತ್ತರಕೊಟ್ಟಳು.

"ಅದರರ್ಥ ನಿನಗೇತಕ್ಕೆ? ಅಫುವಿನ ಬೆಲೆ ಅಫುವಿಗೆ ತಿಳಿಯಬಹುದೆ?" ಎಂದು ನಗುತ್ತ ಉತ್ತರಕೊಟ್ಟು ರಾಯರು ಎದ್ದು ನಿಂತರು.

"ಹೋಗುವಿರಾ ?" ಎಂದು ಕಂಪಿತಸ್ವರದಲ್ಲಿ ಸಾನಿಯು ಕೇಳಿದಳು. ಅವಳ ಮೊಗದಲ್ಲಿ ದೈನ್ಯವು ಜೋಲಿಹೊಡೆಯುತ್ತಿತ್ತು.

ಅವಳ ಮನವನ್ನು ತಿಳಿದ ರಾಯರಿಗೆ ಕರುಣೆ ಬಂದಿತು. ತಬ್ಬಿಕೊಂಡು ಅವಳನ್ನು ಸಮಾಧಾನಗೊಳಿಸಿ, "ಆಚಾರರ ಮಾತು ಕೇಳಿಲ್ಲವೆ? ಮನೆಯಲ್ಲಿ ಮತ್ತೆ ದೆವ್ವಗಳ ಕುಣಿತ ನಡೆದದೆ. ಸರಿಮಾಡಿ ಬರುತ್ತೇನೆ ಇವತ್ತು" ಎಂದು ಅವರು ಹೊರಡಲನುವಾದರು. ಸಾನಿಯು ಅವರನ್ನು ಹೋಗಗೊಟ್ಟಳು.

ರಾಯರು ಮನೆಗೆ ಬರುವಷ್ಟರಲ್ಲಿ ಇನ್ನೊಂದು ಪ್ರವೇಶವು ನಡೆಯುತ್ತಿತ್ತು. "ಅವ್ವಾ !" ಎಂದು ಪದ್ಮಾವತಿಯು ನರಳುತ್ತಿದ್ದಳು. ಹಾಸಿಗೆಯ ಬಳಿಗೆ ನಿಂತ ಕೇಶವನು ಅವಳ ಕೈಯನ್ನು ಹಿಡಿದು ಎಳೆಯುವ ಪ್ರಯತ್ನದಲ್ಲಿದ್ದನು.

"ಛಲೋ ಹೇಣ್ತಿ ಸಿಕ್ಕಳಪಾ ನಿನಗ, ಕೇಶವಾ? ನಿನ್ನ ಹೇಣ್ತಿ ನನ್ನ ಗಂಡ........!" ಜಾನಕಿಬಾಯಿಯರು ಮಾತನಾಡುತ್ತಿದ್ದರು.

ಅಷ್ಟರಲ್ಲಿ ರಾಯರ ಪ್ರವೇಶವಾಗಿ ಎಲ್ಲವೂ ಸ್ತಬ್ಧವಾಯಿತು. ಆದರೆ

ಅವರು ಬಂದೊಡನೆ ಮೂಲೆಯಲ್ಲಿ ಗಾಬರಿಯಾಗಿ ನಿಂತ ಕುಸುಮೆಗೆ ಜೀವ ಬಂದಿತು. ಗಟ್ಟಿಯಾಗಿ ಅಳತೊಡಗಿದಳು.

ಬಂದೊಡನೆ ಗೋವಿಂದರಾಯರು ಕೇಶವನ ಕೈಹಿಡಿದು ಕೇಳಕಿದರು.

"ಯಾಕs?" ಮಗನ ಕಂಗಳಿಂದ ಬೆಂಕಿಯು ಸುರಿಯಿತು.

"ಎಚ್ಚರ. ಇದು ನನ್ನ ಮನೆ." ರಾಯರು ತೀಕ್ಷ್ಣವಾಗಿ, ತೀವ್ರವಾಗಿ ನುಡಿದರು.

"ಈಕೆ ನನ್ನ ಹೆಂಡತಿ." ಗಡಸುದನಿಯಲ್ಲಿ ಕೇಶವನು ಉತ್ತರ ಕೊಟ್ಟನು. ಅವನ ಕೈ ಮತ್ತೆ ಪದ್ಮಾವತಿಯ ಕಡೆಗೆ ಹರಿಯಿತು.

"ಆಕೆ ಅನಾಥೆಯಾದ ದುರ್ದೈವಿಯಾದ ಹೆಂಗಸು" ಗದ್ಗದಿತಕಂಠರಾಗಿ ರಾಯರು ಮಾತನಾಡಿದರು.

"ತನ್ನದು ನೋಡಿ ಮಂದೀದು. ಹಾದರಮಾಡೋ ಹಿರೇರಿಗೆ ಸಂಸಾರಮಾಡೋ ಹುಡುಗಂದ್ಯಾಕ ಕಿತಾಪತಿ?" ಕೇಶವನು ನಿಷ್ಠುರನಾಗಿ ನುಡಿದನು.

ರಾಯರಿಗೆ ಸಿಡಿಲು ಬಡಿದಂತಾಯಿತು. ದಿಕ್ಕು ತಪ್ಪಿ ಅಲೆಯುವವರಂತೆ ಅವರು ಮನೆ ತುಂಬ ತಿರುಗಹತ್ತಿದರು. ಕಡೆಗೊಮ್ಮೆ ಕೇಶವನೆದುರಿಗೆ ನಿಂತು "ಏ! ಕೇಶ್ಯಾ! ನಿನ್ನ ಹೆಂಡತಿ ಅಂಥಾ ಹೆಂಡತಿ ನನಗಿದ್ದರ!" ಎಂದು ದೊಡ್ಡ ದನಿ ತೆಗೆದು ಅಳಹತ್ತಿದರು.

ಪ್ರಕರಣ ೧೫

## ತೋಟದಲ್ಲಿಯ ಊಟ

ಒಂದು ಮಾತ್ರ ಸಾಧಿಸಿದಂತಾಗಿತ್ತು. ದೇಸಾಯರು ಪದ್ಮಾವತಿಯನ್ನು ಮರುದಿವಸ ತವರುಮನೆಗೆ ಕಳುಹಿದರು. ಅಲ್ಲಿ ಉಪಚಾರ ಹೊಂದಿ ಎಂಟು–ಹತ್ತು ದಿವಸಗಳಲ್ಲಿ ಪದ್ಮಾವತಿಯು ತನ್ನ ಪ್ರಕೃತಿ ಸ್ವಾಸ್ಥ್ಯವನ್ನು ಗಳಿಸಿದಳು. ಈ ಅವಧಿಯಲ್ಲಿ ನರಹರಿಯ ಸಹವಾಸದಿಂದ ಅವಳಿಗೆಷ್ಟೋ ಸಮಾಧಾನವಾಯಿತು. ಕೆಲವು ದಿವಸಗಳಾದವು. ಒಂದು ದಿನ ಇಳಿಹೊತ್ತಿನಲ್ಲಿ ನರಹರಿ – ಪದ್ಮಾವತಿಯರು ಮಾತನಾಡುತ್ತ ಕುಳಿತಿದ್ದರು. ಅಂದು ನರಹರಿಯ ಸಾಲೆಗೆ ಸೂಟಿಯಿತ್ತು. ಈಗ ಪದ್ಮಾವತಿಯ ಮೋರೆಯ ಮೇಲೆ ತುಸುವಾದರೂ ಉಲ್ಲಸದ ಕಳೆಯಿತ್ತು.

"ಇಂಗ್ಲಿಷದಲ್ಲಿ ಅಂಥ ಚೆನ್ನಾದ ಕಥೆಯ ಪುಸ್ತಕಗಳಿವೆಯೆ?" ಪದ್ಮಾವತಿಯು ಕೇಳಿದಳು. ಇವೆಯೆಂದು ಹೇಳಿ ನರಹರಿಯು Oliver Twist, The Little Dorrit ಮುಂತಾದಲ್ಲಿಯ ಹೃದಯಸ್ಪರ್ಶಿಯಾದ ಕಥಾನಕವನ್ನು ಬಣ್ಣಿಸಿ ಹೇಳಿದನು. ಪದ್ಮಾವತಿಗೆ ಕಣ್ಣೀರು ಬಂದಿತು. ಸಮಯವನ್ನರಿತು ಆ ಕಥೆಗಳನ್ನಷ್ಟಕ್ಕೆ ಬಿಟ್ಟು ತಾನು ಕಲಿಯುತ್ತಿದ್ದ 'ರಿಪ್ ವ್ಯಾನ್ ವಿಂಕಲ್ಲ'ನ ಕಥೆಯನ್ನು ಹೇಳಿ ನರಹರಿಯು ಅಕ್ಕನನ್ನು ತುಂಬ ನಗಿಸಿದನು.

ಇಷ್ಟರಲ್ಲಿ ಪದ್ಮಾವತಿಯು ಗಡಬಡಿಸಿ ಎದ್ದಳು. ಎದುರು ಮನೆಯಲ್ಲಿ ಜಾನಕಿಬಾಯರು ಮನೆ ಹಾರಿ ಬೀಳುವ ಹಾಗೆ ಆಳುಮಗನನ್ನು ಹೆಸರುಗೊಂಡು ಒದರುತ್ತಿದ್ದರು.

"ನಿಶ್ಚಿಂತವಾಗಿರು ಇಲ್ಲಿರುವ ತನಕ! ಇಲ್ಲಿಲ್ಲ ನಿಮ್ಮತ್ತೆಗೆ ಪ್ರವೇಶ!" ನರಹರಿಯು ನಗೆಯಾಟವಾಡಿದನು. ವಿಷಾದಪೂರ್ಣವಾದ ಒಂದು ಸುಳಿ ನಗೆಯು ಅವಳ ತುಟಿಗಳ ಮೇಲೆ ಗೆರೆಯೆಳೆದು ಹೋಯಿತು.

ತುಸು ಹೊತ್ತು ಇಬ್ಬರೂ ವಿಚಾರಮಗ್ನರಾದರು.

"ಅಕ್ಕಾ ಕೇಶವರಾಯರು ಹೀಗೇಕೆ ಮಾಡುತ್ತಾರೆ? ಮೇಲಿಂದ ಮೇಲೆ ಅವರು ಸಿಟ್ಟಾಗುವದೇಕೆ?" ನರಹರಿಯು ಪ್ರಶ್ನೆ ಮಾಡಿದನು.

"ಅದು ಅವರ ಸ್ವಭಾವ, ಮಗು." ಪದ್ಮಾವತಿಯು ಹೇಳಿದಳು. ಇನ್ನೇನು ಹೇಳಬಹುದು?

"ಅದನ್ನು ನೀನು ಸುಧಾರಿಸಲಾರೆಯಾ?"

"ಅವರೊಬ್ಬರಿದ್ದರೆ ಹಾಗೆ ಮಾಡಬಹುದಾಗಿತ್ತು."

"ಓಹೋ! ಆ ತಾಯಿ ಮೂಲಾದಳೆಂದೋ ನೀನೆನ್ನುವದು?"

ಪದ್ಮಾವತಿಯು ಸಮ್ಮನಿದ್ದಳು. ಕೆಲವು ನಿಮಿಷಗಳಾದ ಮೇಲೆ ನುಡಿದಳು ಪದ್ಮಾವತಿ. "ಯಾರೇನು ಮಾಡುವದು, ಮಗು? ನನಗೆ ಸಹನಶೀಲತೆಯನ್ನು ಕೊಡೆಂದು ದೇವರಲ್ಲಿ ಬೇಡಿಕೊಳ್ಳುವೆ. ನನ್ನ ನೋವು ನನ್ನೆದೆಯಲ್ಲಿ ಹಿಂಗಲೆಂದು ಪ್ರಾರ್ಥಿಸುವೆನು. 'ಗೋವಿಂದನ ದಯವೊಂದಿರಲಿ' ಎಂದು ಹಗಲಿರುಳು ಪಡಿನುಡಿಯುವೆನು! ತಾಯಿ ಕಲಿಸಿದ ಪಾಠವದು, ನರಹರಿ! ಅದನೆಂದಿಗೂ ಮರೆಯಲಾರೆ!" ನಡಗುವ ದನಿಯಲ್ಲಿ ಪದ್ಮಾವತಿಯು ನುಡಿದ ಮಾತುಗಳಿಗೆ ಈ ಸಲ ನರಹರಿಯು ಅಶ್ರುಬಿಂದುಗಳನ್ನುದುರಿಸಿದನು. ಅಕ್ಕನಿಗೆ ಕಾಣದಿರಲೆಂದು ಕಿಟಕಿಯೊಳಗಿಂದ ಇಣಿಕಿ ನೋಡುವಾಗ ಅವನಿಗೆ ಇನ್ನೊಂದು ದೃಶ್ಯವು ಕಣ್ಣಿಗೆ ಬಿದ್ದಿತು. ಹೊರಗೆ ಹೊರಡಲು ಸಿದ್ಧರಾಗಿ ಕೇಶವರಾಯರು ವಿಚಾರಮಗ್ನರಾಗಿ ತಮ್ಮ ಮನೆ ಬಾಗಿಲಲ್ಲಿ ನಿಂತಿದ್ದರು.

"ಕೇಶವರಾಯರು ಹೊರಗೆ ಹೊರಟಿದ್ದಾರೆ. ಕರೆಯಲೇ, ಪದ್ದಕ್ಕ?" ನರಹರಿಯು ಉತ್ಸುಕನಾಗಿ ನುಡಿದನು.

"ಬೇಡ, ಮಗು. ಏನೆನ್ನುವರೋ ಏನೊ!" ಪದ್ದಕ್ಕನು ಅಧೀರಳಾಗಿ ಹೇಳಿದಳು. "ಕರೆದೇ ಬಿಡುವೆನು ಈ ಸಲ ಅವರನ್ನು!" ಎಂದು ನರಹರಿಯು ಓಡಿದನು. ಹೋಗಿ ಕೇಶವರಾಯರ ಬಳಿಗೆ ನಿಂತು "ನಿಮ್ಮನ್ನು ಪದ್ದಕ್ಕ ಚಹ ಕುಡಿಯಲು ಬರಲು ಹೇಳಿದ್ದಾಳೆ" ಎಂದು ವಿನಯಪೂರ್ವಕವಾಗಿ ಹೇಳಿದನು.

ಕೇಶವರಾಯರಿಗೆ ಆನಂದವಾಯಿತು. ಅವರಿಗೆ ಗೊತ್ತಿಲ್ಲದೆ ಅವರ ಚಿತ್ತವು ಗಾಳಿಯಲ್ಲಿ ಗಿರಿಂಗಿರಿ ತಿರುಗಹತ್ತಿತು.

“ ನಿನ್ನ ಸಾಲೆಗೆ ಸೂಟಿಯೇನು ಇಂದು ? ”

“ ಹೌದು ” ಎಂದು ನರಹರಿಯು ಉತ್ತರ ಕೊಟ್ಟನು.

“ ಮನೆಯಲ್ಲಿ ಯಾರ್ಯಾರಿರುವರು ? ” ಕೇಶವರಾಯರು ಕುತೂಹಲ ದಿಂದ ಪ್ರಶ್ನೆ ಮಾಡಿದರು.

“ ಎಲ್ಲರೂ ಹೊರಗೆ ಹೋಗಿದ್ದಾರೆ. ನಾನು, ಪದ್ದಕ್ಕ ಇಬ್ಬರೆ. ”

“ ನಡೆ ಹಾಗಾದರೆ ! ” ಎಂದು ಕೇಶವರಾಯರು ನರಹರಿಯನ್ನು ಹಿಂಬಾಲಿಸಿದರು.

ಪದ್ದಕ್ಕನಿಗೆ ನಿಜವಾಗಿ ಸಂತೋಷವಾಯಿತು. ಕಡೆಗಣ್ಣಿನಿಂದ ಕೇಶವ ನನ್ನು ನೋಡುತ್ತ ಒಳಕ್ಕೆ ಹೋದಳು. ನರಹರಿಯು ಕೇಶವರಾಯರನ್ನು ನಡುಮನೆಯಲ್ಲಿ ಮನ್ನಿಸಿ ಕುಳ್ಳಿರಿಸಿ ಅಕ್ಕನೆಡೆಗೆ ಧಾವಿಸಿದನು. ಅಲ್ಲಿ ಅಡಿಗೆ ಮನೆಯಲ್ಲೇನಿದೆ? ಪದ್ಮಾವತಿಯು ನಾಚಿಗೊಂಡು ನಿಂತಿದ್ದಾಳೆ. ಮುಚ್ಚಳ ತೆರೆದ ಒಂದೆರಡು ಡಬ್ಬಿಗಳು ನೆಲದ ಮೇಲೆ ಬಿದ್ದಿದ್ದವು. ಒಂದ ರಲ್ಲಿ ಸಕ್ಕರೆಯು ತೀರುತ್ತ ಬಂದಿತ್ತು. ಇನ್ನೊಂದರಲ್ಲಿ ಚಹದ ಪುಡಿಯೇ ಇರಲಿಲ್ಲ. ಮನೆಗೆ ಬಂದ ‘ ಕಾಮದಾರರಿ ’ಗೆಂದು ಹೈಗ್ರೀವಾಚಾರ್ಯರು ಒಂದು ಲಿಪ್ಟನ್ ಡಬ್ಬಿಯನ್ನು ತಂದಿಟ್ಟಿದ್ದರು. ವರ್ಷಾನುಗಟ್ಟಲೆ ಅಕ್ಷಯ್ಯ ವಾಗಿ ಪೂರೈಸುತ್ತ ಬಂದಿದ್ದ ಆ ಡಬ್ಬಿಯಲ್ಲಿಯ ಪುಡಿಯು ಇಂದೇ ತೀರಿ ಹೋಗಬೇಕೆ ? ಅಕ್ಕನನ್ನು ಸಮಾಧಾನಪಡಿಸಿ ಚಹವನ್ನು ತರಲೆಂದು ನರ ಹರಿಯು ಉಡಪಿ ಸುಬ್ಬಯ್ಯನ ಅಂಗಡಿಗೆ ಓಡಿದನು.

ಲೋಡಿಗೆ ಆನಿತುಕೊಂಡು ಹೊರಗೆ ಕೇಶವನು ಒಬ್ಬನೇ ಕುಳಿತನು. ತುಸು ಹೊತ್ತು ತಿರುಗಾಡಿ ಗೋಡೆಯ ಮೇಲಿನ ಚಿತ್ರಪಟಗಳನ್ನು ನೋಡಿದನು. ತೊಲೆಯಂಥ ಕಾಲುಗಳಿದ್ದ ಮಾರುತಿ, ರಾಕ್ಷಸನಂತೆ ಕಾಣುವ ನರಸಿಂಹ, ನೆರೆಗುಡಕನಂತೆ ಕಾಣುವ ರುದ್ರ, ಭಾಮೆಯರನ್ನೆಲ್ಲ ಹಿಂದೆ ನೆರೆಸಿ, ಆಕಳನ್ನು ಮುಂದು ಮಾಡಿ ಕೊಳಲೂದಿ ದನಗಾಹಿಯಂತೆ ಕಾಣುವ ಕೃಷ್ಣ, ಇವೆಲ್ಲ ಚಿತ್ರವಿಚಿತ್ರಗಳನ್ನು ನೋಡಿ “ ಅಹಾ ! ಸುಂದರ ಚಿತ್ರಗಳಿವು ! ” ಎಂದು ಶ್ಲಾಘಿಸಿದನು. ಒಂದು ಮಾಡದಲ್ಲಿ ಪ್ರಶಸ್ತವಾಗಿ ಕುಳಿತ ಗಣಪತಿಯು

ಮೂರ್ತಿಯನ್ನು ನೋಡಿ ಮರುಳಾದನು. ಕೆಲವು ನಿಮಿಷ ಮನೆಯ ತೊಲೆಗಳನ್ನು ನಿಟ್ಟಿಸಿದನು, ಎಣಿಸಿದನು. ಪದ್ಮಾವತಿಯು ಹೊರಗೆ ಬರಲೊಲ್ಲಳೇಕೆಂದು ದಾರಿನೋಡಿದನು. ಅಕ್ಕ-ತಮ್ಮಂದಿರು ಸೇರಿ ಏನು ಮಾಡುತ್ತಿರಬಹುದೆಂದು ಎಣಿಕೆ ಹಾಕಿದನು. ಇತ್ತ ಪದ್ಮಾವತಿಯು ಅಡಿಗೆ ಮನೆಬಿಟ್ಟು ಮಾತನಾಡಿಸಲು ಬಂದರೆ ಗಂಡನಿಗೆ ಸರಿಹೋಗಬಹುದೇನೆಂದು ಯೋಚನಾಪರಳಾಗಿ ಕೆಲವು ಕಾಲವನ್ನು ಕಳೆದಳು. ಇನ್ನು ಮೇಲೆ ಮಾತನಾಡಿಸಬೇಕೆಂದು ಧೈರ್ಯಮಾಡಿಕೊಂಡು ಹೋಗುವಷ್ಟರಲ್ಲಿ ನರಹರಿಯೇ ಬಂದನು.

ನಡುಮನೆಯಲ್ಲಿ ಮಾತನಾಡುತ್ತ ಕುಳಿತ ನರಹರಿ-ಕೇಶವರೆದುರಿಗೆ ಉಂಡಿ—ಅವಲಕ್ಕಿಗಳಿದ್ದ ತಾಟನ್ನಿಟ್ಟು ಮತ್ತೊಮ್ಮೆ ಪದ್ಮಾವತಿಯು ಚಹವನ್ನು ತಂದಳು. ಎರಡು ಕಪ್ಪು-ಬಸಿಗಳನ್ನಿಟ್ಟು ಇನ್ನು ಹೋಗುವವಳು; ಅಷ್ಟರಲ್ಲಿ ಕೇಶವನು ಒಂದು ನಗೆಮೊಗದ ದರ್ಪದಿಂದ ಮಾತನಾಡಿದನು.

" ಮನೆಗೆ ಬರುವದು ಯಾವಾಗ ? "

" ಅಪ್ಪ ಇವತ್ತು-ನಾಳೆ ಕಳಿಸುತ್ತೇನೆಂದು ಹೇಳಿದ್ದಾನೆ. " ಪದ್ಮಾವತಿಯು ಬೆದರುತ್ತ ಹೇಳಿದಳು.

ಕೇಶವನು ಇನ್ನೇನೋ ಹೇಳಬೇಕೆಂದಿದ್ದನು. ಅಷ್ಟರಲ್ಲಿ " ಪದ್ದಕ್ಕ! ಪದ್ದಕ್ಕ ! " ಎಂದು ಕುಸುಮೆಯು ಓಡುತ್ತ ಬಂದಳು. ನಡುಮನೆಯಲ್ಲಿ ಕೇಶವನು ನರಹರಿಯೊಡನೆ ಕುಳಿತದ್ದನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು. " ಅಯ್ಯ! ಕೇಶಣ್ಣಾ ಇಲ್ಲಿದ್ದಾನ! " ಎಂದು ಬೆರಗುಬಟ್ಟು ಬಾಗಿಲಲ್ಲಿಯೇ ನಿಂತುಕೊಂಡಳು.

" ಒಳಗ ಬರ್ರಿ. " ಪದ್ಮಾವತಿಯು ಕುಸುಮೆಯನ್ನು ಪ್ರೀತಿಯಿಂದ ಕರೆದಳು. ಕುಸುಮೆಯು ಕುಣಿಯುತ್ತ ಬಂದಳೆಂದರೆ ಅವಳನ್ನು ನೋಡಿದವರ ಕಣ್ಣಿಗೆ ಹಬ್ಬವಾಗುತ್ತಿತ್ತು.

" ಆ ಕ್ಷೀರಸಾಗರ-
ದಾನಂದದಾಗರ
ತೆರಿ ತೆರಿ ತೆರದರ........" ಆನಂದದಾಗರದ ಒಂದು ತೆರೆಯಂತೆ ಅವಳು ಬರುತ್ತಿದ್ದಳು. ಮೊಗದ ಮೇಲಿನ ನಗೆಯೇ ಆ ತೆರೆಯ

ಸೊರೆ. ಆವಳನ್ನು ನೋಡಿ ನರಹರಿಯ ಮನಸ್ಸು ಸುಪ್ರಸನ್ನವಾಯಿತು. "ಏನು ಕಾರಣ ಓಡಿ ಬಂದೆ ಕುಸುಮಾ!" ಎಂದು ಮೆಲುನಗೆ ನಗುತ್ತ ಕೇಳಿದನು.

"ಪದ್ಮಕ್ಕ! ಜೋಯಿಸರ ಓಣಿಯವರೆಲ್ಲಾರು ಪಂತಿ ಮಾಡಲಿಕ್ಕೆ ಹೋಗತಾರಂತ! ನಾವು ಹೋಗೋಣೇನು?" ಎಂದು ಕುಸುಮೆಯು ತನ್ನ ಮನದ ಮಾತನ್ನು ಹೇಳಿದಳು. ಎಂಥ ಕಠಿಣವಾದ ಪ್ರಶ್ನೆಯನ್ನು ಕೇಳಿದೆನೆಂಬುದರ ಅರಿವು ಆವಳಿಗಿರಲಿಲ್ಲ.

ಕ್ಷಣಹೊತ್ತು ಎಲ್ಲವೂ ಸ್ತಬ್ಧವಾಗಿತ್ತು.

"ಕೇಶವರಾವ್, ನಾಳೆ ತೋಟಕ್ಕ ಊಟಕ್ಕ ಹೋಗೋಣೇನು?" ನರಹರಿಯು ಆಕಸ್ಮಾತ್ತಾಗಿ ಕೇಳಿದನು.

ಕೇಶವರಾಯನಿಗೆ ತಡವರಿಸಿದಂತಾಯಿತು. "ಯಾರು ಯಾರು ಹೋಗಬೇಕು?" ಎಂದನು.

"ನೀವು, ಪದ್ಮಕ್ಕ, ಕುಸುಮಾ, ನಾನು,– ನಾಲ್ಕೇ ಮಂದಿ ಹೋಗ ಬಹುದಲ್ಲ?" ಚಾಣಾಕ್ಷನಾದ ನರಹರಿಯು ಉತ್ತರ ಕೊಟ್ಟನು.

"ನಾನೇನು ಪಂತಿಗಂತ ಬರೋದಿಲ್ಲ. ನೀವು ಹೋಗರಿ. ಸಂಜಿ ಕಡೆ ಅತ್ತಲಾಗ ತಿರುಗಾಡಕೋತ ಬಂದರ ಬರತೇನಿ" ಕೇಶವನು ಹೇಳಿ ದನು.

"ಏನು ಮಾಡತೀರಿ ಬಿಡ್ರಿ!" ಪದ್ಮಾವತಿಯು ಕುಸುಮೆಯನ್ನು ದ್ವೇಶಿಸಿ ನುಡಿದಳು. ಕೇಶವನ ಮನಸ್ಸಿನಲ್ಲಿ ಯಾರೂ ಹೋಗುವದಿಲ್ಲವೆಂದು ಆವಳಿಗೆನಿಸಿತು.

"ಏ! ಹಂಗಲ್ಲ! ನೀವು ಹೋಗ್ರಿ! ನಾ ಅತ್ತಲಾಗ ತಿರುಗಾಡ–ಕೋತ ಬಂದರ ಬರತೇನಿ!" ಕೇಶವನು ಒತ್ತಿ ಹೇಳಿದನು. ತನ್ನ ತಾಯಿಗೆ ತಿಳಿಯಬಾರದೆಂದು ಅವನು ಈ ಆಟವನ್ನು ಹೂಡಿದ್ದನು.

ಅಂತೂ ಇಷ್ಟೆಲ್ಲ ಮಾತು-ಕಥೆಯಾಗಿ ತೋಟದಲ್ಲಿ ಪಂತಿ ಮಾಡು ವದು ನಿಶ್ಚಿತವಾಯಿತು. ನರಹರಿಯೇ ಆದರ ಕಾರ್ಯಭಾರವನ್ನುಹೊತ್ತನು.

ನಡೆದದ್ದನ್ನೆಲ್ಲ ತಂದೆ–ತಾಯಿಗೆ ಹೇಳಿ ಅವರ ಅಪ್ಪಣೆ ಸಿಗುವಂತೆ ಏರ್ಪಾಡು ಮಾಡಿದನು.

ಮರುದಿವಸ ಇಳಿಹೊತ್ತಿನಲ್ಲಿ ಪಂತಿಯ ಪಂಗಡವು ಹೈಗ್ರೀವಾಚಾರ್ಯರ ತೋಟದೆಡೆಗೆ ನಡೆಯಿತು. ಚಪಾತಿ, ಪಲ್ಯ, ಚಟ್ನಿ, ಬುರಬೂರಿ, ಚಕ್ಕುಲಿ, ಪಾಯಸದ ಗಂಟು ಪದ್ಮಾವತಿಯ ಕೈಯಲ್ಲಿದ್ದಿತು. ತಿಪ್ಪನು ಇಂಥ ಸುಸಂಧಿಯನ್ನು ಕಳೆದುಕೊಳ್ಳುವನೆ? ಅವನು ಬುತ್ತಿಯ ಗಂಟನ್ನು ಹೊತ್ತಿದ್ದನು. ತಂಬಿಗೆ–ವಾಟಿಗಳು ಸರಹರಿಯ ಕೈಯಲ್ಲಿದ್ದವು. ಸರಹರಿಯು ತನ್ನೊಡನೆ ಕರೆದುಕೊಂಡು ಒಂದ ಶೀನು ಕಿಸೆಯಲ್ಲಿ ಅಡಕೆ–ಸುಣ್ಣದ ಪಟ್ಟಿಗಳನ್ನಿರಿಸಿದ್ದನು. ಹಿಂದಿನಿಂದ ಕುಸುಮಾ ಕೈಬೀಸುತ್ತ ನಲಿದು ಕೆಲೆಸು ಪದ್ಮಾವತಿಯೊಡನೆ ಮಾತನಾಡುತ್ತ ಸಾಗಿದ್ದಳು.

ಅನೇಕ ತೋಟಗಳನ್ನು ದಾಟಿ ನೀಳುದಾರಿಯಿಂದ ಅವರಿಗೆ ನಡೆಯ ಬೇಕಾಗಿ ಬಂತು. ಎಡಬಲಕ್ಕೆ ತೋಟಗಳ ಸಾಲುಗಳು, ವೀಳ್ಯದೆಲೆಯ ಬಳ್ಳಿಯನ್ನು ಬೆಳೆಸಲು ಹಚ್ಚಿದ ನುಗ್ಗಿ ಮರದ ಸಾಲುಗಳು. ನೀಳುದಾರಿಯನ್ನು ತುಳಿಯುತ್ತ ಬಂದು ಈ ಪಂತಿಯ ಮೇಳವು ಮೊಗ್ಗಾವಿಯನ್ನು ಹಿಂದೆ ಬಿಟ್ಟಿತು; ಸೂರ್ಯನನ್ನು ಹಿಂದೆ ಬಿಟ್ಟಿತು. ಅಪ್ಪಿ ತಪ್ಪಿ ಒಳಗೆ ಸೇರಿದ ಸೂರ್ಯಕಿರಣಗಳು ಇಲ್ಲಿ ದಿಕ್ಕು ತಪ್ಪಿ ಅಲೆಯುತ್ತಿದ್ದವು. ನೀಳವಾಗಿ ಬೆಳೆದ ತೆಂಗಿನ ಮರಗಳ ತುದಿಯ ಮೇಲೆ ಮಾತ್ರ ಪ್ರಶಾಂತವಾದ ಸೂರ್ಯಪ್ರಕಾಶವನ್ನು ನೋಡಬಹುದಾಗಿತ್ತು. ಒಳಗೆಲ್ಲ ಹಚ್ಚ ಹಸಿರು. ಇದೊಂದು ಬೇರೆ ಜಗತ್ತನ್ನೇ ಹೊಕ್ಕಂತೆ ಪದ್ಮಾವತಿಗೆನಿಸಿತು. ಎಡಬಲದಲ್ಲಿಯೂ ಸುವ್ವಿಗೆಯ್ಯುವ ಕೋಗಿಲೆಗಳ ಸ್ವರವು ಕೇಳುತ್ತಿತ್ತು. ಮಾವಿನ ಮರಗಳು ತೋರಣವನ್ನು ಕೋದಿದ್ದವು. ಎಲೆಬಳ್ಳಿಗಳು ಓರಣಗಾತಿಯರಂತೆ ಧೋರಣದಿಂದ ನಿಂತಿದ್ದವು. ನಡುನಡುವೆ ಕೆಲಸಗಾರರ ಕೂಗು. ದಿನವೂ ಇಲ್ಲಿ ಬಂದರೆ ಶಾಂತಿಪಾಠವನ್ನು ಕಲಿತು ಹೋಗಬಹುದಲ್ಲ! ಎಂದು ಪದ್ಮಾವತಿಯು ಮನದಲ್ಲಿ ಮರುಗಿದಳು.

ಎಲ್ಲರೂ ಹೈಗ್ರೀವಾಚಾರ್ಯರ ತೋಟವನ್ನು ಹೊಕ್ಕರು. ತೋಟಿಗನಾದ ಚೆನ್ನಪ್ಪನು ಇನ್ನೂ ಕಪ್ಪಲಿಯನ್ನು ಹೊಡೆಯುತ್ತಿದ್ದ. ಎತ್ತುಗಳು

ತಿರುಗುಪ್ಪೆಂದು ಹೊರಳಿದೊಡನೆ ಕಿರ್ರೆಂದು ಸುರುವಾದ ಸಪ್ಪಳವು ಕಪ್ಪಲಿ ಮನೆಯಲ್ಲಿ ನೀರು ಭೋರ್ರೆಂದು ಬೀಳುವತನಕ ನಡೆದೇ ಇತ್ತು. ಬೀಳುವಾಗ ನೀರು ಹಾಲಾಡದಂತೆ ಬುರುಗು ಬುರುಗಾಗಿ ಬೀಳುತ್ತಿತ್ತು.

" ನಡುಮೆಟ್ಟಲಿನ ವರೆಗೆ ನೀರು ಏರಿವೆ ನೋಡು, ಅಕ್ಕ! ಮೊನ್ನೆ ನಾನು ಬಂದಾಗ ಎರಡು ಪಾವಟಣಿಗೆ ಕೆಳಗಿದ್ದವು " ನರಹರಿಯು ಹರ್ಷ-ಭರಿತನಾಗಿ ಹೇಳಿದನು. ದಿನಾಲು ಅವನು ಶೀನುನೊಡನೆ ತೋಟದ ಬಾವಿಗೆ ಸ್ನಾನಕ್ಕೆಂದು ಬರುತ್ತಿದ್ದ.

ಮುಂದೆ ಜೋರಾಗಿ ನೀರು ಹರಿದು ಹೋಗುತ್ತಿದ್ದ ಕಾಲುವೆಯಲ್ಲಿ ಕೈಕಾಲು ತೊಳೆದುಕೊಂಡು ಎಲ್ಲರು ಗುಡಿಸಲನೆಡೆಗೆ ಬಂದು ತಾವು ತಂದಿದ್ದ ಸಾಮಾನುಗಳನ್ನು ಅಲ್ಲಿ ಹಾಸಿದ ಹುಲ್ಲಿನ ಮೇಲಿರಿಸಿದರು. ಗುಡಿಸಿಲದ ಮುಂದೆಲ್ಲ ಅಂಟಿಸಿದ ಗುಲಾಬಿಗಿಡಗಳು ಮೈತುಂಬ ಹೂಬಿಟ್ಟು ಗಾಳಿಗೆ ತಲೆಯನ್ನು ತೂಗಾಡುತ್ತ ನಿಂತಿದ್ದವು. ಹತ್ತಿರವಿದ್ದ ಮಾವಿನ ಮರಗಳನ್ನು ಸುತ್ತಿದ ಮಲ್ಲಿಗೆಬಳ್ಳಿಗಳ ಕುಡಿಗಳು ಮುಂದೆ ಬಾಗಿ ಗುಡಿಸಲದ ಚಪ್ಪರದಲ್ಲಿ ಹಾಸುಹೊಕ್ಕಾಗಿ ಬೆಳೆದಿದ್ದವು. ಅತ್ತ ಸೇವಂತಿಗೆಗಳು ತಮ್ಮ ಸುವಾ-ಸನೆಯಿಂದ ಔತಣಕೊಡುತ್ತಿದ್ದವು. ಎಲೆಮನೆಯಂತೆ ಕಂಗೊಳಿಸುವ ಆ ಗುಡಿಸಲವು ಎಲ್ಲರ ನುನವನ್ನು ಸೆಳೆದಿದ್ದರೆ ಏನಾಶ್ಚರ್ಯ?

ಪದ್ಮಾವತಿ - ಕುಸುಮೆಯರು ಹೊರಗೆ ಬಂದು ನೋಡಿದರು. ತಲೆಯೆತ್ತಿ ನೋಡಿದರೂ ಮುಗಿಯದಂತೆ ಮುಗಿಲಲ್ಲಿ ಸಾಗಿದ ತೆಂಗಿನ ಮರಗಳು ತುದಿಯಲ್ಲಿ ಪಚ್ಚೆಯಂತಹ ಎಳೆದೆಂಗುಗಳ ಆಭರಣಗಳನ್ನು ಇಟ್ಟುಕೊಂಡಿದ್ದವು ಇಳೆಯಲ್ಲಿರುವ ಅಮೃತವನ್ನು ಎತ್ತಿ ಮುಗಿಲುನಾಡಿನಲ್ಲಿರುವ ಸುರರಿಗೆ ತೋರಿಸುವ ಸುದತಿಯರಂತೆ, — ಮುಂತಾಗಿ ಯಾವ ಕವಿಯೋ ಹೇಳಿರುವನಲ್ಲ! ಆ ಅನುಭವವು ಬಂದಿತು ಅವರಿಗೆ. ಅಷ್ಟರಲ್ಲಿ ನರಹರಿಯು ತೋಟದಾಳನ್ನು ಕರೆದುಕೊಂಡು ಬಂದು ಎಂಟು — ಹತ್ತು ತೆಂಗಿನಕಾಯಿಗಳನ್ನಿಳಿಸಿ ಕೆತ್ತಿಸಿ ತಂದನು. ಎಲ್ಲರೂ ತೆಂಗಿನೆಳೆನೀರನ್ನು ಕುಡಿದು ಎಳೆಯದಾದ ಕೊಬ್ಬರಿಯನ್ನು ತಿಂದು ತೇಗಿದರು.

ಮುಂದೆ ತೋಟದಲ್ಲಿ ತಿರುಗಾಡಲೆಂದು ಎಲ್ಲರೂ ಹೊರಟು ಬಡ್ಡಿಯಿಂದ

ತ-ದಿವಸರೆಗೆ ಹಣ್ಣು ಬಿಟ್ಟು ನಿಂತಿದ್ದ ಹಲಸಿನ ಮರವನ್ನು ನೋಡಿ ಪಂತಿಗಿಂತ ಮೊದಲು ಇದರ ತೊಳೆಗಳನ್ನು ರುಚಿ ನೋಡಬೇಕೆಂದು ನಿಶ್ಚಯಿಸಿದರು. ಆ ಬಳಿಕ ಎಲೆಬಳ್ಳಿಗಳ ನಡುವೆ ಹಾಯ್ದಾಡಿ ಬರುತ್ತಿರುವಾಗ ಬಯಲು ಪ್ರದೇಶವೊಂದು ಕಾಣಿಸಿತು. "ನರಹರಿ! ಇದೇನು? ಹಾಳೇಕೆ ಬಿದ್ದಿದೆ?" ಎಂದು ಕುಸುಮೆಯು ಪ್ರಶ್ನೆಮಾಡಿದಳು. "ಛೀ! ಇದು ಹಾಳೆಂದು ತಿಳಿದೆಯಾ! ಈಗಿರುವ ಎಲೆಬಳ್ಳಿಗಳು ಒಣಗಿ ಹೋದ ಮೇಲೆ ಇಲ್ಲಿ ಸಾಗು ಮಾಡುತ್ತಾರೆ" ಎಂದು ನರಹರಿಯು ನಗುತ್ತ ಹೇಳಿದನು.

ಅಷ್ಟರಲ್ಲಿ ಪದ್ಮಾವತಿಯು ಎಳೆಯ ವೀಳ್ಯದೆಲೆಗಳನ್ನು ಉಗುರಿನಿಂದ ಚಿವುಟಿ ಹರಿಯುತ್ತಿದ್ದುದನ್ನು ನೋಡಿ ಅವರನ್ನು ಹಿಂಬಾಲಿಸಿ ಬಂದ ಚೆನ್ನಪ್ಪನು "ಹಾಗಲ್ಲ, ತಾಯಿ. ಈ ಚಿಮುಟಿಗಿ ಹಾಕಬೇಕು ಹೆಬ್ಬೊಟ್ಟಿಗೆ" ಎಂದು ಒಂದು ಕಬ್ಬಿಣದ ಚಿಮುಟಿಗಿಯನ್ನು ಕೊಟ್ಟನು.

"ಇಲ್ಲದೇ ಇದ್ದರ ಏನಾಗತದ, ಚೆನ್ನಪ್ಪಾ?" ಪದ್ಮಾವತಿಯು ನಗುತ್ತ ಕೇಳಿದಳು. "ಬಳ್ಳಿ ಕಮರಿ ಹೊಕ್ಕಾವ, ತಾಯಿ" ಚೆನ್ನಪ್ಪನು ಹೇಳಿದನು.

ಇಷ್ಟರಲ್ಲಿ ಬಾವಿಯ ಹತ್ತಿರ ಹಣ್ಣಾಗಲು ಬಂದ ಬಾಳೆಯ ಗೊನೆಗಳನ್ನು ಪರೀಕ್ಷಿಸುತ್ತ ನಿಂತಿದ್ದ ತಿಪ್ಪನು ಓಡಿ ಬಂದು "ಕೇಶವರಾಯರು ಬಂದಾರ, ಪದ್ದಕ್ಕ! ಅವರ ಸಂಗತೀಲೆ ಭೀಮರಾಯರೂ ಇದ್ದಾರ!" ಎಂದು ಗಡಬಡಿಸಿ ಸುದ್ದಿ ಬೀರಿದನು.

"ಎಲ್ಲಿದ್ದಾರೋ ತಿಪ್ಪ? ಯಾವಾಗ ಬಂದರು?" ಗಾಬರಿಯಾಗಿ ನರಹರಿಯು ಕೇಳಿದನು. ತೋಟವನ್ನು ಕಂಡು ಹಿಗ್ಗುವ ಸಂಭ್ರಮದಲ್ಲಿ ಅವರು ಬರುವದನ್ನೇ ಅವನು ಮರೆತಿದ್ದನು.

"ಇಲ್ಲಿ ನೋಡು ಚೆನ್ನಪ್ಪ!" ಹೋಗುವ ಗಡಿಬಿಡಿಯಲ್ಲಿದ್ದ ನರಹರಿಯು ಮತ್ತೆ ನಿಂತು ಹೇಳಿದನು.

"ಹೂನರಿ ರಾಯರ!"

"ಬಂದಿಪ್ಪತ್ತು ಬಾಳೀ ಎಲಿ ಹರದು ಕಳಸು. ಕೂಡಲಿಕ್ಕೆ ಹಾಕೋವು ಸಾದಾ ಇರವಲ್ಲವ್ಯಾಕ. ಉಣಲಿಕ್ಕೆ ಹಾಕೋವು ಮಾತ್ರ ಕುಡಿಬಾಳಿ ಇರಬೇಕು ನೋಡು."

"ಹೂನರಿ! ಮತ್ತ ಲಿಂಬಿಹಣ್ಣು ಬೇಕೋ ಬ್ಯಾಡೊ?"

"ಹೂಂ! ಹರಿ ಒಂದು ಹತ್ತು ಲಿಂಬಿ ಹಣ್ಣು! ಹಣ್ಣು ಆಗಿದ್ದವು ನೋಡಿ ಹರಿ. ಡ್ಯಾರಿಗಾಯಿ ಇದ್ದರೂ ಅಡ್ಡಿಯಿಲ್ಲ."

"ಬರಿ ಹಣ್ಣು ಅದಾವ ತೊಗೋಳ್ರಿ, ರಾಯರ! ನಮ್ಮ ತ್ವಾಟದಾಗ ಸಂಥಾ ನಿಂಬಿ ಹಣ್ಣು ಇಡೀ ಊರಾಗ ಸಿಗಾಕಿಲ್ಲ!"

"ಮತ್ತ ಮೊನ್ನೆ ಒಂದು ಬಾಳೀ ಗೊನಿ ಇಟ್ಟಿದ್ದೆಲ್ಲಾ ಹುಲ್ಲಾಗ ಹಾಕಿ? ಆಗೇದೇನು ಹಣ್ಣು?"

"ಆಗೈತರಿ, ಮುನ್ಯಾಗ ಆಚಾರಸ್ವಾಮೇರಿಗೆ ಕೊಡಬೇಕಂತ ಮಾಡಿದೇ... ...." ಚೆನ್ನಪ್ಪನು ನರಹರಿಯ ಮೋರೆಯನ್ನು ನೋಡಿದನು.

"ಇಲ್ಲಿ ಕೊಡು ನಮಗ; ನಾವೇನು, ಆಚಾರಸ್ವಾಮೇರೇನು?"

"ಹೂನರಿ"

"ಇಕಾ! ನೋಡು ಮತ್ತ! ಒಂದೆರಡು ಹಲಸಿನ ಹಣ್ಣು ಬಿಚ್ಚಿಸಿ ಇಟ್ಟಿರು. ಈ ಗಿಡದ ಬುಡಕ ಕಸಾ ಹೊಡಸು. ಶೀನು, ಇದನೆಲ್ಲ ನೋಡುತಿರಲಾ; ಈಗ ಬಂದೆ!" ಎಂದು ನರಹರಿಯು ಕೇಶವರಾಯರಿದ್ದ ಕಡೆಗೆ ಓಡಿದನು.

ತುಸು ಹೊತ್ತಿನಲ್ಲಿಯೇ ದೊಡ್ಡ ಮಾವಿನ ಮರದ ಕೆಳಗಿನ ನೆಲವು ಸ್ವಚ್ಛವಾಯಿತು. ಪದ್ಮಾವತಿಯು ಸಾಲುಸಾಲಾಗಿ ಎಲೆಗಳನ್ನಿಟ್ಟು ಬಡಿಸತೊಡಗಿದಳು.ತಿಪ್ಪನು ಓಡಿ ಹೋಗಿ ಗುಡಿಸಲದಲ್ಲಿಟ್ಟಿದ್ದ ಗಂಟು-ಗದಡಿಗಳನ್ನು ತೊಗೊಂಡು ಬಂದನು. ಕುಸುಮೆಯು ಅರಳಲಿರುವ ಮಲ್ಲಿಗೆ ಮೊಗ್ಗೆಗಳನ್ನು ಹರಿದು ಮಾಲೆ ಕಟ್ಟುತಿದ್ದಳು.

ಬಳಿಗೆ ನಿಂತು ಇದನ್ನೆಲ್ಲ ನೋಡುತ್ತಿದ್ದ ಶೀನು ಒಂದು ಗುಲಾಬಿ ಹೂವನ್ನು ಹರಿದು ತಂದು "ಇದು ಬೇಕೇ ನಿನಗೆ, ಕುಸುಮಾ?" ಎಂದು ಕೇಳಿದನು.

ಇದೇ ಪ್ರಶ್ನೆಯನ್ನು ತಿಪ್ಪನು ಕೇಳಿದ್ದರೆ ಕುಸುಮಾನ ಉತ್ತರವು ಸಿದ್ಧವಾಗಿರುತ್ತಿತ್ತು. "ಅಯ್ಯ! ನನಗೆ ಹರೀಲಿಕ್ಕೆ ಕೈಯಿಲ್ಲಂತ ತಿಳೀತೇನ

ಈ ಕಪಿ ?'' ಆದರೆ ಈಗ ಕುಸುಮಾ ನಾಚಿಕೊಂಡು ಸುಮ್ಮನಿದ್ದಳು. " ತಲೆಯಲ್ಲಿರಿಸಿಕೊ ಇದನ್ನು '' ಎಂದು ಶೀನು ಕೈ ಮುಂದೆ ಚಾಚಿದನು. ಜೀವದಲ್ಲಿ ಜೀವವಿಲ್ಲದೆ ಕುಸುಮೆಯು ಮುಂದೆ ಕೈಯೊಡ್ಡಿದಳು. ಹೂವನ್ನು ಕೊಡುವಾಗ ಕುಸುಮಾನ ಕೈಗೆ ಶೀನೂನ ಕೈ ಮೆಲ್ಲನೆ ಸೋಂಕಿತು. ಶೀನು ಅಧೀರನಾಗಿ ಅಲ್ಲಿಯೇ ನಿಂತನು. ಕುಸುಮಾ ನಾಚಿಕೊಂಡು ಪದ್ಮಾವತಿಯ ಬಳಿಗೆ ಹೋದಳು.

ಇಷ್ಟರಲ್ಲಿ ' ಧುಡುಂ ' ಎಂಬ ಸಪ್ಪಳವು ಕೇಳಿಸಿತು. " ಅಯ್ಯಯಪ್ಪರಿಗೆ ! ಯಾರೋ ಗಡೇದ ಮ್ಯಾಲಿಂದ ಹಾರತಾರ ! '' ಎಂದವನೇ ತಿಪ್ಪನು ಓಡಿ ಹೋದನು. " ಏ ಕೊಪ್ಪರಿಗೆ ! ನಿಲ್ಲು '' ಎಂದು ಶೀನು ಅವನನ್ನು ಹಿಂಬಾಲಿಸಿದನು.

ಇತ್ತ ಪದ್ಮಾವತಿಯು ಎಲ್ಲವನ್ನು ಸಿದ್ಧಪಡಿಸಿದಳು. ಇನ್ನ ಬಾವಿಯಿಂದ ನೀರು ತುಂಬಿ ತರುವದೊಂದೇ ಉಳಿಯಿತು. ಕುಸುಮಾನನ್ನು ಅಲ್ಲಿಯೇ ನಿಲ್ಲಿಸಿ ನೀರು ತರಲೆಂದು ನಡೆದಳು. ಅವಳು ಬರುವ ಹೊತ್ತಿಗೆ ಸರಿಯಾಗಿ ಕೇಶವನು ಧೋತರವನ್ನು ಬಿಗಿಯಾಗಿ ತಿರಿವಿ ಉಟ್ಟು ಗಡೆಯ ಕಂಬದ ಮೇಲೆ ನಿಂತಿದ್ದನು. ಭೀಮು ಬಾವಿಯಲ್ಲಿ ಈಸಿ ಎರಡೂ ಕೈಗಳಿಂದ ನೀರು ಚಿಮ್ಮುತ್ತ " ಹಾರಬಾರದ, ಯಾಕ ನಿಂತಿ ? '' ಎಂದು ಕೇಶವನನ್ನು ಹುರಿದುಂಬಿಸುತ್ತಿದ್ದನು. ನರಹರಿ–ಶೀನರು ದಂಡೆಗೆ ನಿಂತು ಇದನ್ನೆಲ್ಲ ನೋಡುತ್ತಿದ್ದರು. ಸಂಜೆಯ ಹೊತ್ತಿನಲ್ಲಿ ಈಸುವದು ಅವರ ಮನಸ್ಸಿಗೆ ಬರಲಿಲ್ಲ.

ಮೆಟ್ಟಲುಗಳನ್ನು ಮೆಲ್ಲನೆ ಇಳಿಯುವ ಪದ್ಮಾವತಿಯನ್ನು ಕುರಿತು ತಿಪ್ಪನು ಒದರಿದನು. " ಇಲ್ಲಿ ನೋಡು ! ಪದ್ದಕ್ಕ ! ಕೇಶವರಾಯರು ಹ್ಯಾಂಗ ಹಾರತಾರ ! ''

ಪದ್ಮಾವತಿಯು ಕಡೆಗಣ್ಣಿನಿಂದ ತಿರುಗಿ ನೋಡಿದಳು. ಕೇಶವನು ಗಡೆಯ ಮೇಲಿಂದ ಟಣ್ಣನೆ ಜಿಗಿದು ಕೈಕಾಲುಗಳನ್ನು ಸರಳವಾಗಿರಿಸಿ ನೇರವಾಗಿ ನೀರೊಳಕ್ಕೆ ಹೋದನು. " ಆಕಾಶಾತ್ ಪತಿತಂ **ತೋಯಂ ?** ಯಥಾ ಗಚ್ಛತಿ ಸಾಗರಂ '' ಎನ್ನುವ ಹಾಗಿತ್ತು ಆ ದೃಶ್ಯ. ಅಲ್ಲೋಲ-

ಕಲ್ಲೋಲವಾಗಿ ನೀರು ದಂಡೆಗೆ ಅಪ್ಪಳಿಸಿತು. ಒಂದು ನಿಮಿಷವಾಯಿತು, ಎರಡಾಯಿತು. ಕೇಶವನು ಮೇಲಕ್ಕೆ ಬರಲಿಲ್ಲ. ಆಗ ಪದ್ಮಾವತಿಯ ಮೊಗದ ಮೇಲೆ ಒಂದು ಚಿಂತೆಯ ಸುಳಿಯು ಸುಳಿಯಿತು. ನೀರು ತುಂಬಲು ಬಂದ ಅವಳು ಕೇಶವನು ಮುಳುಗಿದ್ದ ತಾಣವನ್ನು ನೋಡುತ್ತ ನಿಂತು ಕೊಂಡಳು. ಕಡೆಗೊಮ್ಮೆ "ಊಶ್...." ಎಂದು ತಲೆಯನ್ನು ಝಾಡಿಸುತ್ತ ಕೇಶವನು ಮೇಲಕ್ಕೆ ಬಂದನು. ಪದ್ಮಾವತಿಯು ಮೊದಲಿನಂತೆ ಮಣಿದು ನೀರು ತುಂಬಹತ್ತಿದಳು.

"ತೋರಿಸಿದೆಪಾ! ಹೇಣ್ತಿ ಎದುರಿಗೆ ಪರಾಕ್ರಮಾನ!" ಭೀಮು ನಕ್ಕನು.

ಕೇಶವನು 'ಧಮುಕಿ' ಹೊಡೆದು ಅವನನ್ನು ನೀರಿನಿಂದ ಮುಚ್ಚಿದನು. ತಿರುಗಿ ಬಂದ ಪದ್ಮಾವತಿಯನ್ನು "ಮತ್ತ ಧುಮ್ ಅಂತಲ್ಲ ಪದ್ದಕ್ಕ, ಏನದು?" ಎಂದು ಕುಸುಮೆಯು ಕೇಳಿದಳು.

"ಏನಿಲ್ಲ, ಈಸತಾರ ಬಾವ್ಯಾಗ."

"ಹಂಗಾದರ ನಾನೂ ನೋಡತೇನಿ" ಎಂದು ಕುಸುಮೆಯು ಅತ್ತಿಗೆಯು ಬೇಡವೆನ್ನುವಷ್ಟರಲ್ಲಿಯೇ ಬಾವಿಯೆಡೆಗೆ ಸಾಗಿದಳು. ಆಕೆ ಯನ್ನು ಕಂಡೊಡನೆ ತಿಪ್ಪನು "ಕುಸುಮಾ! ಕೇಶವರಾಯರು ಗಡೇದ ಮ್ಯಾಲಿಂದ ಹಾರಿಕೊಂಡ್ರು!" ಎಂದು ಸಾರಿದನು.

"ಇನ್ನೊಮ್ಮೆ ಹಾರಿಕೋಳ್ರೋ, ಕೇಶಣ್ಣ!" ಕುಸುಮೆಯು ಪಡಿ ನುಡಿದಳು.

"ಹೂಂ! ಹಾರಿಕೋತಾರ ಬಾ! ಹಗಲೆಲ್ಲಾ!" ಕೇಶವನು ದನಿ ತೆಗೆದ. ಇದನ್ನೆಲ್ಲ ನೋಡುತ್ತಿದ್ದ ಶೀನು ಅಂಗಿಯನ್ನು ತೆಗೆದು ತಿಪ್ಪನ ಕೈಯಲ್ಲಿ ಕೊಟ್ಟು ಧೋತರವನ್ನು ಬಿಗಿದುಟ್ಟು ನರಹರಿಯು ಬೇಡವೆನ್ನು ವಷ್ಟರಲ್ಲಿಯೇ ಗಡೆಯ ಮೇಲೆ ಹತ್ತಿದನು. "ನಾನು ಹಾರುತ್ತೇನೆ ಸರ ಯಿರಿ!" ಎಂದು ಈಸುತ್ತಿದ್ದ ಭೀಮು-ಕೇಶವರಾಯರಿಗೆ ಹೇಳಿ

ಗಾಳಿಯಲ್ಲಿ ಈಸುಬಿದ್ದು 'ಧುಡುಂ' ಎಂದು ನೀರಲ್ಲಿ ಮುಳುಗಿ ಕುಸುಮೆಯು ಅಚ್ಚರಿಗೊಂಡು ನೋಡುತ್ತಿರುವಾಗಲೇ ಮೇಲೆದ್ದನು.

"ನಾನೂ ಕಲೀತೇನಿ ಈಸಲಿಕ್ಕೆ!" ಕುಸುಮೆಯ ಹತ್ತರ ನಿಂತಿದ್ದ ತಿಪ್ಪನು ಬಲು ಡೌಲಿನಿಂದ ಹೇಳಿದನು.

"ನೀ ಈಸಲಿಕ್ಕೆ ಕಲಿತಾಗ ಊರ ಬಾವಿ ಎಲ್ಲಾ ತೆರವಾಗತಾವ!" ಕುಸುಮೆಯು ಚೇಷ್ಟೆಮಾಡಿದಳು.

ಇವರನ್ನೆಲ್ಲ ನೋಡಿ ನರಹರಿಯ ಮನಸ್ಸಿನಲ್ಲಿಯೂ ಗಡೆಯ ಮೇಲಿಂದ ಹಾರಿ ಈಸುವದಿತ್ತು. ಆದರೆ ಈ ಪಂಙ್ಕ್ತಿಯ ಪ್ರಪಂಚವನ್ನು ಸಾಗಿಸುವ ಭಾರವೆಲ್ಲ ಅವನ ಮೇಲೆ. ಅವನ ಒತ್ತಾಯಕ್ಕೆ ಮೂವರೂ ಈಸುವದನ್ನು ಮುಗಿಸಿ ದಂಡೆಗೆ ಬಂದರು. ನರಹರಿಯು ಎಲ್ಲರನ್ನೂ ಮಾವಿನ ಮರದೆಡೆಗೆ ಕರೆದೊಯ್ದನು. ಪಂತಿಯಾದ ಮೇಲೆ ಭೀಮು-ಕೇಶವರಾಯರು ತಾವು ಬಂದ ಹಾದಿಯಿಂದ ಸಾಗಿದರು. ಇತ್ತ ಉಳಿದವರ ಮೇಳವು ಎಲ್ಲವನ್ನೂ ಮುಗಿಸಿಕೊಂಡು ಹೊತ್ತು ಮುಳುಗುವಷ್ಟರಲ್ಲಿ ಆಳಿನೊಡನೆ ಬಂದು ಊರನ್ನು ಸೇರಿತು.

ಮರುದಿವಸ ಪದ್ಮಾವತಿಯು ಅತ್ತೆಮನೆಗೆ ಹೋದಳು. ಕೇಶವ-ಪದ್ಮಾವತಿಯರ ಸಂಸಾರವು ಮತ್ತೆ ಮುಂದುವರಿಯಿತು.